ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಜತ್ ನಾಯಕನ ಆಟ ಆರ್‌ಸಿಬಿ ಫೈನಲ್‌ಗೆ

ಧರ್ಮಶಾಲಾದಲ್ಲಿ ಮಂಗಳವಾರ ನಡೆದ 1ನೇ ಕ್ವಾಲಿಫೈಯರ್ ಪಂದ್ಯದಲ್ಲಿ ನಾಯಕ ರಜತ್ ಪಾಟೀದಾರ್ ಅವರ ಸಿಡಿಲಬ್ಬರದ (33 ಎಸೆತಗಳಲ್ಲಿ 93 ರನ್) ಆಟದ ಮೂಲಕ 254 ರನ್ ಪೇರಿಸಿದ ಆರ್‌ಸಿಬಿ, ಗುಜರಾತ್ ಟೈಟನ್ಸ್ ವಿರುದ್ಧ 92 ರನ್‌ಗಳ ಭರ್ಜರಿ ಜಯ ದಾಖಲಿಸಿ ಫೈನಲ್ ಪ್ರವೇಶಿಸಿದೆ.

ದಾರಿದೀಪೋಕ್ತಿ

ಜಗತ್ತಿನ ಅತ್ಯಂತ ಅದ್ಭುತವಾದ ಸ್ಥಳಗಳಿದ್ದರೆ ಅದು ಬೇರೆಯವರ ಆಲೋಚನೆಗಳಲ್ಲಿ, ಪ್ರಾರ್ಥನೆಗಳಲ್ಲಿ, ಕಳಕಳಿಗಳಲ್ಲಿ ಮತ್ತು ಹೃದಯಗಳಲ್ಲಿ. ಅಂಥ ಜಾಗದಲ್ಲಿ ಸ್ಥಳ ಪಡೆಯುವುದರಂಥ ಅದೃಷ್ಟ ಮತ್ತೊಂದಿಲ್ಲ.

ವಕ್ರತುಂಡೋಕ್ತಿ

ಮದುವೆ ಅನ್ನೋದು ಕಾಫಿ ಇದ್ದ ಹಾಗೆ. ಆರಂಭದಲ್ಲಿ ಬಿಸಿಯಾಗಿರುತ್ತದೆ, ಆಮೇಲೆ ಆವಿಯಾಗಿರುತ್ತದೆ, ಕೊನೆಗೆ ಕಷಾಯದ ತರಹ ಕಹಿಯಾಗಿರುತ್ತದೆ.

ಬಿಕ್ಕಟ್ಟಿಗೆ ಅಂತಿಮ ತೆರೆ ಎಳೆಯಲು ಹೈ ವೋಲ್ಟೇಜ್ ಸಭೆ

ಅಂತಿಮ ತೀರ್ಮಾನದ ಬಗ್ಗೆ ಬಾಯ್ಬಿಡದ ಸಿಎಂ, ಡಿಸಿಎಂ

ಸಿದ್ದು ನಡೆ ಯಾವ ಕಡೆ?

ವರಿಷ್ಠರ ಒಗ್ಗಟ್ಟಿನ ಪಾಠಕ್ಕೆ ಸಿದ್ದರಾಮಯ್ಯ, ಡಿಕೆಶಿ ಸಮ್ಮತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಆರು ತಿಂಗಳುಗಳಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆದಿದ್ದ ನಾಯಕತ್ವ ಬಿಕ್ಕಟ್ಟಿಗೆ ಅಂತಿಮ ತೆರೆ ಎಳೆಯಲು ದೆಹಲಿಯ ಇಂದಿರಾ ಭವನದಲ್ಲಿ ಮಂಗಳವಾರ ದಿನವಿಡೀ ಮ್ಯಾರಥಾನ್ ಸಭೆ ನಡೆದಿದೆ. ಆದರೆ ಈ ಚರ್ಚೆಯ ವಿವರಗಳನ್ನು ಹೈಕಮಾಂಡ್ ಮತ್ತು ರಾಜ್ಯ ನಾಯಕರು ಇನ್ನೂ ಗುಪ್ತವಾಗಿಟ್ಟಿದ್ದು, ವರಿಷ್ಠರ 'ಅಂತಿಮ ತೀರ್ಮಾನ' ಕುತೂಹಲ ಹೆಚ್ಚುವಂತೆ ಮಾಡಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ತೀರ್ಮಾನವನ್ನು ಪ್ರಕಟಿಸಲಿದ್ದಾರೆ ಎನ್ನಲಾಗಿದೆ.

ದೆಹಲಿಯ ಎಐಸಿಸಿಯ ಪ್ರಧಾನ ಕಚೇರಿ ಇಂದಿರಾ ಭವನದಲ್ಲಿ ಬೆಳಿಗ್ಗೆ 11ರಿಂದ ನಡೆದ ಸುದೀರ್ಘ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದರು.

ಮೊದಲ ಹಂತದಲ್ಲಿ ಇಬ್ಬರು ರಾಜ್ಯ ನಾಯಕರನ್ನು ಹೊರಗಿಟ್ಟು ಚರ್ಚೆ ನಡೆಸಿದ ವರಿಷ್ಠರು ಬಳಿಕ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು. ಬಳಿಕ ಇಬ್ಬರನ್ನು ಕೂರಿಸಿಕೊಂಡು ಚರ್ಚೆ ನಡೆಸಿದ್ದಾರೆ. ಇಬ್ಬರೂ ನಾಯಕರ ಅಹವಾಲುಗಳನ್ನು ಆಲಿಸಿದ ಬಳಿಕ ಹೈಕಮಾಂಡ್ ತನ್ನ ತೀರ್ಮಾನವನ್ನು ತಿಳಿಸಿದೆ ಎನ್ನಲಾಗಿದೆ. ಆದರೆ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೆ.ಸಿ.ವೇಣುಗೋಪಾಲ್, 'ರಾಜ್ಯಸಭೆ ಹಾಗೂ ವಿಧಾನಪರಿಷತ್‌ಗೆ ಸೀಮಿತವಾಗಿ ಈ ಸಭೆ ನಡೆಸಲಾಗಿದೆ. ಊಹಾಪೋಹದ ಪ್ರಶ್ನೆಗೆ ಉತ್ತರಿಸಲ್ಲ' ಎಂದು ಹೇಳಿದರು.

ಹೈಕಮಾಂಡ್ ಇಬ್ಬರೂ ನಾಯಕರಿಗೆ 'ಅಂತಿಮ' ನಿರ್ಧಾರವನ್ನು ತಿಳಿಸಿದೆ ಎನ್ನಲಾಗಿದೆಯಾದರೂ ಇಂದಿರಾ ಭವನದಲ್ಲಿ ಇಡೀ ದಿನ ನಡೆದ ಸಭೆಯಲ್ಲಿ ಆಗಿರುವ ಚರ್ಚೆ ಬಗ್ಗೆ ಸಿದ್ದರಾಮಯ್ಯ ಆಗಲಿ, ಡಿಕೆಶಿ ಅವರಾಗಲಿ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿಲ್ಲ. ಈ ನಡುವೆ ಸಚಿವ ಸಂಪುಟ ಪುನಾರಚನೆಗೆ ಒಪ್ಪಿಗೆ ಪಡೆದೇ ಬರುವ ಉತ್ಸಾಹದಲ್ಲಿದ್ದ ಸಿದ್ದರಾಮಯ್ಯ ಅವರಿಗೆ ಸಂಪುಟ ಪುನಾರಚನೆಗೆ ಒಪ್ಪಿಗೆ ಸಿಕ್ಕಿಲ್ಲ. ಕೇಂದ್ರ ನಾಯಕರಾದ ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಬುಧವಾರ ಬೆಂಗಳೂರಿಗೆ ಆಗಮಿಸಲಿದ್ದು, ಇವರ ಸಮ್ಮುಖದಲ್ಲಿಯೇ ಸಿದ್ದರಾಮಯ್ಯ ಪಕ್ಷದ ಅಂತಿಮ ನಿರ್ಧಾರವನ್ನು ಬಹಿರಂಗಪಡಿಸುವ ನಿರೀಕ್ಷೆ ಇದೆ.

ಸಿಎಂ, ಡಿಸಿಎಂ ಹೊರಗಿಟ್ಟು ಸಭೆ: ವೇಣುಗೋಪಾಲ್ ಸುದ್ದಿಗೋಷ್ಠಿ ನಡೆಸಿದ ಬಳಿಕವೂ ನಾಲ್ವರು ನಾಯಕರು ಸಭೆ ನಡೆಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಇನ್ನು ದೆಹಲಿಯಿಂದ ಹೊರಡುವ ಮುನ್ನ ಸಿದ್ದರಾಮಯ್ಯ ಅವರು ಕೆ.ಜೆ.ಜಾರ್ಜ್ ಅವರ ಖಾಸಗಿ ನಿವಾಸದಲ್ಲಿ ಆಪ್ತರೊಂದಿಗೆ ಸಭೆ ನಡೆಸಿದರು. ಡಿಕೆಶಿ, ದೆಹಲಿಯಲ್ಲಿರುವ ಸಹೋದರ ಡಿ.ಕೆ.ಸುರೇಶ್ ಅವರ ಫ್ಲಾಟ್‌ನಲ್ಲಿ ತಂಗಿದ್ದಾರೆ.

ಒಗ್ಗಟ್ಟಿನ ಮಂತ್ರ ಜಪಿಸಿರುವ ಹೈಕಮಾಂಡ್: ನಾಯಕತ್ವ ಬದಲಾವಣೆ ವಿಷಯದಲ್ಲಿ ಕಳೆದ ಆರು ತಿಂಗಳುಗಳಿಂದ ಹಲವು ಗೊಂದಲಗಳು ಸೃಷ್ಟಿಯಾಗಿವೆ. 2028ರ ವಿಧಾನಸಭಾ ಚುನಾವಣೆಯ ದೃಷ್ಟಿಯಿಂದ ಹಾಗೂ ಪಕ್ಷದ ಸಂಘಟನಾ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಲ್ಲ ಎನ್ನುವ ಆತಂಕವನ್ನು ದೆಹಲಿ ನಾಯಕರು ವ್ಯಕ್ತಪಡಿಸಿ ದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೊಂದಿಗೆ ನಡೆಸಿದ ಸಭೆಯಲ್ಲಿ, ಈ ವಿಷಯವನ್ನು ಖರ್ಗೆ ಹಾಗೂ ರಾಹುಲ್ ಗಾಂಧಿ ಪ್ರಸ್ತಾಪಿಸಿದ್ದು ಇಬ್ಬರೂ ಒಟ್ಟಿಗೆ ಹೋಗಬೇಕು. ಮುಂದಿನ ವಿಧಾನಸಭಾ ಚುನಾವಣೆಯನ್ನು ನಿಮ್ಮಿಬ್ಬರ ನೇತೃತ್ವದಲ್ಲಿಯೇ ನಡೆಯಬೇಕಿದೆ. ಎಂದಿದ್ದಾರೆ. ನೀವಿಬ್ಬರೂ ಒಂದಿಗೆ ಹೋಗುವ ಅನಿವಾರ್ಯತೆಯಿದೆ ಎನ್ನುವ ಪಾಠವನ್ನು ಮಾಡಿದ್ದಾರೆ. ಇದಕ್ಕೆ ಇಬ್ಬರೂ ಸಮ್ಮತಿಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದರೆ ಸುಮಾರು ಆರು ಗಂಟೆಗಳ ಕಾಲ ನಡೆದ ಈ ಸುದೀರ್ಘ ಸಭೆಯ ಬಳಿಕ ವೇಣುಗೋಪಾಲ್ ಅವರು ಎಲ್ಲ ಗೊಂದಲಗಳಿಗೆ ತೆರೆ ಎಳೆಯುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಸಭೆ ಮುಗಿಸಿಕೊಂಡು ಹೊರ ನಡೆದ ಸಿದ್ದರಾಮಯ್ಯ ಅವರಾಗಲಿ, ಡಿ.ಕೆ. ಶಿವಕುಮಾರ್ ಅವರಾಗಲಿ ಖುಷಿ ಹೊರಹಾಕದೇ ಇರುವುದರಿಂದ ಸಭೆಯಲ್ಲಿ ವರಿಷ್ಠರು ನೀಡಿದ ಕೊನೆಯ ಸಂದೇಶವೇನು ಎನ್ನುವ ಬಗ್ಗೆ ಸ್ಪಷ್ಟನೆ ಸಿಕ್ಕಿಲ್ಲ.



> ದೆಹಲಿಯ ಎಐಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ರಾಜ್ಯಸಭೆ ಚುನಾವಣೆ ಹಾಗೂ ವಿಧಾನಪರಿಷತ್ ಚುನಾವಣೆಗೆ ಅಭ್ಯರ್ಥಿ ಆಯ್ಕೆ ವಿಚಾರವಾಗಿ ಚರ್ಚೆ ನಡೆದಿದೆ. ಇದರ ಹೊರತಾಗಿ ಉಳಿದ ಎಲ್ಲಾ ವಿಚಾರಗಳು ಕೇವಲ ಊಹಾಪೋಹ.
> -ಕೆ.ಸಿ. ವೇಣುಗೋಪಾಲ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

> ದೆಹಲಿ ಹೈಕಮಾಂಡ್‌ನ ಈ ಸಭೆಯಲ್ಲಿ ಸಂಪುಟ ಪುನಾರಚನೆ ಬಗ್ಗೆ ಚರ್ಚೆಯಾಗಿಲ್ಲ. ರಾಜ್ಯಸಭಾ ಚುನಾವಣೆ, ವಿಧಾನಪರಿಷತ್ ಚುನಾವಣೆಗೆ ಸೀಮಿತಗೊಳಿಸಿ ಮಾತ್ರ ಚರ್ಚೆ ನಡೆಸಲಾಗಿದೆ. ಇದರ ಹೊರತಾಗಿ ಇನ್ಯಾವುದೇ ಚರ್ಚೆಗಳು ನಡೆದಿಲ್ಲ.
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ಆಪ್ತರೊಂದಿಗೆ ಸಿಎಂ ಬ್ರೇಕ್‌ಫಾಸ್ಟ್ ಸಭೆ

ಇನ್ನು ಹೈಕಮಾಂಡ್ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸುವ ಮೊದಲು ಕರ್ನಾಟಕ ಭವನದಲ್ಲಿ ಸಿದ್ದರಾಮಯ್ಯ ಅವರು ತಮ್ಮ ಆಪ್ತ ಸಚಿವರೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ನಾಯಕತ್ವ ಬದಲಾವಣೆ, ಸಚಿವ ಸಂಪುಟ ಪುನಾರಚನೆ, ರಾಜ್ಯಸಭೆಗೆ ಆಫರ್‌ಗಳು ಬಂದರೆ ಅದಕ್ಕೆ ತಮ್ಮ ಪ್ರತಿಕ್ರಿಯೆ ಏನಿರಬೇಕು? ಎದುರಾಗಬಹುದಾದ ಸವಾಲುಗಳ ಬಗ್ಗೆ ಚರ್ಚಿಸಿದ್ದಾರೆ. ಈ ಸಭೆಯಲ್ಲಿ ಸಚಿವರಷ್ಟೇ ಅಲ್ಲದೇ, ಹೈಕಮಾಂಡ್ ಜತೆ ಉತ್ತಮ ಒಡನಾಟವಿರುವ ಬಿ.ಕೆ.ಹರಿಪ್ರಸಾದ್ ಸಹ ಇದ್ದದ್ದು ಕುತೂಹಲ ಮೂಡಿಸಿದೆ.

ರಾಜ್ಯಸಭೆಗೆ ಒಲವಿಲ್ಲವೆಂದ ಸಿಎಂ

ಮೂಲಗಳ ಪ್ರಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಷ್ಟ್ರ ರಾಜಕಾರಣಕ್ಕೆ ಬರುವಂತೆ, ರಾಜ್ಯಸಭಾ ಸದಸ್ಯರಾಗುವಂತೆ ರಾಹುಲ್ ಗಾಂಧಿ ಅವರು ಆಫರ್ ನೀಡಿದ್ದಾರೆ. ಆದರೆ ರಾಷ್ಟ್ರ ರಾಜಕಾರಣಕ್ಕೆ ಹೋಗುವ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನು ಸಿದ್ದರಾಮಯ್ಯ ತೋರಿಲ್ಲ ಎನ್ನಲಾಗಿದೆ. ಇಷ್ಟು ವರ್ಷಗಳ ಕಾಲ ರಾಜ್ಯದಲ್ಲಿರುವಾಗ, ಈ ಹಂತದಲ್ಲಿ ರಾಜ್ಯಸಭೆ ಅಥವಾ ರಾಷ್ಟ್ರ ರಾಜಕಾರಣಕ್ಕೆ ಬರುವ ಆಸಕ್ತಿ ಇಲ್ಲ. ಆದ್ದರಿಂದ ನಾನು ಬರುವುದಿಲ್ಲ ಎಂದು ನಯವಾಗಿಯೇ ಈ ಆಫರ್ ತಿರಸ್ಕರಿಸಿದ್ದಾರೆ ಎನ್ನಲಾಗಿದೆ. ರಾಜ್ಯಸಭೆ, ವಿಧಾನಪರಿಷತ್ ಚುನಾವಣೆ ಬಗ್ಗೆ ಖರ್ಗೆ, ರಾಹುಲ್ ಗಾಂಧಿ ಅವರೊಂದಿಗೆ ಸಭೆ ನಡೆಸಿದ ಬಳಿಕ ಸಿದ್ದರಾಮಯ್ಯ ಅವರು ಸುಮಾರು 30 ನಿಮಿಷಗಳ ಕಾಲ ಪ್ರತ್ಯೇಕ ಸಭೆ ನಡೆಸಿದ್ದಾರೆ. ಈ ಒನ್ ಟು ಒನ್ ಸಭೆಯಲ್ಲಿ ನಾಯಕತ್ವ ಬದಲಾವಣೆ ಸೇರಿದಂತೆ ಹಲವು ವಿಷಯಗಳು ಚರ್ಚೆಗೆ ಬಂದಿವೆ ಎನ್ನಲಾಗಿದೆ. ಸಿದ್ದರಾಮಯ್ಯ ಅವರ ಬಳಿಕ ಡಿ.ಕೆ.ಶಿವಕುಮಾರ್ ಅವರೊಂದಿಗೂ ರಾಹುಲ್ ಚರ್ಚಿಸಿದ್ದು, ಇಬ್ಬರ ವಾದವನ್ನು ಆಲಿಸಿ 'ಸೂಕ್ತ ಸಮಯದಲ್ಲಿ ಸೂಕ್ತ ತೀರ್ಮಾನ' ಎನ್ನುವ ಸಂದೇಶವನ್ನು ರವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಡೀ ದಿನದ ಬೆಳವಣಿಗೆ

- ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇಬ್ಬರನ್ನು ಹೊರಗಿಟ್ಟು ಹೈಕಮಾಂಡ್ ನಾಯಕರ ಸಭೆ
- ಆಪ್ತ ಸಚಿವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬ್ರೇಕ್‌ಫಾಸ್ಟ್ ಸಭೆ
- ರಾಹುಲ್, ಖರ್ಗೆ, ಕೆಸಿ, ಸುರ್ಜೇವಾಲ ಸಮ್ಮುಖದಲ್ಲಿ ಸಿಎಂ, ಡಿಸಿಎಂ ಪ್ರತ್ಯೇಕ ಸಭೆ
- ಸಚಿವ ಸಂಪುಟ ಪುನಾರಚನೆ ಮಾಡುವುದು ಸೂಕ್ತ ಎನ್ನುವ ವಿಷಯ ಮಂಡಿಸಿದ ಸಿಎಂ
- ವೇಣುಗೋಪಾಲ್ ಸುದ್ದಿಗೋಷ್ಠಿ ಬಳಿಕ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಜತೆ ಮತ್ತೊಂದು ಸುತ್ತಿನ ಮಾತುಕತೆ
- ದೆಹಲಿಯಿಂದ ಬೆಂಗಳೂರಿಗೆ ಹೊರಟಿದ್ದ ಸಿದ್ದರಾಮಯ್ಯ, ಖಾಸಗಿ ಸ್ಥಳದಲ್ಲಿ ಆಪ್ತ ಸಚಿವರ ಜತೆ ಮಾತುಕತೆ
- ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆ ಹೊಣೆ ಖರ್ಗೆ ಹೆಗಲಿಗೆ; ಪರಿಷತ್ ಅಭ್ಯರ್ಥಿಗಳ ಆಯ್ಕೆ ರಾಗಾ ಹೆಗಲಿಗೆ

ಸೊಂಪಾದ ಪುಟಗಳು

ಡಿಕೆಶಿಗೆ ಮುಳುವಾದ ರಾಹುಲ್ ಗಾಂಧಿ ಅಚಲ ನಿಲುವು

ಜನಪಥ
ರಾಘವಶರ್ಮ ನಿಡ್ಲೆ 6

ಸರಕಾರವೇ ಖಾಸಗೀಕರಣಗೊಂಡರೆ ಇನ್ನೂ ಲೇಸು !

ಲೋಕಮತ
ಲೋಕೇಶ್ ಕಾಯರ್ಗ 7

45 ಕೋಟಿ ರುಪಾಯಿ ಹಗರಣ ಮಾಜಿ ವಿಸಿ ಸೇರಿ 6 ಮಂದಿ ಸೆರೆ

ಬೀದರ್: 2017-18 ರ ಅವಧಿಯಲ್ಲಿ ಬೀದರ್ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಸಾಮಗ್ರಿ ಖರೀದಿಯಲ್ಲಿ ನಕಲಿ ಬಿಲ್‌ಗಳನ್ನು ಸೃಷ್ಟಿಸಿ 45 ಕೋಟಿ ರು. ಗೂ ಅಧಿಕ ಹಣ ದುರ್ಬಳಕೆ ಮಾಡಿಕೊಂಡ ಆರೋಪದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಎಚ್.ಡಿ.ನಾರಾಯಣಸ್ವಾಮಿ, ನಿವೃತ್ತ ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿ ಕೆ.ಎಲ್. ಸುರೇಶ್, ಎಫ್‌ಡಿಎ. ಮೃತ್ಯುಂಜಯ ಹಿರೇಮಠ, ಬೆಂಗಳೂರು ಎಂಟರ್ ಪ್ರೈಸಸ್ ಮಾಲೀಕರಾದ ಬೊಪ್ಪಣ್ಣ, ಮಂಜುನಾಥ ಹಾಗೂ ರಾಮಗೊಂಡ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ವಿವರಪುಟ → 10

ಜೂ.18ಕ್ಕೆ ರಾಜ್ಯದ 7 ಪರಿಷತ್ ಸದಸ್ಯರ ಸ್ಥಾನಕ್ಕೆ ಮತದಾನ

ಬೆಂಗಳೂರು: ರಾಜ್ಯದ ಏಳು ವಿಧಾನ ಪರಿಷತ್ ಸದಸ್ಯರ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ. ಜೂ.18ರಂದು ಮತದಾನ ನಡೆಯಲಿದೆ. ಅಂದೇ ಫಲಿತಾಂಶವೂ ಪ್ರಕಟಗೊಳ್ಳಲಿದೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಗೋವಿಂದ ರಾಜು, ನಾಸೀರ್ ಅಹಮ್ಮದ್, ಎನ್.ನಾಗರಾಜು, ಪ್ರತಾಪ ಸಿಂಹ ನಾಯಕ್.ಕೆ, ತಿಪ್ಪಣ್ಣಪ್ಪ, ಸುನೀಲ್ ವಲ್ಯಾಪುರ ಹಾಗೂ ಬಿ.ಕೆ.ಹರಿಪ್ರಸಾದ್ ಅವರ ಅವಧಿ ಜೂ.30ರಂದು ಕೊನೆಗೊಳ್ಳಲಿದ್ದು, ತೆರವಾದ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ವೇಳಾಪಟ್ಟಿ → 4

ಫನ್‌ತರಂಗ

- ರಘುಪತಿ ಶೃಂಗೇರಿ -

ದೆಹಲಿಯಲ್ಲಿ ಹೈಕಮಾಂಡ್ ಜೊತೆ ಹೈ ವೋಲ್ಟೇಜ್ ಮೀಟಿಂಗ್.

ಸುದ್ದಿ



ಮೇಕೆದಾಟು ಡಿಪಿಆರ್‌ಗೆ ಹಾದಿ ಸುಗಮ

ತಮಿಳುನಾಡಿನ ಮರುಪರಿಶೀಲನಾ ಅರ್ಜಿ ವಜಾಗೊಳಿಸಿದ ಸುಪ್ರೀಂ

ದೆಹಲಿ/ಬೆಂಗಳೂರು: ರಾಜ್ಯದ ಮಹತ್ವಾಕಾಂಕ್ಷೆಯ ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆಯ ವಿರುದ್ಧ ತಮಿಳುನಾಡು ಸರಕಾರ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಈ ಮೂಲಕ ಕರ್ನಾಟಕಕ್ಕೆ ದೊಡ್ಡ ಜಯ ಸಿಕ್ಕಂತಾಗಿದ್ದು, ಯೋಜನೆಯ ಮುಂದಿನ ಹಂತಗಳಿಗೆ ದಾರಿ ಸುಗಮವಾಗಿದೆ. ಇದರ ಬೆನ್ನಿಗೇ ಕರ್ನಾಟಕ ಸರಕಾರದ ಉದ್ದೇಶಿತ ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ತಿರಸ್ಕರಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

2025 ರ ನವೆಂಬರ್‌ನಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ತಮಿಳುನಾಡು ಸರಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ತ್ರಿಸದಸ್ಯ ಪೀಠವು ಈ ಅರ್ಜಿಯನ್ನು ತಿರಸ್ಕರಿಸಿದೆ. ತೆರೆದ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಸಬೇಕೆಂಬ ತಮಿಳುನಾಡಿನ



ಮನವಿಯನ್ನೂ ನ್ಯಾಯಾಲಯ ತಿರಸ್ಕರಿಸಿದೆ.

ಸುಪ್ರೀಂಕೋರ್ಟ್‌ನ ನಿಯಮದಂತೆ, ಮರುಪರಿಶೀಲನಾ ಅರ್ಜಿಗಳನ್ನು ನ್ಯಾಯಾಧೀಶರು ತಮ್ಮ ಕೊಠಡಿಯಲ್ಲಿ ಕಡತಗಳ ಪರಿಶೀಲನೆ ಮೂಲಕವೇ ನಿರ್ಧರಿಸುತ್ತಾರೆ. ಅಲ್ಲಿ ವಕೀಲರ ಮೌಖಿಕ ವಾದಕ್ಕೆ ಅವಕಾಶವಿರುವುದಿಲ್ಲ. ಅರ್ಜಿ ಪರಿಶೀಲಿಸಿದ ಪೀಠವು, ಮರುಪರಿಶೀಲನೆಗೆ ಯಾವುದೇ ಸಮರ್ಥನೀಯ ಕಾರಣಗಳು ಕಂಡುಬಂದಿಲ್ಲ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಮೇಕೆದಾಟು ಯೋಜನೆ ಹಾಗೂ ವಿವಾದ: ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಲು ಮತ್ತು ನೀರಿನ ಅಭಾವ ನೀಗಿಸಲು ಮೇಕೆದಾಟು ಯೋಜನೆ ಅತ್ಯಗತ್ಯ ಎಂದು ಕರ್ನಾಟಕ ಸರಕಾರ ಪ್ರತಿಪಾದಿಸುತ್ತಿದೆ. → 4

ಸಮಾಚಾರ ಸಣ್ಣದಲ್ಲ

30ರಿಂದ ರಾಜ್ಯಮಟ್ಟದ ಕಾರ್ಯಾಗಾರ

ಬೆಂಗಳೂರು: ಯುವ ಬರಹಗಾರರನ್ನು ಸೃಜನಶೀಲಗೊಳಿಸುವ ನಿಟ್ಟಿನಲ್ಲಿ ಮೇ 30 ಹಾಗೂ 31ರಂದು ಕಬ್ಬನ ಪಾರ್ಕಿನಲ್ಲಿರುವ ಕರ್ನಾಟಕ ಸರಕಾರ ಸಚಿವಾಲಯ ಕ್ಲಬ್ ನ ಚೆನ್ನಬಸಪ್ಪ ಸಭಾಂಗಣದಲ್ಲಿ ರಾಜ್ಯಮಟ್ಟದ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮಾರಂಭದ ಮೊದಲ ದಿನ ಕರ್ನಾಟಕ ಸೌಹಾರ್ದ ಪರಂಪರೆ ಕುರಿತು ಡಾ. ರಾಜಪ್ಪ ದಳವಾಯಿ, ಸಾಹಿತ್ಯ ಮತ್ತು ಶ್ರೇಣಿಕೃತ ವ್ಯವಸ್ಥೆ ಕುರಿತು ಡಾ. ಬಂಜಗೆರೆ ಜಯಪ್ರಕಾಶ್ ಅವರು ವಿಚಾರ ಮಂಡಿಸಲಿದ್ದಾರೆ. ಎರಡನೇ ದಿನ ಸಾಹಿತ್ಯ ಪ್ರಜಾ ಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ಪ್ರೊ.ರಾಜೇಂದ್ರ ಚೆನ್ನಿ, ಸೆಕ್ಯುಲರ್ ಭಾರತ ಅಭಿವೃದ್ಧಿಯ ಅಡಿಪಾಯ ಕುರಿತು ಜಿ.ಎನ್. ನಾಗರಾಜ್ ಅವರು ವಿಚಾರ ಮಂಡಿಸಲಿದ್ದಾರೆ. ಕಾರ್ಯಕ್ರಮವನ್ನು ಹಿರಿಯ ಸಾಹಿತಿ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ. ಕಾರ್ಯಾಗಾರದಲ್ಲಿ ವಿಶೇಷವಾಗಿ ಯುವ ಬರಹಗಾರರಿಗೆ ವಿಷಯ ಮಂಡನೆ ಮಾಡುವವರೊಂದಿಗೆ ಸಂವಾದಕ್ಕೆ ಆದ್ಯತೆ ಕೊಡಲಾಗುತ್ತದೆ. ಕಾರ್ಯಾಗಾರದಲ್ಲಿ ಭಾಗಿಯಾಗುವ ಪ್ರತಿಯೊಬ್ಬರಿಗೂ ಪ್ರಶಂಸಾ ಪತ್ರ ನೀಡಲಾಗುವುದು. ಆಸಕ್ತರು ನೋಂದಣಿಗಾಗಿ 9036371588, 9632329955ಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

ಕಳೆದ 10 ದಿನಗಳಲ್ಲಿ ಕೇವಲ 2 ಸಾವಿರ ಅರ್ಜಿ ಸಲ್ಲಿಕೆ | 70 ಅರ್ಜಿ ಮಾತ್ರ ವಿಲೇವಾರಿ

ನನ್ನ ಇ-ಖಾತಾ, ನನ್ನ ಹಕ್ಕು: ಸಿಗದ ಸ್ಪಂದನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿ-ಖಾತಾ ಹೊಂದಿರುವ ನಿವೇಶನ ಮಾಲೀಕರಿಗೆ ಎ-ಖಾತಾ ನೀಡುವ ಉದ್ದೇಶದಿಂದ ರಾಜ್ಯ ಕಾಂಗ್ರೆಸ್ ಸರಕಾರ ಹಾಗೂ ಗ್ರೇಟರ್‌ಬೆಂಗಳೂರು ಪ್ರಾಧಿಕಾರ (ಜಿಬಿಎ) ಆರಂಭಿಸಿರುವ 'ನನ್ನ ಇ-ಖಾತಾ, ನನ್ನ ಹಕ್ಕು' ವಿಶೇಷ ಅಭಿಯಾನಕ್ಕೆ ಸಾರ್ವಜನಿಕರಿಂದ ನಿರೀಕ್ಷಿತ ಮಟ್ಟದ ಸ್ಪಂದನೆ ಸಿಗುತ್ತಿಲ್ಲ ಎಂಬ ಮಾತು ಕೇಳಿಬರುತ್ತಿದೆ.

ಕಳೆದ ವಾರ ಆರಂಭಗೊಂಡ ಈ ಅಭಿಯಾನ ನಗರದ ಐದು ನಗರ ಪಾಲಿಕೆಗಳ ವ್ಯಾಪ್ತಿಯ 52 ಕೇಂದ್ರಗಳಲ್ಲಿ ಶನಿವಾರವೂ ನಡೆಯಿತು. ಆದರೆ, ಕಳೆದ 10 ದಿನಗಳಲ್ಲಿ 2 ಸಾವಿರದಷ್ಟು ಅರ್ಜಿಗಳು ಮಾತ್ರ ಸಲ್ಲಿಕೆಯಾಗಿರುವುದು ಅಧಿಕಾರಿಗಳಲ್ಲೂ ಚರ್ಚೆಗೆ ಗ್ರಾಸವಾಗಿದೆ. ಶನಿವಾರ ನಡೆದ ಅಭಿಯಾನದಲ್ಲಿ 70 ಬಿ ಖಾತಾ ಸ್ವತ್ತುಗಳಿಗೆ ಎ ಖಾತಾ ವಿತರಣೆ ಮಾಡಲಾಗಿದೆ. ಬಿ ಖಾತಾದಿಂದ ಎ-ಖಾತಾಗೆ ಪರಿವರ್ತನೆ ಕೋರಿ 304 ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಪೈಕಿ 70 ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಲಾಗಿದೆ.

ಹಾಗೆಯೇ, 809 ಇ ಖಾತಾ ಅರ್ಜಿಗಳ ಪೈಕಿ 573 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದ್ದು, ಇನ್ನೂ 356 ಅರ್ಜಿಗಳು ಬಾಕಿ ಉಳಿದಿವೆ. ಹೊಸ ಖಾತೆ ಕೋರಿ ಸಲ್ಲಿಕೆಯಾಗಿದ್ದ 234 ಅರ್ಜಿಗಳ ಪೈಕಿ 66 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇ ಖಾತಾ, ಮ್ಯುಟೇಶನ್, ತಿದ್ದುಪಡಿ, ಬಿ ಖಾತಾದಿಂದ ಎ ಖಾತಾ ಪರಿವರ್ತನೆ ಹಾಗೂ ಹೊಸ ಖಾತೆ ಸೇರಿದಂತೆ ಒಟ್ಟು 1,972 ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಪೈಕಿ 1,164 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇನ್ನೂ 1,008 ಅರ್ಜಿಗಳು ಬಾಕಿ ಉಳಿದಿವೆ ಎಂದು ಜಿಬಿಎ ಕಂದಾಯ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ನಾಗರಿಕರಿಗೆ ಇ ಖಾತಾ ಸೇರಿದಂತೆ ವಿವಿಧ ಖಾತಾ ಸೇವೆಗಳನ್ನು ಸುಲಭವಾಗಿ ಒದಗಿಸುವ ಉದ್ದೇಶದಿಂದ ಜಿಬಿಎ ಈ ವಿಶೇಷ ಅಭಿಯಾನ ಹಮ್ಮಿಕೊಂಡಿತ್ತು. ಆದರೆ, ಸಾರ್ವಜನಿಕರಿಂದ ನಿರಾಸೆ ಸ್ಪಂದನೆ ವ್ಯಕ್ತವಾಗಿರುವುದು ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸಿದೆ. ಕೆಲ ನಾಗರಿಕರು ದಾಖಲೆಗಳ ಗೊಂದಲ, ತಾಂತ್ರಿಕ ಸಮಸ್ಯೆಗಳು ಹಾಗೂ ಪ್ರಕ್ರಿಯೆಯ ಬಗ್ಗೆ ಸ್ಪಷ್ಟ ಮಾಹಿತಿ ಕೊರತೆಯಿಂದ ಅರ್ಜಿ ಸಲ್ಲಿಕೆಗೆ ಹಿಂದೇಟು ಹಾಕುತ್ತಿದ್ದಾರೆ.

ಮುಖ್ಯಾಂಶಗಳು

- ಇ-ಖಾತಾವನ್ನು ನೋಂದಣಿಗೆ ಕಡ್ಡಾಯಗೊಳಿಸಿರುವ ಆದೇಶ ಹಿಂಪಡೆಯಬೇಕು.
- ಬಿಬಿಎಂಪಿ ಇ-ಖಾತಾ ವ್ಯವಸ್ಥೆಯನ್ನು ಉಪ-ನೋಂದಣಾಧಿಕಾರಿಗಳ ನೋಂದಣಿ ವ್ಯವಸ್ಥೆಯಿಂದ ಬೇರ್ಪಡಿಸಬೇಕು.
- ಎಲ್ಲಾ ಉಪನೋಂದಣಾಧಿಕಾರಿಗಳಿಗೆ ನೋಂದಣಿ ಕಾಯಿದೆಯ ಪ್ರಕಾರ ಮಾತ್ರ ದಾಖಲೆ ನೋಂದಾಯಿಸಲು ನಿರ್ದೇಶಿಸಬೇಕು.
- ಅಕ್ರಮ ಸಾಫ್ಟ್‌ವೇರ್ ನಿರ್ಬಂಧಗಳ ಮೂಲಕ ನಾಗರಿಕರ ಕಿರುಕುಳ ನಿಲ್ಲಿಸಬೇಕು.
- ಕಾನೂನುಬದ್ಧತೆ, ಸಂವಿಧಾನಾತ್ಮಕ ಆಡಳಿತ ಮತ್ತು ಕಾನೂನಿನ ಆಳ್ವಿಕೆಯನ್ನು ಪುನಃ ಸ್ಥಾಪಿಸಬೇಕು.

ಇ ಖಾತಾಗೆ ಕಾಂಚಾಣ ಆರೋಪ

ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನದಿಂದ ಬೆಂಗಳೂರಿನ ಸಾರ್ವಜನಿಕರು ಒಂದೇ ಒಂದು ರುಪಾಯಿ ಲಂಚ ನೀಡದೆ ತಮ್ಮ ಆಸ್ತಿಗಳನ್ನು 'ಬಿ' ಖಾತೆಯಿಂದ 'ಎ' ಖಾತೆಗೆ ಪರಿವರ್ತನೆ ಹಾಗೂ ಮನೆ ಬಾಗಿಲಲ್ಲೇ ಇ-ಖಾತೆ ಪಡೆಯ ಬಹುದು. ಏಳು ಲಕ್ಷ ಜನರಿಗೆ ಇದರಿಂದ ಉಪಯೋಗವಾಗ ಲಿದೆ ಎಂದು ಸರಕಾರ ಹೇಳಿದೆ. ಆದರೆ ವಾಸ್ತವಿಕವಾಗಿ ನೋಡಿದರೆ ಹಣ ಪಡೆದು ಇ ಖಾತಾ ನೋಂದಣಿ ನಡೆಯುತ್ತಿರುವ ದೂರುಗಳು ಕೇಳಿ ಬಂದಿವೆ. ಇದಕ್ಕೆ ಸರಕಾರ ಕೂಡಲೇ ಕಡಿವಾಣ ಹಾಕಬೇಕಿದೆ.

60 ಕಲಾವಿದರಿಗೆ ಉಚಿತ ಆರೋಗ್ಯ ವಿಮೆ ಸೌಲಭ್ಯ ವಿತರಣೆ

ಜಾಣ ಜಾಣೆಯರ ನಗೆಹಬ್ಬ 31ಕ್ಕೆ

ಸುದ್ದಿಗೋಷ್ಠಿಯಲ್ಲಿ ನಗೆಹಬ್ಬದ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು. ಹಾಸ್ಯ ಕಲಾವಿದ ಎಂ.ಎಸ್. ನರಸಿಂಹಮೂರ್ತಿ, ಡಾ. ಸುಮ ಸುಧೀಂದ್ರ, ಟ್ರಸ್ಟಿ ಉದಯ್, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ ಗೀತಾ ಸುರತ್ಕಲ್ ಇದ್ದರು.

ಬೆಂಗಳೂರು: ಜಾಣಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್‌ನಿಂದ ಜಾಣಜಾಣೆಯರ ನಗೆ ಉತ್ಸವ, ಟ್ರಸ್ಟ್ ಉದ್ಘಾಟನೆ ಹಾಗೂ ಕಲಾವಿದರ ನೆರವಿಗೆ ಆರೋಗ್ಯ ವಿಮಾ ಯೋಜನೆ ಚಾಲನೆ ಕಾರ್ಯಕ್ರಮವು ಮೇ 31ರಂದು ಸಂಜೆ 5 ಗಂಟೆಗೆ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಡೆಯಲಿದೆ ಎಂದು ಚೌಡಯ್ಯ ಮೆಮೋರಿಯಲ್ ಹಾಲ್‌ನ ಕಾರ್ಯದರ್ಶಿ ಡಾ. ಸುಮಾ ಸುಧೀಂದ್ರ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 31ರಂದು 60 ಕಲಾವಿದರಿಗೆ ತಲಾ 10 ಲಕ್ಷ ರು. ಮೌಲ್ಯದ ಆರೋಗ್ಯ ವಿಮಾ ಪಾಲಿಸಿ ಉಚಿತವಾಗಿ ವಿತರಿಸಲಾಗುತ್ತದೆ. ಮೂರು ಗಂಟೆಗಳ ನಿರಂತರ ನಗೆರಸದೌತಣ ನೀಡಲು ರಾಜ್ಯದ ಖ್ಯಾತ ಹಾಸ್ಯ ಕಲಾವಿದರು ಭಾಗವಹಿಸಲಿದ್ದಾರೆ. ಮಿಮಿಕ್ರಿ ದಯಾನಂದ್, ಪ್ರೊ. ಎಂ. ಕೃಷ್ಣೆಗೌಡ, ಮಿಮಿಕ್ರಿ ಗೋಪಿ, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ಕೋಗಳಿ ಕೊಟ್ರೇಶ್, ಕಿರ್ಲೋಸ್ಕರ್ ಸತ್ಯ, ಶಿವಾರ ಉಮೇಶ್, ಪ್ರಹ್ಲಾದಾಚಾರ್ಯ ಹಾಗೂ ಎಂ.ಎಸ್. ನರಸಿಂಹಮೂರ್ತಿ ವಿಶೇಷ ನಗೆಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಗೀತ ನಿರ್ದೇಶಕ ಗುರುಕಿರಣ್ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದು, ಐಪಿಎಲ್‌ನಲ್ಲಿ ಜನಪ್ರಿಯತೆ ಪಡೆದ ಡ್ರಮ್ಸ್ ದೇವ್ ವಿಶೇಷ ಪ್ರದರ್ಶನ ನೀಡಲಿದ್ದಾರೆ. ಮಿಮಿಕ್ರಿ ದಯಾನಂದ್ ಅವರ ಸಂಪೂರ್ಣ ತಂಡವೂ ರಂಜನಾ ಕಾರ್ಯಕ್ರಮ ನೀಡಲಿದೆ. ಕಲಾವಿದರ ನೆರವಿಗಾಗಿ ಈ ಕಾರ್ಯಕ್ರಮವನ್ನು ಸಹಾಯಾರ್ಥ ಟಿಕೆಟ್ ಪ್ರದರ್ಶನವಾಗಿ ಆಯೋಜಿಸಲಾಗಿದ್ದು, ಸಾರ್ವಜನಿಕರು 'ಬುಕ್ ಮೈ ಶೋ' ಮೂಲಕ ಟಿಕೆಟ್ ಖರೀದಿಸಿ ಕಲಾವಿದರಿಗೆ ಬೆಂಬಲ ನೀಡಬಹುದು ಎಂದು ಹೇಳಿದರು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **19.05.2025** ರಂದು ಕರೆದು ಸಾಲಗಾರ **ಬೋಜನ್ ಹರಿ ಹರನ್ ಅಲಿಯಾಸ್ ಹರಿಹರನ್ ಬೋಜನ್ ಮತ್ತು ಅಖಿಲಾ ಸಿ ವಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 62,84,034.57 (ಅರವತ್ತೆರಡು ಲಕ್ಷ ಎಂಬತ್ತನಾಲ್ಕು ಸಾವಿರದ ಮೂವತ್ತನಾಲ್ಕು ರೂಪಾಯಿಗಳು ಮತ್ತು ಐವತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHEMAL00286883** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **15.05.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.05.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 62,84,034.57 (ಅರವತ್ತೆರಡು ಲಕ್ಷ ಎಂಬತ್ತನಾಲ್ಕು ಸಾವಿರದ ಮೂವತ್ತನಾಲ್ಕು ರೂಪಾಯಿಗಳು ಮತ್ತು ಐವತ್ತೇಳು ಪೈಸೆ ಮಾತ್ರ) 15.05.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಬೆಂಗಳೂರು - 560037, ಕರ್ನಾಟಕ, ಸರ್ಜಾಪುರ ಹೊರ ವರ್ತುಲ ರಸ್ತೆಯ "ಗ್ಯಾಲಕ್ಸಿ" ಸನ್‌ಸಿಟಿ ಅಪಾರ್ಟ್‌ಮೆಂಟ್ಸ್ ಎಂದು ಕರೆಯಲ್ಪಡುವ ಕಟ್ಟಡದ 9 ನೇ ಬ್ಲಾಕ್‌ನ ಮೊದಲ ಮಹಡಿಯಲ್ಲಿ 1824 ಚದರ ಅಡಿಗಳಷ್ಟು ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿರುವ ಫ್ಲಾಟ್ ಸಂಖ್ಯೆ 103 ರ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಖಾತಾ ಸಂಖ್ಯೆ 341 ರ ಆಸ್ತಿಯ ಮೇಲೆ ನಿರ್ಮಿಸಲಾಗಿದೆ, ಇದನ್ನು ಇಬ್ಬಲೂರು ಗ್ರಾಮ, ಬೇಗೂರು ಹೋಬಳಿ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ನೆಲೆಗೊಂಡಿರುವ ಸರ್ವೆ ಸಂಖ್ಯೆ 20 ಮತ್ತು 23 ರಲ್ಲಿ ರಚಿಸಲಾಗಿದೆ ಮತ್ತು ಬೇಸ್ಮೆಂಟ್ ಸಂಖ್ಯೆ 98 ರಲ್ಲಿ 379.39 ಚದರ ಅಡಿ ಪಾಲನ್ನು ಹೊಂದಿರುವ ಬೇಸ್ಮೆಂಟ್‌ನಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳವನ್ನು ಹೊಂದಿದೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 21.05.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **20.05.2025** ರಂದು ಕರೆದು ಸಾಲಗಾರ **ಬೋಜನ್ ಹರಿ ಹರನ್ ಅಲಿಯಾಸ್ ಹರಿಹರನ್ ಬೋಜನ್ ಮತ್ತು ಅಖಿಲಾ ಸಿ ವಿ** ಅವರು ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಬೇಕಾಗುತ್ತದೆ. **ರೂ. 22,20,389.42 (ಇಪ್ಪತ್ತೆರಡು ಲಕ್ಷ ಇಪ್ಪತ್ತು ಸಾವಿರದ ಮೂರುನೂರ ಎಂಬತ್ತೊಂಬತ್ತು ರೂಪಾಯಿಗಳು ಮತ್ತು ನಲವತ್ತೆರಡು ಪೈಸೆ ಮಾತ್ರ) (ಸಾಲ ಸೌಲಭ್ಯದ ಸಂ. 1 ರ ಮೇಲೆ)** ಮತ್ತು **ರೂ. 19,07,896.29 (ಹತ್ತೊಂಬತ್ತು ಲಕ್ಷದ ಏಳು ಸಾವಿರದ ಎಂಟುನೂರ ತೊಂಬತ್ತಾರು ರೂಪಾಯಿಗಳು ಮತ್ತು ಇಪ್ಪತ್ತೊಂಬತ್ತು ಪೈಸೆ ಮಾತ್ರ) (ಸಾಲ ಸೌಲಭ್ಯದ ಸಂ. 2 ರ ಮೇಲೆ)** ಒಟ್ಟು ಬಾಕಿ ಮೊತ್ತ **ರೂ. 41,28,285.71 (ನಲವತ್ತೊಂದು ಲಕ್ಷ ಇಪ್ಪತ್ತೆಂಟು ಸಾವಿರದ ಎರಡು ನೂರ ಎಂಬತ್ತೈದು ರೂಪಾಯಿಗಳು ಮತ್ತು ಎಪ್ಪತ್ತೊಂದು ಪೈಸೆ ಮಾತ್ರ) (ಸಾಲ ಸೌಲಭ್ಯದ ಸಂ. 1 ಮತ್ತು ಸಂ. 2ರ ಮೇಲೆ) 15.05.2025** ರಂತೆ ಸಾಲ ಖಾತೆ ಸಂ. **HHLMAL00285511 ಮತ್ತು HLAPMAL00381541** ಅದರ ಮೇಲಿನ ಮತ್ತು ಸದರಿ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಬಡ್ಡಿಯನ್ನು ಪಾವತಿಸಬೇಕು.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.05.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 22,20,389.42 (ಇಪ್ಪತ್ತೆರಡು ಲಕ್ಷ ಇಪ್ಪತ್ತು ಸಾವಿರದ ಮೂರುನೂರ ಎಂಬತ್ತೊಂಬತ್ತು ರೂಪಾಯಿಗಳು ಮತ್ತು ನಲವತ್ತೆರಡು ಪೈಸೆ ಮಾತ್ರ) (ಸಾಲ ಸೌಲಭ್ಯದ ಸಂ. 1 ರ ಮೇಲೆ)** ಮತ್ತು **ರೂ. 19,07,896.29 (ಹತ್ತೊಂಬತ್ತು ಲಕ್ಷದ ಏಳು ಸಾವಿರದ ಎಂಟುನೂರ ತೊಂಬತ್ತಾರು ರೂಪಾಯಿಗಳು ಮತ್ತು ಇಪ್ಪತ್ತೊಂಬತ್ತು ಪೈಸೆ ಮಾತ್ರ) (ಸಾಲ ಸೌಲಭ್ಯದ ಸಂ. 2 ರ ಮೇಲೆ)** ಒಟ್ಟು ಬಾಕಿ ಮೊತ್ತ **ರೂ. 41,28,285.71 (ನಲವತ್ತೊಂದು ಲಕ್ಷ ಇಪ್ಪತ್ತೆಂಟು ಸಾವಿರದ ಎರಡು ನೂರ ಎಂಬತ್ತೈದು ರೂಪಾಯಿಗಳು ಮತ್ತು ಎಪ್ಪತ್ತೊಂದು ಪೈಸೆ ಮಾತ್ರ) (ಸಾಲ ಸೌಲಭ್ಯದ ಸಂ. 1 ಮತ್ತು ಸಂ. 2ರ ಮೇಲೆ) 15.05.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂ.103, 1824 ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ. ಮೊದಲ ಮಹಡಿ, 9ನೇ ಬ್ಲಾಕ್, ಯೋಜನೆಯಲ್ಲಿ ಗ್ಯಾಲಕ್ಸಿ ಸನ್ ಸಿಟಿ ಅಪಾರ್ಟ್‌ಮೆಂಟ್ಸ್ ಎಂದು ಕರೆಯಲಾಗುತ್ತದೆ, ಸರ್ಜಾಪುರ ಔಟರ್ ರಿಂಗ್ ರೋಡ್, ಬೆಂಗಳೂರು-560037, ಕರ್ನಾಟಕ ಬೇಸ್ಮೆಂಟ್‌ನಲ್ಲಿ ಒಂದು ಆವರಿಸಿದ ಕಾರು ಪಾರ್ಕಿಂಗ್ ಸ್ಥಳ ಸಂ. 98 ಜೊತೆಗೆ 379.39 ಚದರ ಅಡಿ ಭೂಮಿಯಲ್ಲಿ ಅವಿಭಜಿತ ಪಾಲು

ಅಧಿಕಾರವಿರುವ ಅಧಿಕಾರಿ
ದಿನಾಂಕ : 21.05.2026 **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

PUBLIC NOTICE

This is to bring to the notice of the general public that our clients **Mr.Varghese C O** S/o Mr.C.V.Oommen and **Mrs.Reeba Ann Varghese** W/o Mr.Varghese C O are intending to purchase the schedule property from **Mr.Irfan Abdul Sattar** S/o Mr.Osman Hameed Mohammed; person/s objecting for the proposed purchase or are having any right, title, interest or any type of claim over the scheduled property is hereby called upon to file their objections/claims what so ever along with documentary proof on or before **7 days** from the date of publication of this notice with the under mentioned advocate failing which; our clients shall proceed and complete the sale transaction with the above stated person.

SCHEDULE PROPERTY

All that piece and parcel of the Immovable property bearing Site No.27, Old property No.48/1, New property No.48/6 situated at Nadagowda Gollahalli village, Bidarahalli Hobli, Bangalore East taluk, Bangalore measuring East to West : 40 feet and North to South 60 feet in totally measuring 2400 Square feet and bounded on :-**East by :** Site No.26, **West by :** Site No.28 **North by :** Road, **South by :** Site No.32.

R.V.LAW CHAMBERS
Advocate & Legal Consultant
No.13, Hennur Cross, Kasaba Hobli,
Bangalore-560 043. **MOBILE:** 9108784843

PUBLIC NOTICE

This is to bring to the notice of the general public that our clients **Mr.Habibulla Pallikonda Khader** S/o Mr.Pallikonda Abdulla Abdul Khader and **Mrs.Noor Ayesha Sultana** W/o Mr.Pallikonda Khader Habibulla are intending to purchase the schedule property from **Mr.M S Linge Gowda** S/o Sri.Shivalingayya; person/s objecting for the proposed purchase or are having any right, title, interest or any type of claim over the scheduled property is hereby called upon to file their objections/claims what so ever along with documentary proof on or before **7 days** from the date of publication of this notice with the under mentioned advocate failing which; our clients shall proceed and complete the sale transaction with the above stated person.

SCHEDULE PROPERTY

All the Piece and Parcel of the Immovable Property **BDA Site No.1074**, 6th Block, Arkavathi Layout formed in Sy.No.95/3 situated at Thanisandra Village, Bangalore measuring East to west 16.0+17.50/2 meters and North to South 12 meters in all total measuring 201.00 Square meters with all rights , appurtenances whatsoever or above the surface and bounded on :
East by : Road, **West by :** Private Property,
North by : Site No.1073, **South by :** Site No.1075.

R.V.LAW CHAMBERS
Advocate & Legal Consultant
No.13, Hennur Cross, Kasaba Hobli,
Bangalore-560 043. **MOBILE:** 9108784843

ರಾಜ್ಯ ಕೋರ್ ಕಮಿಟಿ ಸಭೆ ಹಿನ್ನೆಲೆಯಲ್ಲಿ ಇತ್ತೀಚೆಗೆ ರಾಜ್ಯಕ್ಕೆ ಆಗಮಿಸಿದ್ದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಿಬಿನ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ಯುವ ಮುಖಂಡ ಬಿ.ಎಸ್.ಅನಿಲ್ ಕುಮಾರ್ ಇದ್ದರು.

AEQUS
ecosystems of efficiency

Aequs Limited

(Formerly known as Aequs Private Limited)
CIN: L80302KA2000PLC026760
Registered Office: Aequs Tower, No. 55, Whitefield Main Road, Mahadevapura Post, Bengaluru - 560048
E-mail: investor.relations@aequs.com, Website: www.aequs.com

STATEMENT OF FINANCIAL RESULTS FOR THE QUARTER AND YEAR ENDED MARCH 31, 2026

The Board of Directors of Aequs Limited ("the Company") at the meeting held on May 26, 2026, approved the Financial Results of the Company for the quarter and year ended March 31, 2026 ("Financial Results").

The Financial results along with Statutory Auditors Report, are available on the Company's Website at https://www. aequs.com/wp-content/uploads/2026/05/Aequs-Limited-Standalone-and-Consolidated-Financial-Results.pdf and on the websites of National Stock Exchange of India Limited and BSE Limited ("Stock Exchanges") and can be accessed by scanning the QR code.

For and on Behalf of the Board of Directors
AEQUS LIMITED
Sd/-
Rajeev Kaul
Co-Founder & Managing Director
DIN: 01468590

Date: May 26, 2026
Place: Belagavi, Karnataka

Note: The above information is in accordance with Regulation 33 read with Regulation 47 (1) of the SEBI (Listing Obligations and Disclosure Requirements) Regulations, 2015

Denta Water Revitalizing Experts

DENTA WATER AND INFRA SOLUTIONS LIMITED

CIN: L70109KA2016PLC097869
Regd. Off.: # 40, 3rd Floor, Sri Lakshminarayana Mansion, South End Road, Basavanagudi Bangalore, South Bangalore- 560 004 Karnataka, India, **Email:** cs@denta.co.in, **Web:** www.denta.co.in

STATEMENT OF AUDITED CONSOLIDATED FINANCIAL RESULTS FOR THE QUARTER AND FINANCIAL YEAR ENDED MARCH 31, 2026

(Rs. In Millions, unless otherwise stated)

Sl. No	Particulars	3 months ended 31.03.2026	Financial Year ended 31.03.2026	Previous year ended 31-03- 2025	Corresponding 3 months ended 31.03.2025
		(Audited)	(Audited)	(Audited)	(Audited)
1	Total Income from Operations (including other income)	572.16	2595.73	2,080.30	572.18
2	Net Profit / (Loss) for the period (before Tax, Exceptional and/or Extraordinary items)	123.65	820.59	715.56	192.47
3	Net Profit / (Loss) for the period before Tax (after Exceptional and/or Extraordinary items)	123.65	820.59	715.56	192.47
4	Net Profit / (Loss) for the period after Tax (after Exceptional and/or Extraordinary items)	91.1	609	528.85	137.2
5	Total Comprehensive Income for the period [Comprising Profit for the period (after tax) and Other Comprehensive Income(after tax)]	91.05	608.95	528.65	137.19
6	Equity Share Capital	267	267	267	267
7	Earnings Per Equity Share				
	a) Basic	3.41	22.81	25.83	6.7
	b) Diluted	3.41	22.81	25.83	6.7

Notes

1) Additional information on standalone financial results is as follows

(Rs. In Millions, unless otherwise stated)

Sl. No	Particulars	3 months ended 31.03.2026	Financial Year ended 31.03.2026	Previous year ended 31-03- 2025	Corresponding 3 months ended 31.03.2025
		(Audited)	(Audited)	(Audited)	(Audited)
1	Total Income from Operations (including other income)	571.42	2594.32	2080.30	572.18
2	Net Profit / (Loss) for the period (before Tax, Exceptional and/or Extraordinary items)	122.99	819.26	715.62	192.47
3	Net Profit / (Loss) for the period before Tax (after Exceptional and/or Extraordinary items)	122.99	819.26	715.62	192.47
4	Net Profit / (Loss) for the period after Tax (after Exceptional and/or Extraordinary items)	91.04	608.44	528.91	137.23
5	Total Comprehensive Income for the period [Comprising Profit / (Loss) for the year (after tax) and Other Comprehensive Income(after tax)]	90.99	608.39	528.71	137.21

2) The above audited Financial Results have been reviewed by the Audit Committee and approved by the Board of Directors at its meeting held on 25-05-2026
3) The above is an extract of the detailed format of the standalone and consolidated financial results for theQuarter and Financial Year ended March 31, 2026 filed with the stock exchange(s) under Regulation 33 of the Securities and Exchange Board of India (Listing Obligations and Disclosure Requirements) Regulations, 2015, as amended. The full format of the standalone and consolidated financial results for the Quarter and Financial Year ended March 31, 2026 are available for investors at NSE and BSE
4) In compliance with Regulation 47 of the Listing Regulations, we hereby notify that the same can also be accessed by scanning the following Quick Response (QR) Code:

For and on behalf of the Board of Directors of
Denta Water And Infra Solutions Limited
Sd/-
Manish J Shetty
Managing Director

Date: 25.05.2026
Place: Bangalore, Karnataka

CONCEPT

ಮಾನಸಿಕ ಕಿರುಕುಳಕ್ಕೆ ರೇಡಿಯೋ ಜಾಕಿ ಆತ್ಮಹತ್ಯೆ?

ಬೆಂಗಳೂರು: ಮುಂಬೈ ಮೂಲದ ರೇಡಿಯೋ ಜಾಕಿಯೊಬ್ಬರು ನಗರದಲ್ಲಿ ಆತ್ಮಹತ್ಯೆಗೆ ಶರಣಾಗಿ ರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಮುಂಬೈ ಮೂಲದ ರೇಡಿಯೋ ಜಾಕಿ, 49 ವರ್ಷದ ಮನೀಷಾ ಎಂಬುವರೇ ಆತ್ಮಹತ್ಯೆ ಮಾಡಿಕೊಂಡವರು. ಮಾನ್ಯತಾ ಟೆಕ್ ಪಾರ್ಕ್ ಅಪಾರ್ಟ್‌ಮೆಂಟ್ ಒಂದರಲ್ಲಿ ವಾಸವಾಗಿದ್ದ ಮನೀಷಾ, ಮಂಗಳವಾರ ತಮ್ಮ ಫ್ಲಾಟ್‌ನಲ್ಲಿ ನೇಣಿಗೆ ಶರಣಾಗಿದ್ದಾರೆ. ಸಾಯುವ ಮುನ್ನ ಡೆತ್ ನೋಟ್ ಬರೆದಿಟ್ಟಿರುವ ಮನೀಷಾ, ಅದರಲ್ಲಿ ಹರ್ಷವರ್ಧನ್ ಸಿಂಗ್ ಬನ್ಸಾಲ್ ಎಂಬಾತನ ಹೆಸರು ಪ್ರಸ್ತಾಪಿಸಿದ್ದಾರೆ. ಆತನಿಂದ ನಾನು ಮಾನಸಿಕ ಕಿರುಕುಳಕ್ಕೆ ಒಳಗಾಗಿದ್ದೆ ಎಂದು ನೋವು ತೋಡಿಕೊಂಡಿದ್ದಾರೆ.

ಈ ಹಿಂದೆ ಮುಂಬೈನಲ್ಲಿ ರೆಡಿಯೋ ಜಾಕಿಯಾಗಿದ್ದ ಮನೀಷಾ, 2024ರಲ್ಲಿ ತಮ್ಮ ಪತಿಯಿಂದ ವಿಚ್ಛೇದನ ಪಡೆದಿದ್ದರು. ನಂತರ ಒಂಟಿಯಾಗಿ ವಾಸವಿದ್ದರು. 2026ರ ಏಪ್ರಿಲ್‌ನಲ್ಲಿ ಬೆಂಗಳೂರಿಗೆ ಬಂದು, ಮಾನ್ಯತಾ ಟೆಕ್‌ಪಾರ್ಕ್ ಬಳಿಕ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಖರೀದಿಸಿ, ಒಬ್ಬರೇ ವಾಸವಿದ್ದರು. ಆತ್ಮಹತ್ಯೆಗೂ ಮುನ್ನ ಡೆತ್ ನೋಟ್ ಬರೆದಿಟ್ಟಿದ್ದು, ನನ್ನ ಸಾವಿಗೆ ಹರ್ಷ ವರ್ಧನ್ ಸಿಂಗ್ ಬನ್ಸಾಲ್ ಕಾರಣ ಎಂದು ಡೆತ್ ನೋಟ್‌ನಲ್ಲಿ ಮನೀಷಾ ಉಲ್ಲೇಖಿಸಿದ್ದಾರೆ.

ಮೇ 23ರಂದು ಆತ್ಮಹತ್ಯೆ: ಮೇ 23 ರಂದು ಆತ್ಮ ಹತ್ಯೆಗೆ ಶರಣಾಗಿದ್ದು, ಮಂಗಳವಾರ ಘಟನೆ ಬೆಳಕಿಗೆ ಬಂದಿದೆ. ಸಂಬಂಧಿಕರು ಮನೀಷಾಗೆ ಫೋನ್ ಮಾಡಿದ್ದಾರೆ. ಆದರೆ ಮನೀಷಾ ಕಾಲ್ ತೆಗೆಯದ್ದಕ್ಕೆ ಆತಂಕಗೊಂಡು, ಆಕೆ ವಾಸವಿದ್ದ ಫ್ಲಾಟ್ ಬಳಿ ಬಂದಿದ್ದಾರೆ. ಈ ವೇಳೆ ಆಕೆ ಆತ್ಮ ಹತ್ಯೆಗೆ ಶರಣಾಗಿರುವ ವಿಚಾರ ಬೆಳಕಿಗೆ ಬಂದಿದೆ. ಇನ್ನು ಈ ಸಂಬಂಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಿಎನ್‌ಎಸ್ 108ರ ಅಡಿಯಲ್ಲಿ ಪ್ರಕರಣ ದಾಖಲಿಸಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬಕ್ರೀದ್ ವೇಳೆ ಅನಧಿಕೃತ ಪ್ರಾಣಿವಧೆಗೆ ನಿಷೇಧ

ಬೆಂಗಳೂರು: ಬಕ್ರೀದ್ ಹಬ್ಬ, ಜಾತ್ರೆ ಹಾಗೂ ಇತರೆ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಪ್ರಾಣಿ ಬಲಿ ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಪೂರ್ವ ನಗರ ಪಾಲಿಕೆಯ ಆಯುಕ್ತ ಡಿ.ಎಸ್.ರಮೇಶ್ ತಿಳಿಸಿದರು.

ಈ ಕುರಿತು ಪೂರ್ವ ನಗರ ಪಾಲಿಕೆಯ ಆಯುಕ್ತ ಡಿ.ಎಸ್.ರಮೇಶ್, ರಸ್ತೆ, ಪಾದಚಾರಿ ಮಾರ್ಗ, ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್‌ಗಳ ಆವರಣ, ಶಾಲಾ-ಕಾಲೇಜುಗಳ ಒಳ ಮತ್ತು ಹೊರಭಾಗ, ಆಟದ ಮೈದಾನಗಳು, ದೇವಸ್ಥಾನ-ಮಸೀದಿಗಳು ಸೇರಿದಂತೆ ಎಲ್ಲ ಧಾರ್ಮಿಕ ಸ್ಥಳಗಳ ಆವರಣ, ಉದ್ಯಾನವನಗಳು ಹಾಗೂ ಇತರೆ ಸಾರ್ವಜನಿಕ ಪ್ರದೇಶಗಳಲ್ಲಿ ಯಾವುದೇ ರೀತಿಯ ಪ್ರಾಣಿವಧೆ ಅಥವಾ ಬಲಿ ಮಾಡುವಂತಿಲ್ಲ. ಜಿಬಿಎ ಅಧಿನಿಯಮ-2024ರಡಿ ಅನಧಿಕೃತ ಪ್ರಾಣಿವಧೆ ನಿಷೇಧಿಸಲಾಗಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೆ, ಕರ್ನಾಟಕ ರಾಜ್ಯ ಪ್ರಾಣಿ ಬಲಿ ತಡೆ ಕಾಯ್ದೆ-1959ರ ಸೆಕ್ಷನ್ 3ರ ಪ್ರಕಾರ ಪ್ರಾಣಿ ಬಲಿ ಶಿಕ್ಷಾರ್ಹ ಅಪರಾಧವಾಗಿದ್ದು, ತಪ್ಪಿತಸ್ಥರಿಗೆ ಆರು ತಿಂಗಳ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡೂ ವಿಧಿಸುವ ಅವಕಾಶವಿದೆ ಎಂದರು.

ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 291 ಮತ್ತು 325ರ ಅಡಿಯಲ್ಲಿ ಅನಧಿಕೃತವಾಗಿ ಪ್ರಾಣಿ ಕೊಲ್ಲುವವರಿಗೆ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬಹುದಾಗಿದೆ. ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ-2020ರಂತೆ ಯಾವುದೇ ವಯಸ್ಸಿನ ದನ, ಆಕಳು, ಎತ್ತು, ಹೋರಿ ಮತ್ತು ಕರುಗಳನ್ನು ಬಲಿ, ಕುರ್ಬಾನಿ ಅಥವಾ ವಧೆ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಇಂತಹ ಜಾನುವಾರುಗಳ ಜತೆಗೆ ಒಂಟೆಗಳನ್ನು ವಧೆಗಾಗಿ ಸಾಗಾಟ ಮಾಡುವುದೂ ಶಿಕ್ಷಾರ್ಹ ಅಪರಾಧವಾಗುತ್ತದೆ. ಸಾರ್ವಜನಿಕರು ಆಹಾರಕ್ಕೆ ಯೋಗ್ಯವಾದ ಪ್ರಾಣಿಗಳನ್ನು ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ವಧೆ ಮಾಡಿಸಬೇಕು. ಹೆಚ್ಚಿನ ಮಾಹಿತಿಗಾಗಿ 24/7 ಸಹಾಯವಾಣಿ ಸಂಖ್ಯೆ 1533 ಸಂಪರ್ಕಿಸಲು ಸೂಚಿಸಿದೆ ಎಂದರು.

ವಿರಾಮ
ಪ್ರತಿ ಭಾನುವಾರ

ಸಮಾಚಾರ ಸಣ್ಣದಲ್ಲ

100ಕ್ಕೂ ಹೆಚ್ಚು ಕಳ್ಳತನ ಮಾಡಿದ್ದ ಖದೀಮ ಸೆರೆ

ಬೆಂಗಳೂರು: ನಗರದಲ್ಲಿ ಮನೆ ಮತ್ತು ಜ್ಯುವೆಲ್ಲರಿ ಶಾಪ್‌ನಲ್ಲಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ವೈಟ್ ಫೀಲ್ಡ್ ಪೊಲೀಸರು ಬಂಧಿಸಿದ್ದಾರೆ. ಸುನಿಲ್ ಕುಮಾರ್, ಸತ್ತಿಬಾಬು ಅಲಿಯಾಸ್ ಸ್ಪೈಡರ್ ಸತೀಶ್, ನರೇಂದರ್ ಬಂಧಿತರು. ಕಾರಿನಲ್ಲಿ ಬಂದು ಕಳ್ಳತನ ಮಾಡಿ ಗ್ಯಾಂಗ್ ಪರಾರಿಯಾಗಿತ್ತು. ಎರಡು ತಿಂಗಳ ಅಂತರದಲ್ಲಿ ಖದೀಮರು ಕೃತ್ಯವೆಸಗಿದ್ದರು. ಸದ್ಯ ಆರೋಪಿಗಳಿಂದ 1 ಕೋಟಿ ರು. ಮೌಲ್ಯದ 584 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ. ವೈಟ್ ಫೀಲ್ಡ್ ಪೊಲೀಸರಿಂದ ತನಿಖೆ ಮುಂದುವರಿದಿದೆ.

ಕಾಂಗ್ರೆಸ್ ಮಾಜಿ ಅಧ್ಯಕ್ಷನ ಮನೆಗೆ ಕನ್ನ ಹಾಕಿದ್ದ ಆಸಾಮಿ: ಇನ್ನು ಬಂಧಿತ ಮೂವರ ಪೈಕಿ ಸತ್ತಿ ಬಾಬು ಅಲಿಯಾಸ್ ಸ್ಪೈಡರ್ ಸತೀಶ್ ಹಿನ್ನೆಲೆ ಭಯಾನಕವಾಗಿದೆ. ಇತನ ಮೇಲೆ ಇಡೀ ದೇಶದಲ್ಲಿ ನೂರಕ್ಕೂ ಹೆಚ್ಚು ಕೇಸ್‌ಗಳಿವೆ. ಒಡಿಶಾ, ಕೇರಳಂ, ತಮಿಳು ನಾಡಿನಲ್ಲಿ ಕಳ್ಳತನ ಮಾಡುತ್ತಿದ್ದ. ಪ್ರತಿಷ್ಠಿತರ ಮನೆಗಳನ್ನೇ ಟಾರ್ಗೆಟ್ ಮಾಡಿ ಸತೀಶ್ ಕಳ್ಳತನ ಮಾಡುತ್ತಿದ್ದ. ಒಡಿಶಾ ಕಾಂಗ್ರೆಸ್ ಪ್ರದೇಶ ಸಮಿತಿ ಮಾಜಿ ಅಧ್ಯಕ್ಷ ನಿರಂಜನ್ ಪಟ್ನಾಯಕ್ ಮನೆಯಲ್ಲೂ ಸತೀಶ್ ಕಳ್ಳತನ ಮಾಡಿದ್ದ. ಮುಖಕ್ಕೆ ಮಾಸ್ಕ್ ಹಾಕಿಕೊಂಡು ಬಂದು ಕೃತ್ಯವೆಸಗಿದ್ದ.ಗೂಗಲ್‌ನಲ್ಲಿ ಸರ್ಚ್ ಮಾಡಿ ಸ್ಕೆಚ್ ಹಾಕುತ್ತಿದ್ದ ಖದೀಮ: ಗೂಗಲ್‌ನಲ್ಲಿ ರಿಚೆಸ್ಟ್ ವಿಲ್ಲಾ ಎಂದು ಸರ್ಚ್ ಮಾಡಿ ಸ್ಕೆಚ್ ಹಾಕುತ್ತಿದ್ದ. ಬಳಿಕ ಸ್ಕೋಡಾ ಕಾರಿನಲ್ಲಿ ಬಂದು ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ. ಇನ್ನು ಈತ ಕಟ್ಟಡದಿಂದ ಕಟ್ಟಡಕ್ಕೆ ಸ್ಪೈಡರ್‌ನಂತೆ ಜಂಪ್ ಮಾಡುವುದರಲ್ಲಿ ನಿಸ್ಸಿಮಾ. ಸಾಕ್ಷಿಗಳ ಕೊರತೆಯಿಂದಾಗಿ ಪ್ರಕರಣದಿಂದ ಬಚಾವಾಗುತ್ತಿದ್ದ ಸತೀಶ್, ಕರ್ನಾಟಕದಲ್ಲಿ ಮೊದಲ ಬಾರಿಗೆ ಕಳ್ಳತನ ಮಾಡಿ ಪೊಲೀಸರ ಅತಿಥಿ ಆಗಿದ್ದಾನೆ.

ವಸೂಲಿ ಪ್ರಕ್ರಿಯೆ ವಿಳಂಬ ಕಂಪನಿಗೆ 15000 ದಂಡ

ಬೆಂಗಳೂರು: ಬ್ಯಾಂಕ್‌ನಿಂದ ಪಡೆದ ಸಾಲ ಮರುಪಾವತಿಸದೇ ವಸೂಲಿ ಪ್ರಕ್ರಿಯೆ ವಿಳಂಬಗೊಳಿಸಲು

ಪದೇ ಪದೆ ನ್ಯಾಯಾಲಯದ ಮೊರೆ ಹೋಗುತ್ತಿದ್ದ ಕಂಪನಿಯೊಂದರ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, 15 ಸಾವಿರ ರು. ದಂಡ ವಿಧಿಸಿ ಅರ್ಜಿ ವಜಾಗೊಳಿಸಿ ಆದೇಶಿಸಿದೆ. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಸಿದ್ದಾಪುರದ ಸಂಗಪ್ಪ ಕುಂಬಾರ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಹುಚ್ಚಪ್ಪ ಎಸ್. ಕುಂಬಾರ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರವಿ ಹೊಸಮನಿ ಅವರಿದ್ದ ಧಾರವಾಡ ನ್ಯಾಯಪೀಠ ಮೇ 5ರಂದು ಈ ಆದೇಶ ನೀಡಿದೆ.ಸುಪ್ರೀಂ ಕೋರ್ಟ್‌ನ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿದ ನ್ಯಾಯಪೀಠ, ಸಾಲಗಾರನೊಬ್ಬ ಬ್ಯಾಂಕ್ ವಸೂಲಾತಿ ಪ್ರಕ್ರಿಯೆಯನ್ನು ವಿಳಂಬಗೊಳಿಸಲು ನಡೆಸಿದ ಪ್ರಯತ್ನವಾಗಿದೆ. ಇಂತಹ ಅರ್ಜಿಗಳು ಕಾನೂನುಬದ್ಧವಾಗಿ ನಿಲ್ಲುವುದಿಲ್ಲ ಮತ್ತು ಅರ್ಜಿದಾರರ ಮೇಲೆ ಯಾವುದೇ ಸಹಾನುಭೂತಿ ತೋರಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ. ಜತೆಗೆ, ಅರ್ಜಿ ವಜಾಗೊಳಿಸಿ, ಅರ್ಜಿದಾರರಿಗೆ 15,000 ಸಾವಿರ ರೂಪಾಯಿ ದಂಡ ವಿಧಿಸಿದೆ. ದಂಡದ ಮೊತ್ತವನ್ನು ಧಾರವಾಡ ಹೈಕೋರ್ಟ್ ಪೀಠದ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿಗೆ ಪಾವತಿಸುವಂತೆ ಆದೇಶದಲ್ಲಿ ತಿಳಿಸಿದೆ.

ಜಾಗತಿಕ ರೋಬೋಸಬ್ 2026ಕ್ಕೆ ಎಂಐಟಿ ಬೆಂಗಳೂರು ಆಯ್ಕೆ

ಬೆಂಗಳೂರು: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಗಸಂಸ್ಥೆಯಾದ ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬೆಂಗಳೂರು ವಿದ್ಯಾರ್ಥಿಗಳ ತಂಡ ಜಾಗತಿಕ ಮಟ್ಟದ ಪ್ರತಿಷ್ಠಿತ ರೋಬೋಸಬ್ 2026 ಅಂತರರಾಷ್ಟ್ರೀಯ ಅಟೋನಮಸ್ ಅಂಡರ್ ವಾಟರ್ ರೊಬೊಟಿಕ್ಸ್ ಸ್ಪರ್ಧೆಗೆ ಆಯ್ಕೆಯಾಗಿದೆ. ಈ ಕುರಿತು ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಬೆಂಗಳೂರು ಕ್ಯಾಂಪಸ್‌ನ ಸಹ ಕುಲಪತಿ ಡಾ.ಮಧು ವೀರರಾಘವನ್ ಮಾತನಾಡಿ, ಜುಲೈ 11 ರಿಂದ 16 ರವರೆಗೆ ಅಮೆರಿಕದ ಇರ್ವಿನ್‌ನಲ್ಲಿ ನಡೆಯಲಿರುವ ಈ ಸ್ಪರ್ಧೆಯಲ್ಲಿ ಭಾರತದಿಂದ ಆಯ್ಕೆಯಾಗಿರುವ ಕೇವಲ 2 ತಂಡಗಳು ಅದರಲ್ಲಿ ಎಂಐಟಿ ಬೆಂಗಳೂರು ಕೂಡ ಒಂದು ಎಂಬುದು ವಿಶೇಷ. ಅಮೆರಿಕದ ನೇವಲ್ ರಿಸರ್ಚ್‌ನಲ್ಲಿ ರೋಬೋನೇಷನ್ ನಡೆಯುತ್ತಿರುವ ಈ ಸ್ಪರ್ಧೆಯಲ್ಲಿ ವಿಶ್ವದ ಸುಮಾರು 60ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ತಂಡಗಳು ಭಾಗ ವಹಿಸಲಿವೆ. ನೀರಿನಾಳದ ಸಂಕೀರ್ಣ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸಬಲ್ಲ ಸ್ವಯಂಚಾಲಿತ ಅಂಡರ್‌ವಾಟರ್ ವಾಹನ ವಿನ್ಯಾಸಗೊಳಿಸಿ ಪ್ರದರ್ಶಿಸುತ್ತದೆ ಎಂದರು.

ರಸ್ತೆಗಳ ಮೇಲೆ ಅಡಿಗಟ್ಟಲೇ ನಿಂತಿದ್ದ ನೀರು | ಟ್ರಾಫಿಕ್ ಜಾಮ್, ವಾಹನ ಸವಾರರು

ನಗರದಲ್ಲಿ ಮಳೆ: ನದಿಯಂತಾದ ರಸ್ತೆಗಳು

ಬೆಂಗಳೂರು: ಬೆಂಗಳೂರಿನಲ್ಲಿ ಮಂಗಳವಾರ ಸಂಜೆ ಗುಡುಗು-ಮಿಂಚು ಮತ್ತು ಬಿರುಗಾಳಿ ಸಹಿತ ಸುರಿದ ಭಾರೀ ಮಳೆಗೆ ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು.

ನಗರದ ಪ್ರಮುಖ ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು ಹಾಗೂ ಉದ್ಯೋಗಿಗಳು ತೀವ್ರ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ಪರದಾಡಿದರು. ಇದರ ಜತೆಗೆ ನಮ್ಮ ಮೆಟ್ರೋ ರೈಲು ಸಂಚಾರದಲ್ಲೂ ಭಾರೀ ವ್ಯತ್ಯಯ ಉಂಟಾಗಿದ್ದು, ರೈಲುಗಳು ವಿಳಂಬವಾಗಿ ಚಲಿಸುತ್ತಿರುವುದರಿಂದ ಮೆಟ್ರೋ ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿ ಜನರು ತೀವ್ರ ತೊಂದರೆ ಅನುಭವಿಸುವಂತಾಯಿತು.

ನಗರದ ಹಲವೆಡೆ ಮಂಗಳವಾರ ಸಂಜೆ ಬಿರುಗಾಳಿ ಸಹಿತ ಮಳೆ ಅಬ್ಬರಿಸಿದ್ದು, ಕಳೆದ ಮೂರು ನಾಲ್ಕು ದಿನ ಬಿಡುವು ಕೊಟ್ಟಿದ್ದ ಮಳೆ ಮಂಗಳವಾರ ಸಂಜೆ ಮತ್ತೆ ಆಗಮಿಸಿದೆ. ಪರಿಣಾಮ, ರಸ್ತೆಗಳೆಲ್ಲವೂ ನದಿಯ ರೂಪ ತಾಳಿದ್ದವು. ಮಳೆ ನೀರು ಹರಿವಿನ ರಭಸಕ್ಕೆ ವಾಹನ ಸವಾರರು ತೊಂದರೆ ಅನುಭವಿಸಿದರು. ರಸ್ತೆಗಳಲ್ಲಿಅಡಿಗಟ್ಟಲೆ ನೀರು ನಿಂತಿದ್ದರಿಂದ ಟ್ರಾಫಿಕ್‌ಜಾಮ್ ಉಂಟಾಗಿ ಸವಾರರು ಪರದಾಡಿದರು.

ರಸ್ತೆಗಳಲ್ಲಿ ಅಡಿಗಟ್ಟಲೇ ನೀರು ನಿಂತಿದ್ದರಿಂದ ಬಳ್ಳಾರಿ ರಸ್ತೆ, ರಿಚ್ಮಂಡ್ ರಸ್ತೆ, ಕೆ.ಜಿ.ರಸ್ತೆ, ಕೆ.ಆರ್.ಪುರ, ತುಮಕೂರು ರಸ್ತೆ, ಮೈಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೆಜೆಸ್ಟಿಕ್, ಗಾಂಧಿ ನಗರ, ಮಲ್ಲೇಶ್ವರ, ಶೇಷಾದ್ರಿಪುರ, ಟೌನ್ ಹಾಲ್, ಕೆ.ಆರ್.ಮಾರ್ಕೆಟ್ ಹಾಗೂ ವಿಧಾನಸೌಧದ ಸುತ್ತಮುತ್ತಲಿನ ಭಾಗಗಳಲ್ಲಿ ರಸ್ತೆಗಳೆಲ್ಲ ಜಲಾವೃತಗೊಂಡಿದ್ದವು.

ಬಳ್ಳಾರಿ ರಸ್ತೆ, ರಿಚ್ಮಂಡ್ ರಸ್ತೆ, ಕೆ.ಜಿ.ರಸ್ತೆ, ಕೆ.ಆರ್.ಪುರ, ತುಮಕೂರು ರಸ್ತೆ, ಮೈಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮೆಜೆಸ್ಟಿಕ್ ಸೇರಿ ಹಲವು ಕಡೆ ರಸ್ತೆಗಳು ಜಲಾವೃತ.

ಮಂಗಳವಾರ ಸಂಜೆ ಸುರಿದ ಮಳೆಯಿಂದ ಮೈಸೂರು ರಸ್ತೆ ಜಲಾವೃತಗೊಂಡು ಸವಾರರು ಪರದಾಡಿದರು.

ಮೆಟ್ರೋ ಸಂಚಾರದಲ್ಲಿ ಭಾರೀ ವ್ಯತ್ಯಯ

ಮಳೆ ಹಿನ್ನೆಲೆ ನಮ್ಮ ಮೆಟ್ರೋ ಸಂಚಾರದಲ್ಲಿ ಭಾರೀ ವ್ಯತ್ಯಯವಾಗಿದೆ. ಮಂಗಳವಾರ ಸಂಜೆ 3/5 ನಿಮಿಷಕ್ಕೊಂದು ಆಗಮಿಸುತ್ತಿದ್ದ ಮೆಟ್ರೋ ರೈಲುಗಳು ಸದ್ಯ 15 ನಿಮಿಷಕ್ಕೊಂದು ಆಗಮಿಸಿದೆ. ಜತೆಗೆ ಐಟಿಪಿಎಲ್ ಮತ್ತು ಸತ್ಯಸಾಯಿ ಪ್ರಶಾಂತ್ ನಿಲಯ ನಡುವೆ ಹಳಿಯ ಮೇಲೆ ಮರದ ಕೊಂಬೆ ಬಿದ್ದಿರುವುದರಿಂದ, ವೈಟ್ ಫೀಲ್ಡ್ ಮತ್ತು ಗರುಡಾಚಾರ್ ಪಾಳ್ಯ ನಡುವಿನ ಮೆಟ್ರೋ ರೈಲು ಸಂಚಾರ ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಮಂಗಳವಾರ ಸಂಜೆ 6 ಗಂಟೆಯಿಂದಲೇ ಅನ್ವಯವಾಗುವಂತೆ ಈ ಭಾಗದ ರೈಲು ಸಂಚಾರ ಸ್ಥಗಿತಗೊಂಡಿದ್ದರಿಂದ ಆಫೀಸ್ ಮುಗಿಸಿ ಮನೆಗೆ ಮರಳುವ ಪೀಕ್ ಅವರ್ಸ್‌ನಲ್ಲೇ ಈ ಘಟನೆ ನಡೆದಿರುವುದರಿಂದ ಸಾವಿರಾರು ಐಟಿ ಉದ್ಯೋಗಿಗಳು ಹಾಗೂ ಸಾರ್ವಜನಿಕರು ಪರದಾಡುವಂತ ಪರಿಸ್ಥಿತಿ ಉಂಟಾಗಿತ್ತು.

ಟೋಯಿಂಗ್ ಅನಾಥ ವಾಹನಗಳಿಗೆ ಪಾಲಿಕೆವಾರು ಶೀಘ್ರದಲ್ಲೇ ನಿಲ್ದಾಣ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿ ಕೆಗಳಲ್ಲಿ ಟೋಯಿಂಗ್ ಮಾಡುವ ಅನಾಥ ವಾಹನಗಳ ನಿಲುಗಡೆಗೆ ಪ್ರತ್ಯೇಕ ಸ್ಥಳ ಶೀಘ್ರ ಅಂತಿಮಗೊಳಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿವಿಧ ಇಲಾಖೆಗಳೊಂದಿಗೆ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಉತ್ತರ ನಗರ ಪಾಲಿಕೆಯಲ್ಲಿ ಈಗಾಗಲೇ ವಾಹನ ನಿಲುಗಡೆ ಸ್ಥಳ ಗುರುತಿಸಲಾಗಿದ್ದು, ಕೇಂದ್ರ ಹಾಗೂ ದಕ್ಷಿಣ ನಗರ ಪಾಲಿಕೆಗಳಲ್ಲಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಪೂರ್ವ ಮತ್ತು ಪಶ್ಚಿಮ ನಗರ ಪಾಲಿಕೆಗಳಲ್ಲಿಯೂ ತ್ವರಿತವಾಗಿ ಸ್ಥಳ ಗುರುತಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಮೂಲಸೌಕರ್ಯ ಕಾಮಗಾರಿಗಳ ಪ್ರಗತಿ ಪರಿಶೀಲಿಸಿದ ಮಹೇಶ್ವರ್ ರಾವ್, ಕೋಗಿಲು ಜಂಕ್ಷನ್ ಸಮೀಪದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಬಳಿ ಕಲ್ವರ್ಟ್ ನಿರ್ಮಾಣಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತಕ್ಷಣ ಅನುಮೋದನೆ ಪಡೆಯುವಂತೆ ಸೂಚಿಸಿದರು. ಚಂದಾಪುರ-ಹೊಸೂರು ರಸ್ತೆಯಲ್ಲಿ ನಡೆಯುತ್ತಿರುವ ಪ್ರೀಕಾಸ್ಟ್ ಕಲ್ವರ್ಟ್ ಕಾಮಗಾರಿಗೆ ಅಡ್ಡಿಯಾಗಿರುವ ಬೆಸ್ಕಾಂ ಕೇಬಲ್ ಸ್ಥಳಾಂತರ ವಿಚಾರದಲ್ಲಿ ಎನ್‌ಎಚ್‌ಎಐ ಮತ್ತು ಬೆಸ್ಕಾಂ ಅಧಿಕಾರಿಗಳು ಜಂಟಿಯಾಗಿ ಸಮಸ್ಯೆ ಬಗೆಹರಿಸಬೇಕು ಎಂದರು. ನಾಗವಾರ ರಸ್ತೆ, ಟ್ಯಾನರಿ ರಸ್ತೆ, ಲೋವರ್ ಅಗರಂ ರಸ್ತೆ ಸೇರಿದಂತೆ ಹಲವು ಭಾಗಗಳಲ್ಲಿ ಕಾಮಗಾರಿ ವೇಗಗೊಳಿಸುವಂತೆ ತಿಳಿಸಿದರು. ಸಭೆಯಲ್ಲಿ ನಗರ ಪಾಲಿಕೆಗಳ ಆಯುಕ್ತ ರಮೇಶ್ ಡಿ.ಎಸ್., ಕೆ.ಎನ್. ರಮೇಶ್, ಬೆಂಘನಿನಿ ದ ಸಿಇಒ ಕರೀಗೌಡ ಸೇರಿದಂತೆ ಇನ್ನಿತರರು ಇದ್ದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿದರು.

> **ಅರ್ಕಾವತಿ ಬಡಾವಣೆಗೆ ಹೊಂದಿಕೊಂಡಿರುವ ಸಂಪಿಗೆಹಳ್ಳಿ ಮುಖ್ಯರಸ್ತೆ ಅಗಲೀಕರಣ ಕುರಿತು ಬಿಡಿಎ ಮತ್ತು ಉತ್ತರ ನಗರ ಪಾಲಿಕೆ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ವಾರದೊಳಗೆ ವರದಿ ಸಲ್ಲಿಸಿ. ಹಲವು ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗೆ ಮುನ್ನ ಜಲಮಂಡಳಿಯ ಪೈಪ್ ಲೈನ್ ಕಾಮಗಾರಿ ಶೀಘ್ರ ಪೂರ್ಣಗೊಳಿಸಬೇಕು.**
> **-ಮಹೇಶ್ವರ್ ರಾವ್**
> ಜಿಬಿಎ ಮುಖ್ಯಆಯುಕ್ತ

ನಿಯೋಜಿತ ಸ್ಥಳಗಳಲ್ಲಿ ಬೀದಿ ನಾಯಿಗಳಿಗೆ ಆಹಾರ

ಬೆಂಗಳೂರು: ಬೀದಿ ನಾಯಿಗಳಿಗೆ ಆಹಾರ ನೀಡುವ ವಿಚಾರದಲ್ಲಿ ಸಾರ್ವಜನಿಕರಿಂದ ಹಾಗೂ ಶ್ವಾನ ಪ್ರೇಮಿಗಳಿಂದ ಹೆಚ್ಚುತ್ತಿರುವ ಮನವಿಗಳ ಹಿನ್ನೆಲೆ, ಬೆಂಗಳೂರು ಉತ್ತರ ನಗರ ಪಾಲಿಕೆ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ ಎಂದು ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಈ ಕುರಿತು ಪೊಮ್ಮಲ ಸುನೀಲ್ ಕುಮಾರ್, ಸಾರ್ವಜನಿಕರ ಸುರಕ್ಷತೆ, ಆರೋಗ್ಯ ಹಾಗೂ ಪ್ರಾಣಿ ಕಲ್ಯಾಣದ ಸಮತೋಲನ ಕಾಪಾಡುವ ಉದ್ದೇಶದಿಂದ ನಿಯೋಜಿತ ಸ್ಥಳಗಳಲ್ಲಿ ಮಾತ್ರ ನಾಯಿಗಳಿಗೆ ಆಹಾರ ನೀಡಲು ಅವಕಾಶ ಕಲ್ಪಿಸಲಾಗುವುದು. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವಿಕೆ ಕಾಯಿದೆ-1960 ಹಾಗೂ ಪ್ರಾಣಿಗಳ ಜನನ ನಿಯಂತ್ರಣ ನಿಯಮಗಳು-2023 ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ. ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ಸಂಪೂರ್ಣ ನಿಷೇಧಿಸಿಲ್ಲ. ಆದರೆ ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಬಸ್ ನಿಲ್ದಾಣ, ಶಾಲೆ, ಆಸ್ಪತ್ರೆ, ಮಾರುಕಟ್ಟೆ, ಧಾರ್ಮಿಕ ಸ್ಥಳ, ಮಕ್ಕಳ ಆಟದ ಮೈದಾನ ಸೇರಿದಂತೆ ಜನಸಂಚಾರ ಹೆಚ್ಚಿರುವ ಪ್ರದೇಶಗಳಲ್ಲಿ ಆಹಾರ ನೀಡುವುದನ್ನು ತಡೆಯಲಾಗಿದೆ ಎಂದರು.

ಶ್ವಾನ ಪ್ರೇಮಿಗಳು, ಸ್ವಯಂಸೇವಕರು ಹಾಗೂ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ತೊಂದರೆ ಆಗದ ಸ್ಥಳಗಳನ್ನು ಗುರುತಿಸಿ ಸಂಬಂಧಿಸಿದ ವಲಯ ಕಚೇರಿ ಅಥವಾ ಪಶುಪಾಲನಾ ವಿಭಾಗದ ಗಮನಕ್ಕೆ ತರಬೇಕೆಂದು ಸೂಚಿಸಲಾಗಿದೆ. ಸ್ಥಳ ಪರಿಶೀಲನೆಯ ಬಳಿಕ ಸಾರ್ವಜನಿಕ ಹಿತಾಸಕ್ತಿ, ವಾಹನ ಸಂಚಾರ, ಸ್ವಚ್ಛತೆ, ಮಕ್ಕಳ ಹಾಗೂ ಹಿರಿಯ ನಾಗರಿಕರ ಸುರಕ್ಷತೆ, ಸ್ಥಳೀಯ ನಿವಾಸಿಗಳ ಅಭಿಪ್ರಾಯ ಮೊದಲಾದ ಅಂಶಗಳನ್ನು ಪರಿಗಣಿಸಿ ಮಾತ್ರ ಫೀಡಿಂಗ್ ಸ್ಪಾಟ್‌ಗಳಿಗೆ ಅನುಮೋದನೆ ನೀಡಲಾಗುತ್ತದೆ. ಅನುಮೋದಿತ ಸ್ಥಳಗಳಲ್ಲಿ ಆಹಾರ ನೀಡುವವರು ಉಳಿದ ಆಹಾರ ಮತ್ತು ತ್ಯಾಜ್ಯ ತೆರವುಗೊಳಿಸಿ ಸ್ಥಳ ಸ್ವಚ್ಛವಾಗಿಡಬೇಕು ಎಂದರು.

ಮಳೆ ನೀರು ಹರಿವಿಗೆ ಸೂಕ್ತ ಚರಂಡಿ ಕಲ್ಪಿಸಲು ಸೂಚನೆ

ಬೆಂಗಳೂರು: ಮಳೆಯಿಂದ ಕದಿರೇನಹಳ್ಳಿ ಅಂಡರ್‌ಪಾಸ್‌ನಲ್ಲಿ ನೀರು ನಿಂತು ವಾಹನ ಸಂಚಾರ ಅಸ್ತವ್ಯಸ್ತಗೊಂಡ ಹಿನ್ನೆಲೆಯಲ್ಲಿ, ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಅಭಿವೃದ್ಧಿ ವಿಭಾಗದ ಅಪರ ಆಯುಕ್ತ ಡಾ.ನವೀನ್ ಕುಮಾರ್ ರಾಜು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಕುರಿತು ದಕ್ಷಿಣ ನಗರ ಪಾಲಿಕೆಯ ಅಭಿವೃದ್ಧಿ ವಿಭಾಗದ ಅಪರ ಆಯುಕ್ತ ಡಾ.ನವೀನ್ ಕುಮಾರ್ ರಾಜು ಮಾತನಾಡಿ, ಅಂಡರ್‌ಪಾಸ್ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆ ನೀರು ಹರಿದು ಹೋಗದೇ ಜಲಾವೃತ ಸ್ಥಿತಿ ಉಂಟಾಗುತ್ತಿದೆ. ಶಾಶ್ವತ ಡ್ರೈನೇಜ್ ವ್ಯವಸ್ಥೆ ರೂಪಿಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಅಭಿಯಂತರರಿಗೆ ಸೂಚಿಸಿದರು. ಅಂಡರ್‌ಪಾಸ್ ಗೋಡೆಗಳಿಂದ ಸೋರುತ್ತಿರುವ ನೀರು ತಡೆಯಲು ತಾಂತ್ರಿಕ ಕ್ರಮ ಜಾರಿಗೆ ತರಬೇಕು. ಡ್ರೈನೇಜ್ ಪೈಪ್‌ಲೈನ್ ಕಾಮಗಾರಿಗಾಗಿ ರಸ್ತೆ ಅಗೆದಿರುವ ಪ್ರದೇಶಗಳಲ್ಲಿ ತಕ್ಷಣ ಕಾಂಕ್ರೀಟ್ ಮರು-ಮೇಲ್ಮೈ ಕಾಮಗಾರಿ ನಡೆಸಿ ರಸ್ತೆ ದುರಸ್ತಿ ಪೂರ್ಣಗೊಳಿಸಬೇಕು ಎಂದರು.

ಬಳಿಕ ಕದಿರೇನಹಳ್ಳಿ ಕ್ರಾಸ್ ಹಾಗೂ ಯಲಚೇನಹಳ್ಳಿ ಕೆರೆ ಸಮೀಪದ ತ್ಯಾಜ್ಯ ವರ್ಗಾವಣೆ ಸ್ಥಳಗಳಿಗೆ ಭೇಟಿ ನೀಡಿ, ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸೂಕ್ಷ್ಮ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆಯ ದ್ವಿತೀಯ ದರ್ಜೆ ವರ್ಗಾವಣೆ ಕೇಂದ್ರ ತಕ್ಷಣ ಸ್ಥಾಪಿಸುವಂತೆ ಆದೇಶಿಸಿದರು. ಪರಿಶೀಲನೆ ವೇಳೆ ಪದ್ಮನಾಭನಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಶ್ರೀನಿವಾಸ್, ಬಿಎಸ್‌ಡಬ್ಲ್ಯುಎಂಎಲ್ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಶ್ವೇತಾ ಸೇರಿದಂತೆ ಪಾಲಿಕೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

25 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ

ಬೆಂಗಳೂರು: ಓಕಳೀಪುರ ಅಷ್ಟಪಥ ಕಾರಿಡಾರ್‌ನ ಚೆನ್ನೈ ರೈಲ್ವೆ ಕೆಳಭಾಗದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು 25 ದಿನಗಳೊಳಗೆ ಪೂರ್ಣಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಕೇಂದ್ರ ಹಾಗೂ ಪಶ್ಚಿಮ ವಲಯಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿ ನಂತರ ಈ ಕುರಿತು ಮಾತನಾಡಿದ ಅವರು, ಚೆನ್ನೈ ರೈಲ್ವೆ ಹಳಿ ಕೆಳಭಾಗದಲ್ಲಿ ರೈಲ್ವೆ ಇಲಾಖೆ ಕೈಗೊಂಡಿರುವ ಎರಡು ಬಾಕ್ಸ್ ಪುಶಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಮೆಜೆಸ್ಟಿಕ್‌ನಿಂದ ರಾಜಾಜಿನಗರದ ಕಡೆಗೆ ತೆರಳುವ ಮಾರ್ಗದ ಸಂಪರ್ಕ ರಸ್ತೆ ನಿರ್ಮಾಣ ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ. ಜತೆಗೆ ಇದೇ ಭಾಗದಲ್ಲಿ ರೈಲ್ವೆ ನಿಲ್ದಾಣದ ಕಡೆಗೆ ಸಾಗುವ ಸಂಪರ್ಕ ರಸ್ತೆ, 1200 ಮಿ.ಮೀ. ವ್ಯಾಸದ ಮಳೆ ನೀರುಗಾಲುವೆ, 63 ಮೀಟರ್ ಉದ್ದದ ರಿಟೈನಿಂಗ್ ವಾಲ್ ಹಾಗೂ ಪಾದಚಾರಿ ಮಾರ್ಗ ನಿರ್ಮಾಣ ಕಾರ್ಯ ಕೂಡಲೇ ಆರಂಭಿಸಿ ನಿಗದಿತ ಅವಧಿಯೊಳಗೆ ಮುಗಿಸಬೇಕು. ಹೊಸ ಪಾದಚಾರಿ ಮೇಲ್‌ಸೇತುವೆ ಕಾಮಗಾರಿ ತ್ವರಿತವಾಗಿ ಆರಂಭಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು. ಶಿವಾನಂದ ವೃತ್ತ ಸಮೀಪದ ಮಾಧವನಗರ ರೈಲ್ವೆ ಕೆಳಸೇತುವೆ ಪ್ರದೇಶ ಪರಿಶೀಲನೆ ವೇಳೆ ಮಳೆ ನೀರು ಸರಾಗವಾಗಿ ಹರಿಯುವಂತೆ ಗ್ರೇಟಿಂಗ್‌ಗಳು ಹಾಗೂ ಚರಂಡಿಗಳನ್ನು ಸ್ವಚ್ಛವಾಗಿಡಲು ಸೂಚಿಸಿದರು.

ಮಳೆಗಾಲದಲ್ಲಿ ನೀರು ನಿಲ್ಲದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುತ್ತಿರುವುದನ್ನು ಗಮನಿಸಿ ಸಂಬಂಧಪಟ್ಟ ಕಟ್ಟಡ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಪಾದಚಾರಿ ಮಾರ್ಗದ ಮೇಲೆ ಬಿದ್ದಿದ್ದ ಮರದ ಅವಶೇಷಗಳು ಹಾಗೂ ಕಟ್ಟಡ ಭಗ್ನಾವಶೇಷಗಳನ್ನು ಕೂಡಲೇ ತೆರವುಗೊಳಿಸಲು ಮತ್ತು ರಸ್ತೆಯತ್ತ ವಾಲಿರುವ ಮರದ ಕೊಂಬೆಗಳನ್ನು ಕತ್ತರಿಸಲು ಸೂಚನೆ ನೀಡಿದರು.

ಇದೇ ವೇಳೆ, ಡಾ. ರಾಜಕುಮಾರ್ ರಸ್ತೆಯಲ್ಲಿ ನವರಂಗ್‌ನಿಂದ ಸ್ಟಾರ್ ಬಜಾರ್ ಸಿಗ್ನಲ್‌ವರೆಗೆ 1.8 ಕಿ.ಮೀ. ಉದ್ದದ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಒಂದು ಬದಿಯ ಕಾಮಗಾರಿ ಜುಲೈ ಅಂತ್ಯದೊಳಗೆ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು. ಉಳಿದ ಭಾಗದ ಕಾಮಗಾರಿ ಕೈಗೆತ್ತಿಕೊಂಡು ಅಕ್ಟೋಬರ್ ಅಂತ್ಯದೊಳಗೆ ಸಂಪೂರ್ಣ ಯೋಜನೆ ಪೂರ್ಣಗೊಳಿಸಲಾಗುವುದು ಎಂದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಕೇಂದ್ರ ಹಾಗೂ ಪಶ್ಚಿಮ ವಲಯಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿದರು.

ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಶಾಶ್ವತ ಅಂಚೆ ಮೊಹರು ಗೌರವ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತನ್ನ 18ನೇ ವರ್ಷದ ಸಂಭ್ರಮ ಆಚರಿಸುತ್ತಿರುವ ಸಂದರ್ಭದಲ್ಲಿ, ಭಾರತೀಯ ಅಂಚೆ ಇಲಾಖೆ ವಿಮಾನ ನಿಲ್ದಾಣದ ಹೆಗ್ಗಳಿಕೆಗೆ ವಿಶೇಷ ಗೌರವ ಸಲ್ಲಿಸಿದೆ. ಶಾಶ್ವತ ಚಿತ್ರಾತ್ಮಕ ಅಂಚೆ ಚೀಟಿ ರದ್ದತಿ ಮೊಹರು, ವಿಶೇಷ ಅಂಚೆ ಲಕೋಟೆ ಹಾಗೂ ಸ್ಮರಣಾರ್ಥ ಅಂಚೆ ಕಾರ್ಡ್‌ಗಳನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು.

ಈ ಕುರಿತು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಹರಿ ಮರಾರ್ ಮಾತನಾಡಿ, 18 ವರ್ಷಗಳ ಪಯಣವು ಬೆಂಗಳೂರಿನ ಬೆಳವಣಿಗೆಯ ಪ್ರತಿಬಿಂಬ ವಾಗಿದೆ. ಲಕ್ಷಾಂತರ ಪ್ರಯಾಣಿಕರಿಗೆ ವಿಮಾನ ನಿಲ್ದಾಣವೇ ನಗರದ ಮೊದಲ ಅನುಭವವಾಗಿದ್ದು, ಭಾರತೀಯ ಅಂಚೆ ಇಲಾಖೆಯ ಈ ಗೌರವ ನಮ್ಮ ಬೆಳವಣಿಗೆಯ ಸ್ಮರಣೆಯಾಗಿದೆ. 2008ರಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಆರಂಭವಾದ ದೇಶದ ಮೊದಲ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ವಾಗಿರುವ ಕೆಐಎ, ಬೆಂಗಳೂರನ್ನು ಜಾಗತಿಕ ಮಟ್ಟದಲ್ಲಿ ಸಂಪರ್ಕಿಸುವ ಪ್ರಮುಖ ಪ್ರವೇಶ ದ್ವಾರವಾಗಿ ಬೆಳೆದಿರುವ ಹಿನ್ನೆಲೆಯಲ್ಲಿ ಈ ಗೌರವ ನೀಡಲಾಗಿದೆ ಎಂದರು.ಶಾಶ್ವತ ಅಂಚೆ ಮೊಹರಿನಲ್ಲಿ ನಾಡಪ್ರಭು ಕೆಂಪೇಗೌಡರ ಚಿತ್ರಣದ ಜತೆಗೆ ವಿಮಾನ ನಿಲ್ದಾಣದ ಭವ್ಯ ನೋಟ ಅಳವಡಿಸ ಲಾಗಿದ್ದು, ಬೆಂಗಳೂರಿನ ಪರಂಪರೆ ಮತ್ತು ಆಧುನಿಕ ಜಾಗತಿಕ ಗುರುತಿನ ಸಂಗಮ ಪ್ರತಿಬಿಂಬಿಸಲಾಗಿದೆ. ವಿಶೇಷ ಅಂಚೆ ಲಕೋಟೆ ಮತ್ತು ಸ್ಮರಣಾರ್ಥ ಕಾರ್ಡ್‌ಗಳು ಪ್ರಯಾಣಿಕರು ಹಾಗೂ ಅಂಚೆ ಚೀಟಿ ಸಂಗ್ರಹಾಸಕ್ತರಿಗೆ ವಿಶೇಷ ನೆನಪಿನ ವಸ್ತುವಾಗಲಿವೆ ಎಂದರು.

ಭಾರತೀಯ ಅಂಚೆ ಇಲಾಖೆಯ ಬೆಂಗಳೂರು ಕೇಂದ್ರ ಕಚೇರಿ ವಲಯದ ಅಂಚೆ ಸೇವೆಗಳ ನಿರ್ದೇಶಕಿ ವಿ.ತಾರಾ ಮಾತನಾಡಿ, ಬೆಂಗಳೂರು ನಗರದ ಜಾಗತಿಕ ಗುರುತಿನ ಸಂಕೇತವಾಗಿರುವ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಸಲ್ಲಿಸುವ ಗೌರವವೇ ಈ ಶಾಶ್ವತ ಚಿತ್ರಾತ್ಮಕ ಅಂಚೆ ಮೊಹರು. ಮೇ 26ರಿಂದ ವಿಮಾನ ನಿಲ್ದಾಣದ ಅಂಚೆ ಕಚೇರಿಯಲ್ಲಿ ಶಾಶ್ವತ ಚಿತ್ರಾತ್ಮಕ ಅಂಚೆ ಚೀಟಿ ರದ್ದತಿ ಮೊಹರು ಲಭ್ಯವಿರಲಿದ್ದು, ವಿಶೇಷ ಅಂಚೆ ಲಕೋಟೆ ಮತ್ತು ಸ್ಮರಣಾರ್ಥ ಅಂಚೆ ಕಾರ್ಡ್‌ಗಳು ಬೆಂಗಳೂರು ಜಿಪಿಒ ಸೇರಿ ರಾಜ್ಯದ ಪ್ರಮುಖ ಫಿಲಾಟೆಲಿಕ್ ಬ್ಯೂರೋಗಳಲ್ಲಿ ದೊರೆಯಲಿವೆ ಎಂದರು.

ಕೆಐಎದ ಎಂಡಿ ಹರಿ ಮರಾರ್ ಚಿತ್ರಾತ್ಮಕ ಅಂಚೆ ಚೀಟಿ ರದ್ದತಿ ಮೊಹರು ಬಿಡುಗಡೆಗೊಳಿಸಿದರು. ಈ ವೇಳೆ ಭಾರತೀಯ ಅಂಚೆ ಇಲಾಖೆಯ ಬೆಂಗಳೂರು ಕೇಂದ್ರ ಕಚೇರಿ ವಲಯದ ಅಂಚೆ ಸೇವೆಗಳ ನಿರ್ದೇಶಕಿ ವಿ.ತಾರಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗ್ಯಾರಂಟಿ ತೆಗೆಯಲು ಅಭಿಯಾನ

ಬೆಂಗಳೂರು: ಇಲ್ಲಿಯವರೆಗೆ ಗ್ಯಾರಂಟಿ ಎಂದು ಡೊಳ್ಳು ಬಾರಿಸಿದ್ದ ರಾಜ್ಯ ಸರಕಾರ, ಈಗ ಏಕಾಏಕಿ ಫಲಾನುಭವಿಗಳ ಮರುಪರಿಶೀಲನೆ, ಮರುನೋಂದಣಿ, ವಿಶೇಷ ಅಭಿಯಾನ ಎಂಬ ಹೊಸ ನಾಟಕ ಶುರು ಆರಂಭಿಸಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ರಾಜಕೀಯ ಗಿಮಿಕ್ ಮಾತ್ರವೇ ಹೊರತು, ಬಡವರ ಬದುಕಿನ ಬಗ್ಗೆ ಇರುವ ನಿಜವಾದ ಕಾಳಜಿ ಅಲ್ಲ ಎನ್ನುವುದು ಮತ್ತೊಮ್ಮೆ ಜಗಜ್ಜಾಹೀರಾಗಿದೆ ಎಂದರು.



ಅಗ್ರಿ ಸ್ಟಾರ್ಟ್ ಅಪ್ ಕ್ಲಾನ್ ಕೇವ್ 2.0 ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಎನ್.ಚಲುವರಾಸ್ವಾಮಿ

ರೈತರ ಆದಾಯ ಹೆಚ್ಚಿಸುವುದೇ ಸರಕಾರದ ಗುರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಸ್ತುತ ಕೃಷಿ ಕ್ಷೇತ್ರ ಹಲವಾರು ಸವಾಲು ಎದುರಿಸುತ್ತಿದೆ. ಹವಾಮಾನ ವೈಪರೀತ್ಯ, ಉತ್ಪಾದನಾ ವೆಚ್ಚದ ಏರಿಕೆ, ಮಾರುಕಟ್ಟೆ ಅಸ್ಥಿರತೆ ಮತ್ತು ಕಾರ್ಮಿಕ ಸಮಸ್ಯೆಗಳು ರೈತನ ಬದುಕನ್ನು ಸಂಕಷ್ಟಕ್ಕೆ ತಳ್ಳಿವೆ. ಈ ಸವಾಲುಗಳಿಗೆ ಉತ್ತರ ಕೊಡುವ ಶಕ್ತಿ ಇಂದಿನ ತಂತ್ರಜ್ಞಾನ ಮತ್ತು ಕೃಷಿ ಸ್ಟಾರ್ಟ್‌ಅಪ್‌ಗಳಲ್ಲಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ನಗರದ ಜಿಕೆವಿಕೆಯಲ್ಲಿ ಮಂಗಳವಾರ ನಡೆದ ಅಗ್ರಿ ಸ್ಟಾರ್ಟ್ ಅಪ್ ಕ್ಲಾನ್ ಕೇವ್ 2.0 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರಕಾರವು ಕೃಷಿಯನ್ನು ಕೇವಲ ಬದುಕಿನ ಮಾರ್ಗವಾಗಿ ನೋಡುವುದಿಲ್ಲ ಅದನ್ನುಲಾಭದಾಯಕ ಉದ್ಯಮವನ್ನಾಗಿ ರೂಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಡಿಜಿಟಲ್ ಕೃಷಿ, ಡ್ರೋನ್ ತಂತ್ರಜ್ಞಾನ, ಡೇಟಾ ಆಧಾರಿತ ಬೆಳೆ ನಿರ್ವಹಣೆ, ಮೌಲ್ಯವರ್ಧನೆ ಮತ್ತು ನೇರ ಮಾರುಕಟ್ಟೆ ವ್ಯವಸ್ಥೆಗಳಿಗೆ ನಮ್ಮ ಸರಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಪ್ರಸ್ತುತ ದೇಶದಲ್ಲಿ ಸಾವಿರಾರು ಅಗ್ರಿ ಸ್ಟಾರ್ಟ್ ಅಪ್ ಹುಟ್ಟಿಕೊಂಡಿವೆ. ಅದರಲ್ಲೂ ಬೆಂಗಳೂರು ಸ್ಟಾರ್ಟ್ ಅಪ್ ಗಳ ಹಬ್ ಆಗಿ ಮುಂಚೂಣಿಯಲ್ಲಿದೆ. ಯುವಕರು ಉದ್ಯೋಗ ಹುಡುಕುವವರು ಆಗದೆ, ಉದ್ಯೋಗ ಸೃಷ್ಟಿಸುವವರು ಆಗಬೇಕು ಎಂಬುದು ನಮ್ಮ ಆಶಯ ಎಂದರು.

ರೈತ ಉತ್ಪಾದಕರ ಸಂಘಗಳು, ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಯುವ ಉದ್ಯಮಿಗಳು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಗ್ರಾಮೀಣ ಆರ್ಥಿಕತೆಯಲ್ಲಿ ದೊಡ್ಡ ಬದಲಾವಣೆ ಸಾಧ್ಯ. ರಾಜ್ಯದ ಕೃಷಿ ಇಲಾಖೆ ರೈತರ ಆದಾಯ ಹೆಚ್ಚಿಸುವುದು, ನವೀನ ತಂತ್ರಜ್ಞಾನ ಗ್ರಾಮ ಮಟ್ಟಕ್ಕೆ ತಲುಪಿಸುವುದು ಮತ್ತು ಯುವಕರಿಗೆ ಕೃಷಿ ಆಧಾರಿತ ಉದ್ಯಮಗಳಲ್ಲಿ ಅವಕಾಶ ಸೃಷ್ಟಿಸುವುದಕ್ಕೆ ಬದ್ಧವಾಗಿ ಎಂದರು.

ಭಾರತ ಸರಕಾರದ ಡಿಬಿಟಿಯ ವ್ಯವಸ್ಥಾಪಕ ನಿರ್ದೇಶಕ ಡಾ.ಜಿತೇಂದ್ರ ಕುಮಾರ್ ಮಾತನಾಡಿ, ಹವಾಮಾನ ಬದಲಾವಣೆ, ನೀರಿನ ಕೊರತೆ ಹಾಗೂ ಉತ್ಪಾದನಾ ವೆಚ್ಚ ಹೆಚ್ಚುತ್ತಿರುವ ಸಂದರ್ಭದಲ್ಲಿ ಅಗ್ರಿ ಸ್ಟಾರ್ಟ್‌ಅಪ್‌ಗಳು ರೈತರಿಗೆ ಹೊಸ ಪರಿಹಾರ ನೀಡುತ್ತಿವೆ. ಕೃಷಿ ಪದವೀಧರರು ಮತ್ತು ಯುವ ಸಂಶೋಧಕರು ಕೃಷಿಯನ್ನು ಕೈಗಾರಿಕಾ ದೃಷ್ಟಿಕೋನದಿಂದ ನೋಡಬೇಕು. ಕೃಷಿ ಉತ್ಪನ್ನಗಳ ನೇರ ಮಾರುಕಟ್ಟೆ, ಕೃಷಿ ಪ್ರವಾಸೋದ್ಯಮ, ಸಾವಯವ ಉತ್ಪನ್ನಗಳ ಬ್ರ್ಯಾಂಡಿಂಗ್ ಹಾಗೂ ರಫ್ತು ಅವಕಾಶಗಳನ್ನು ಬಳಸಿಕೊಂಡು ಗ್ರಾಮೀಣ ಭಾಗದಲ್ಲಿ ಹೊಸ ಉದ್ಯಮಗಳನ್ನು ಆರಂಭಿಸಬಹುದು ಎಂದರು. ಕಾರ್ಯಕ್ರಮದಲ್ಲಿ ಸರಕಾರದ ಕಾರ್ಯದರ್ಶಿ ಡಾ.ಕೆ.ರಾಜೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಗ್ರಿ ಸ್ಟಾರ್ಟ್ ಅಪ್ ಕ್ಲಾನ್ ಕೇವ್ 2.0 ಕಾರ್ಯಕ್ರಮವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು. ಈ ವೇಳೆ ಭಾರತ ಸರಕಾರದ ಡಿಬಿಟಿಯ ವ್ಯವಸ್ಥಾಪಕ ನಿರ್ದೇಶಕ ಡಾ.ಜಿತೇಂದ್ರ ಕುಮಾರ್, ಜಿಕೆವಿಕೆ ಕುಲಪತಿ ಡಾ.ಎಸ್.ವಿ ಸುರೇಶ್, ಸರಕಾರದ ಕಾರ್ಯದರ್ಶಿ ಡಾ.ಕೆ.ರಾಜೇಂದ್ರ ಇದ್ದರು.

> **ಅಗ್ರಿ ಸ್ಟಾರ್ಟಅಪ್‌ಗಳು ರೈತರಿಗೆ ಹೊಸ ತಂತ್ರಜ್ಞಾನ, ಹವಾಮಾನ ಆಧಾರಿತ ಕೃಷಿ ಸಲಹೆ, ಡಿಜಿಟಲ್ ಮಾರುಕಟ್ಟೆ, ನಿಖರ ಕೃಷಿ, ಡ್ರೋನ್ ತಂತ್ರಜ್ಞಾನ, ಸಾವಯವ ಕೃಷಿ ಹಾಗೂ ಕೃಷಿ ಯಂತ್ರೋಪಕರಣಗಳ ಬಳಕೆ ಸುಲಭಗೊಳಿಸುತ್ತಿವೆ. ಇದರಿಂದ ಕೃಷಿ ವೆಚ್ಚ ಕಡಿಮೆಯಾಗುವುದರ ಜತೆಗೆ ಉತ್ಪಾದಕತೆ ಮತ್ತು ಲಾಭದಾಯಕತೆ ಹೆಚ್ಚಾಗುತ್ತಿದೆ.**
> **-ಡಾ.ಎಸ್.ವಿ ಸುರೇಶ್,** ಜಿಕೆವಿಕೆ ಕುಲಪತಿ

ಸಮಾಚಾರ ಸಣ್ಣದಲ್ಲ

ಅಪಘಾತ: ಮಗು ಸೇರಿ ದಂಪತಿ ದುರ್ಮರಣ

ರಾಯಬಾಗ: ಆಟೋ ರಿಕ್ಷಾ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಒಂದೇ ಕುಟುಂಬದ ಮೂವರು ಸಾವನ್ನಪ್ಪಿರುವ ಹೃದಯವಿದ್ರಾವಕ ಘಟನೆ ಬೆಳಗಾವಿ ಜಿಲ್ಲೆಯ ರಾಯಬಾಗ ರೈಲು ನಿಲ್ದಾಣದ ಬಳಿ ನಡೆದಿದೆ. ಮೃತರನ್ನು ರಾಯಬಾಗ ತಾಲೂಕಿನ ಬೊಮ್ಮನಾಳ ಗ್ರಾಮದ ನಿವಾಸಿಗಳಾದ ಬೈಕ್ ಸವಾರ ಮಹಾಂತೇಶ್ ಮಾನೆ, ಅವರ ಪತ್ನಿ ಸಾಕ್ಷಿ ಮಾನೆ ಹಾಗೂ 6 ತಿಂಗಳ ಮಗು ಎಂದು ಗುರುತಿಸಲಾಗಿದೆ. ಪತಿ, ಪತ್ನಿ ಹಾಗೂ ಮಗು ಒಂದೇ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ರಿಕ್ಷಾ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದೆ. ಪರಿಣಾಮ ಮೂವರು ಸಾವನ್ನಪ್ಪಿದ್ದಾರೆ.

ಸಿಡಿಲು ಬಡಿದು 18 ಕುರಿಗಳ ಸಾವು

ಕಲಬುರಗಿ: ಸಿಡಿಲು ಬಡಿದು 18 ಕುರಿಗಳು ಮೃತಪಟ್ಟ ಘಟನೆ ಕಾಳಗಿ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ನಡೆದಿದೆ. ಮಳೆಯಿಂದ ಬಚಾವ್ ಆಗಲು ಮರದ ಕೆಳಗೆ ಕುರಿಗಳನ್ನು ನಿಲ್ಲಿಸಲಾಗಿತ್ತು. ಈ ವೇಳೆ ಸಿಡಿಲು ಬಡಿದಿದ್ದು, 300ಕ್ಕೂ ಹೆಚ್ಚು ಕುರಿಗಳ ಪೈಕಿ 18 ಸಾವನ್ನಪ್ಪಿವೆ. ಕುರಿಗಾಯಿಗಳಾದ ಜಗದೇವಪ್ಪ, ಮಲ್ಲಪ್ಪ ಹಾಗೂ ದಶರಥ ಅವರಿಗೆ ಸೇರಿದ ಕುರಿಗಳು ಮೃತಪಟ್ಟಿದ್ದು, ಲಕ್ಷಾಂತರ ರುಪಾಯಿ ನಷ್ಟ ಆಗಿದೆ. ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಹಾಗೂ ಪಶುವೈದ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜೂ.18ಕ್ಕೆ ರಾಜ್ಯದ 7 ಪರಿಷತ್ ಸದಸ್ಯರ ಸ್ಥಾನಕ್ಕೆ ಮತದಾನ

← ಮೊದಲಪುಟದಿಂದ

ಚುನಾವಣೆಯ ವೇಳಾಪಟ್ಟಿ

ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕ: ಜೂ.8
ನಾಮಪತ್ರ ಪರಿಶೀಲನೆ: ಜೂ.9
ನಾಮಪತ್ರ ಹಿಂಪಡೆಯಲು ಕೊನೆ ದಿನ: ಜೂ.11
ಮತದಾನ: ಜೂ.18
ಮತದಾನ: ಬೆಳಗ್ಗೆ 9ರಿಂದ ಸಂಜೆ 4ರ ವರೆಗೆ
ಮತ ಎಣಿಕೆ: ಜೂ.18

ಮಡಿವಾಳ, ಸವಿತಾ, ಉಪ್ಪಾರ, ನೇಕಾರ ಸಮುದಾಯಕ್ಕೆ ಶಾಸನಸಭೆಗಳಲ್ಲಿ ಆದ್ಯತೆ ನೀಡಲು ಆಗ್ರಹ

ರಾಜ್ಯಸಭೆ, ವಿಧಾನ ಪರಿಷತ್‌ನಲ್ಲಿ 172 ಸಮುದಾಯಗಳಿಗೆ ಸಿಕ್ಕಿಲ್ಲ ಪ್ರಾತಿನಿಧ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಿಂದ ರಾಜ್ಯಸಭೆಯನ್ನು ಪ್ರತಿನಿಧಿಸುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸೇರಿ ನಾಲ್ವರು ಸದಸ್ಯರ ಅಧಿಕಾರಾವಧಿ ಮುಕ್ತಾಯ ಹಂತಕ್ಕೆ ಬಂದಿದೆ. ಇದರ ಬೆನ್ನಲ್ಲೇ ಕರ್ನಾಟಕ ವಿಧಾನಪರಿಷತ್ತಿನ ಹಲವು ಸ್ಥಾನಗಳು ಕೂಡಾ ತೆರವಾಗಲಿವೆ. ರಾಜಕೀಯ ವಲಯದಲ್ಲಿ ಈ ಮೇಲ್ಮನೆ ಸ್ಥಾನಗಳಿಗಾಗಿ ಈಗಾಗಲೇ ಭಾರೀ ಲಾಬಿ ಶುರುವಾಗಿದೆ. ಈ ಬಾರಿಯಾದರೂ 172 ಅತಿ ಸಣ್ಣ ಹಿಂದುಳಿದ ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗಲಿ ಎಂಬ ಒತ್ತಾಸೆ ಕೇಳಿಬಂದಿದೆ.

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ಮಲ್ಲಿಕಾರ್ಜುನ ಖರ್ಗೆ (ಕಾಂಗ್ರೆಸ್), ಎಚ್.ಡಿ.ದೇವೇಗೌಡ (ಜೆಡಿಎಸ್), ಈರಣ್ಣ ಕಡಾಡಿ (ಬಿಜೆಪಿ) ಹಾಗೂ ನಾರಾಯಣ ಭಾಂಡಗೆ (ಬಿಜೆಪಿ) ಅವರ 6 ವರ್ಷಗಳ ಅಧಿಕಾರಾವಧಿ 2026ರ ಜೂನ್ ಅಥವಾ ಜುಲೈ ವೇಳೆಗೆ ಮುಕ್ತಾಯವಾಗಲಿದೆ. ಜತೆಗೆ, ವಿಧಾನಪರಿಷತ್ತಿನ ಒಟ್ಟು 75 ಸ್ಥಾನಗಳ ಪೈಕಿ ವಿಧಾನಸಭಾ ಕೋಟಾ, ನಾಮನಿರ್ದೇಶನದಿಂದ ಭರ್ತಿಯಾಗಬೇಕಿರುವ ಹಲವು ಸ್ಥಾನಗಳು ಕೂಡ ತೆರವಾಗಲಿವೆ.

ಅಶೋಕ ಗಸ್ತಿ ಎಂಬ ಭರವಸೆ ಮತ್ತು ನಿರಾಸೆ: ಕಳೆದ ಬಾರಿ ಬಿಜೆಪಿ ಅಚ್ಚರಿಯ ಬೆಳವಣಿಗೆಯಲ್ಲಿ ತಳಮಟ್ಟದ ಕಾರ್ಯಕರ್ತ, ಸವಿತಾ ಸಮಾಜದ ಹಿನ್ನೆಲೆಯಿಂದ ಬಂದಿದ್ದ ಅಶೋಕ ಗಸ್ತಿ ಅವರಿಗೆ ರಾಜ್ಯಸಭಾ ಎಂಪಿ ಸ್ಥಾನ ನೀಡಿ ಐತಿಹಾಸಿಕ ಸಾಮಾಜಿಕ ನ್ಯಾಯ ಮೆರೆದಿತ್ತು. ಆದರೆ, ಕರೋನಾದಿಂದಾಗಿ ಅವರು ಅಕಾಲಿಕ ಮರಣ ಹೊಂದಿದ್ದು, ಆ ಸಮುದಾಯದ ದುರದೃಷ್ಟ. ಅಶೋಕ ಗಸ್ತಿಯವರ ನಿಧನದ ನಂತರ ತೆರವಾದ ಆ ಸ್ಥಾನವನ್ನು ಮತ್ತೆ ಸವಿತಾ ಸಮಾಜಕ್ಕಾಗಲಿ, ಅಥವಾ ಆರ್ಥಿಕ, ರಾಜಕೀಯವಾಗಿ ಹಿಂದುಳಿದ ಇತರ 172 ಜಾತಿಗಳಿಗಾಗಲಿ ನೀಡುವ ಬಗ್ಗೆ ಯಾವುದೇ ರಾಜಕೀಯ ಪಕ್ಷಗಳಲ್ಲೂ ಕನಿಷ್ಠ ಚರ್ಚೆ ಆಗಲಿಲ್ಲ. ಆ ಸ್ಥಾನವೂ ಮತ್ತೆ ಪ್ರಬಲ ಸಮುದಾಯದ ಪಾಲಾಯಿತು.

ತಳಮಟ್ಟದ ಸಮುದಾಯಗಳಿಗೆ ಮಣೆ ಸಾಧ್ಯತೆ: ರಾಜ್ಯದಲ್ಲಿ ಲಿಂಗಾಯತ, ಒಕ್ಕಲಿಗ, ಕುರುಬ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದವರು ರಾಜಕೀಯವಾಗಿ ಮುಂಚೂಣಿಯಲ್ಲಿವೆ. ವಿಧಾನಸಭೆ ಮತ್ತು ಲೋಕಸಭೆಯ ಶೇ. 85ಕ್ಕೂ ಹೆಚ್ಚು ಸ್ಥಾನಗಳಲ್ಲಿ ಈ ಪ್ರಬಲ ಸಮುದಾಯಗಳ ಪಾಲಾಗಿವೆ. ಆದರೆ, ರಾಜ್ಯದಲ್ಲಿ ಪ್ರವರ್ಗ-1, ಪ್ರವರ್ಗ-2ಎ ಅಡಿಯಲ್ಲಿ ಬರುವ ಸವಿತಾ ಸಮಾಜ (ಕ್ಷೌರಿಕರು), ಅಗಸರು (ಮಡಿವಾಳ), ಕುಂಬಾರ, ವಿಶ್ವಕರ್ಮ, ಉಪ್ಪಾರ, ತಿಗಳ, ಗೊಲ್ಲ, ದೇವಾಡಿಗ, ನೇಕಾರ, ದರ್ಜಿ, ಮೇದಾರ ಸೇರಿ ಅಂದಾಜು 172ಕ್ಕೂ ಹೆಚ್ಚು ಅತಿ ಸಣ್ಣ ಹಿಂದುಳಿದ ಜಾತಿಗಳಿವೆ. ಈ ಎಲ್ಲ 172 ಜಾತಿಗಳ ಒಟ್ಟು ಜನಸಂಖ್ಯೆ ಸೇರಿಸಿದರೆ ರಾಜ್ಯದಲ್ಲಿ ಅಂದಾಜು ಶೇ. 20 ರಿಂದ 25 ರಷ್ಟಾಗುತ್ತದೆ. ಆದರೆ, ಶಾಸನಸಭೆಗಳಲ್ಲಿ ಇವರ ಪ್ರಾತಿನಿಧ್ಯ ಮಾತ್ರ ಶೂನ್ಯವಾಗಿದೆ. ಚುನಾವಣೆಗೆ ನಿಂತು ಗೆಲ್ಲುವ ಆರ್ಥಿಕ ಬಲವಿಲ್ಲದ, ಜನಸಂಖ್ಯೆ ಚದುರಿಹೋಗಿರುವ ಈ 172 ಹಿಂದುಳಿದ ವರ್ಗಗಳ ಜಾತಿಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಹಾಗಾಗಿ, ಮುಂಬರುವ ರಾಜ್ಯಸಭೆ,ವಿಧಾನಪರಿಷತ್ ಚುನಾವಣೆಗಳಲ್ಲಾದರೂ ಪ್ರಬಲ ಜಾತಿಗಳ ನಾಯಕರನ್ನು ಬದಿಗಿಟ್ಟು, ತಳಮಟ್ಟದ ಸಮುದಾಯಗಳಿಗೆ ಮಣೆ ಹಾಕುವ ಧೈರ್ಯವನ್ನು ರಾಷ್ಟ್ರೀಯ,ಪ್ರಾದೇಶಿಕ ಪಕ್ಷಗಳು ಮಾಡಬೇಕಿದೆ.

ಯಾವ ಜಾತಿಯ ಕಡೆಗಣನೆ?

ಸವಿತಾ ಸಮಾಜ (ಕ್ಷೌರಿಕರು), ಅಗಸರು (ಮಡಿವಾಳ), ಕುಂಬಾರ, ವಿಶ್ವಕರ್ಮ, ಉಪ್ಪಾರ, ತಿಗಳ, ಗೊಲ್ಲ, ದೇವಾಡಿಗ, ನೇಕಾರ, ದರ್ಜಿ, ಮೇದಾರ ಸೇರಿ 172 ಜಾತಿಗಳಿಗೆ ರಾಜ್ಯದಲ್ಲಿ ರಾಜಕೀಯ ಕಡಿಮೆಯಿದ್ದು, ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಈ ಸಮುದಾಯ ಸೀಮಿತ ಆಗಿವೆ. ಶಾಸನಸಭೆಗಳಲ್ಲಿ ಇವರ ಪ್ರಾತಿನಿಧ್ಯ ಶೂನ್ಯವಿದೆ.

ಸವಿತಾ ಸಮಾಜಕ್ಕೆ ಸಿಕ್ಕಿಲ್ಲ ಕನಿಷ್ಠ ಪ್ರಾತಿನಿಧ್ಯ

ಸಮಾಜದ ಸ್ವಾಸ್ಥ್ಯವನ್ನು ಕಾಯುವ ಬಹುಪಾಲು ಜವಾಬ್ದಾರಿ ಈ ಅತಿ ಸಣ್ಣ ಸಮುದಾಯಗಳೇ ಹೊತ್ತಿವೆ. ಉದಾಹರಣೆಗೆ, ಸವಿತಾ ಸಮಾಜದಂತಹ ಶ್ರಮಿಕ ವರ್ಗಗಳು ಒದಗಿಸುವ ದೈನಂದಿನ ಸೇವೆಗಳಿಲ್ಲದೆ ಸಮಾಜದ ಸುಗಮ ಚಲನೆ ಸಾಧ್ಯವೇ ಇಲ್ಲ. ಆದರೆ, ಸಮಾಜಕ್ಕೆ ಇಷ್ಟೊಂದು ಅತ್ಯಗತ್ಯವಾದ ಕಾಯಕಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಇಂತಹ ಸಮುದಾಯಗಳನ್ನು ರಾಜಕೀಯವಾಗಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ನೀತಿ ನಿರೂಪಣೆಯಲ್ಲಿ ಇವರಿಗೆ ಕನಿಷ್ಠ ಪ್ರಾತಿನಿಧ್ಯವೂ ದೊರೆಯದಿರುವುದು ತೀವ್ರ ಶೋಚನೀಯ ಸಂಗತಿ. ಹಾಗಾಗಿ, ಈ ಬಾರಿಯಾದರೂ ರಾಜ್ಯಸಭೆ ಮತ್ತು ವಿಧಾನಪರಿಷತ್ತಿಗೆ ನಮ್ಮ ಸಮುದಾಯದವರನ್ನು ಪರಿಗಣಿಸುವಂತೆ ಸವಿತಾ ಸಮಾಜದ ಮುಖಂಡರು, ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳಿಗೆ ಮನವಿ ಮಾಡಿದ್ದಾರೆ.

ಮಾನವ ದಿನಗಳ ಸೃಜನೆಯಲ್ಲಿ ಬೀದರ್ ಜಿಲ್ಲೆ ಕಲ್ಯಾಣ ಕರ್ನಾಟಕಕ್ಕೆ ಫಸ್ಟ್, ರಾಜ್ಯದಲ್ಲಿ 4ನೇ ಸ್ಥಾನ

ಮನ್‌ರೇಗಾ ಗುರಿ ಸಾಧನೆಯಲ್ಲಿ ಬೀದರ್ ಜಿಲ್ಲೆ ಉತ್ತಮ ಸ್ಥಾನ

ಚನ್ನಬಸವ ಮೋಕ್ತೆದಾರ, ಬೀದರ್

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ಮನ್ ರೇಗಾ) 2025-26ನೇ ಸಾಲಿನಲ್ಲಿ ಮಾನವ ದಿನಗಳನ್ನು ಸೃಜಿಸುವಲ್ಲಿ ಬೀದರ್ ಜಿಲ್ಲೆಯು ಶೇ.100.01 ರಷ್ಟು ಸಾಧನೆ ಮಾಡಿದ್ದು, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲೇ ಮೊದಲ ಸ್ಥಾನದಲ್ಲಿದೆ. ಬೀದರ್ ಜಿಲ್ಲೆಯಲ್ಲಿ 40 ಲಕ್ಷ ಮಾನವ ದಿನಗಳನ್ನು ಸೃಜಿಸುವ ಗುರಿ ಹೊಂದಲಾಗಿತ್ತು. ಆದರೆ, ಅದಕ್ಕೂ ಹೆಚ್ಚು ಅಂದರೆ 40.01 ಲಕ್ಷ ಅಂದರೆ ಶೇ.100.01 ರಷ್ಟು ಮಾನವ ದಿನಗಳನ್ನು ಸೃಜಿಸುವ ಮೂಲಕ ಜಿಲ್ಲೆಯಲ್ಲಿ ಗ್ರಾಮೀಣ ಜನರಿಗೆ ಕೆಲಸ ನೀಡಲಾಗಿದೆ. ಗುರಿ ಮೀರಿ ಮಾನವ ದಿನಗಳನ್ನು ಸೃಜಿಸುವ ಮೂಲಕ ರಾಜ್ಯಕ್ಕೆ 4ನೇ ಸ್ಥಾನವನ್ನು ಬೀದರ್ ಪಡೆದುಕೊಂಡಿದೆ. ಶೇ.98.58 ರಷ್ಟು ಮಾನವ ದಿನಗಳನ್ನು ಸೃಜಿಸಿ ಕೊಪ್ಪಳ 7ನೇ ಸ್ಥಾನದಲ್ಲಿದೆ. ಶೇ.96.09ರಷ್ಟು ಮಾನವ ದಿನಗಳನ್ನು ಸೃಜಿಸಿ ರಾಯಚೂರು 9ನೇ ಸ್ಥಾನದಲ್ಲಿದೆ. ಶೇ.91.10 ರಷ್ಟು ಮಾನವ ದಿನಗಳನ್ನು ಸೃಜಿಸಿರುವ ಬಳ್ಳಾರಿ 11ನೇ ಸ್ಥಾನದಲ್ಲಿದ್ದರೆ, ಶೇ. 88.02ರಷ್ಟು ಮಾನವ ದಿನಗಳನ್ನು ಸೃಜಿಸಿರುವ ವಿಜಯನಗರ ಜಿಲ್ಲೆ 18ನೇ ಸ್ಥಾನದಲ್ಲಿದೆ. ಶೇ 80.26 ರಷ್ಟು ಮಾನವ ದಿನಗಳನ್ನು ಸೃಜಿಸಿರುವ ಕಲಬುರಗಿ ಜಿಲ್ಲೆಯು ರಾಜ್ಯಕ್ಕೆ 23 ಸ್ಥಾನ ಪಡೆದಿದ್ದರೆ ಶೇ 76.60 ರಷ್ಟು ಮಾನವ ದಿನಗಳನ್ನು ಸೃಜನೆ ಮಾಡಿರುವ ಯಾದಗಿರಿ ಜಿಲ್ಲೆಯು ರಾಜ್ಯಕ್ಕೆ 27ನೇ ಸ್ಥಾನ ಪಡೆದುಕೊಂಡಿದೆ. ಕಲ್ಯಾಣ ಕರ್ನಾಟಕ ಜಿಲ್ಲೆಗಳ ಪೈಕಿ ಬೀದರ್ ಗುರಿ ಮೀರಿ ಮಾನವ ದಿನಗಳನ್ನು ಸೃಜಿಸಿ ಟಾಪ್‌ನಲ್ಲಿದೆ.

ಗುರಿ ಮೀರಿ ಮಾನವ ದಿನಗಳ ಸೃಜನೆ

ಜಿಲ್ಲೆಯು ಗುರಿ ಮೀರಿ ಮಾನವ ದಿನಗಳನ್ನು ಸೃಜಿಸಿದೆ. ಔರಾದ ತಾಲೂಕಿಗೆ 3.70 ಲಕ್ಷ, ಬಸವಕಲ್ಯಾಣಕ್ಕೆ 9.01ಲಕ್ಷ, ಭಾಲ್ಕಿಗೆ 7.15 ಲಕ್ಷ, ಬೀದರ್ ತಾಲೂಕಿಗೆ 7.17 ಲಕ್ಷ, ಚಿಟಗುಪ್ಪ 3.30 ಲಕ್ಷ, ಹುಲಸೂರ 1.54 ಲಕ್ಷ, ಹುಮನಾಬಾದ್ 5.38 ಲಕ್ಷ ಹಾಗೂ ಕಮಲನಗರ ತಾಲೂಕಿಗೆ 2.63 ಲಕ್ಷ ಸೇರಿದಂತೆ ಜಿಲ್ಲೆಗೆ 40 ಲಕ್ಷ ಮಾನವ ದಿನಗಳ ಸೃಜಿಸುವ ಗುರಿ ನೀಡಲಾಗಿತ್ತು. ಈ ಪೈಕಿ ಒಟ್ಟಾರೆ 40.1 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ನರೇಗಾ ಕಾರ್ಮಿಕರಿಗೆ ಕೆಲಸ ನೀಡುವ ಮೂಲಕ ವಲಸೆ ಹೋಗದಂತೆ ತಪ್ಪಿಸಲಾಗಿದೆ. 2025-26ನೇ ಸಾಲಿನಲ್ಲಿ ಗುರಿ ಮೀರಿ ಮಾನವ ದಿನಗಳನ್ನು ಸೃಜಿಸಲಾಗಿದೆ. ಎಲ್ಲಾ ಗ್ರಾಮ ಪಂಚಾಯಿತಿಗಳ ಪಿಡಿಒ ಅವರ ಸಹಕಾರದಿಂದ ರಾಜ್ಯಕ್ಕೆ ಜಿಲ್ಲೆ 4ನೇ ಸ್ಥಾನಪಡೆದುಕೊಂಡಿದೆ.
-ಡಾ.ಗಿರೀಶ್ ದಿಲೀಪ್ ಬದೋಲೆ, ಸಿಇಒ ಜಿಪಂ ಬೀದರ್

ಲಲಿತ ಕಲಾ ಪರೀಕ್ಷೆಗೆ ದಾಖಲೆ ಮಟ್ಟದಲ್ಲಿ ಹಾಜರು

ಮಂಗಳೂರು: ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ ಸಂಘಟಿಸಿದ ಸಂಗೀತ, ನೃತ್ಯ, ತಾಳವಾದ್ಯ ವಿಶೇಷ ಪರೀಕ್ಷೆ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಮಂಗಳವಾರ ಮುಕ್ತಾಯಗೊಂಡಿದೆ. ಈ ಬಾರಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಟ್ಟು 3,398 ಮಂದಿ ಪರೀಕ್ಷೆಗೆ ಹಾಜರಾಗಿದ್ದಾರೆ. ಕಳೆದ ಬಾರಿಗಿಂತ ಎರಡುಪಟ್ಟು ಹೆಚ್ಚು ಮಂದಿ ಪರೀಕ್ಷೆಗೆ ಹಾಜರಾಗಿದ್ದರು.

18,400 ಮಂದಿ ಪರೀಕ್ಷೆಗೆ ನೋಂದಣಿ: ಈ ಬಾರಿ ರಾಜ್ಯದಲ್ಲಿ 32 ಕೇಂದ್ರಗಳಲ್ಲಿ ಒಟ್ಟು 18,400 ಮಂದಿ ಪರೀಕ್ಷೆಗೆ ನೋಂದಾಯಿಸಿದ್ದು, ಮೊದಲ ಹಂತದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಮೇ 10 ರಿಂದ 19ರ ವರೆಗೆ ಸಂಗೀತ, ಭರತನಾಟ್ಯ, ಕಥಕ್ ಹಾಗೂ ಕೂಚುಪುಡಿ ನೃತ್ಯಗಳ ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳು ನಡೆದಿತ್ತು. ದ.ಕ. ಜಿಲ್ಲೆಯ ಪುತ್ತೂರಲ್ಲಿ 933, ಮಂಗಳೂರಲ್ಲಿ 1,318, ಉಡುಪಿಯಲ್ಲಿ 939 ಹಾಗೂ ಉತ್ತರ ಕನ್ನಡದ ಹೊನ್ನಾವರದಲ್ಲಿ 208 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿ ಹೊರತುಪಡಿಸಿ ಬೇರೆ ಕಡೆಗಳಲ್ಲಿ ಈ ಪರೀಕ್ಷೆ ಮುಕ್ತಾಯಗೊಂಡಿದೆ. ಮೇ 22 ರಿಂದ ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿಗಳಲ್ಲಿ ಪರೀಕ್ಷೆ ನಡೆಯಲಿದ್ದು, ಜೂ.2ರಂದು ಪರೀಕ್ಷೆಗಳು ಕೊನೆಗೊಳ್ಳಲಿವೆ.

ತ್ವರಿತ ಫಲಿತಾಂಶಕ್ಕೆ ಕ್ರಮ

ಪರೀಕ್ಷೆಗಳು ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಜೂ.30ರಂದು ಕೊನೆ ಪರೀಕ್ಷೆಗಳು ಮುಕ್ತಾಯಗೊಂಡ ಬಳಿಕ ಮೌಲ್ಯಮಾಪನ ಕಾರ್ಯ ನಡೆಯಲಿದ್ದು, ತ್ವರಿತವಾಗಿ ಫಲಿತಾಂಶ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು. ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳಿಗೆ ಹಿಂದಿನಂತೆಯೇ ವಿಶ್ವವಿದ್ಯಾಲಯದ ಅಂಕಪಟ್ಟಿ ಲಭ್ಯವಾಗಲಿದೆ ಎಂದು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ. ಎಂ.ಜಿ.ಮಂಜುನಾಥ್ ತಿಳಿಸಿದ್ದಾರೆ.

ಮೇಕೆದಾಟು ಡಿಪಿಆರ್‌ಗೆ ಹಾದಿ ಸುಗಮ

← ಮೊದಲಪುಟದಿಂದ

ಆದರೆ, ಈ ಯೋಜನೆ ಜಾರಿಗೆ ಬಂದರೆ ಕಾವೇರಿ ನೀರನ್ನು ನಂಬಿರುವ ತಮಿಳುನಾಡಿನ ರೈತರ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂಬುದು ತಮಿಳುನಾಡಿನ ವಾದವಾಗಿದೆ. ಹಿಂದೆ, ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ನೇತೃತ್ವದ ಪೀಠವು, ಕೇಂದ್ರ ಜಲ ಆಯೋಗವು ಯೋಜನೆಯ ಡಿಪಿಆರ್ ಸಿದ್ಧಪಡಿಸಲು ಅನುಮತಿ ನೀಡಿದ್ದನ್ನು ಪ್ರಶ್ನಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿ ಅಕಾಲಿಕ ಎಂದು ಕರೆದಿತ್ತು.ಕೇಂದ್ರ ಜಲ ಆಯೋಗವು ಕೇವಲ ಡಿಪಿಆರ್ ಸಿದ್ಧಪಡಿಸಲು ಅನುಮತಿ ನೀಡಿದೆ. ಇದಕ್ಕೂ ಮುನ್ನ ತಮಿಳುನಾಡು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿಯ ಆಕ್ಷೇಪಣೆಗಳನ್ನು ಪರಿಗಣಿಸಿಯೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪೀಠವು ಅಭಿಪ್ರಾಯಪಟ್ಟಿದೆ. ಇಂತಹ ತಾಂತ್ರಿಕ ವಿಷಯಗಳಲ್ಲಿ ನ್ಯಾಯಾಲಯವು ತಜ್ಞರ ನಿರ್ಧಾರಗಳಿಗೆ ಮನ್ನಣೆ ನೀಡಬೇಕು ಮತ್ತು ಅನಗತ್ಯವಾಗಿ ಹಸ್ತಕ್ಷೇಪ ಮಾಡಬಾರದು ಎಂದು ಸುಪ್ರೀಂಕೋರ್ಟ್ ಈ ಹಿಂದೆಯೂ ಸ್ಪಷ್ಟಪಡಿಸಿದೆ. ಡಿಪಿಆರ್ ಸಿದ್ಧವಾದ ನಂತರ, ಒಂದು ವೇಳೆ ಅದರಲ್ಲಿ ತಮಿಳುನಾಡಿಗೆ ತೊಂದರೆಯಾಗುವ ಅಂಶಗಳಿದ್ದರೆ, ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲು ತಮಿಳುನಾಡಿಗೆ ಅವಕಾಶವಿದೆ ಎಂದು ನ್ಯಾಯಾಲಯ ಭರವಸೆ ನೀಡಿದೆ.

ಕರ್ನಾಟಕದ ವಾದವೇನು?

ಕರ್ನಾಟಕದ ಪರ ವಕೀಲರು ಸುಪ್ರೀಂ ಕೋರ್ಟ್ 2018ರ ತೀರ್ಪನ್ನು ಉಲ್ಲೇಖಿಸಿದ್ದಾರೆ. ಅದರ ಪ್ರಕಾರ, ತಮಿಳುನಾಡಿಗೆ ನೀಡಬೇಕಾದ 177.25 ಟಿಎಂಸಿ ನೀರನ್ನು ಒದಗಿಸಲು ಕರ್ನಾಟಕ ಬದ್ಧವಾಗಿದೆ. ಈ ನೀರು ಹಂಚಿಕೆಗೆ ಧಕ್ಕೆಯಾಗದಂತೆ, ಕೇವಲ ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಕ್ಕಾಗಿ 4.75 ಟಿಎಂಸಿ ನೀರನ್ನು ಬಳಸಿಕೊಳ್ಳಲು ಮೇಕೆದಾಟು ಅಣೆಕಟ್ಟು ನಿರ್ಮಿಸುವುದು ಅನಿವಾರ್ಯವಾಗಿದೆ ಎಂದು ವಾದಿಸಲಾಗಿದೆ. ಈ ಅರ್ಜಿ ವಜಾಗೊಂಡಿರುವುದು ರಾಜ್ಯ ಸರಕಾರಕ್ಕೆ ಸಿಕ್ಕ ದೊಡ್ಡ ಗೆಲುವು. ಯೋಜನೆಗೆ ಪರಿಸರ ಅನುಮತಿ ಮತ್ತು ಇತರ ಅಗತ್ಯ ಸಮ್ಮತಿಗಳನ್ನು ಪಡೆಯುವ ಪ್ರಕ್ರಿಯೆಯನ್ನು ಕರ್ನಾಟಕ ಸರಕಾರ ವೇಗಗೊಳಿಸಲು ಈಗ ದಾರಿ ಸುಗಮವಾಗಿದೆ. ತಮಿಳುನಾಡು ಕಾನೂನು ಹೋರಾಟವನ್ನು ಮುಂದುವರಿಸುವುದಾಗಿ ಹೇಳಿದ್ದರೂ, ಸದ್ಯದ ಮಟ್ಟಿಗೆ ಯೋಜನೆಯ ತಾಂತ್ರಿಕ ಪ್ರಕ್ರಿಯೆಗಳಿಗೆ ಇದ್ದ ಅಡೆತಡೆಗಳು ನಿವಾರಣೆಯಾಗಿವೆ.

ಡಿಪಿಆರ್ ತಿರಸ್ಕರಿಸಿ; ಮೋದಿಗೆ ವಿಜಯ್ ಪತ್ರ

ಚೆನ್ನೈ: ಕರ್ನಾಟಕ ಸರಕಾರ ಉದ್ದೇಶಿಸಿರುವ ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ತಿರಸ್ಕರಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಈ ಸಂಬಂಧ ಸುದೀರ್ಘ ಪತ್ರ ಬರೆದಿರುವ ಅವರು, ತಮಿಳುನಾಡಿನ ಆಕ್ಷೇಪಣೆಗಳನ್ನು ಪರಿಗಣಿಸದೆ, ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಕರ್ನಾಟಕದ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವುದು ತಮಗೆ ಆಶ್ಚರ್ಯ ಮೂಡಿಸಿದೆ. ಕರ್ನಾಟಕ ಸಿದ್ಧಪಡಿಸಿರುವ ಡಿಪಿಆರ್, ಕಾವೇರಿ ನದಿ ನೀರು ವಿವಾದ ನ್ಯಾಯಾಧೀಕರಣದ ಅಂತಿಮ ಆದೇಶ ಹಾಗೂ ಸುಪ್ರೀಂಕೋರ್ಟ್‌ನ ತೀರ್ಪಿಗೆ ಸಂಪೂರ್ಣ ವಿರುದ್ಧವಾಗಿದೆ. ಆದ್ದರಿಂದ ತಕ್ಷಣವೇ ಈ ವರದಿಯನ್ನು ತಿರಸ್ಕರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಜತೆಗೆ ಇತರ ರಾಜ್ಯಗಳ (ತಮಿಳುನಾಡು, ಕೇರಳ, ಪುದುಚೇರಿ) ಒಪ್ಪಿಗೆಯಿಲ್ಲದೆ ಯಾವುದೇ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳದಂತೆ ಕರ್ನಾಟಕ ಸರಕಾರಕ್ಕೆ ಸೂಕ್ತ ಸಲಹೆ ನೀಡಬೇಕು ಎಂದು ವಿಜಯ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕರ್ನಾಟಕಕ್ಕೆ ಶುಭಸುದ್ದಿ: ಡಿಕೆಶಿ

ದೆಹಲಿ: ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್ ತ್ರಿಸದಸ್ಯ ಪೀಠ ವಜಾಗೊಳಿಸಿರುವುದು ಕರ್ನಾಟಕ ಪಾಲಿಗೆ ಶುಭಸುದ್ದಿ. ರಾಜ್ಯದ ಜನರ ಪರವಾಗಿ ನಾವು ಸುಪ್ರೀಂಕೋರ್ಟಿಗೆ ಧನ್ಯವಾದ ಅರ್ಪಿಸುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಸುಪ್ರೀಂಕೋರ್ಟ್ ಈ ಹಿಂದಿನ ಆದೇಶದಲ್ಲೇ ನಮಗೆ ಸ್ಪಷ್ಟ ಸೂಚನೆ ನೀಡಿದ್ದು, ತಮಿಳುನಾಡಿನ ಪಾಲಿನ 177 ಟಿಎಂಸಿ ನೀರನ್ನು ಹರಿಸಬೇಕು ಎಂದು ಷರತ್ತು ವಿಧಿಸಿದೆ. ಈಗ ಈ ಯೋಜನೆ ಕುರಿತು ತೀರ್ಮಾನ ಮಾಡಬೇಕಿರುವುದು ಕೇಂದ್ರ ಸರಕಾರ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಸುತ್ತೇವೆ ಎಂದು ತಿಳಿಸಿದರು.

150 ನಾಡ ಕಚೇರಿಗಳಿಗೆ ಹೊಸ ಕಟ್ಟಡ

ಬೆಂಗಳೂರು: ರಾಜ್ಯಾದ್ಯಂತ ಸಾರ್ವಜನಿಕ ಸೇವೆಗಳನ್ನು ಮತ್ತಷ್ಟು ಸುಗಮಗೊಳಿಸುವ ಉದ್ದೇಶದಿಂದ ಸರಕಾರ 150 ನೂತನ ನಾಡ ಕಚೇರಿ ಕಟ್ಟಡಗಳ ನಿರ್ಮಾಣಕ್ಕೆ ಅಂಕಿತ ಹಾಕಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಮೊದಲ ಹಂತದಲ್ಲಿ 94 ನಾಡ ಕಚೇರಿಗಳಿಗೆ ಈಗಾಗಲೇ ಮಂಜೂರಾತಿ ನೀಡಲಾಗಿದ್ದು, ಇದೀಗ 56 ಕಚೇರಿಗಳ ನಿರ್ಮಾಣಕ್ಕೂ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ರಾಜ್ಯದಲ್ಲಿ ಈಗಾಗಲೇ 771 ಹೋಬಳಿ ಮಟ್ಟದ ನಾಡ ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಪ್ರತಿದಿನ 54ಕ್ಕೂ ಹೆಚ್ಚು ಸೇವೆ ಪಡೆಯಲು ಈ ಕಚೇರಿಗಳಿಗೆ ಭೇಟಿ ನೀಡುತ್ತಿದ್ದಾರೆ. ಪ್ರಮಾಣ ಪತ್ರಗಳು, ಕಂದಾಯ ಇಲಾಖೆಯ ವಿವಿಧ ಸೇವೆಗಳು, ಉಪ ತಹಸೀಲ್ದಾರ್, ಕಂದಾಯ ನಿರೀಕ್ಷಕರು ಹಾಗೂ- ಗ್ರಾಮ ಆಡಳಿತಾಧಿಕಾರಿಗಳ ಕಚೇರಿಗಳ ಕೆಲಸಗಳಿಗಾಗಿ ಜನರು ಹೆಚ್ಚಾಗಿ ನಾಡ ಕಚೇರಿಗಳನ್ನೇ ಅವಲಂಬಿಸಿದ್ದಾರೆ ಎಂದರು.

ಅನೇಕ ಕಡೆಗಳಲ್ಲಿ ಸ್ವಂತ ಕಟ್ಟಡಗಳ ಕೊರತೆ, ಹಳೆಯ ಹಾಗೂ ಶಿಥಿಲಾವಸ್ಥೆಯ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವ ಪರಿಸ್ಥಿತಿ ಇರುವುದರಿಂದ ಸಾರ್ವಜನಿಕರು ಹಾಗೂ ಸಿಬ್ಬಂದಿಗೆ ತೊಂದರೆ ಉಂಟಾಗುತ್ತಿತ್ತು. ಇದನ್ನು ಮನಗಂಡು ಸರಕಾರ ಹೊಸ ವಿನ್ಯಾಸದ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದೆ.

ಈ ಹಿಂದೆ ನಾಡ ಕಚೇರಿ ನಿರ್ಮಾಣಕ್ಕೆ ಕೇವಲ 18 ಲಕ್ಷ ರು. ಅನುದಾನ ನೀಡಲಾಗುತ್ತಿತ್ತು. ಇದರಿಂದ ಸಮರ್ಪಕ ಮೂಲಸೌಕರ್ಯ ಕಲ್ಪಿಸಲು ಸಾಧ್ಯವಾಗುತ್ತಿರಲಿಲ್ಲ. ಇದೀಗ ನಗರ ಪ್ರದೇಶಗಳಲ್ಲಿ 75 ಲಕ್ಷ ರು. ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 55 ಲಕ್ಷ ರು. ವೆಚ್ಚದಲ್ಲಿ ನೂತನ ಕಟ್ಟಡಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದರು.



ಸಾರ್ವಜನಿಕರಿಗೆ ಉತ್ತಮ ಸೇವೆ ಮತ್ತು ಸಿಬ್ಬಂದಿಗೆ ಅನುಕೂಲಕರ ಕಾರ್ಯ ವಾತಾವರಣ ಕಲ್ಪಿಸುವ ಉದ್ದೇಶದಿಂದಲೇ ಈ ನಿರ್ಧಾರ ಕೈಗೊಳ್ಳಲಾಗಿದೆ.
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಪಂಚಾಯತ್ ರಾಜ್ ನಿಯಮ ಉಲ್ಲಂಘಿಸಿ ಸಾಮಾನ್ಯ ಸಭೆ ಹಿನ್ನೆಲೆ ಪಿಡಿಒ ಅಮಾನತು

ಚಾಮರಾಜನಗರ: ಕರ್ತವ್ಯ ಲೋಪದ ಹಿನ್ನೆಲೆ ಯಳಂದೂರು ತಾಲೂಕಿನ ಯರಿಯೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಡಿ. ಶಿವಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಆದೇಶಿಸಿದ್ದಾರೆ. ಪಿಡಿಒ ಶಿವಕುಮಾರ್ ಅವರು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ಕರೆದು ಸಭೆಯಲ್ಲಿ ಚರ್ಚಿಸಿ ಸಭೆಯ ತೀರ್ಮಾನದ ರೀತ್ಯಾ ಕ್ರಮವಹಿಸದೇ ಏಕಪಕ್ಷೀಯವಾಗಿ ವರ್ತಿಸಿ ಗ್ರಾಮದಲ್ಲಿ ಕೋಮು ಗಲಭೆ ಉಂಟಾಗಲು ಕಾರಣವಾಗಿರುವುದು ಹಾಗೂ ಕಚೇರಿ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿರುವ ಸಂಬಂಧ ವರದಿ ಸಲ್ಲಿಕೆಯಾಗಿತ್ತು. ಈ ಹಿನ್ನೆಲೆ ತಕ್ಷಣದಿಂದ ಜರಿಗೆ ಬರುವಂತೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಡಿ. ಶಿವಕುಮಾರ್ ಅವರನ್ನು ಅಮಾನತು ಮಾಡಿರುವುದಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಆದೇಶದಲ್ಲಿ ತಿಳಿಸಿದ್ದಾರೆ.

ಗ್ರಾಮ ಪಂಚಾಯತಿ ಕಾರ್ಯಾಲಯ, ಸಂತಿಬಸ್ತವಾಡ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ.

ಸಂಖ್ಯೆ: ಸಂತಿಬಸ್ತವಾಡ ಗ್ರಾ.ಪಂ./01ಪ.ಪ್ರ/2026-27 ದಿನಾಂಕ: 26.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ 2000ರ ನಿಯಮದಂತೆ ಸಂತಿಬಸ್ತವಾಡ ಗ್ರಾಮ ಪಂಚಾತಿಯ 15ನೇ ಹಣ-ಕಾಸಿನ ಯೋಜನೆಯಡಿ ಗ್ರಾಮ ಪಂಚಾಯತಿಯ ಕಛೇರಿಯ ಮೇಲ್ಛಾವಣಿಗೆ ಸೋಲಾರ್ ರೂಫ್‌ಟಾಪ್ ಹಾಗೂ ಗ್ರಾಮ ಪಂಚಾಯತಿ ಗ್ರಂಥಾಲಯದಲ್ಲಿ ವಿಕಲಚೇತನ ಸ್ನೇಹಿ ಪೀಠೋಪಕರಣ ಖರೀದಿಸಲು ಟೆಂಡರು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ನೊಂದಾಯಿತ ಸಂಸ್ಥೆ/ಏಜೆನ್ಸಿಗಳು ಸರಬರಾಜುದಾರರು ದಿನಾಂಕ 27.05.2026 ರಿಂದ ಸಂತಿಬಸ್ತವಾಡ ಗ್ರಾಮ ಪಂಚಾಯತಿಯ ಕಛೇರಿ ಅವಧಿಯಲ್ಲಿ ಅರ್ಜಿ ಹಾಗು ಷರತ್ತಿಗಳ ಪ್ರತಿಯನ್ನು ಶುಲ್ಕ 500 ರೂ. ಪಾವತಿಸಿ ಪಡೆದು ಕೊಳ್ಳಬಹುದು ಹಾಗು ಭರ್ತಿಮಾಡಿರುವ ಟೆಂಡರ್ ಫಾರಂಗಳನ್ನು ಇ.ಎಂ.ಡಿ ಹಾಗು ಸಂಬಧಿಸಿದ ದಾಖಲೆಗಳೊಂದಿಗೆ ದಿನಾಂಕ: 05.06.2026 ರ ಸಂಜೆ 04.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ದಿನಾಂಕ.05.06.2026ರ ಸಂಜೆ 04.30 ಗಂಟೆಗೆ ಟೆಂಡರುದಾರರ ಸಮಕ್ಷಮದಲ್ಲಿ ಟೆಂಡರು ತೆರೆಯಲಾಗುವುದು. ಅವಧಿಗೆ ಮೀರಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುಗುದಿಲ್ಲ. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಸಂತಿಬಸ್ತವಾಡ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಇ.ಎಂ.ಡಿ ಮೊತ್ತ ರೂ.4,000/- (ನಾಲ್ಕು ಸಾವಿರ ರೂ.ಗಳು ಮಾತ್ರ) ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಸಂತಿಬಸ್ತವಾಡ ಗ್ರಾಮ ಪಂಚಾಯತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಂತಿಬಸ್ತವಾಡ ಗ್ರಾಮ ಪಂಚಾಯಿತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/13/2026-27 ದಿನಾಂಕ: 26-05-2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದಿಸಲಾದ ಮಹಾಯೋಜನೆಯಂತೆ **"ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ"** ಮಾಡಲು ಕೋರಿರುತ್ತಾರೆ. ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಹೊಣಚನಹಳ್ಳಿ ಗ್ರಾಮದ ಸ.ನಂ.ಗಳ ವಿವರ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ	'ಎ' ಖರಾಬು ಗುಂ
1	ಶ್ರೀ ಹೆಚ್.ಎಸ್. ಪಾಪಣ್ಣ ಬಿನ್ ಲೇಟ್. ಪಿ. ಸುಬ್ಬಯ್ಯ	31/1	00-06 1/4	-
2	ಶ್ರೀ ಕೆ.ವಿ. ಮಧುಕರ್ ಬಿನ್ ಕೆ.ಎಸ್. ವಾಸುದೇವ ಮೂರ್ತಿ	31/6	00-04 1/4	-
3		31/7	00-05	-
4	ಶ್ರೀ ಸಿ. ಮಹೇಶ್ ಬಿನ್ ಇ. ಚಂದ್ರ ಮತ್ತು ಶ್ರೀ ಆರ್. ಸೋಮಶೇಖರ್ ಬಿನ್ ಇ. ರಾಧಾಕೃಷ್ಣ	31/8	00-15 1/2	-
5	ಶ್ರೀ ಹೆಚ್.ಎಸ್. ಪಾಪಣ್ಣ ಬಿನ್ ಲೇಟ್. ಪಿ. ಸುಬ್ಬಯ್ಯ	32/3	00-23 3/4	01
6	ಶ್ರೀ ಹೆಚ್.ಎಸ್. ಜಯರಾಮ್ ಬಿನ್ ಲೇಟ್. ಪಿ. ಸುಬ್ಬಯ್ಯ	32/5	00-09 1/2	-
7	ಶ್ರೀ ರುಕೇಶ ರೆಡ್ಡಿ ಬಿನ್ ಲೇಟ್ ಮುನಿರೆಡ್ಡಿ ಇವರ ಪರವಾಗಿ ಜಿಪಿಎದಾರರಾದ ಶ್ರೀ ಅಶೋಕ್ ಕೃಷ್ಣಾರೆಡ್ಡಿ	32/7	00-13 1/2	-
8	ಶ್ರೀ ಹೆಚ್.ಎಸ್. ಪಾಪಣ್ಣ ಬಿನ್ ಲೇಟ್. ಪಿ. ಸುಬ್ಬಯ್ಯ	32/8	00-10	-
9	ಶ್ರೀ ಹೆಚ್.ಎಸ್. ಜಯರಾಮ್ ಬಿನ್ ಲೇಟ್. ಪಿ. ಸುಬ್ಬಯ್ಯ	32/10	00-19 3/4	-
10	Sri. K. Vishwanadham S/o Mopuri Kanala	32/14	00-31 1/4	-
11	ಶ್ರೀ ಕೆ.ವಿ. ಮಧುಕರ್ ಬಿನ್ ಕೆ.ಎಸ್. ವಾಸುದೇವ ಮೂರ್ತಿ	32/15	00-18	-
12	ಶ್ರೀ ಭಾಸ್ಕರ್ ಜಿ. ಬಿನ್ ಲೇಟ್ ಗುರಪ್ಪ	32/19	00-04	-

ಷರಾ:- ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, "ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/818/ಅಡ್ವರ್ಟೋರ್/2026-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಅ ಸಂ: ಕಹಾಮ/ಖರೀದಿ/ಟೆಂಡರ್-916/2026-27 ದಿನಾಂಕ: 26.05.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ವ್ಯಾಪ್ತಿಯ ಘಟಕವಾದ ಪಶು ಆಹಾರ ಕಾರ್ಖಾನೆಗಳಲ್ಲಿ ಉಪಯೋಗಿಸಿದ ಹಳೆಯ ಪ್ಲಾಸ್ಟೀಕ ಚೀಲಗಳನ್ನು ಆರು ತಿಂಗಳ ಅವಧಿಗೆ ಮಾರಾಟ/ವಿಲೇವಾರಿ ಮಾಡುವ ಸಂಬಂಧ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ ಸಂ	ಪಶು ಆಹಾರ ಘಟಕ	ಅಂದಾಜು (ನಂಬರ) ಗಳಲ್ಲಿ	ಇ.ಎಂ.ಡಿ (ರೂ)
1	ರಾಜನಕುಂಟೆ	1,00,000 Kg	11,000/-
2	ಗುಬ್ಬಿ	1,50,000 Kg	15,000/-
3	ಧಾರವಾಡ	1,72,000 Kg	20,000/-
4	ಹಾಸನ	2,40,000 Kg	28,000/-
5	ಶಿಕಾರಿಪುರ	2,09,420 Kg	21,000/-

ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ **09.06.2026 ರಂದು 15.00 ಗಂಟೆಯ** ಒಳಗೆ ಸಲ್ಲಿಸಬಹುದಾಗಿದೆ.

ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಪುರಸಭಾ ಕಾರ್ಯಾಲಯ ಆನೇಕಲ್
ಆನೇಕಲ್- 562106, ಬೆಂಗಳೂರು ನಗರ ಜಿಲ್ಲೆ
ದೂರವಾಣಿ ಸಂಖ್ಯೆ: 080-27859225, ಇ-ಮೇಲ್: itstaff_ulb_anekal@yahoo.co.in
ಫ್ಯಾಕ್ಸ್: 080-27830092

ಸಂಖ್ಯೆ: ಪು.ಕಾ.ಆ/ಆ.ಶಾ/ಟೆಂಡರ್/02/2026-27 ದಿನಾಂಕ:26.05.2026

ಟೆಂಡರ್ ಪ್ರಕಟಣೆ (ಕೆಪಿಪಿಪಿ- ಪೋರ್ಟಲ್ ಮೂಲಕ ಮಾತ್ರ)

ಆನೇಕಲ್ ಪುರಸಭೆಯ ಸ್ವಚ್ಛ ಭಾರತ್ ಮಿಷನ್ 2.0 ಮತ್ತು ಪುರಸಭಾನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿದಾರರು/ಗುತ್ತಿಗೆದಾರರು/ಬಿಡ್ದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಸ್ಟ್ಯಾಂಡರ್ಡ್ ಡಾಕ್ಯುಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ http://kppp.karnataka.gov.in ಮುಖಾಂತರ ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಆರೋಗ್ಯ ಶಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಟೆಂಡರ್ ಡಾಕ್ಯುಮೆಂಟ್ ಮತ್ತು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ನಿಗಧಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುವುದು ಮತ್ತು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲಾಗುವುದು.

ಕ್ರ. ಸಂ	ಕಾಮಗಾರಿ ವಿವರ	ಇಂಡೆಂಟ್ ನಂ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ರೂಗಳಲ್ಲಿ (2.5%)
01	ಆನೇಕಲ್ ಪುರಸಭೆಯ ಆರೋಗ್ಯ ಸಿಬ್ಬಂದಿಗಳು ಮತ್ತು ಸ್ವಚ್ಛತಾ ಸಿಬ್ಬಂದಿಗಳನ್ನು ಒಳಗೊಂಡಂತೆ ಸಿಬ್ಬಂದಿಗಳು ಸೂರತ್ ಮುನಿಸಿಪಲ್ ಕಾರ್ಪೋರೇಷನ್‌ಗೆ ಭೇಟಿ ನೀಡುವ ಪ್ರವಾಸ ಕಾರ್ಯಕ್ರಮ	DMA/2026-27/ SE7938	8.61	21525.00

ವೇಳಾಪಟ್ಟಿ: 1. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 05.06.2026** ರಂದು **ಸಂಜೆ 5.30 ಘಂಟೆಯವರೆಗೆ. 2.**ಸ್ವೀಕೃತವಾದ ಬಿಡ್ ತೆರೆಯುವ ದಿನಾಂಕ: **08.06.2025 ರಂದು ಬೆಳಿಗ್ಗೆ 11.30 ಘಂಟೆಯ** ನಂತರ. **3.** ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್‌ನಲ್ಲಿ ನೋಡಬಹುದು.

ಸಹಿ/-ಮುಖ್ಯಾಧಿಕಾರಿ
ಪುರಸಭೆ, ಆನೇಕಲ್.

ವಾಸಾಸಂಇ/ವಾ.ಪ್ರ/831/ಎಸ್‌ಎಸ್‌ಸಿ/2026-27

ಸಮಾಚಾರ ಸಣ್ಣದಲ್ಲ

ಸಿಎಂ ಬದಲಾವಣೆ ಏನೂ ಮಾತಾಡಲ್ಲ

ದಾವಣಗೆರೆ: ಹೈಕಮಾಂಡ್ನಿಂದ ಯಾವುದೇ ಹೇಳಿಕೆ ನೀಡದಂತೆ ಕಟ್ಟುನಿಟ್ಟಿನ ಆದೇಶ ಬಂದಿದೆ. ಹಾಗಾಗಿ ನಾನು ಸೇರಿ ಯಾವ ಶಾಸಕರು ವಿಚಾರದ ಬಗ್ಗೆ ಸುದ್ದಿಗಾರರ ಜತೆ ಮಾತನಾಡಲ್ಲ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ತಿಳಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ದೆಹಲಿಯಲ್ಲಿ ಮೀಟಿಂಗ್ ನಡೆಯುತ್ತಿದೆ. ಹೈಕಮಾಂಡಡನಿಂದ ಬಂದಿರುವ ಆದೇಶದ ಹಿನ್ನೆಲೆ ನಾವ್ಯಾರೂ ಈ ವಿಷಯದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಸಿಎಂ ಬದಲಾವಣೆ ಬಗ್ಗೆ ನಮಗೇನು ಗೊತ್ತು? ನಮಗೆ ಯಾವುದೇ ಮಾಹಿತಿ ಇಲ್ಲ ಎಂದರು. ಇತಿಹಾಸ ಸೃಷ್ಟಿಯಾಗುವಲ್ಲಿ ಯಾವಾಗಲೂ ಪರಿಶ್ರಮ ಇರು ತ್ತದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಹೌದು, ಅವರು ಹೇಳಿದಂತೆ ಪರಿಶ್ರಮ ಇರುವ ಕಡೆ ಇತಿಹಾಸ ಸೃಷ್ಟಿಯಾಗುತ್ತದೆ. ಆದರೆ ಪ್ರಸ್ತುತ ನಡೆಯುತ್ತಿರುವ ಈ ಬೆಳವಣಿಗೆಗಳ ಬಗ್ಗೆ ನಾವೇನೂ ಮಾತನಾಡಲ್ಲ, 'ನೋ ಕಾಮೆಂಟ್ಸ್' ಎಂದರು.

ಹು-ಧಾ ಪ್ರತ್ಯೇಕ ಪಾಲಿಕೆ ರಾಜ್ಯಪಾಲರಿಂದ ಅಂಕಿತ

ಧಾರವಾಡ: ದಶಕಗಳ ಬೇಡಿಕೆಯಾಗಿದ್ದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಎರಡು ಪ್ರತ್ಯೇಕ ಘಟಕಗಳಾಗಿ ವಿಭಜಿಸುವ ರಾಜ್ಯ ಸರಕಾರದ ಪ್ರಸ್ತಾವನೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರು ಮಂಗಳವಾರ ಅಧಿಕೃತವಾಗಿ ಅಂಕಿತ ಹಾಕಿ ದ್ದಾರೆ. ಇದರೊಂದಿಗೆ ಹುಬ್ಬಳ್ಳಿ ಮಹಾನಗರ ಪಾಲಿಕೆ ಮತ್ತು ಧಾರವಾಡ ಮಹಾನಗರ ಪಾಲಿಕೆ ಎಂಬ ಎರಡು ಸ್ವತಂತ್ರ ಸಂಸ್ಥೆಗಳು ಅಸ್ತಿತ್ವಕ್ಕೆ ಬರಲಿವೆ. ಅಡಿಷನಲ್ ಸಾಲಿಸಿಟರ್ ಜನರಲ್ ಅವರ ಕಾನೂನು ಅಭಿಪ್ರಾಯ ಮತ್ತು ಸರಕಾರದ ಪ್ರಸ್ತಾ ವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ರಾಜ್ಯ ಪಾಲರು, ವಿಭಜನೆಗೆ ಒಪ್ಪಿಗೆ ಸೂಚಿಸುವ ಜತೆಗೆ ಕೆಲವು ಪ್ರಮುಖ ಷರತ್ತುಗಳನ್ನು ವಿಧಿಸಿದ್ದಾರೆ. ಸಂವಿಧಾನದ ನಿಯಮ ಪಾಲನೆ, ಭಾರತೀಯ ಸಂವಿಧಾನದ ವಿಧಿ 243(1)ರ ಪ್ರಕಾರ, ಚುನಾಯಿತ ಸ್ಥಳೀಯ ಸಂಸ್ಥೆಗಳ ಅವಧಿಯು 5 ವರ್ಷಗಳವರೆಗೆ ಇರುತ್ತದೆ. ಆದ್ದರಿಂದ, ಪ್ರಸ್ತುತ ಇರುವ ಪಾಲಿಕೆಯ ಆಡಳಿತ ಮಂಡಳಿಯ ಅವಧಿ ಮುಗಿದ ನಂತರವೇ ವಿಭಜನೆ ಅಧಿಸೂಚನೆಯು ಜಾರಿಗೆ ಬರಲಿದೆ.

ಜನಗಣತಿಗೆ ಅಡ್ಡಿ ಇಲ್ಲ: ಕೇಂದ್ರ ಜನಗಣತಿ ಆಯುಕ್ತರ ನಿರ್ದೇಶನದಂತೆ ಜನವರಿ 1, 2026 ರಿಂದ ಮಾರ್ಚ್ 31, 2027 ರವರೆಗೆ ಆಡಳಿತಾತ್ಮಕ ಘಟಕಗಳ ಗಡಿ ಬದಲಾಯಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ, ಜನಗಣತಿ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕವೇ ಭೌಗೋಳಿಕ ವಿಭಜನೆ ಪ್ರಕ್ರಿಯೆ ಅಧಿಕೃತವಾಗಿ ಜಾರಿಯಾಗಲಿದೆ.

ಅಭಿವೃದ್ಧಿಗೆ ಹೊಸ ವೇಗ ಸಿಗುವ ನಿರೀಕ್ಷೆ: ಹುಬ್ಬಳ್ಳಿ-ಧಾರವಾಡ ಪ್ರತ್ಯೇಕ ಪಾಲಿಕೆಗಳಿಂದ ಆರ್ಥಿಕವಾಗಿ ಸದೃಢವಾಗಲು ಅಗತ್ಯ ಆರ್ಥಿಕ ನೆರವು ಮತ್ತು ಆದಾಯ ಹಂಚಿಕೆಯಲ್ಲಿ ಸಮಾನತೆ ಕಾಯ್ದುಕೊಳ್ಳಬೇಕು ಎಂದು ರಾಜ್ಯಪಾಲರು ಸರಕಾರಕ್ಕೆ ಸಲಹೆ ನೀಡಿದ್ದಾರೆ. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಆದೇಶ ಪ್ರತಿಯನ್ನು ನಗರಾಭಿವೃದ್ಧಿ ಇಲಾಖೆಗೆ ರವಾನಿಸಿದ್ದಾರೆ. ಈ ನಿರ್ಧಾರ ಹುಬ್ಬಳ್ಳಿ-ಧಾರವಾಡದ ' ಅಭಿವೃದ್ಧಿಗೆ ಹೊಸ ವೇಗ ಸಿಗುವ ನಿರೀಕ್ಷೆಯಿದೆ.

ಡೀಸೆಲ್ ದರ ಏರಿಕೆಯಿಂದ ಸಾರಿಗೆ ಸಂಸ್ಥೆಗೆ ಭಾರೀ ನಷ್ಟ



ಬೆಂಗಳೂರು: ಕಳೆದ ಹತ್ತು ದಿನಗಳಲ್ಲಿ ಡೀಸೆಲ್ ದರವು 7.81 ರು. ಏರಿಕೆಯಾದ ಹಿನ್ನೆಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ ತಿಂಗಳಿಗೆ ಸುಮಾರು 40 ಕೋಟಿ ರು. ಹಾಗೂ ವರ್ಷಕ್ಕೆ 480 ಕೋಟಿ ರು. ಹೆಚ್ಚುವರಿ ಆರ್ಥಿಕ ಹೊರೆ ಬೀಳಲಿದೆ ಎಂದು ಸಾರಿಗೆ ಸಚಿವ ರಾಮಲಿಂಗರೆಡ್ಡಿ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಇಂಧನ ದರ ಏರಿಕೆಯಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆ, ಸರಕು ಸಾಗಣೆ ಹಾಗೂ ನಿತ್ಯೋಪಯೋಗಿ ವಸ್ತುಗಳ ಬೆಲೆಗಳ ಮೇಲೆ ವ್ಯಾಪಕ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಡೀಸೆಲ್ ದರ ಏರಿಕೆಯ ಪರಿಣಾಮವಾಗಿ ರಾಜ್ಯದ ಸಾರಿಗೆ ನಿಗಮಗಳ ಕಾರ್ಯಾಚರಣಾ ವೆಚ್ಚ ಹೆಚ್ಚಾಗಲಿದ್ದು, ಈಗಾಗಲೇ ಉಚಿತ ಹಾಗೂ ರಿಯಾಯಿತಿ ಪ್ರಯಾಣ ಯೋಜನೆಗಳನ್ನು ನಿರ್ವಹಿಸುತ್ತಿರುವ ಸಾರಿಗೆ ಸಂಸ್ಥೆಗಳ ಮೇಲೆ ಹೆಚ್ಚುವರಿ ಒತ್ತಡ ಬೀಳಲಿದೆ ಎಂದರು. ದರ ಏರಿಕೆ ಕೇವಲ ಬಸ್ಸುಗಳಿಗಷ್ಟೇ ಸೀಮಿತವಾಗಿಲ್ಲ, ಲಾರಿ ಸಾರಿಗೆ ಕ್ಷೇತ್ರಕ್ಕೂ ದರ ಏರಿಕೆ ತೀವ್ರ ಹೊರೆ ತಂದಿದೆ. ಡೀಸೆಲ್ ವೆಚ್ಚ ಹೆಚ್ಚಾದ ಕಾರಣ ಸರಕು ಸಾಗಣೆ ದರಗಳು ಏರಿಕೆಯಾಗುವ ಸಾಧ್ಯತೆ ಇದ್ದು, ಅದರ ಪರಿಣಾಮವಾಗಿ ತರಕಾರಿ, ಹಾಲು, ದಿನಸಿ ಸೇರಿದಂತೆ ನಿತ್ಯೋಪಯೋಗಿ ವಸ್ತುಗಳ ಬೆಲೆಗಳು ಮತ್ತಷ್ಟು ಏರಬಹುದು. ಸುಳ್ಳು ಹೇಳಿ ಮತ ಪಡೆದ ಬಿಜೆಪಿ ನಾಯಕರು ಈಗ ಉತ್ತರಿಸಲಾಗದೆ ಮೌನಕ್ಕೆ ಶರಣಾಗಿದ್ದಾರೆ ಎಂದರು.

ದಿನ ವಿಶೇಷ

27 ಮೇ 2026 ಬುಧವಾರ

- » ಸೂರ್ಯೋದಯ : 5-43
- » ಸೂರ್ಯಾಸ್ತ : 7-04
- » ತಿಥಿ : ಏಕಾದಶಿ
- » ನಕ್ಷತ್ರ : ಹಸ್ತ
- » ಸಂವತ್ಸರ : ಪರಾಭವ
- » ಅಯನ :ಉತ್ತರಾಯನ
- » ಋತು : ಗ್ರೀಷ್ಮ
- » ಮಾಸ : ಅಧಿಕ ಜ್ಯೇಷ್ಠ
- » ಪಕ್ಷ : ಶುಕ್ಲಪಕ್ಷ

ಗ್ಯಾರಂಟಿ ಅನುಷ್ಠಾನದ ಬಗ್ಗೆ ಮೆಚ್ಚುಗೆ | ಸರಕಾರದ ಲೋಪ, ಕಾನೂನು ಸುವ್ಯವಸ್ಥೆ ಭ್ರಷ್ಟಾಚಾರದ ಬಗ್ಗೆ ಹೈಕಮಾಂಡ್ ಮುಂದೆ ಪ್ರಸ್ತಾಪ

ವರಿಷ್ಠರಿಗೆ ವರದಿ ಸಲ್ಲಿಸಿದ ರಣದೀಪ್ ಸಿಂಗ್ ಸುರ್ಜೇವಾಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ನಾಯಕತ್ವ ವಿಷಯಕ್ಕೆ ಸಂಬಂಧಿಸಿದಂತೆ ಹಗ್ಗ-ಜಗ್ಗಾಟ ನಡೆಯುತ್ತಿರುವ ಹೊಸ್ತಿಲಿನಲ್ಲಿಯೇ, ರಾಜ್ಯ ಸರಕಾರ, ಪಕ್ಷ ಸಂಘಟನೆಗೆ ಸಂಬಂಧಿಸಿದ ಸುದೀರ್ಘ ವರದಿಯನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಲ್ಲಿಸಿದ್ದಾರೆ ಎನ್ನಲಾಗಿದೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿಯೂ ರಣದೀಪ್ ಸಿಂಗ್ ಸುರ್ಜೇವಾಲ ಮಂಗಳವಾರ ಬೆಳಗ್ಗೆ ಎಐಸಿಸಿ ಕಚೇರಿಯಲ್ಲಿ ಕರ್ನಾಟಕ ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಿದ್ದಾರೆ. ಈ ವರದಿಯಲ್ಲಿ ಪಕ್ಷ ಸಂಘಟನೆ ಹಾಗೂ ಸರಕಾರದ 3 ವರ್ಷದ ಸಕಾರಾತ್ಮಕ, ನಕಾರಾತ್ಮಕ ಅಂಶಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ ಎಂದು ತಿಳಿದು ಬಂದಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕರ್ನಾಟಕದವರೇ ಆಗಿದ್ದು,

- ಪಕ್ಷ ಸಂಘಟನೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ.
- ಗ್ಯಾರಂಟಿ ಯೋಜನೆಗಳು ಜನರನ್ನು ತಲುಪಿವೆ, ಆದರೆ ಅದರ ಲಾಭ ಪಡೆಯುವ ಕೆಲಸವಾಗಬೇಕಿದೆ
- ಸರಕಾರದ ವಿರುದ್ಧ ಕೇಳಿಬರುತ್ತಿರುವ ಭ್ರಷ್ಟಾಚಾರ ಆರೋಪಗಳಿಂದ ಮುಕ್ತವಾಗಲು ಕ್ರಮವಹಿಸಬೇಕಿದೆ

ರಾಜ್ಯದ ಆಗುಹೋಗುಗಳ ಬಗ್ಗೆ ಸ್ಪಷ್ಟ ಚಿತ್ರಣವಿದೆ. ಆದರೂ ಸುರ್ಜೇವಾಲ ಅವರು ಸಚಿವರ ಕಾರ್ಯವೈಖರಿ, ಜನಾಭಿಪ್ರಾಯ, ಕಾರ್ಯಕರ್ತರ ಪ್ರತಿಕ್ರಿಯೆ, ಪಕ್ಷ ಸಂಘಟನೆಯ ವಿಷಯದಲ್ಲಿ ತೆಗೆದುಕೊಂಡಿರುವ ತೀರ್ಮಾನಗಳು ಸೇರಿದಂತೆ ವಿವಿಧ ಅಂಶಗಳನ್ನು ಈ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ಸರಕಾರದ ಗ್ಯಾರಂಟಿ ಯೋಜನೆಗಳು ಜನರನ್ನು ಆಕರ್ಷಿಸಿವೆಯಾದರೂ, ಆಡಳಿತ ಯಂತ್ರದಲ್ಲಿರುವ ಅನೇಕ ಸಮಸ್ಯೆಗಳ ಬಗ್ಗೆ ಜನರಲ್ಲಿ ಬೇಸರವಿದೆ ಎನ್ನುವ ಅಂಶಗಳಿವೆ ಎನ್ನಲಾಗಿದೆ.

ಕೆಲ ಸಚಿವರು ಪಕ್ಷದ ಶಾಸಕರ ಕೈಗೆ ಸಿಗುತ್ತಿಲ್ಲ. ಕ್ಷೇತ್ರಗಳ ಅಭಿವೃದ್ಧಿ ಆಗುದಿಲ್ಲ. ಈ ಬಗ್ಗೆ ಹಲವು ಬಾರಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪ್ರಸ್ತಾಪಿಸಿದರೂ, ಹಲವು ಸಚಿವರು ತಮ್ಮ ಮನಸ್ಥಿತಿ ಬದಲಿ ಸಿಕೊಂಡಿಲ್ಲ. ಇದರಿಂದ ಪಕ್ಷದ ಶಾಸಕರೇ ಸರಕಾರದ ವಿರುದ್ಧ ಮಾತನಾಡುತ್ತಿದ್ದಾರೆ ಎನ್ನುವ ಅಂಶ ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ.

ರಾಷ್ಟ್ರರಾಜಧಾನಿಯಲ್ಲಿಯೇ ಬೀಡುಬಿಟ್ಟ ಶಾಸಕರು, ಸಚಿವರು | ಶಾಸಕ ಪ್ರದೀಪ್ ಈಶ್ವರ್ ಹೆಸರು ಮುನ್ನೆಲೆಗೆ

ಅರ್ಧ ಕೈ ಪಡೆ ದೆಹಲಿಯಲ್ಲಿ ಠಿಕಾಣಿ

ಬೆಂಗಳೂರು: ರಾಷ್ಟ್ರ ರಾಜಧಾನಿ ದೆಹಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೆರಳಿದ ಬೆನ್ನಲ್ಲೇ, ಅವರೊಂದಿಗೆ ಸಚಿವ ಸಂಪುಟದ ಅರ್ಧದಷ್ಟು ಸಚಿವರು ಹಾಗೂ 40ಕ್ಕೂ ಹೆಚ್ಚು ಶಾಸಕರು ದೆಹಲಿಗೆ ತೆರಳಿದ್ದಾರೆ.

ಸಚಿವ ಸಂಪುಟ ಪುನಾರಚನೆ ಅಥವಾ ನಾಯಕತ್ವ ಬದಲಾವಣೆ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ ಎನ್ನುವ ವದಂತಿಗಳು ಹಬ್ಬಿತ್ತು. ಇದರ ಬೆನ್ನಲ್ಲೇ, ಸಚಿವ ಸಂಪುಟ ಪುನಾರಚನೆಯ ಅವಧಿಯಲ್ಲಿ ತಮಗೆ ಕುರ್ಚಿಗಿಟ್ಟಿಸಿಕೊಳ್ಳಲು ಅರ್ಧ ಶಾಸಕರ ದಂಡು ದೆಹಲಿಗೆ ತಲುಪಿದ್ದರೆ, ಇನ್ನು ಕೆಲ ಸಚಿವರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಬ್ಯಾಟ್ ಮಾಡಲು ದೆಹಲಿಯಲ್ಲಿ ತಂಗಿದ್ದಾರೆ ಎನ್ನಲಾಗಿದೆ. ಇನ್ನೂ ಹಿರಿಯ ಶಾಸಕರು ಸಂಪುಟ ಪುನಾರಚನೆಯಾಗಬೇಕು. ತಮಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಬೇಕು ಎಂದು ಒತ್ತಡ ಹೇರುತ್ತಿದ್ದಾರೆ. ಶಾಸಕರಾದ ಟಿ.ಬಿ.ಜಯಚಂದ್ರ. ಅಶೋಕ್ ಪಟ್ಟಣ, ಪ್ರದೀಪ್ ಈಶ್ವರ್, ಪುಟ್ಟರಂಗ ಶೆಟ್ಟಿ, ನಾರಾಯಣಸ್ವಾಮಿ ಸೇರಿದಂತೆ 40ಕ್ಕೂ ಹೆಚ್ಚು ಶಾಸಕರು ದೆಹಲಿಯಲ್ಲಿ ಬೀಡುಬಿಟ್ಟಿದ್ದಾರೆ.

ಭೇಟಿಗೆ ಸಿಗದ ಅವಕಾಶ: ಸಂಪುಟ ಪುನಾರಚನೆ ಬಗ್ಗೆ ಚರ್ಚಿಸಲು ಹಲವು ಶಾಸಕರು ದೆಹಲಿಗೆ ತೆರಳಿದ್ದರೂ ದೆಹಲಿ ಮಟ್ಟದ ಯಾವ ನಾಯಕರು ಶಾಸಕರ ಕೈಗೆ ಸಿಕ್ಕಿಲ್ಲ. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಇಡೀ ದಿನ ಇಂದಿರಾ ಭವನದಲ್ಲಿ ಸರಣಿ ಸಭೆ ನಡೆಸಿದ್ದರಿಂದ ಇತರೆ ಶಾಸಕರ ಭೇಟಿಗೆ ಅವಕಾಶ ಸಿಕ್ಕಿಲ್ಲ. ಸಿದ್ದರಾಮಯ್ಯ ಅವರೊಂದಿಗೆ ದೆಹಲಿಗೆ ತೆರಳಿದ್ದ ಸಚಿವರಿಗೂ ಇಂದಿರಾ ಭವನದಲ್ಲಿ ನಡೆದ ಸಭೆಗೆ ಆಹ್ವಾನವಿಲ್ಲದೇ ಇದಿದ್ದರಿಂದ ಇಂದಿರಾ ಭವನಕ್ಕೂ ಆಗಮಿಸದೇ ಕರ್ನಾಟಕ ಭವನದಲ್ಲಿಯೇ ತಂಗಿದ್ದರು.

ಸೋನಿಯಾ ಗಾಂಧಿಗೆ ಸಂದೇಶ ರವಾನೆ?

ಈ ನಡುವೆ ಇಂಧನ ಸಚಿವ ಕೆ.ಜೆ.ಜಾರ್ಜ್, ಬಿ.ಕೆ.ಹರಿಪ್ರಸಾದ್ ಅವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ಕರ್ನಾಟಕದ ಸ್ಥಿತಿಗತಿ, ನಾಯಕತ್ವ ಬದಲಾವಣೆಯಿಂದ ಆಗಬಹುದಾದ ತೊಂದರೆ, ಶಾಸಕರ ಒಲವು ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ ಎನ್ನಲಾ ಗಿದೆ. ಆದರೆ ನೇರವಾಗಿ ಭೇಟಿಯಾಗಿ ದ್ದಾರೋ ಅಥವಾ ಆಪ್ತರ ಮೂಲಕ ಸಂದೇಶ ರವಾನಿಸಿದ್ದಾರೋ ಎನ್ನುವ ಸ್ಪಷ್ಟನೆ ಸಿಕ್ಕಿಲ್ಲ.



ಸಚಿವ ಸ್ಥಾನ ಆಕಾಂಕ್ಷಿಗಳು

- ಶಾಸಕ ಟಿ.ಬಿ.ಜಯಚಂದ್ರ, ● ಅಶೋಕ್ ಪಟ್ಟಣ,
- ಪ್ರದೀಪ್ ಈಶ್ವರ್, ● ಪುಟ್ಟರಂಗ ಶೆಟ್ಟಿ, ● ನಾರಾಯಣಸ್ವಾಮಿ

ಶೀಘ್ರದಲ್ಲಿ ಗೊಂದಲ ಸರಿಪಡಿಸಲಿ: ರಾಜಣ್ಣ



ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಸೃಷ್ಟಿಯಾಗಿರುವ ಅಧಿಕಾರ ಹಸ್ತಾಂತರದ ಗೊಂದಲವನ್ನು ಹೈಕಮಾಂಡ್ ಶೀಘ್ರದಲ್ಲೇ ಬಗೆಹರಿಸಬೇಕು. ಇಲ್ಲದಿದ್ದರೆ ಅದು ನೇರವಾಗಿ ರಾಜ್ಯದ ಆಡಳಿತದ ಮೇಲೆ ಗಂಭೀರ ಪರಿಣಾಮ ಬೀರಲಿದ್ದು, ಅಧಿಕಾರಿಗಳು ಕೆಲಸ ಮಾಡದ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯದಲ್ಲಿ ಗೊಂದಲಗಳ ನಿವಾರಣೆ ಶೀಘ್ರದಲ್ಲೇ ಆಗಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೇ ಮುಂದುವರಿಸಬೇಕೋ ಅಥವಾ ಸಂಪುಟ ಪುನಾರಚನೆಗೆ ಅವಕಾಶ ಕೊಡಬೇಕೋ ಎಂಬುದನ್ನು ಹೈಕಮಾಂಡ್ ಬೇಗ ತೀರ್ಮಾನಿಸಲಿ. ಇಲ್ಲದಿದ್ದರೆ ಅಧಿಕಾರಿಗಳ ಯೋಚನೆಯೇ ಬೇರೆ ಇರುತ್ತದೆ, ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಡಿಕೆಶಿ ಗುಂಪುಗಾರಿಕೆ ಮಾಡಲ್ಲ

ದೆಹಲಿ: ಡಿ.ಕೆ.ಶಿವಕುಮಾರ್ ಅವರು ಗುಂಪುಕಟ್ಟಿಕೊಂಡು ಹೋಗಿ ರಾಜಕೀಯ ಮಾಡುವವರಲ್ಲ, ಹೈಕಮಾಂಡ್‌ಗೆ ನಿಷ್ಠೆಯಿಂದ ಇರುವವರು ಮಾಗಡಿ ಶಾಸಕ ಬಾಲಕೃಷ್ಣ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಇಬ್ಬರನ್ನೂ ದೆಹಲಿಗೆ ಕರೆದಿದ್ದಾರೆ ಏನಾದರೂ ಒಂದು ತೀರ್ಮಾನ ಆಗಬಹುದು. ಇರುವ ಗೊಂದಲ ಪರಿಹಾರ ಆಗಬೇಕು. ಎಲ್ಲವೂ ತಿಳಿ ಆಗಬೇಕು. ಎಲ್ಲದಕ್ಕೂ ಹೈಕಮಾಂಡ್ ತೆರೆ ಎಳೆಯಬೇಕು ಎಂದು ಮನವಿ ಮಾಡಿದರು. ಸಿಎಂ ಜತೆಗೆ ಆಪ್ತ ಸಚಿವರು ದೆಹಲಿಗೆ ಪ್ರಯಾಣಿಸಿರುವ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಡಿ.ಕೆ ಶಿವಕುಮಾರ್ ಗುಂಪು ಕಟ್ಟಿಕೊಂಡು ಹೋಗಿ ರಾಜಕೀಯ ಮಾಡುವವರಲ್ಲ. ಅವರು ಹೈಕಮಾಂಡ್ ನಿಷ್ಠೆಯಿಂದ ಇರುವವರು. ಸಿಎಂ ಸಹ ಯಾರನ್ನೂ ಕರೆದಿಲ್ಲ ಕುತೂಹಲಕ್ಕೆ ಸಹಜವಾಗಿ 3-4 ಸಚಿವರು ಹೋಗಿರಬಹುದು. ಸಿಎಂ ಜೊತೆ ಈ ಮೊದಲೂ ದೆಹಲಿಗೆ ಹೋಗುವಾಗ ಜೊತೆಗೆ ಸಚಿವರು ಹೋಗುತ್ತಿ ದ್ದರು. ಇದೇ ಮೊದಲಲ್ಲ. ಎಲ್ಲವೂ ಹೈಕಮಾಂಡ್ ತೀರ್ಮಾನ. ಗೊಂದಲ ಪರಿಹಾರ ಆದರೆ ಮುಂದಿನ ಚುನಾವಣೆಗೆ ಅನುಕೂಲ ಆಗಲಿದೆ ಎಂದರು.

ಹೊಸ ಪಕ್ಷ ಕಟ್ಟುವೆ: ಯತ್ನಾಳ



ಬೆಂಗಳೂರು: ಬಿಜೆಪಿಗೆ ವಾಪಸ್ ಬರುತ್ತೇನೋ ಇಲ್ಲವೂ ಗೊತ್ತಿಲ್ಲ. ಆದರೆ, ರಾಜ್ಯಕ್ಕೆ ಪರ್ಯಾಯ ರಾಜಕೀಯ ಶಕ್ತಿ ಅಗತ್ಯವಿದೆ. ಮುಲಾಜಿಲ್ಲದೇ ಹೊಸ ಪಕ್ಷ ಕಟ್ಟುತ್ತೇನೆ. ಮುಂದಿನ ಸರಕಾರದಲ್ಲಿ ಪ್ರಮುಖ ಪಾತ್ರವಹಿಸುತ್ತೇನೆ ಎಂದು ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಬಿಜೆಪಿಯಲ್ಲಿ ಪ್ರಾಮಾಣಿಕರಿಗೆ ಅವಕಾಶ ನೀಡಿದರೆ ಪಕ್ಷ ಅಧಿಕಾರಕ್ಕೆ ಬರಲಿದೆ. ಹೈಕಮಾಂಡ್‌ಗೆ ಬ್ಲ್ಯಾಕ್ ಮೇಲ್ ಮಾಡಿದವರಿಗೇ ಅವಕಾಶ ಕೊಟ್ಟರೆ ಬಿಜೆಪಿ ಗೆಲ್ಲುವುದಿಲ್ಲ. ಬಿಜೆಪಿಯಲ್ಲಿ ವ್ಯವಸ್ಥಿತವಾಗಿ ಯಾವುದೇ ಕೆಲಸ ನಡೆಯುತ್ತಿಲ್ಲಎಂದರು.

ಮೇಕೆದಾಟು ಯೋಜನೆ ನಿಲ್ಲಿಸಲು ಸಾಧ್ಯವಿಲ್ಲ

ಮಂಡ್ಯ: ವಿಜಯ್ ರೀತಿ ತಮಿಳುನಾಡಿನಲ್ಲಿ ನೂರು ಮಂದಿ ಸಿಎಂ ಆದರೂ ಸಹ ನಾವು ಮೇಕೆದಾಟು ಡ್ಯಾಂ ಕಟ್ಟುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ಶಾಸಕ ಗಣಿಗ ರವಿಕುಮಾರ್ ಹೇಳಿದ್ದಾರೆ. ಈಗಾಗಲೇ ನಾವು ಮೇಕೆದಾಟು ಯೋಜನೆಯ ಡಿಪಿಆರ್ ಸಿದ್ಧಪಡಿಸಿದ್ದೇವೆ. ಅಲ್ಲದೇ ಸುಪ್ರೀಂಸಹ ಕಾವೇರಿ ಬೋರ್ಡ್‌ನಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ಹೇಳಿದೆ. ನಮ್ಮ ಪರ ಸುಪ್ರೀಂಆದೇಶ ನೀಡಿದೆ. ಅದರಂತೆ ನಾವು ಡಿಪಿಆರ್ ಅನ್ನು ಸಿದ್ಧತೆ ಮಾಡಿಕೊಂಡಿದ್ದೇವೆ. ಆದರೆ ಮೇಕೆದಾಟು ವಿಚಾರದಲ್ಲಿ ಕಾನೂನು ಹೋರಾಟ ಮಾಡುವುದಾಗಿ ವಿಜಯ್ ಹೇಳಿದ್ದಾರೆ ಎಂದಿದ್ದಾರೆ.

ಬೆಳಗಾವಿಯಲ್ಲಿ ವಾಟಾಳ್ ನಾಗರಾಜ್ | ಅಖಂಡ ಕರ್ನಾಟಕ ಬಂದ್ ಎಚ್ಚರಿಕೆ

ಮಹಾಜನ್ ವರದಿ ಜಾರಿಗೆ ಜೂನ್ 2 ಗಡುವು

ಬೆಳಗಾವಿ: ಜೂನ್ 2ರ ಒಳಗಾಗಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಮತ್ತು ಮಹಾಜನ್ ವರದಿ ಜಾರಿಗೆ ತರುವ ನಿಟ್ಟಿನಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ನಿರ್ಣಯ ಕೈಗೊಳ್ಳಬೇಕು. ಇಲ್ಲದಿದ್ದರೆ ಜೂನ್ 4 ರಂದು ಬೆಂಗಳೂರಿನಲ್ಲಿ ಸಭೆ ಕರೆದು, ಅಖಂಡ ಕರ್ನಾಟಕ ಬಂದ್‌ಗೆ ಕರೆ ನೀಡಲಾಗುವುದು ಎಂದು ಹಿರಿಯ ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಎಚ್ಚರಿಕೆ ನೀಡಿದರು.

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರವಾಗಿ ಗೊತ್ತುವಳಿ ಮಂಡಿಸುವಂತೆ ಆಗ್ರಹಿಸಿ 20 ಕ್ಕೂ ಅಧಿಕ ಕನ್ನಡ ಸಂಘಟನೆಗಳು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಾನಗರ ಪಾಲಿಕೆ ಯಾವ ನೆಲದಲ್ಲಿದೆ ಎಂಬುದನ್ನು ಪಾಲಿಕೆಯಲ್ಲಿ ಅಧಿಕಾರದಲ್ಲಿ ಇರುವವರು ಅರ್ಥ ಮಾಡಿಕೊಳ್ಳಬೇಕು. ಬೆಳಗಾವಿ ಕನ್ನಡಿಗರ ಗಂಡು ಮೆಟ್ಟಿದ ನೆಲ. ಇದು ಕರ್ನಾಟಕದ ಅವಿಭಾಜ್ಯ ಅಂಗ. ಮಹಾಜನ್ ವರದಿ ಜಾರಿ

ಆಗಲೇಬೇಕು ಅಂತಾ ನಿರ್ಣಯ ಮಾಡಬೇಕು. ಮಾಡದಿದ್ದರೆ ಬೆಳಗಾವಿಯಲ್ಲಿ ಕಂಡು ಕೇಳರಿಯದ ರೀತಿಯ ಕ್ರಾಂತಿ ಆಗುತ್ತದೆ ಎಂದರು. ಇವತ್ತಿನಿಂದ ಒಂದು ವಾರದೊಳಗೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ, ಮಹಾಜನ್ ವರದಿ ಜಾರಿಗೆ ತರಬೇಕು ಎಂದು ನಿರ್ಣಯ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ನಾವು ಗಡುವು ಕೊಡುತ್ತೇವೆ.

> **ಬೆಳಗಾವಿಯಿಂದ ಬಹುದೊಡ್ಡ ಕ್ರಾಂತಿ ಆರಂಭವಾಗಲಿದೆ. ಹೊಸ ಕ್ರಾಂತಿಗೆ ದಿಕ್ಸೂಚಿ ಸಿಗಲಿದೆ. ಇಲ್ಲಿಂದ ಕ್ರಾಂತಿಯ ಕಹಳೆ ಮೊಳಗಲಿದೆ. ಇಡೀ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಜನರು ಬೆಳಗಾವಿ ಜತೆ ನಿಲ್ಲಬೇಕು. ನಮ್ಮ ದೇಹದಲ್ಲಿ ರಕ್ತದ ಕೊನೆ ಹನಿ ಇರೋವರೆಗೂ ಹೋರಾಡಲು ನಾವು ಸಿದ್ಧರಿದ್ದೇವೆ.**
>
> **-ವಾಟಾಳ್ ನಾಗರಾಜ,** ಕನ್ನಡಪರ ಹೋರಾಟಗಾರ

ಆಗಲೂ ನೀವು ಎಚ್ಚೆತ್ತುಕೊಳ್ಳದಿದ್ದರೆ, ಜೂನ್4ರಂದು ಬೆಂಗಳೂರಲ್ಲಿ ಎಲ್ಲಾ ಕನ್ನಡ ಸಂಘಟನೆಗಳು ಸಭೆ ಸೇರುತ್ತೇವೆ. ಪ್ರವೀಣ ಶೆಟ್ಟಿ, ಶಿವರಾಮೇಗೌಡ, ನಾರಾಯಣಗೌಡ ಸೇರಿ ಎಲ್ಲ ಬಣಗಳ ಕನ್ನಡ ಸಂಘಟನೆಗಳ ಮುಖಂಡರನ್ನು ಸಭೆಗೆ ಆಹ್ವಾನಿಸುತ್ತೇವೆ. ಅಲ್ಲಿ ಅಖಂಡ ಕರ್ನಾಟಕ ಬಂದ್‌ಗೆ ಕರೆ ಕೊಡುತ್ತೇವೆ ಎಂದರು.

ಹೋರಾಟಗಾರರು ಪೊಲೀಸ್ ವಶಕ್ಕೆ

ವಿವಿಧ ಕನ್ನಡಪರ ಸಂಘಟನೆ ಗಳು ಮಂಗಳವಾರ ಬೆಳಗಾವಿ ಮಹಾ ನಗರ ಪಾಲಿಕೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ವಾಟಳ್ ನಾಗರಾಜ ಸೇರಿದಂತೆ ನೂರಕ್ಕೂ ಅಧಿಕ ಕನ್ನಡಪರ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದಿದರು. ಜಿಲ್ಲಾಧಿಕಾರಿ ಕಚೇರಿಯಿಂದ ಮಹಾ ನಗರ ಪಾಲಿಕೆವರೆಗೆ ನೂರಾರು ಸಂಖ್ಯೆಯಲ್ಲಿ ಹೋರಾಟಗಾರು ಹೆಜ್ಜೆ ಹಾಕಿದರು. ಆರ್‌ಟಿಒ ವೃತ್ತದ ಬಳಿ ನಿರ್ಮಾಪಕ ಸಾ.ರಾ.ಗೋವಿಂದು, ಕನ್ನಡ ಕುಮಾರ್, ಅಶೋಕ ಚಂದರಗಿ ಸೇರಿ ಪ್ರತಿಭಟಿಸಿದ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ನೀಲಣ್ಣನವರ ಐಷಾರಾಮಿ ಕಾರುಗಳ ಜಪ್ತಿ

ಬೆಳಗಾವಿ: ನಿಯಮ ಬಾಹಿರವಾಗಿ ಕೋಟ್ಯಾಂತರ ರು. ಹಣ ಠೇವಣಿ ಪಡೆದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿರುವ ಶಿವಂ ಅಸೋಸಿಯೇಟ್ಸ್ ಮಾಲಿಕ ಶಿವಾನಂದ ನೀಲಣ್ಣನವರ ಬಳಿ ಇದ್ದ ಕೋಟ್ಯಾಂತರ ರು.ಮೌಲ್ಯದ ಐಶಾರಾಮಿ ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ.

35 ಸಾವಿರ ಜನರಿಂದ ಅಂದಾಜು 4,500 ಕೋಟಿ ಠೇವಣಿ ಪಡೆದ ಆರೋಪ ಹೊತ್ತ ಶಿವಾನಂದ ನೀಲಣ್ಣನವರ ಸದ್ಯ ಸಿಐಡಿ ವಶದಲ್ಲಿದ್ದು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಐದು ಕೋಟಿ ರು.ಮೌಲ್ಯದ 4 ಐಷಾರಾಮಿ ಕಾರುಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಲ್ಯಾಂಡ್ ರೋವರ್ ಡಿಫೆಂಡರ್, ಟೊಯೋಟಾ ವೆಲ್ಫೈ, ಮರ್ಸಿಡಿಸ್ ಎಎಂಜಿ ಕಾರುಗಳನ್ನು ಸೀಜ್ ಮಾಡಲಾಗಿದೆ. ಇನ್ನೂ ಶಿವಾನಂದ ನೀಲಣ್ಣನವರ ಪತ್ನಿ ಬಳಸುತ್ತಿದ್ದ ಹ್ಯುಂಡೈ ವರ್ನಾ ಕಾರನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದು ಮಾಳ ಮಾರುತಿ ಪೊಲೀಸ್ ಠಾಣೆಗೆ ತಂದಿದ್ದಾರೆ. ತನಿಖೆ ಹಿನ್ನೆಲೆ ಶಿವಾ ನಂದ ನೀಲಣ್ಣನವರನ್ನು 10 ದಿನಗಳ ವರೆಗೆ ಸಿಐಡಿಗೆ ನೀಡಿ ಕೋರ್ಟ್ ಆದೇಶ ಹೊರಡಿಸಿತ್ತು. ಇದರಂತೆ ಬೆಂಗಳೂರಿಗೆ ಕರೆದೊಯ್ದು ನೀಲಣ್ಣನವರನ್ನು ಅಧಿಕಾರಿಗಳು ವಿಚಾರಣೆ ನಡೆಸಿ ಸೋಮವಾರ ರಾತ್ರಿ ಬೆಳಗಾವಿಗೆ ವಾಪಸ್ ಕರೆತಂದಿದ್ದಾರೆ. ಬುಧವಾರ ಕೋರ್ಟ್‌ಗೆ ಹಾಜರುಪಡಿಸಲು ಅಧಿಕಾರಿಗಳು ತಯಾರಿ ನಡೆಸಿದೆ.

ಕರವೇ ಜಿಲ್ಲಾಧ್ಯಕ್ಷನ ಕಾರು ವಶಕ್ಕೆ

ಕರವೇ (ಪ್ರವೀಣ್ ಶೆಟ್ಟಿ ಬಣದ) ಜಿಲ್ಲಾಧ್ಯಕ್ಷ ಆರ್.ಅಭಿಲಾಷ್, ನೀಲಣ್ಣನವರಿಂದ ಪಡೆದಿದ್ದಾರೆ ಎನ್ನಲಾದ ದುಬಾರಿ ಬೆಲೆಯ ಕಾರನ್ನು ಅಧಿಕಾರಿಗಳು ವಶಕ್ಕೆ ಪಡೆದಿ ದ್ದಾರೆ. ಪ್ರಕರಣದ ಹಣಕಾಸು ವ್ಯವಹಾರಗಳು ಹಾಗೂ ಉಡುಗೊರೆಯಾಗಿ ನೀಡಲಾದ ಕಾರಿನ ಹಿನ್ನೆಲೆ ಕುರಿತು ಸಿಐಡಿ ಅಧಿಕಾರಿಗಳು ಅಭಿಲಾಷ್ ಅವರನ್ನು ವಿಚಾರಣೆ ನಡೆಸುತ್ತಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

ಬಾಲಿವುಡ್ ನಟ ರಣವೀರ್‌ಸಿಂಗ್ ಮೈಸೂರಿನ ಚಾಮುಂಡೇಶ್ವರಿ ದೇಗುಲಕ್ಕೆ ಮಂಗಳವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಚಾಮುಂಡಿ ದೇವಿ ಸನ್ನಿಧಿಯಲ್ಲಿ ಕ್ಷಮೆಯಾಚಿಸಿದ ನಟ ರಣವೀರ್

ಮೈಸೂರು: ದೈವ ನರ್ತನದ ಬಗ್ಗೆ ಅವಹೇಳನಕಾರಿ ರೀತಿಯಲ್ಲಿ ನಡೆದುಕೊಂಡಿದ್ದ ನಟ ರಣವೀರ್ ನಾಡಿನ ಅದಿದೇವತೆ ಚಾಮುಂಡಿ ಎದುರು ಮಂಡಿಯೂರಿ ಕ್ಷಮೆಯಾಚಿಸಿದರು. ಮಂಗಳವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ಅವರು, ಜನಸಾಮಾನ್ಯರ ಸರತಿ ಸಾರಿನಲ್ಲಿ ನಿಂತು ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದರು. ಸರತಿಯಲ್ಲಿ ಇದ್ದ ಅಷ್ಟೂ ಹೊತ್ತು ಮಾಸ್ಕ್ ಧರಿಸಿಕೊಂಡು ಮುಖ ಮರೆಮಾಚಿದ ಅವರು, ಗರ್ಭಗುಡಿ ಸಮೀಪಕ್ಕೆ ತೆರಳಿದ ಬಳಿಕ ಮಾಸ್ಕ್ ತೆಗೆದು ನಮಸ್ಕರಿಸಿದರು. ಖಾಲಿ ಕೈನಲ್ಲಿ ಬಂದು ಚಾಮುಂಡಿ ತಾಯಿಗೆ ವಿಶೇಷ ಪೂಜೆ ಸಲ್ಲಿಸಿದ ನಟ ರಣವೀರ್ ಸಿಂಗ್ ಅವರಿಗೆ ದೇವಾಲಯದ ಅರ್ಚಕರು ನೆರವಾದರು. ಈ ಹಿಂದೆ ದೈವ ನರ್ತನದ ಬಗ್ಗೆ ಅವಹೇಳನಕಾರಿ ವರ್ತನೆ ಹಾಗೂ ಅಣಕ ಮಾಡಿದ ಆರೋಪಕ್ಕೆ ಗುರಿಯಾಗಿದ್ದ ನಟನ ವಿರುದ್ಧ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ನ್ಯಾಯಾಲಯದ ಸೂಚನೆ ಮೇರೆಗೆ ಕ್ಷಮೆ ಕೇಳಲು ದೇಗುಲಕ್ಕೆ ಭೇಟಿ ಮಾಡಿದರು. ಚಾಮುಂಡಿ ತಾಯಿಯ ದರ್ಶನ ಪಡೆದು, ಮೂಲ ವಿಗ್ರಹ, ಉತ್ಸವಮೂರ್ತಿಗೆ ಪೂಜೆ ಸಲ್ಲಿಸಿದರು. ವಿಶೇಷ ಪೂಜೆ ಸಲ್ಲಿಕೆ ಬಳಿಕ ಗರ್ಭಗುಡಿಯ ಆವರಣದಲ್ಲಿ ಕುಳಿತು ಪ್ರಾರ್ಥನೆ ಮಾಡಿದರು.

ವಿಶೇಷ ನೇಮಕಾತಿಯಡಿ ಸರಕಾರಿ ಭೂಮಾಪಕರನ್ನು ಸಕ್ರಮ, ನ್ಯಾಯ ಸಮ್ಮತ ಸಂಭಾವನೆ ನೀಡಲು ಆಗ್ರಹಿಸಿ ಮುಷ್ಕರ

ಭೂಮಾಪಕರ ಪ್ರತಿಭಟನೆ: ರಾಜ್ಯದಲ್ಲಿ ಸರ್ವೇ ಕಾರ್ಯ ಸ್ಥಗಿತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರ್ವೇಯರ್‌ಗಳ ಮುಷ್ಕರದಿಂದ ರಾಜ್ಯದಲ್ಲಿ ಸರ್ವೇ ಕಾರ್ಯ ಕುಂಟುತ್ತಾ ಸಾಗುತ್ತಿದೆ. ಕಳೆದ 23 ವರ್ಷಗಳಿಂದ ನಿರಂತರವಾಗಿ ಇಲಾಖೆಯ ವಿವಿಧ ಭೂಮಾಪನ ಕಾರ್ಯಗಳನ್ನು ನಿರ್ವಹಿಸುತ್ತಿ ರುವ ಪರವಾನಗಿ ಭೂಮಾಪಕರನ್ನು ಒಂದು ಬಾರಿ ವಿಶೇಷ ನೇಮಕಾತಿ ಅಡಿಯಲ್ಲಿ ಸರಕಾರಿ ಭೂ ಮಾಪಕರಾಗಿ ಸಕ್ರಮಗೊಳಿಸಬೇಕು ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ತತ್ವದಡಿ ನ್ಯಾಯ ಸಮ್ಮತ ಸಂಭಾವನೆ ಹಾಗೂ ಸೌಲಭ್ಯಗಳನ್ನು ನೀಡಬೇಕು ಎಂದು ಅಖಿಲ ಕರ್ನಾಟಕ ಸರಕಾರಿ ಪರವಾನಗಿ ಭೂಮಾಪಕರ ಸಂಘವು ಈಗಾಗಲೇ ಮುಷ್ಕರ ನಡೆಸುತ್ತಿದೆ.

ಪರವಾನಗಿ ಭೂಮಾಪಕರ ವ್ಯವಸ್ಥೆಯನ್ನು 2000ನೇ ಸಾಲಿನಲ್ಲಿ ಕೆಎಲ್‌ಆರ್ ಕಾಯಿದೆ 46ರ ತಿದ್ದುಪಡಿಯ ಮೂಲಕ ಇಲಾಖೆಗೆ ಪರಿಚಯಿಸಲಾಗಿತ್ತು. ಬಳಿಕ 2002ರಲ್ಲಿ ಸುಮಾರು 800ರಿಂದ 1000 ಮಂದಿಗೆ ಸರಕಾರದ ನಿಯಮಾನುಸಾರ ತರಬೇತಿ ನೀಡಿ ಜಿಲ್ಲಾವಾರು ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಯಿತು. ಆ ದಿನದಿಂದ ಈವರೆಗೆ ಸಾವಿರಾರು ಪರವಾನಗಿ ಭೂಮಾಪಕರು ಇಲಾ ಖೆಯ ಪ್ರಮುಖ

ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಸರಕಾರದ ಭೂಮಾಪಕರಿಗೆ ಸಮಾನವಾದ ಕೆಲಸಗಳನ್ನು ಮಾಡುತ್ತಿದ್ದರೂ ವೇತನ ಮತ್ತು ಸೌಲಭ್ಯಗಳಲ್ಲಿ ತೀವ್ರ ಅಸಮಾನತೆ ಮುಂದುವರಿದಿದೆ. ಆರಂಭಿಕ ಹಂತದಲ್ಲಿ ವಿಭಾಗ, ದಾನ, ಕ್ರಯ ಹಾಗೂ 11-ಇ ನಕ್ಷೆ ತಯಾರಿ, ತತ್ಕಾಲ್ ಪೋಡಿ ಮತ್ತು ಅಲಿನೇಷನ್ ಪೂರ್ವ ನಕ್ಷೆ ಸಿದ್ಧ ಪಡಿಸುವಂತಹ ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು. ನಂತರ ಕೆಎಲ್‌ಆರ್ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಹೊಸ ಹುದ್ದೆ ಗಳನ್ನು ಸೃಜಿಸುವ ಮೂಲಕ ಪರವಾನಗಿ ಭೂಮಾಪ ಕರ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. 2005ರಿಂದ 2024ರವರೆಗೆ ವಿವಿಧ ಹಂತಗಳಲ್ಲಿ ಸಿಇಟಿ ಪರೀಕ್ಷೆಗಳ ಮೂಲಕ ಸುಮಾರು 7,500 ಮಂದಿ ಪರವಾನಗಿ ಭೂಮಾಪಕರನ್ನು ಇಲಾಖೆಗೆ ಸೇರ್ಪಡೆಗೊಳಿಸಲಾಗಿದ್ದು, ಪ್ರಸ್ತುತ ಸುಮಾರು 5,000 ಮಂದಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಭೂಮಾಪಕರ ಬೇಡಿಕೆಗಳೇನು?

ಪರವಾನಗಿ ಭೂಮಾಪಕರ ಸರಕಾರಿ ಹುದ್ದೆಯಲ್ಲಿ ವಿಲಿನಗೊಳ್ಳಿಸಲು ವಿಶೇಷ ನೇಮಕಾತಿ ಬಗ್ಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಶೀರ್ಷಿಕೆ ಅಡಿಯಲ್ಲಿ ಕ್ರಮ ವಹಿಸುವಂತೆ ಹಲವು ದಿನಗಳ ಬೇಡಿಕೆಯಾಗಿದೆ. ಸರಿಯಾಗಿ ಸಂಭಾವನೆ ಕೊಡಬೇಕು, 1,500 ಜನ ಹೆಣ್ಣು ಮಕ್ಕಳು ಕೆಲಸ ಮಾಡ್ತಿದ್ದಾರೆ ಅವರಿಗೆ ಭದ್ರತೆ ಒದಗಿಸಬೇಕು. ನಮ್ಮ ಲೈಸೆನ್ಸ್ ರದ್ದು ಮಾಡಿದ್ದಾರೆ. ಮರಳಿ ಸರಿಪಡಿಸಬೇಕು. ನಮ್ಮ ಬಗ್ಗೆ ಸರಕಾರ ಗಮನ ಹರಿಸಬೇಕು. ಕೆಲಸಕ್ಕೆ ತಕ್ಕಂತೆ ವೇತನ ನೀಡಬೇಕು ಎಂಬುದು ಬೇಡಿಕೆಯಾಗಿದೆ.

5.78 ಲಕ್ಷ ಸರ್ವೇ ಅರ್ಜಿಗಳು ಬಾಕಿ

ಭೂಮಾಪಕರ ಧರಣಿಯಿಂದ ರೈತರಿಗೆ ಬೇಕಾದ ಅಗತ್ಯ ಸೇವೆ ಸಿಗದೇ ಪರದಾಡುತ್ತಿ ದ್ದಾರೆ. ರಾಜ್ಯದಲ್ಲಿ ಶೇ.45 ರಷ್ಟು ಭೂ ಮಾಪಕರ ಹುದ್ದೆಗಳು ಖಾಲಿ ಇದೆ. ಈ ಬೇಡಿಕೆಯನ್ನು ಪೂರೈಸಲು ಸರಕಾರ ಸುಮಾರು 4,500 ಖಾಸಗಿ ಭೂಮಾಪಕರನ್ನು ನಿಯೋಜಿಸಿದೆ. ಖಾಸಗಿ ಭೂ ಮಾಪಕರ ಪ್ರತಿಭಟನೆಯಿಂದ 5.78 ಲಕ್ಷ ಸರ್ವೇ ಅರ್ಜಿಗಳು ಬಾಕಿ ಉಳಿದಿವೆ.

> **ಭೂ ಮಾಪಕರ ಬೇಡಿಕೆಗಳಾಗಿರುವ ಗೌರವಯುತ ಬದುಕು ಮತ್ತು ಸೇವಾ ಭದ್ರತೆಯನ್ನು ಸರಕಾರ ಕೂಡಲೇ ನೀಡಬೇಕು. ಮಾನ್ಯ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ಪ್ರತಿಪಕ್ಷ ನಾಯಕರಾಗಿದ್ದಾಗ ಭೂ ಮಾಪಕರ ಪರ ಧ್ವನಿ ಎತ್ತಿದ್ದರು, ಈಗ ಜಾಣ ಕಿವುಡು ಪ್ರದರ್ಶಿಸುತ್ತಿದ್ದಾರೆ. ಮುಖ್ಯ ಮಂತ್ರಿಗಳು ಕೂಡಲೇ ಗಮನ ವಹಿಸಿ ಇವರ ಬೇಡಿಕೆಗಳಿಗೆ ನ್ಯಾಯಯುತವಾದ ಪರಿಹಾರವನ್ನು ಆದ್ಯತೆಯ ಮೇಲೆ ನೀಡಲಿ.**
>
> **-ಬಸನಗೌಡ ಯತ್ನಾಳ್,** ಶಾಸಕ

> **ನಾವು 23 ವರ್ಷಗಳಿಂದ ಅಂದರೆ 2003ರಿಂದ ಸರಕಾರಿ ಪರವಾನಗಿ ಭೂಮಾಪಕರಾಗಿ ಕೆಲಸ ಮಾಡ್ತಿದ್ದೇವೆ. ಇಲಾಖೆಯಲ್ಲಿ ಸರಕಾರಿ ಭೂಮಾಪಕರು 3,200 ಜನ ಕೆಲಸ ಮಾಡ್ತಿದ್ದಾರೆ. 6 ಸಾವಿರ ಭೂಮಾಪಕರು ಕೆಲಸ ಮಾಡ್ತಿದ್ದೇವೆ. ನಮಗೆ ಸರಿಯಾಗಿ ಸಂಭಾವನೆ ಸರಕಾರ ಕೊಡುತ್ತಿಲ್ಲ.**
>
> **-ತಿರುಮಲೇಗೌಡ,** ಅಖಿಲ ಕರ್ನಾಟಕ ಸರಕಾರಿ ಪರವಾನಗಿ ಭೂಮಾಪಕರ ಸಂಘದ ರಾಜ್ಯಾಧ್ಯಕ್ಷ

ಸಂಪಾದಕೀಯ

ಮೇಕೆದಾಟಿಗೆ ವಿಜಯ್ ತಗಾದೆ

ಕರ್ನಾಟಕದ ಜನರಿಗೆ ಕುಡಿಯುವ ನೀರಿಗೆ ಅಗತ್ಯವಾದ ಪ್ರಸ್ತಾವಿತ ಮೇಕೆದಾಟು ಯೋಜನೆಗೆ ತಮಿಳುನಾಡು ಸಿಎಂ ವಿಜಯ್ ಅಡ್ಡಗಾಲು ಹಾಕಿದ್ದಾರೆ. ಆದರೆ ಈ ವಿಚಾರವಾಗಿ ತಮಿಳುನಾಡು ಸಲ್ಲಿಸಿದ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ವಜಾಗೊಳಿಸಿದೆ. ಈ ಮೂಲಕ ವಿಜಯ್‌ಗೆ ಹಿನ್ನಡೆಯಾಗಿದೆ. ಆದರೆ, ತಮಿಳು ಜನರ ಭಾವನೆಯ ವಿಷಯವಾದ ನೀರಿನ ಹಂಚಿಕೆಯ ವಿಚಾರವನ್ನು ವಿಜಯ್ ಕೈಗೆತ್ತಿಕೊಂಡಂತಿದ್ದು, ತಮ್ಮ ಸಿಎಂಗಿರಿಯ ಆರಂಭದ ದಿನಗಳಿಂದಲೇ ತಗಾದೆ ಆರಂಭಿಸಿರುವುದು ಆತಂಕದ ವಿಚಾರ. ಕರ್ನಾಟಕ ಸರಕಾರ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಒದಗಿಸುವ ಪ್ರಮುಖ ಉದ್ದೇಶದಿಂದ ರಾಮನಗರ ಜಿಲ್ಲೆಯ ಮೇಕೆದಾಟು ಬಳಿ ಆಣೆಕಟ್ಟು ನಿರ್ಮಾಣಕ್ಕೆ ಮುಂದಾಗಿದೆ. ಸುಮಾರು 67 ಟಿಎಂಸಿ ನೀರನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಈ ಜಲಾಶಯ ಹೊಂದಿರಲಿದೆ. ತಮಗೆ ದೊರೆಯುವ ಕಾವೇರಿ ನೀರು ಕಡಿತವಾಗಬಹುದು ಎಂಬುದು ಕಾನೂನು ಹೋರಾಟ ಆರಂಭಿಸಿರುವ ತಮಿಳುನಾಡಿನ ಆತಂಕ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕರ್ನಾಟಕ ರಾಜ್ಯದ ಪರವಾಗಿ ನಿಂತಿದೆ. ಕೋರ್ಟ್ ಈ ಹಿಂದಿನ ಆದೇಶದಲ್ಲೇ ಸ್ಪಷ್ಟ ಸೂಚನೆ ನೀಡಿದ್ದು, ತಮಿಳುನಾಡಿನ ಪಾಲಿನ 177 ಟಿಎಂಸಿ ನೀರನ್ನು ಹರಿಸಿ, ಉಳಿದದ್ದನ್ನು ರಾಜ್ಯದ ವಿವೇಚನೆಗೆ ಬಿಟ್ಟಿದೆ. ಆದರೆ ಮೇಕೆದಾಟು ಅಣೆಕಟ್ಟಿನಿಂದ ತಮಿಳುನಾಡಿಗೆ ಬರುವ ಕಾವೇರಿ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಇದು ಕಾವೇರಿ ಜಲವಿವಾದ ನ್ಯಾಯಾಧಿಕರಣ ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆ. ಕೆಳಭಾಗದ ರಾಜ್ಯದ ಒಪ್ಪಿಗೆಯಿಲ್ಲದೆ ನದಿಯ ಮೇಲ್ಭಾಗದಲ್ಲಿ ಯಾವುದೇ ಯೋಜನೆ ಮಾಡುವಂತಿಲ್ಲ ಎಂಬುದು ತಮಿಳುನಾಡು ವಾದ. ಆದರೆ ಮಳೆಗಾಲದಲ್ಲಿ ಕಾವೇರಿ ಜಲಾನಯನ ಪ್ರದೇಶದಿಂದ ಜಲಾಶಯಗಳು ಭರ್ತಿಯಾಗಿ, ಅಪಾರ ಪ್ರಮಾಣದ ಹೆಚ್ಚುವರಿ ನೀರು ತಮಿಳುನಾಡಿನ ಮೂಲಕ ಸಮುದ್ರಪಾಲಾಗುತ್ತದೆ. ಈ ಹೆಚ್ಚುವರಿ ನೀರನ್ನು ಮಾತ್ರ ಮೇಕೆದಾಟುವಿನಲ್ಲಿ ಸಂಗ್ರಹಿಸಲಾಗುತ್ತದೆ. ಸುಪ್ರೀಂ ಕೋರ್ಟ್ ಆದೇಶದಂತೆ ತಮಿಳುನಾಡಿಗೆ ಬಿಡಬೇಕಾದ ನೀರಿನ ಪಾಲನ್ನು ನೀಡಿದ ನಂತರವೇ ಉಳಿಯುವ ನೀರನ್ನು ಸಂಗ್ರಹಿಸಲಾಗುತ್ತದೆ. ಇದರಿಂದ ತಮಿಳುನಾಡಿಗೆ ಯಾವುದೇ ನಷ್ಟವಿಲ್ಲ. ಇದು ಕುಡಿಯುವ ನೀರಿನ ಯೋಜನೆ. ರಾಷ್ಟ್ರೀಯ ಜಲ ನೀತಿ ಪ್ರಕಾರ ಕುಡಿಯುವ ನೀರಿನ ಯೋಜನೆಗಳಿಗೆ ಮೊದಲ ಆದ್ಯತೆ ನೀಡಬೇಕು. ರಾಜ್ಯ ಈಗ ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆಯಲ್ಲಿದೆ. ಈ ಹಂತದಲ್ಲಿ ತಮಿಳುನಾಡಿನ ತಗಾದೆಯನ್ನು ಕಾನೂನು ಹೋರಾಟ ಬಲಿಷ್ಠಗೊಳಿಸುವ ಮೂಲಕ ರಾಜ್ಯ ಸರಕಾರ ಉತ್ತರಿಸಬೇಕಿದೆ.

ಸೊಂಪಾದಕೀಯ

ಕದ್ದು ಸವಿದ ಮೇಕೆ

ರಸ್ತೆಯಲ್ಲಿ ಟೊಮೆಟೊ ಗಾಡಿ ಮಗುಚಿದಾಗ ಟೊಮೆಟೊ ಎತ್ತಿಕೊಂಡು ಓಡಿಹೋಗುವ ಜನ, ಲಿಕ್ಕರ್ ಸಾಗಿಸುವ ವಾಹನ ಪಲ್ಟಿಯಾದಾಗ ಗುಂಡಿನ ಹತ್ತಾರು ಬಾಟಲಿಗಳನ್ನು ಯುದ್ಧದಲ್ಲಿ ಗೆದ್ದ ಮೆಡಲ್‌ಗಳಂತೆ ಎದೆಗವಚಿಕೊಂಡು ಪರಾರಿಯಾಗುವ ಧೀರರು- ಇವನ್ನೆಲ್ಲ ನೋಡಿದ್ದೇವೆ. ಲಖನೌದ ಜನ ಇನ್ನೂ ಸ್ವಲ್ಪ ಮುಂದುವರಿದಿದ್ದಾರೆ. ಮೇಕೆಗಳನ್ನು ಸಾಗಿಸುತ್ತಿದ್ದ ಟ್ರಕ್ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಸ್ಥಳೀಯರು ಅಪಘಾತಕ್ಕೀಡಾದವರನ್ನು ರಕ್ಷಿಸುವ ಬದಲು ರಸ್ತೆಯಲ್ಲಿ ಬಿದ್ದಿದ್ದ ಮೇಕೆಗಳನ್ನು ಹೊತ್ತುಕೊಂಡು ಮನೆಗಳಿಗೆ ಧಾವಿಸಿ ಹೋಗುತ್ತಿದ್ದಾರೆ. ಈ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ನೆಟ್ಟಿಗರು ಅವರ ವರ್ತನೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಲ್ಟಿಯಾದ ಟ್ರಕ್‌ನಲ್ಲಿದ್ದ ಗಾಯಾಳುಗಳನ್ನು ಯಾರಾದರೂ ಬಂದು ರಕ್ಷಿಸುತ್ತಾರೆ ಬಿಡಿ. ಆದರೆ ಮೇಕೆಗಳನ್ನು ರಕ್ಷಿಸುವವರು ಯಾರು? ಪಾಪ, ಅವುಗಳು ಏನು ಮಾಡಬೇಕು? ಅದಕ್ಕಾಗಿಯೇ ಈ ಕರುಣಾಳು ಜನತೆ ಓಡಿಬಂದು ಮೇಕೆಗಳನ್ನು ಒಂದೂ ಬಿಡದಂತೆ ಎತ್ತಿಕೊಂಡು ಅಲ್ಲಿಂದ ಪರಾರಿಯಾಗಿರುವುದು. ಆದರೆ ರಕ್ಷಿಸಲಾದ ಮೇಕೆಗಳಿಗೆ ಇನ್ನೊಂದಷ್ಟು ತಿಂಗಳು ಆಯುಷ್ಯ ಹೆಚ್ಚಿರಬಹುದು ಎಂದು ಭಾವಿಸುವುದೇನೂ ಬೇಕಾಗಿಲ್ಲ. ಬಹುಶಃ ಅಂದೇ ರಾತ್ರಿ ಅವುಗಳನ್ನು ಕುಯ್ದು ಸೊಗಸಾದ ಬಾಡೂಟ ಮಾಡಿರಲೂಬಹುದು. ಯಾಕೆಂದರೆ ಟ್ರಕ್‌ನಲ್ಲಿ ಅವುಗಳನ್ನು ಸಾಗಿಸುತ್ತಿದ್ದುದೇ ಅದಕ್ಕೆ ತಾನೆ? ಯಾವುದೋ ಮಟನ್ ಸ್ಟಾಲ್‌ಗೆ ಹೋಗಬೇಕಿದ್ದ ಟ್ರಕ್‌ನ ಮೇಕೆಗಳು ನೇರವಾಗಿ ಜನರ ಕೈಗೆ ಸೇರಿವೆ ಎನ್ನಲಡ್ಡಿಯಿಲ್ಲ. ಕದ್ದು ತಿಂದ ಮೇಕೆ ಬಲು ರುಚಿ ಎಂದು ಈ ಜನ ಬಾಯಿ ಚಪ್ಪರಿಸಿರಬಹುದು. ಮುಂದೆ ಮೇಕೆಗಳನ್ನು ಕೊಂಡೊಯ್ಯುವ ಟ್ರಕ್‌ಗಳು ಬಂದಾಗ ಅವು ಅಲ್ಲಿಯೇ ಪಲ್ಟಿ ಆಗುವಂತೆ ಮಾಡಿದರೂ ಮಾಡಬಹುದು, ಬಾಯಿ ರುಚಿ ಏನೂ ಮಾಡಿಸುತ್ತೆ ನೋಡಿ.

ಸಂಪಾದಕರ ಸದ್ಯಶೋಧನೆ

ಆಹಾರ ಶಿಕ್ಷಣ

ಜಪಾನ್ ದೇಶದ ಶಾಲೆಗಳಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯು ಕೇವಲ ಹೊಟ್ಟೆ ತುಂಬಿಸುವ ಕಾರ್ಯಕ್ರಮವಲ್ಲ. ಅದು ಶಿಸ್ತು, ಸಮಾನತೆ, ಆರೋಗ್ಯ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಕಲಿಸುವ ಒಂದು ಸುಂದರ ಸಂಸ್ಕಾರ. ಜಪಾನಿನಲ್ಲಿ ಇದನ್ನು 'ಶೋಕುಇಕು' (Shokuiku) ಎಂದು ಕರೆಯುತ್ತಾರೆ, ಅಂದರೆ 'ಆಹಾರ ಶಿಕ್ಷಣ'. ಭಾರತದಂಥ ವೈವಿಧ್ಯಮಯ ಮತ್ತು ಅಭಿವೃದ್ಧಿಶೀಲ ದೇಶಕ್ಕೆ ಜಪಾನ್‌ನ ಈ ಮಾದರಿಯಿಂದ ಕಲಿಯಲು ಹತ್ತು ಹಲವು ವಿಷಯಗಳಿವೆ. ಜಪಾನ್‌ನಲ್ಲಿ ಶಾಲಾ ಊಟವು ಪಠ್ಯಕ್ರಮದ ಒಂದು ಭಾಗವೇ ಆಗಿದೆ. ಮಕ್ಕಳಿಗೆ ಏನು ತಿನ್ನಬೇಕು ಎಂಬುದು ಮಾತ್ರವಲ್ಲ, ಆಹಾರವು ಎಲ್ಲಿಂದ ಬರುತ್ತದೆ, ಅದನ್ನು ಹೇಗೆ ತಯಾರಿಸಲಾಗುತ್ತದೆ ಮತ್ತು ಅದನ್ನು ಗೌರವಿಸುವುದು ಹೇಗೆ ಎಂಬುದನ್ನು ಕಲಿಸಲಾಗುತ್ತದೆ. ಭಾರತದಲ್ಲಿ ನಾವು ಹೆಚ್ಚಾಗಿ ಮಧ್ಯಾಹ್ನದ ಊಟವನ್ನು ಹಸಿವು ನೀಗಿಸುವ ಮಾರ್ಗವಾಗಿ ನೋಡುತ್ತೇವೆ. ಆದರೆ, ಜಪಾನ್ ಮಾದರಿಯು ಊಟದ ಸಮಯವನ್ನು ಒಂದು ತರಗತಿಯಂತೆ ಬಳಸಿಕೊಳ್ಳುತ್ತದೆ. ಜಪಾನ್ ಶಾಲೆಗಳಲ್ಲಿ ವಿಶೇಷವೆಂದರೆ ಅಲ್ಲಿ ಊಟ ಬಡಿಸಲು ಪ್ರತ್ಯೇಕ ಕೆಲಸಗಾರರಿರುವುದಿಲ್ಲ. ವಿದ್ಯಾರ್ಥಿಗಳೇ ಸರದಿಯ ಪ್ರಕಾರ 'ಲಂಚ್ ಸರ್ವರ್'ಗಳಾಗಿ ಕೆಲಸ ಮಾಡುತ್ತಾರೆ. ಅವರು ಬಿಳಿ ಕೋಟು, ಮಾಸ್ಕ್ ಮತ್ತು ಟೋಪಿ ಧರಿಸಿ, ತಮ್ಮ ಸಹಪಾಠಿಗಳಿಗೆ ಶಿಸ್ತಿನಿಂದ ಊಟ ಬಡಿಸುತ್ತಾರೆ. ಶಾಲೆಗಳಲ್ಲಿ ಮಕ್ಕಳಿಗೆ ಇಂಥ ಜವಾಬ್ದಾರಿ ನೀಡುವುದರಿಂದ ಅವರಲ್ಲಿ ನಾಯಕತ್ವದ ಗುಣ ಮತ್ತು ಕೆಲಸದ ಬಗ್ಗೆ ಗೌರವ (Dignity of Labour) ಮೂಡುತ್ತದೆ. ಮೇಲು-ಕೀಳು ಎಂಬ ಭಾವನೆ ಅಳಿದುಹೋಗುತ್ತದೆ. ಜಪಾನ್‌ನಲ್ಲಿ ಶ್ರೀಮಂತ ಅಥವಾ ಬಡವ ಎನ್ನುವ ಭೇದವಿಲ್ಲದೇ ಎಲ್ಲ ಮಕ್ಕಳು ಒಂದೇ ರೀತಿಯ ಊಟವನ್ನು ಮಾಡುತ್ತಾರೆ. ಶಿಕ್ಷಕರು ಕೂಡ ಮಕ್ಕಳೊಂದಿಗೆ ಕುಳಿತು ಅದೇ ಆಹಾರವನ್ನು ಸೇವಿಸುತ್ತಾರೆ. ಇದು ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ ಮತ್ತು ಮಕ್ಕಳಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಗಟ್ಟಿಗೊಳಿಸುತ್ತದೆ. ಜಪಾನ್‌ನ ಶಾಲಾ ಊಟದ ಮೆನುವನ್ನು ಪೌಷ್ಟಿಕಾಂಶ ತಜ್ಞರು ಸಿದ್ಧಪಡಿಸುತ್ತಾರೆ. ಇದರಲ್ಲಿ ಹೆಚ್ಚಾಗಿ ತಾಜಾ ತರಕಾರಿಗಳು, ಮೀನು, ಅನ್ನ ಮತ್ತು ಸೂಪ್ ಇರುತ್ತದೆ. ವಿಶೇಷವೆಂದರೆ, ಆಯಾ ಭಾಗದ ರೈತರು ಬೆಳೆದ ಸ್ಥಳೀಯ ಬೆಳೆಗಳನ್ನೇ ಬಳಸಲಾಗುತ್ತದೆ. ಭಾರತದ ಪ್ರತಿ ರಾಜ್ಯಕ್ಕೂ ತನ್ನದೇ ಆದ ಪೌಷ್ಟಿಕ ಆಹಾರ ಪದ್ಧತಿಯಿದೆ. ನಮ್ಮ ಶಾಲೆಗಳಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಿರಿಧಾನ್ಯಗಳು ಮತ್ತು ತರಕಾರಿಗಳನ್ನು ಬಳಸುವುದರಿಂದ ರೈತರಿಗೆ ನೆರವಾಗುವುದಲ್ಲದೇ, ಮಕ್ಕಳ ಆರೋಗ್ಯವೂ ಸುಧಾರಿಸುತ್ತದೆ. ಊಟ ಮುಗಿದ ನಂತರ ಜಪಾನ್ ಮಕ್ಕಳು ತಮ್ಮ ತಟ್ಟೆಗಳನ್ನು ತಾವೇ ತೊಳೆದು ನಿರ್ದಿಷ್ಟ ಜಾಗದಲ್ಲಿ ಇಡುತ್ತಾರೆ. ಹಾಲಿನ ಪ್ಯಾಕೆಟ್‌ಗಳನ್ನು ಮರುಬಳಕೆಗೆ ಅನುಕೂಲವಾಗುವಂತೆ ಹರಿದು ಒಣಗಿಸಿ ಇಡುತ್ತಾರೆ. ಊಟದ ನಂತರ ತರಗತಿಯನ್ನು ಗುಡಿಸಿ ಸ್ವಚ್ಛಗೊಳಿಸುವುದು ಅವರ ದಿನಚರಿಯ ಭಾಗ. ನಾವು ಶಾಲೆಗಳಲ್ಲಿ 'ಸ್ವಚ್ಛ ಭಾರತ' ಅಭಿಯಾನವನ್ನು ಯಶಸ್ವಿಗೊಳಿಸಬೇಕಾದರೆ ಜಪಾನ್‌ನ ಈ ಮಾದರಿ ಅತ್ಯುತ್ತಮ ಉದಾಹರಣೆ. ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದನ್ನು ಬಾಲ್ಯದಲ್ಲೇ ರೂಢಿಸಿಕೊಳ್ಳುತ್ತಾರೆ. ಊಟಕ್ಕೆ ಮೊದಲು ಜಪಾನಿಯರು 'ಇತಡಕಿಮಸು' (Itadakimasu) ಎಂದು ಹೇಳುತ್ತಾರೆ, ಅಂದರೆ 'ಈ ಆಹಾರವನ್ನು ನಾನು ವಿನಯದಿಂದ ಸ್ವೀಕರಿಸುತ್ತೇನೆ.' ಇದು ರೈತರಿಗೆ, ಅಡುಗೆಯವರಿಗೆ ಮತ್ತು ಪ್ರಕೃತಿಗೆ ಸಲ್ಲಿಸುವ ಗೌರವ. ಭಾರತೀಯ ಸಂಸ್ಕೃತಿಯಲ್ಲಿ 'ಅನ್ನದಾತೋ ಸುಖೀಭವ' ಎಂಬ ಪರಿಕಲ್ಪನೆಯಿದೆ. ಇದನ್ನು ಕೇವಲ ಮಾತಿನಲ್ಲಿ ಉಳಿಸದೆ, ಊಟದ ಮೇಜಿನ ಮೇಲೆ ಆಚರಣೆಗೆ ತರುವ ಅಗತ್ಯವಿದೆ. ಜಪಾನ್‌ನ ಶಾಲಾ ಊಟದ ಪದ್ಧತಿಯು ಕೇವಲ ಒಂದು ದೇಶದ ಯಶಸ್ಸಲ್ಲ, ಅದು ಒಂದು ಸುಸಂಸ್ಕೃತ ಸಮಾಜದ ನಿರ್ಮಾಣದ ತಳಹದಿ. ಭಾರತವು ಇಂದು ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿರುವಾಗ, ನಮ್ಮ ಮುಂದಿನ ಪೀಳಿಗೆಯನ್ನು ಕೇವಲ ಅಂಕ ಗಳಿಸುವ ಯಂತ್ರಗಳನ್ನಾಗಿ ಮಾಡದೇ, ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡಬೇಕಿದೆ. ಜಪಾನ್‌ನ ಈ 'ಹಸಿರು ಮತ್ತು ಶಿಸ್ತಿನ' ಊಟದ ಮಾದರಿಯು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸಣ್ಣ ಮಟ್ಟದಲ್ಲಾದರೂ ಆರಂಭವಾಗಲಿ ಎಂಬುದು ಇಂದಿನ ಆಶಯ. ಕೇವಲ ಹೊಟ್ಟೆ ತುಂಬಿಸುವುದು ದಾನ, ಆದರೆ, ಹೇಗೆ ಬದುಕಬೇಕು ಮತ್ತು ಪ್ರಕೃತಿಯನ್ನು ಹೇಗೆ ಗೌರವಿಸಬೇಕು ಎಂದು ಕಲಿಸುವುದು ನಿಜವಾದ ಶಿಕ್ಷಣ. ಜಪಾನ್ ಈ ನಿಟ್ಟಿನಲ್ಲಿ ನಮಗೆ ದಾರಿದೀಪವಾಗಿದೆ.

ಕುರ್ಚಿ ಕಾಳಗ: ದಿಲ್ಲಿ ಅಂಗಳದಲ್ಲಿ ಗೆದ್ದವರು ಯಾರು?

ರಾಜ್ಯಸಭೆಯ 4 ಸ್ಥಾನಗಳಿಗೆ ಅಭ್ಯರ್ಥಿ ಆಯ್ಕೆ ಮಾಡಲು ಬೆಳಗ್ಗಿನಿಂದ ಸಂಜೆ ತನಕ ಸಭೆ ನಡೆಸುವ ಅಗತ್ಯ ಇಲ್ಲ ಎನ್ನುವುದು ಸಾಮಾನ್ಯ ಜ್ಞಾನ. ಹಾಗಾಗಿ, ಸಿದ್ದರಾಮಯ್ಯ ಅವರ ಮನವೊಲಿಸಲು ರಾಹುಲ್ ಸೇರಿ ದಿಲ್ಲಿ ನಾಯಕರು ಪ್ರಯತ್ನ ಮಾಡಿರಬಹುದೇ ಎಂಬ ಸಹಜ ಅನುಮಾನ ಮೂಡಿದೆ.

ಜನಪಥ
ರಾಘವ ಶರ್ಮಾ ನಿಡ್ಲೆ
vveditoped@gmail.com

ಕರ್ನಾಟಕದ ಮುಖ್ಯಮಂತ್ರಿ ಬದಲಾಗುತ್ತಾರಾ? ಸಿದ್ದರಾಮಯ್ಯ ರಾಜೀನಾಮೆ ಸನಿಹವಾಗುತ್ತಿದೆಯೇ? ಪಕ್ಷದ ಭವಿಷ್ಯದ ದೃಷ್ಟಿಯಿಂದ ಸಿಎಂ ರಾಜೀನಾಮೆ ಅನಿವಾರ್ಯವಾಗುವುದೇ ಅಥವಾ ಸಿದ್ದರಾಮಯ್ಯರ ಆಶಯದಂತೆ 5 ವರ್ಷದ ಮತ್ತೊಂದು ಅವಧಿ ಪೂರ್ಣಗೊಳಿಸಲು ಹೈಕಮಾಂಡ್ ಅವಕಾಶ ನೀಡುವುದೇ? ಹಾಗಿದ್ದರೆ 2.5 ವರ್ಷದ ಬಳಿಕ ಅಧಿಕಾರ ಹಸ್ತಾಂತರ ಮಾಡಲಾಗುವುದು ಎಂದು ಡಿಸಿಎಂ ಡಿಕೆ ಶಿವಕುಮಾರ್‌ಗೆ ಹೈಕಮಾಂಡ್ ಭರವಸೆ ನೀಡಿದ್ದು ಸುಳ್ಳೇ? ಸಿಎಂ ಹುದ್ದೆ ನೀಡದಿದ್ದರೆ ಶಿವಕುಮಾರ್ ಸುಮ್ಮನಿರುತ್ತಾರಾ? ಕಳೆದ ಆರೇಳು ತಿಂಗಳುಗಳಿಂದ ರಾಜ್ಯದಲ್ಲಿ ಹೆಚ್ಚು ಚರ್ಚೆ, ಗೊಂದಲಕ್ಕೀಡು ಮಾಡಿದ ಪ್ರಶ್ನೆಗಳಿವು.

ಕರ್ನಾಟಕದಲ್ಲಿ ಸಿದ್ದರಾಮಯ್ಯರ ಬದಲಿಗೆ ಹೊಸ ನಾಯಕತ್ವವನ್ನು ತರುವ ಉದ್ದೇಶ ರಾಹುಲ್ ಗಾಂಧಿಯಲ್ಲಿ ಖಂಡಿತಾ ಇಲ್ಲ ಎನ್ನುವುದು ಪ್ರಾರಂಭದಲ್ಲಿ ಕೇಳುತ್ತಿದ್ದ ಮಾತುಗಳು. ಇತರೆ ಹಿಂದುಳಿತ ವರ್ಗದ (ಒಬಿಸಿ) ಪ್ರಬಲ ನಾಯಕನೊಬ್ಬನನ್ನು ಅಧಿಕಾರದಿಂದ ಕೆಳಗಿಳಿಸಿ, ಪ್ರಭಾವಿ ಒಕ್ಕಲಿಗ ಸಮುದಾಯದ ಡಿ.ಕೆ. ಶಿವಕುಮಾರರನ್ನು ಮುಖ್ಯಮಂತ್ರಿ ಮಾಡಲು ರಾಹುಲ್ ಗಾಂಧಿ ಒಪ್ಪಿರಲಿಲ್ಲ. ಕಳೆದ ಕೆಲ ವರ್ಷಗಳಿಂದ ದೇಶದ ಒಬಿಸಿ ಮತವರ್ಗವನ್ನು ಗುರಿಯಾಗಿಸಿಕೊಂಡು ರಾಜಕಾರಣ ಮಾಡುತ್ತಿರುವ ರಾಹುಲ್ ಗಾಂಧಿ, ರಾಜಕೀಯವಾಗಿ ಮಹತ್ವ ಹೊಂದಿರುವ ಕರ್ನಾಟಕದಲ್ಲಿ ಒಬಿಸಿ ನಾಯಕತ್ವವನ್ನು ಕೊನೆಗೊಳಿಸುವ ಅಪಕೀರ್ತಿಗೆ ಪಾತ್ರವಾಗುವ ಸಾಹಸಮಯ ತೀರ್ಮಾನವನ್ನು ನಾವು ಕೈಗೊಳ್ಳುವುದು ಬೇಡ. ಸಿದ್ದರಾಮಯ್ಯ ಅವರೇ ರಾಜ್ಯವನ್ನು ಮುನ್ನಡೆಸಲಿ. ಡಿಕೆಶಿ ಅವರಿಗೆ ಇನ್ನೂ ಅವಕಾಶಗಳಿವೆ ಎಂಬುದಾಗಿ ಈ ಹಿಂದೆ ಕೂಡ ಸೂಚ್ಯವಾಗಿ ತಿಳಿಸಿದ್ದರು. ಆದರೆ ಬದಲಾದ ಸನ್ನಿವೇಶ ಹಾಗೂ ರಾಜ್ಯದಲ್ಲಿ ಪಕ್ಷ ಮತ್ತು ನಾಯಕತ್ವದ ಭವಿಷ್ಯದ ದೃಷ್ಟಿಯಿಂದ ರಾಹುಲ್ ಆಲೋಚನೆಯಲ್ಲಿ ಬದಲಾವಣೆ ಆಗಿದೆಯೇ ಎಂಬ ಮಾತುಗಳು ದಿಲ್ಲಿ ಅಂಗಳದಿಂದ ಕೇಳಿಬರುತ್ತಿದೆ. ಮಂಗಳವಾರದ ಸುದೀರ್ಘ ಸಭೆಯಲ್ಲಿ ರಾಹುಲ್ ತಮ್ಮ ಹಿಂದಿನ ನಿಲುವನ್ನು ಪುನರುಚ್ಚರಿಸಿದ್ದಾರೆ ಎಂದು ಸಿದ್ದರಾಮಯ್ಯ ಬೆಂಬಲಿಗ ವರ್ಗ ಹೇಳಿಕೊಂಡರೂ, ಸಿದ್ದು ರಾಜೀನಾಮೆ ನೀಡುವುದು ನಿಶ್ಚಿತ ಎಂದು ಡಿಕೆಶಿ ಆಪ್ತ ಬಳಗ ಒತ್ತಿ ಹೇಳುತ್ತಿದೆ.

ಬಿಹಾರ ಚುನಾವಣೆ ಸೋಲಿನ ನಂತರವಂತೂ ಒಬಿಸಿ ಮತವರ್ಗದ ವಿಚಾರದಲ್ಲಿ ರಾಹುಲ್ ತಮ್ಮ ನಿಲುವನ್ನು ಮತ್ತಷ್ಟು ಬಿಗಿಗೊಳಿಸಿದ್ದರು. ಈ ವಿಚಾರವನ್ನು ಡಿಕೆಶಿಗೂ ದಿಲ್ಲಿ ಪ್ರತಿನಿಧಿಗಳ ಮೂಲಕ ತಿಳಿಸಲಾಗಿತ್ತು. ಹಾಗಂತ ಡಿಕೆ ಅವರೇನೂ ಸನ್ಯಾಸಿಯಲ್ಲ. ಸಿಎಂ ಸ್ಥಾನ ಪಡೆಯುವ ಪ್ರಯತ್ನಗಳನ್ನು ಮುಂದುವರಿಸಿದ್ದಾರೆ. ಒಬಿಸಿ, ಮೇಲ್ವರ್ಗದ ಲೆಕ್ಕಾಚಾರಗಳನ್ನು ಕರ್ನಾಟಕದೊಂದಿಗೆ ಹೋಲಿಸಿ, ನನ್ನ ಕೆಲಸಗಳನ್ನು ಕಡೆಗಣಿಸಬೇಡಿ, ಕೊಟ್ಟ ಮಾತನ್ನು ಉಳಿಸಿಕೊಳ್ಳಿ ಎಂದು ದಿಲ್ಲಿ ನಾಯಕರಿಗೆ ಸ್ಪಷ್ಟಪಡಿಸುತ್ತಾ ಬಂದಿದ್ದಾರೆ. ಮಂಗಳವಾರ ದಿಲ್ಲಿಯಲ್ಲಿ ಅದನ್ನೇ ಮಾಡಿದ್ದಾರೆ.

ಒಂದುವೇಳೆ ಸಿಎಂ ಬದಲಾವಣೆ ಮಾಡಲೇಬೇಕಾದ ಸನ್ನಿವೇಶ ಸೃಷ್ಟಿಯಾದರೂ, ದಿಲ್ಲಿ ದೊರೆಗಳು ದಲಿತರೊಬ್ಬರನ್ನು ಸಿಎಂ ಮಾಡುತ್ತಾರೆಯೇ ವಿನಃ ಪ್ರಬಲ ಒಕ್ಕಲಿಗ ಸಮುದಾಯಕ್ಕೆ ನಾಯಕತ್ವ ಕುರ್ಚಿಯನ್ನು ಹಸ್ತಾಂತರ ಮಾಡುವ ಸ್ಥಿತಿಯಲ್ಲಿ ಇಲ್ಲ ಎನ್ನುವುದು ಕೆಲ ಕಾಂಗ್ರೆಸ್ ನಾಯಕರ ಅಂಬೋಣ.

ಇಂಥದ್ದೊಂದು ಅಭಿಪ್ರಾಯಕ್ಕೆ ಕಾರಣವೂ ಇಲ್ಲದಿಲ್ಲ. ಸದ್ಯ ದೇಶದ 4 ರಾಜ್ಯಗಳಲ್ಲಷ್ಟೇ ಕಾಂಗ್ರೆಸ್ ನೇತೃತ್ವದ ಸರ್ಕಾರಗಳಿದ್ದು, ಮೂರು ರಾಜ್ಯಗಳಲ್ಲಿ ಮೇಲ್ವರ್ಗಕ್ಕೆ ಸೇರಿದ ವ್ಯಕ್ತಿಗಳೇ ಮುಖ್ಯಮಂತ್ರಿಗಳಾಗಿದ್ದಾರೆ. ಕೆಲ ದಿನಗಳ ಹಿಂದಷ್ಟೇ ಕೇರಳ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿರುವ ವಿ.ಡಿ. ಸತೀಶನ್ ಅವರು ನಾಯರ್ ಸಮುದಾಯ, ತೆಲಂಗಾಣ ಕಾಂಗ್ರೆಸ್ ಸರ್ಕಾರವನ್ನು ಮುನ್ನಡೆಸುತ್ತಿರುವ ರೇವಂತ ರೆಡ್ಡಿ ಅವರು ರೆಡ್ಡಿ ಸಮುದಾಯ ಹಾಗೂ ಹಿಮಾಚಲ ಪ್ರದೇಶದ ಸಿಎಂ ಸುಖ್ವಿಂದರ್ ಸಿಂಗ್ ಸುಖ್ಖು ಅವರೂ ರಾಜ್ಯದ 35%ಗಿಂತಲೂ ಹೆಚ್ಚು ಜನಸಂಖ್ಯೆ ಇರುವ ರಜಪೂತ ಎಂಬ ಮೇಲ್ಜಾತಿಗೆ ಸೇರಿದ್ದಾರೆ. ಕರ್ನಾಟಕದಲ್ಲಿ ಮಾತ್ರ ಒಬಿಸಿ ಸಮುದಾಯದ ನಾಯಕತ್ವಕ್ಕೆ ಪ್ರಾಧಾನ್ಯತೆ ಸಿಕ್ಕಿರುವುದರಿಂದ, ಕಾಂಗ್ರೆಸ್ ರಾಷ್ಟ್ರಾದ್ಯಂತ ಎದುರಿಸುತ್ತಿರುವ ಸವಾಲಿನ ರಾಜಕೀಯ ಸನ್ನಿವೇಶದಲ್ಲಿ ಒಬಿಸಿ ಮತಗಳನ್ನು ಡಿಸ್ಟರ್ಬ್ ಮಾಡುವುದು ಜೇನುಗೂಡಿಗೆ ಕೈ ಹಾಕಿದಂತಾಗಲಿದೆ.

ರಾಜ್ಯ ಕಾಂಗ್ರೆಸ್‌ನ ಬಹುಪಾಲು ಶಾಸಕರು ನನ್ನ ಬೆಂಬಲಕ್ಕಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿಕೊಳ್ಳಬಹುದು. ಆದರೆ, ಹೈಕಮಾಂಡ್ ಒಲವು ಡಿಕೆಶಿ ಕಡೆ ವಾಲುತ್ತಿದೆ ಎಂಬ ಸಣ್ಣ ಸುಳಿವು ಸಿಕ್ಕರೂ ಬಹುಪಾಲು ಶಾಸಕರು ತಮ್ಮ ಒಲವನ್ನೂ ಡಿಕೆಶಿ ಕಡೆ ಶಿಫ್ಟ್ ಮಾಡುತ್ತಾರೆ. ಅವರು ತಮ್ಮ ಭವಿಷ್ಯ ನೋಡುತ್ತಾರೆಯೇ ವಿನಃ ನಿರ್ಗಮಿಸುವ ನಾಯಕನೊಂದಿಗೆ ಗುರುತಿಸಿಕೊಳ್ಳುವುದಿಲ್ಲ. ಆದರೆ, ಹೈಕಮಾಂಡ್ ಸಿದ್ದರಾಮಯ್ಯರ ಜತೆಗಿದೆ ಎಂಬ ನರೇಟಿವ್ ಚಾಲ್ತಿಯಲ್ಲಿದ್ದು, ಅವರು ಪೂರ್ಣಾವಧಿಗೆ ಸಿಎಂ ಆಗಿ ಇರುತ್ತಾರೆ ಎಂಬ ಚರ್ಚೆಗಳಿವೆ. ಹೀಗಿದ್ದಾಗ, ಸಿದ್ದರಾಮಯ್ಯರೊಂದಿಗೆ ಗುರುತಿಸಿಕೊಳ್ಳುವುದು ಶಾಸಕರಿಗೂ ಅನಿವಾರ್ಯ.

ದೆಹಲಿಯಲ್ಲಿ ನಡೆದ ರಾಜಕೀಯ ಸರ್ಕಸ್, ಸುದೀರ್ಘ ಸಭೆಗಳು, ಸಿಎಂ ಸಿದ್ದರಾಮಯ್ಯರ ವಾದಗಳನ್ನು ಕೇಳುವುದು ಹಾಗೂ ಡಿಕೆ ಅವರನ್ನು ಸಮಾಧಾನಪಡಿಸುವ ಜತೆಗೆ ರಾಷ್ಟ್ರ ರಾಜಕೀಯ ಸಮೀಕರಣಗಳ ಮನವರಿಕೆ ಮಾಡುವುದಕ್ಕಷ್ಟೇ ಸೀಮಿತವಾಗಿಲ್ಲ. ಸಿದ್ದರಾಮಯ್ಯ ಅವರನ್ನು ರಾಜ್ಯಸಭೆ ಸದಸ್ಯರಾಗಿ ಬನ್ನಿ ಎಂಬ ಆಹ್ವಾನ ನೀಡಲಾಗಿದ್ದು, ಅವರು ಅದನ್ನು ತಿರಸ್ಕರಿಸಿರುವ ಮಾಹಿತಿಯಿದೆ. 2 ವರ್ಷ ನಾನು ಸಿಎಂ ಆಗಿರುತ್ತೇನೆ, ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಸಿದ್ದರಾಮಯ್ಯರು ರಾಹುಲ್‌ಗೆ ನೇರವಾಗಿ ತಿಳಿಸಿದ್ದಾರೆ. ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆಗಳ ಪ್ರಾಥಮಿಕ ಹಂತದ ಚರ್ಚೆಗಳೂ ನಡೆದಿದ್ದರೂ, ಸಿದ್ದರಾಮಯ್ಯ ತಮ್ಮ ಸಿಎಂ ಸ್ಥಾನ ಭದ್ರಗೊಳಿಸುವುದಕ್ಕೆ ಒತ್ತು ನೀಡಿದ್ದಾರೆ.

ಮಂಗಳವಾರ ಸಂಜೆ ಕೆಸಿ ವೇಣುಗೋಪಾಲ್ ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕಾಂಗ್ರೆಸ್ ಕೇಂದ್ರ ಕಚೇರಿ ಎದುರು ಮಾಧ್ಯಮಗಳ ಮುಂದೆ ನಾಯಕತ್ವದ ಊಹಾಪೋಹಗಳಿಗೆ ತೆರೆ ಎಳೆಯುವ ಯತ್ನ ಮಾಡಿದರೂ, ಹೊಸ ಸಿಎಂ ಬರುತ್ತಾರೋ ಇಲ್ಲವೋ ಎಂಬ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರ ಕೊಡುವ ಗೋಜಿಗೆ ಹೋಗಿಲ್ಲ. ಹೀಗಾಗಿ, ನಾಯಕತ್ವ ಬದಲಾವಣೆ ಚರ್ಚೆ ಸದ್ಯಕ್ಕೆ ಹಾಗೆಯೇ ಉಳಿದುಕೊಂಡಿದೆ. ರಾಜ್ಯಸಭೆಯ 4 ಸ್ಥಾನಗಳಿಗೆ ಅಭ್ಯರ್ಥಿ ಆಯ್ಕೆ ಮಾಡಲು ಬೆಳಗ್ಗಿನಿಂದ ಸಂಜೆ ತನಕ ಸಭೆ ನಡೆಸುವ ಅಗತ್ಯ ಇಲ್ಲ ಎನ್ನುವುದು ಸಾಮಾನ್ಯ ಜ್ಞಾನ. ಹಾಗಾಗಿ, ಸಿದ್ದರಾಮಯ್ಯರ ಮನವೊಲಿಸಲು ರಾಹುಲ್ ಸೇರಿ ದಿಲ್ಲಿ ನಾಯಕರು ಪ್ರಯತ್ನ ಮಾಡಿರಬಹುದೇ ಎಂಬ ಸಹಜ ಅನುಮಾನ ಮೂಡಿದೆ.

ಸಿದ್ದರಾಮಯ್ಯ ಇನ್ನು ಸಿಎಂ ಆಗಿ ಮುಂದುವರಿಯಬಾರದು, ಒಟ್ಟು 8 ವರ್ಷ ಅವರು ಆ ಹುದ್ದೆಯಲ್ಲಿರುವುದಕ್ಕೆ ನಾವು ಸಹಕಾರ ನೀಡಿಲ್ಲವೇ ಎಂದು ಪ್ರಶ್ನಿಸುತ್ತಿರುವ ಶಿವಕುಮಾರ್‌ಗೆ 2028ರಲ್ಲಿ ಮತ್ತೆ ಅಧಿಕಾರಕ್ಕೆ ಬರುವ ಖಚಿತತೆ ಈಗ ಇಲ್ಲ. ನನಗೆ ನಾಯಕತ್ವ ನೀಡಿದರಷ್ಟೇ ಶಕ್ತಿಮೀರಿ ಪ್ರಯತ್ನಿಸಬಲ್ಲೆ ಎಂದಿದ್ದಾರೆ. ಈಗ ಸಿಎಂ ಆಗದಿದ್ದರೆ ಮುಂದೆಯೂ ಇಲ್ಲ ಎಂಬ ಸ್ಪಷ್ಟ ನಿಲುವಿಗೆ ಅವರು ಬಂದಂತಿದೆ. ಈ ಮಧ್ಯೆ ಸಿದ್ದರಾಮಯ್ಯ ಕೆಳಗಿಳಿದರೂ, ಶಿವಕುಮಾರ್ ಯಾವುದೇ ಕಾರಣಕ್ಕೆ ಮುಖ್ಯಮಂತ್ರಿಯಾಗಬಾರದು ಎಂದು ಸಿದ್ದರಾಮಯ್ಯರ ಬೆಂಬಲಿಗರು ಹೋರಾಟ ಮಾಡುತ್ತಿದ್ದಾರೆ. ಸಿಎಂ-ಡಿಸಿಎಂ ಒಗ್ಗಟ್ಟು ಸಾರ್ವಜನಿಕ ವೇದಿಕೆಗಳಿಗಳಿಗಷ್ಟೇ ಸೀಮಿತ. ಈ ಕಿತ್ತಾಟ ಭವಿಷ್ಯದಲ್ಲೂ ಮುಂದುವರಿಯಬಹುದು. ಬಹಳ ಅಪರೂಪಕ್ಕೆ ಬಹುಮತ ಪಡೆದ ಸರ್ಕಾರವೊಂದು, ಅಭಿವೃದ್ಧಿಯಲ್ಲಿ ಹಿಂದೆ ಬೀಳುವ ಜತೆಗೆ, ನಾಯಕತ್ವದ ಬಿಕ್ಕಟ್ಟಿನೊಂದಿಗೆ ಜನರನ್ನೂ ಗೊಂದಲದಲ್ಲಿ ಸಿಲುಕಿಸಿರುವುದು ರಾಜ್ಯದ ದುರ್ದೈವ ಎನ್ನದೆ ವಿಧಿಯಿಲ್ಲ.

ಜೈರಾಮ್, ಮಾಕೆನ್ ಕೊಡುಗೆಯೇನು?

ರಾಜ್ಯದಿಂದ ನಾಲ್ಕು ರಾಜ್ಯಸಭೆ ಸೀಟುಗಳು ಖಾಲಿಯಾಗುತ್ತಿರುವ ಮಧ್ಯೆ ಕಾಂಗ್ರೆಸ್ ನಾಯಕ ಪವನ್ ಖೇರಾ ಮತ್ತು ರಾಷ್ಟ್ರೀಯ ವಕ್ತಾರೆ ಸುಪ್ರಿಯಾ ಶ್ರೀನಾತೆ ಕರ್ನಾಟಕದಿಂದ ರಾಜ್ಯಸಭೆ ಪ್ರವೇಶ ಮಾಡುವ ಯತ್ನದಲ್ಲಿದ್ದಾರೆ. ಈಗಾಗಲೇ ಮಾಜಿ ಕೇಂದ್ರ ಸಚಿವ ಅಜಯ್ ಮಾಕೆನ್ ಮತ್ತು ಜೈರಾಮ್ ರಮೇಶ್ ಅವರು ಕರ್ನಾಟಕದಿಂದ ರಾಜ್ಯಸಭೆ ಸದಸ್ಯರಾಗಿದ್ದು, ಕರ್ನಾಟಕದ ಮಟ್ಟಿಗೆ ಅವರದ್ದು ಶೂನ್ಯ ಸಂಪಾದನೆ. ಕರ್ನಾಟಕದ ಜ್ವಲಂತ ವಿಚಾರಗಳನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾಗಲೀ, ಕರ್ನಾಟಕ ಪ್ರವಾಸ ಮಾಡಿ ಜನರ ಸಮಸ್ಯೆಗಳನ್ನು ಆಲಿಸಿದ್ದಾಗಲೀ, ರಾಜ್ಯದ ಬೇಡಿಕೆಗಳನ್ನು ಕೇಂದ್ರದ ಮುಂದಿಟ್ಟು ಪ್ರಭಾವ ಬೀರಿರುವ ಉದಾಹರಣೆ ಇದೆಯೇ ಎಂದು ಹುಡುಕಾಡುವ ಪರಿಸ್ಥಿತಿ ಇದೆ. ಹೀಗಿದ್ದಾಗ, ಪವನ್ ಖೇರಾ ಅಥವಾ ಸುಪ್ರಿಯಾ ಶ್ರೀನಾತೆ ಹೆಸರು ಪ್ರಸ್ತಾಪವಾಗುವುದೇ ತಪ್ಪು. ರಾಜ್ಯದ ಹಿತಾಸಕ್ತಿಗಾಗಿ ದುಡಿಯದ ವ್ಯಕ್ತಿಗಳಿಗೆ ರಾಜ್ಯಸಭೆ ಸದಸ್ಯತ್ವ ನೀಡುವ ದರ್ದು ರಾಜಕೀಯ ಪಕ್ಷಗಳಿಗೆ ಬರಬಾರದು. ಅಷ್ಟರಮಟ್ಟಿಗೆ ಪಕ್ಷಗಳು ದಿಲ್ಲಿ ನಾಯಕರ ಮುಂದೆ ತಮ್ಮ ಸ್ವಾಭಿಮಾನವನ್ನು ಪ್ರದರ್ಶಿಸಬೇಕು. ಅನ್ಯ ರಾಜ್ಯದವರನ್ನು ಕರ್ನಾಟಕದಿಂದ ರಾಜ್ಯಸಭೆಗೆ ಕಳುಹಿಸುವ ಕೆಟ್ಟ ಪರಂಪರೆ ನಮಗೆ ಹೊಸತೇನಲ್ಲ, ಆದರೆ, ತಮ್ಮನ್ನು ಆಯ್ಕೆ ಮಾಡಿದ ರಾಜ್ಯಕ್ಕೆ ನಿಷ್ಠರಾಗಿ ಕೆಲಸ ಮಾಡಿದವರನ್ನು ದುರ್ಬೀನು ಹಾಕಿ ಹುಡುಕಬೇಕಿದೆ. ರಾಜ್ಯಸಭೆ ಸದಸ್ಯತ್ವ ಪಡೆಯಲು ರಾಜ್ಯದ ಮೇಲೆ ಪ್ರೀತಿ, ಅಭಿಮಾನ ತೋರುವುದು ಬಿಟ್ಟರೆ ಜನರ ಮೇಲೆ ಅವರಿಗೆ ನೈಜ ಕಾಳಜಿ ಇರುವುದಿಲ್ಲ, ಅಷ್ಟೇ ಅಲ್ಲ, ಅನರ್ಹರನ್ನು ರಾಜ್ಯಸಭೆಯಂತಹ ಘನ ಚಿಂತಕರ ವೇದಿಕೆಗೆ ಕಳುಹಿಸಿಕೊಡುವುದು ಕೂಡ ಜನರಿಗೆ ವಂಚಿಸಿದಂತೆ. ಬಿಜೆಪಿಯಿಂದ ಆಯ್ಕೆಯಾದ ಕೊರಗಪ್ಪ ನಾರಾಯಣ, ಈರಣ್ಣ ಕಡಾಡಿ, ಜಗ್ಗೇಶ್ ರಾಜ್ಯಸಭೆ ಸದಸ್ಯರಾಗಿ ಏನು ಕೊಡುಗೆ ನೀಡಿದ್ದಾರೆ ಎಂಬ ಪ್ರಶ್ನೆ ನನ್ನಂತೆ ಅನೇಕರನ್ನು ಕಾಡುತ್ತದೆ. ಇದೇ ಕಾರಣಕ್ಕೆ, ಇಂಥವರನ್ನು ಯಾಕಾದರೂ ಆಯ್ಕೆ ಮಾಡುತ್ತಾರಪ್ಪಾ ಎಂದು ಬಿಜೆಪಿಯವರೇ ಕೊರಗುತ್ತಾರೆ. ಇವರೆಲ್ಲ ರಾಜ್ಯಸಭೆ ಸದಸ್ಯರಾಗಿ ಕರ್ನಾಟಕದ ಪರ ಮಾಡಿದ ತಮ್ಮ ಸಾಧನೆಗಳ ಪಟ್ಟಿಯನ್ನು ಆಗಾಗ ಪ್ರಕಟಪಡಿಸಿದರೆ, ಸಾರ್ವಜನಿಕರಲ್ಲಿರುವ ಅನುಮಾನವಾದರೂ ಬಗೆಹರಿಯುತ್ತದೆ..!

ವಿಜಯೇಂದ್ರ ಸೇಫ್?

ಮಾಜಿ ಸಿಎಂ ಯಡಿಯೂರಪ್ಪ ಅಭಿಮಾನೋತ್ಸವದ ಯಶಸ್ಸಿನ ಬಗ್ಗೆ ಗೃಹ ಸಚಿವ ಅಮಿತ್ ಶಾ ಕೂಡ ಖುಷಿಯಾಗಿರುವುದು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನಾಯಕತ್ವಕ್ಕೆ ಪ್ಲಸ್ ಪಾಯಿಂಟ್ ಆಗಿರುವ ಮಧ್ಯೆ, ಕೆಲ ದಿನಗಳ ಹಿಂದೆ ದಿಲ್ಲಿಯಿಂದ ಬಂದ ವರಿಷ್ಠ ನಾಯಕರು ರಾಜ್ಯ ಬಿಜೆಪಿಯ 30 ನಾಯಕರೊಂದಿಗೆ ಮಾತನಾಡಿ, ರಾಜ್ಯ ಬಿಜೆಪಿ ನಾಯಕತ್ವ ಹಾಗೂ ಪಕ್ಷದ ಒಟ್ಟಾರೆ ಸ್ಥಿತಿ-ಗತಿ ಬಗ್ಗೆ ಅಭಿಪ್ರಾಯ ಸಂಗ್ರಹ ಮಾಡಿದ್ದಾರೆ. ವಿಜಯೇಂದ್ರರ ನಾಯಕತ್ವಕ್ಕೆ ರಾಜ್ಯ ಬಿಜೆಪಿಯ ಕೆಲವರಿಗೆ ಅಸಮಾಧಾನಗಳಿದ್ದರೂ, ಸಂಪನ್ಮೂಲ ಕ್ರೋಢೀಕರಣ ಹಾಗೂ ಪ್ರಬಲ ಲಿಂಗಾಯತ ಜಾತಿ ಸಮೀಕರಣಗಳ ವಿಷಯ ಬಂದಾಗ ಮಾಜಿ ಬಿಎಸ್‌ವೈ ಹಾಗೂ ಅವರ ಪುತ್ರನ ಪ್ರಭಾವಳಿ ಕಡೆಗಣಿಸಲು ಸಾಧ್ಯವಿಲ್ಲ. ಹಿಂದುತ್ವದ ಆಧಾರದಲ್ಲಿ ಮತ ನೀಡಿ ಎಂದು ಬಿಜೆಪಿ ಪ್ರಚಾರ ಮಾಡಿದರೂ, ರಾಜ್ಯದ ಬಹುಪಾಲು ಲಿಂಗಾಯತ ಮತಬ್ಯಾಂಕ್ ಜಾತಿ ನೋಡಿ ಮತ ಹಾಕುತ್ತದೆಯೇ ವಿನಃ ಹಿಂದುತ್ವದ ಆಧಾರದಲ್ಲಿ ಮತದಾನ ಮಾಡುವುದಿಲ್ಲ ಎಂಬ ವಾಸ್ತವ ವರದಿಯೂ ದಿಲ್ಲಿ ವರಿಷ್ಠರ ಮುಂದಿದೆ. ಹೀಗಾಗಿ, ಚುನಾವಣೆಗೆ 2 ವರ್ಷವಿದ್ದಾಗ ಹೊಸ ನಾಯಕತ್ವ ತರುವುದು ಬಿಜೆಪಿ ಹಾದಿಯನ್ನು ಮತ್ತಷ್ಟು ಕಠಿಣಗೊಳಿಸಬಹುದು. ಆದರೂ, ರಾಜ್ಯ ನಾಯಕತ್ವದ ಬಗ್ಗೆ ಪ್ರಮುಖ ಶಾಸಕ, ಸಂಸದರಿಂದ ಅಧಿಕೃತವಾಗಿ ಮಾಹಿತಿ, ಅನಿಸಿಕೆ ಪಡೆಯುವ ಡೆಮಾಕ್ರಟಿಕ್ ನಡೆಯನ್ನು ಅನುಸರಿಸಲಾಗಿದೆ. ಕನಿಷ್ಠಪಕ್ಷ ನಮ್ಮ ಅನಿಸಿಕೆಯನ್ನಾದರೂ ಕೇಳಬಹುದಿತ್ತು ಎಂಬ ಬೇಸರ ಇತರೆ ನಾಯಕರಲ್ಲಿ ಇರಬಾರದು ಎಂಬ ಕಾರಣಕ್ಕಾಗಿ ಈ ಪ್ರಕ್ರಿಯೆ ನಡೆಸಿರಲೂಬಹುದು.

ಪ್ರಸ್ತುತ

ಶಂಕರನಾರಾಯಣ ಭಟ್

ಈಗಿನ ಸ್ಟೇಡಿಯಂ ಸಾಲದೆ?

ಯಾವುದೇ ಸರಕಾರವಿರಲಿ, ರಾಜ್ಯವೋ ಕೇಂದ್ರವೋ, ಅಲ್ಲೆಲ್ಲ ನಡೆಯಬೇಕಾದ ಕಾಮಗಾರಿಗಳಿಗೂ ಪ್ರಾಶಸ್ತ್ಯ ಎಂಬುದೊಂದು ಇರಲೇ ಬೇಕಲ್ಲವೇ? ಅದಿಲ್ಲ ಅಂದರೆ, ಕೆಲವು ಕೆಲಸಗಳೇನೋ ಆಗುತ್ತವೆ. ಆದರೆ ತುರ್ತಿಗೆ ಅದರ ಅವಶ್ಯಕತೆಯೂ ಇರುವುದಿಲ್ಲ ಮತ್ತು ಬಳಕೆಯೂ ಇರುವುದಿಲ್ಲ. ಆದರೂ ಕೆಲ ಸರಕಾರಗಳು ಅಧಿಕಾರ ಇದೆಯೆಂದು ಮತ್ತು ಜಿದ್ದಿಗೆ ಬಿದ್ದು ಅನವಶ್ಯಕ ಕಾಮಗಾರಿಗೆ ಮುಂದಾಗುವುದನ್ನೂ ಕಾಣುತ್ತೇವೆ. ಈಗ ನಮ್ಮ ರಾಜ್ಯದಲ್ಲೂ ಅಂತಹುದೇ ಒಂದು ಸನ್ನಿವೇಶ ಹುಟ್ಟಿಕೊಂಡಿದೆ.

ಸದ್ಯ ಕ್ರಿಕೆಟ್‌ಗೆ ಕರ್ನಾಟಕದಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಅತ್ಯಂತ ಸುಸಜ್ಜಿತವಾಗಿ, ಅಂತಾರಾಷ್ಟ್ರೀಯ ಮಟ್ಟದ್ದೂ ಆಗಿದೆ. ಕಳೆದ ವರ್ಷವಷ್ಟೇ ಅದನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಸದ್ಯ ನಡೆಯುತ್ತಿರುವ ಐಪಿಎಲ್ ಪಂದ್ಯಗಳೂ ವ್ಯವಸ್ಥಿತವಾಗಿ ಸಾಗುತ್ತಿದೆ. ಇಷ್ಟಾದರೂ, ಸಿದ್ದರಾಮಯ್ಯನವರು, ಬೆಂಗಳೂರು ಹೊರಗೆ ದೇಶದ ಎರಡನೇ ಬೃಹತ್ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಅಡಿಗಲ್ಲು ಹಾಕಿದ್ದಾರೆ. 100 ಎಕರೆ ಪ್ರದೇಶ, 80,000 ಆಸನ ವ್ಯವಸ್ಥೆ ಮತ್ತು 943.46 ಕೋಟಿ ರೂ. ವೆಚ್ಚದ ಈ ಕಾಮಗಾರಿ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಗುಜರಾತದ ಬಳಿಕ ಇದೇ ದೊಡ್ಡದು ಎಂಬುದು! ಅಹಮದಾಬಾದಿನಲ್ಲಿ 'ಮೋದಿ' ಹೆಸರಿನ ಸ್ಟೇಡಿಯಂ ಇರುವುದೇ ಈ ಎಲ್ಲದಕ್ಕೂ ಕಾರಣ ಅಂದರೂ ತಪ್ಪಾಗಲಾರದು. ಈ ಕೆಲಸ ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಬೇಕು ಎಂಬ ಉದ್ದೇಶವೂ ಇದೆ. ಇವೆಲ್ಲ ವೈಯಕ್ತಿಕ ಹಿತಾಸಕ್ತಿಯೇ ಹೊರತು ಅವಶ್ಯಕತೆಯಲ್ಲ.

ಇಂದು, ಇನ್ನೂ ತುರ್ತಾಗಿ ಆಗಬೇಕಾದ ಸಾಕಷ್ಟು ಕೆಲಸಗಳಿವೆ. ಅವನ್ನೆಲ್ಲ ಬಿಟ್ಟು ಕ್ರಿಕೆಟ್ ಸ್ಟೇಡಿಯಂ ಹಿಂದೇಕೆ ಬಿದ್ದಿದ್ದಾರೆ ಎಂಬುದೂ ಅರ್ಥವಾಗುವುದಿಲ್ಲ, ಅಂತಾರಾಷ್ಟ್ರೀಯ ಮಟ್ಟದ ಆಟಗಳೇನು ದಿನ ನಿತ್ಯ ನಡೆಯುವಂತಹದೇ? ಅಷ್ಟಕ್ಕೂ ಈಗಿದ್ದ ಸ್ಟೇಡಿಯಂ ಸಾಲದೇ? ವಿಷಯ ಅದಲ್ಲವೇ ಅಲ್ಲ, ಸಿದ್ದು, ಜಿದ್ದಿಗೆ ಬಿದ್ದು ತಾನೇನೂ ಕಡಿಮೆ ಅಲ್ಲ ಎಂದು ತೋರಿಸಲು ಮುಂದಾಗಿದ್ದಾರೆ. ಈ ಹೊಸ ಸ್ಟೇಡಿಯಂಗೆ ಯಾರಾದರೂ ಬೇಡಿಕೆ ಇಟ್ಟಿದ್ದರೆ? ಅದರ ಅವಶ್ಯಕತೆ ಅಷ್ಟು ತುರ್ತಾಗಿತ್ತೆ? ಮೊದಲೇ ರಾಜ್ಯದಲ್ಲಿ ಮೂಲಭೂತ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿವೆ. ಸ್ಪೆಷಾಲಿಟಿ ಆಸ್ಪತ್ರೆ, ವೃತ್ತಿಪರ ಶಿಕ್ಷಣ ಸಂಸ್ಥೆಗಳ ಕೊರತೆ, ರಸ್ತೆ, ರೈತರ ಪರದಾಟ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸೃಷ್ಟಿ, ನೀರಾವರಿ ಇತ್ಯಾದಿ. ಅವನ್ನೆಲ್ಲ ಬಿಟ್ಟು, ಅಷ್ಟೇನೂ ಅವಶ್ಯಕತೆ ಇಲ್ಲದ ಕಡೆ ಹಣ ಖರ್ಚುಮಾಡುವುದು ವಿಹಿತವೇ? ಸರಕಾರ ಇರುವುದು ಜನರ ಹಿತಕ್ಕೋ ಅಥವಾ ಆಳುಗರಿಗೋ? ಇಲ್ಲಿ ಸ್ವ - ಪ್ರತಿಷ್ಠೆಗೂ ಅವಕಾಶ ಇರಕೂಡದು.

'ಎಲ್ಲರೊಳಗೊಂದಾಗು ಮಂಕುತಿಮ್ಮ' ಇದು ಧರ್ಮದ ತಿರುಳು

ಧರ್ಮದಂಗಲ್
ಟಿ.ಎನ್ ವಾಸುದೇವ ಮೂರ್ತಿ
vveditoped@gmail.com

ಸನಾತನ ಧರ್ಮ ಸರ್ವನಾಶವಾಗಬೇಕು ಎಂದು ಉದಯನಿಧಿ ಸ್ಟಾಲಿನ್ ಇತ್ತೀಚೆಗೆ ಎರಡನೆಯ ಸಲ ಪುನರುಚ್ಚರಿಸಿದಾಗ ಹಿಂದುತ್ವವಾದಿಗಳು ಮೊದಲ ಸಲದಷ್ಟು ತೀವ್ರವಾಗಿ ಪ್ರತಿಕ್ರಿಯಿಸಲಿಲ್ಲ. ಯಾರೋ ಹೇಳುತ್ತಾರೆಂದ ಮಾತ್ರಕ್ಕೆ ಅದು ಸರ್ವನಾಶವಾಗುವುದಿಲ್ಲ ಎಂದು ಅವರ ಹೇಳಿಕೆಯನ್ನು ನಿರ್ಲಕ್ಷಿಸಿದರು. ಸನಾತನವೆಂದರೆ ಶಾಶ್ವತವಾದುದು, ಎಂದಿಗೂ ಅಳಿಯದಂತಹುದು ಎಂಬ ಅರ್ಥವಿದೆ. ಈ ವಿಶ್ವಕ್ರಮದಲ್ಲಿ ಕೆಲವು ಸತ್ಯಗಳಿಗೆ ಸಾವಿಲ್ಲ. ನ್ಯೂಟನ್ನಿನ ನಿಯಮಗಳು ಹೇಗೆ ನ್ಯೂಟನ್ ಹುಟ್ಟುವ ಮುಂಚೆಯೂ ಇದ್ದವೋ, ಅವನು ಸತ್ತ ಮೇಲೆಯೂ ಇದ್ದೇ ಇದೆಯೋ ಹಾಗೆ. 'ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್' (ಎಲ್ಲದಕ್ಕೂ ಯಾವುದು ಆಧಾರವಾಗಿದೆಯೋ ಅದು ಅವಿನಾಶಿಯಾದುದು) ಎಂದು ಗೀತೆಯಲ್ಲಿ (2.17) ಶ್ರೀಕೃಷ್ಣ ನುಡಿದಿದ್ದಾನೆ.

ಈ ಹಿನ್ನೆಲೆಯಲ್ಲಿ ಹಿಂದೂ ಧರ್ಮದ್ದಷ್ಟೇ ಅಲ್ಲ; ಎಲ್ಲ ಧರ್ಮಗಳ ಆಂತರಿಕ ಸತ್ಯಗಳೂ ಅವಿನಾಶಿಯಾದುದಾಗಿದೆ, ಸನಾತನವಾದುದಾಗಿದೆ. ಏಕೆಂದರೆ ಎಲ್ಲ ಧರ್ಮಗಳೂ ಮೂಲಭೂತವಾಗಿ ಒಂದೇ ಸತ್ಯವನ್ನು ವಿವಿಧ ಭಾಷೆಗಳಲ್ಲಿ, ವಿವಿಧ ವಿಧಾನಗಳಲ್ಲಿ ಸಾರುತ್ತಿವೆ (ಏಕಂ ಸತ್ ವಿಪ್ರಾಃ ಬಹುಧಾ ವದಂತಿ). ವೈದಿಕ ಋಷಿಗಳ ಮಾತುಗಳಷ್ಟೇ ಅಲ್ಲ, ಕ್ರಿಸ್ತ, ಪೈಗಂಬರ್, ಬುದ್ಧ ಮುಂತಾದ ಧರ್ಮಪ್ರವರ್ತಕರ ಬೋಧನೆಗಳೂ ಸಹ ಸನಾತನವೇ. ಆದ್ದರಿಂದಲೇ ಮಹಾತ್ಮ ಗಾಂಧೀಜಿ ಎಲ್ಲ ಧರ್ಮ ಗ್ರಂಥಗಳಲ್ಲಿ ಕಂಡುಬರುವ ಏಕಸೂತ್ರತೆಯನ್ನು, ಏಕತೆಯ ಅಂಶಗಳನ್ನು, ಏಕರೂಪದ ಬೋಧನೆಗಳನ್ನು ಶೋಧಿಸುತ್ತಿದ್ದರು, ಅಂತಹ ವಾಕ್ಯಗಳನ್ನು ತಮ್ಮ ದೈನಂದಿನ ಪ್ರಾರ್ಥನಾ ಸಭೆಗಳಲ್ಲಿ ಪಠಿಸುತ್ತಿದ್ದರು.

'ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ' (ಅರ್ಜುನ, ಸೂತ್ರದೊಳಗೆ ಮಣಿಗಳು ಪೋಣಿಸಿದಂತೆ ಎಲ್ಲವೂ ನನ್ನೊಳಗೆ ಪೋಣಿಸಲ್ಪಟ್ಟಿವೆ) ಎಂದು ಶ್ರೀಕೃಷ್ಣ (ಗೀತೆ 7.7) ಉಪದೇಶಿಸಿದ್ದಾನೆ. ತೋರಿಕೆಯ ಬಾಹ್ಯ ಆಚರಣೆಗಳು ಹೊರಗೆ ಕಾಣಿಸುವ ಮಣಿಗಳಿದ್ದಂತೆ. ಮಣಿಗಳು ಹಲವು ಗಾತ್ರಗಳಲ್ಲಿ, ರೂಪಗಳಲ್ಲಿ, ಬಣ್ಣಗಳಲ್ಲಿ ಕಂಡು ಬರುತ್ತದೆ. ಆದರೆ ಅವೆಲ್ಲವನ್ನೂ ಧರಿಸಿಕೊಂಡಿರುವ ಸೂತ್ರ ಮೇಲ್ನೋಟಕ್ಕೆ ಕಾಣಿಸುವುದಿಲ್ಲ. ಧರ್ಮಗಳ ಆಂತರಿಕ ಸತ್ಯ ಸೂತ್ರದಂತೆ ಒಂದೇ; ಆದರೆ ಬಾಹ್ಯ ಆಚರಣೆಗಳು ಮಣಿಗಳಂತೆ ವಿಭಿನ್ನವಾದುದು, ಕೆಲವು ಸಲ ವೈರುದ್ಧ್ಯಕರವಾದುದು. ಈ ಆಚರಣೆಗಳು ಮೇಲ್ನೋಟಕ್ಕೆ ಧಾರ್ಮಿಕ ಆಚರಣೆಗಳಂತೆ ತೋರಿದರೂ ಇವು ಆಯಾ ಕಾಲದ ನೈತಿಕ, ಸಾಮಾಜಿಕ ವಿದ್ಯಮಾನಗಳಿಂದ ಪ್ರಭಾವಿತವಾಗಿರುತ್ತವೆ.

ಧರ್ಮಗಳ ಆಂತರ್ಯದ ಸನಾತನ ತತ್ವಗಳನ್ನು ಪರಿಗಣಿಸುವುದಾದರೆ ಈ ಜನಿವಾರ, ಶಿವದಾರ, ಹಿಜಾಬ್, ಶಿಲುಬೆ ಮುಂತಾದ ಬಾಹ್ಯ ಆಚರಣೆ, ಆಡಂಬರಗಳು ಅತ್ಯಂತ ಗೌಣವಾದುದು, ಉಪೇಕ್ಷೆಗೆ ಅರ್ಹವಾದುದು. ಆದ್ದರಿಂದಲೇ ಶ್ರೀರಾಮ ಕೃಷ್ಣರು ಜನಿವಾರವನ್ನು ಕಿತ್ತೆಸೆದು ಸಾಧನೆಗೆ ತೊಡಗಿಕೊಂಡುದು, ಅಲ್ಲಮನನ್ನೂ ಒಳಗೊಂಡಂತೆ ನಮ್ಮ ಹಲವಾರು ಶಿವಶರಣರು ಪರಮಸತ್ಯದ ಬಾಹ್ಯ ಕುರುಹಾಗಿರುವ ಇಷ್ಟಲಿಂಗದ ಪೂಜೆಯನ್ನು ವಿಡಂಬಿಸಿದ್ದು. 'ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ? ಬೇಟದ ಮರುಳಗೆ ಲಜ್ಜೆ ಮುನ್ನುಂಟೆ? ನಿಮ್ಮನರಿದ ಶರಣಂಗೆ ಪೂಜೆಯ ಹಂಬಲ ದಂದುಗವೇಕೆ? ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ? ಗುಹೇಶ್ವರಲಿಂಗಕ್ಕೆ ಕುರುಹು ಮುನ್ನುಂಟೆ?' ಎಂದು ಅಲ್ಲಮ ಪರಮಸತ್ಯಕ್ಕೆ ಕುರುಹುಂಟೇ ಎಂದು ಕೇಳುತ್ತಾನೆ. ನಮ್ಮ ಶರಣರ ಸಾಹಿತ್ಯದಲ್ಲಿ ಇಂತಹ ಹಲವು ವಚನಗಳನ್ನು ಕಾಣಬಹುದು. ಆದರೆ ರಾಜಕಾರಣಿಗಳ ಅನಗತ್ಯ ಹಸ್ತಕ್ಷೇಪದಿಂದಾಗಿ ಧರ್ಮದ ವಿಷಯದಲ್ಲಿ ಎಷ್ಟೋ ಸಲ ಪ್ರಧಾನವಾದುದು ಗೌಣವಾಗುತ್ತದೆ ಮತ್ತು ಗೌಣವಾದುದು ತನಗೆ ಸಲ್ಲದ ಬೆಲೆಯನ್ನು ಪಡೆದುಕೊಳ್ಳುತ್ತದೆ. ಉದಾಹರಣೆಗೆ, ಪರೀಕ್ಷಾ ಅಧಿಕಾರಿಗಳು ವಿದ್ಯಾರ್ಥಿಗಳ ಜನಿವಾರ ಕತ್ತರಿಸಿದರೆಂಬ ಕಾರಣಕ್ಕೆ ರಾಜ್ಯದ ಹಲವೆಡೆಗಳಲ್ಲಿ ಬ್ರಾಹ್ಮಣ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕಾರ್ಯಕರ್ತರ ಆಕ್ರೋಶವನ್ನು ಸ್ವಲ್ಪ ಬದಿಗಿರಿಸಿ ಸಂಪ್ರದಾಯಸ್ಥ ಬ್ರಾಹ್ಮಣರನ್ನು ಈ ವಿವಾದದ ಕುರಿತು ಕೇಳಿದರೆ ಅವರು ಹೇಳುವ ಕತೆಯೇ ಬೇರೆ. ಓರ್ವ ಹಿರಿಯ ಬ್ರಾಹ್ಮಣ ವಿದ್ವಾಂಸರನ್ನು ಈ ಕುರಿತು ಪ್ರಶ್ನಿಸಿದಾಗ ಅವರು ಯಾವುದೇ ರೋಷಾವೇಶ ಹೊರಹಾಕದೇ ಲೋಕಾಭಿರಾಮವಾಗಿ ಹೀಗೆಂದಿದ್ದರು: ಪರೀಕ್ಷಾ ಸಿಬ್ಬಂದಿ ಕತ್ತರಿಸುವುದಲ್ಲ, ಅವರು ಕೈಯಿಂದ ಮುಟ್ಟಿದರೂ ಸಾಕು; ಜನಿವಾರ ಮೈಲಿಗೆಯಾಗುತ್ತದೆ, ಮನೆಗೆ ಬಂದ ಕೂಡಲೆ ನಾವೇ ಅದನ್ನು ಕತ್ತರಿಸಿ ಶುಚಿರ್ಭೂತರಾಗಿ ಶಾಸ್ತ್ರೋಕ್ತ ರೀತಿಯಲ್ಲಿ ಬೇರೆ ಜನಿವಾರ ಹಾಕಿಕೊಳ್ಳುತ್ತೇವೆ. ಅವರು ನಮ್ಮ ಜನಿವಾರಕ್ಕೆ ಹಾನಿ ಮಾಡಬಹುದು, ಆದರೆ ನಮ್ಮ ಗಾಯತ್ರೀ ಮಂತ್ರಜಪ ಸಾಧನೆಗೆ ಹಾನಿ ಮಾಡಿಯಾರೇ? ಎಂದು ಅವರೇ ಮರುಪ್ರಶ್ನೆ ಮಾಡಿದ್ದರು. ಧರ್ಮದ ಹೆಸರಿನಲ್ಲಿ ಅಬ್ಬರಿಸುವವರಿಗೆ ಈ ತಣ್ಣನೆಯ ವಿವೇಕ ಅತ್ಯಗತ್ಯ. ಇಲ್ಲವಾದರೆ ದುರುಳ ರಾಜಕಾರಣಿಗಳು ತಮ್ಮ ಹಿತಾಸಕ್ತಿಗಾಗಿ ಧರ್ಮವನ್ನು ತಮ್ಮ ಪಾಲಿನ ಆಡುಂಬೊಲವಾಗಿಸಿಕೊಳ್ಳುತ್ತಾರೆ.

ಹಿಜಾಬ್, ಬುರ್ಖಾ ಮುಂತಾದವು ಧಾರ್ಮಿಕ ಸಂಕೇತವೇ ಅಲ್ಲವೇ ಎಂದು ಮೊದಲು ಮುಸ್ಲಿಂ ಸಮುದಾಯ ಸ್ಪಷ್ಟಪಡಿಸಿಕೊಳ್ಳಬೇಕು. ಏಕೆಂದರೆ ಭಾರತದ ಚಿಂತಕರು ಹಾಗು ಬುದ್ಧಿಜೀವಿಗಳು ಅವರ ನಂಬಿಕೆಗೆ ವ್ಯತಿರಿಕ್ತ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಡಾ. ಅಂಬೇಡ್ಕರ್ ಹಿಜಾಬ್ ಕುರಿತು ಹೀಗೆ ನುಡಿದಿದ್ದಾರೆ.

ಹೆಂಗಸರು ಅಡಿಯಿಂದ ಮುಡಿಯವರೆಗೆ ಬುರ್ಖಾ ಧರಿಸಿ ಓಡಾಡುವ ದೃಶ್ಯ ಭಾರತದ ಬೀದಿಗಳಲ್ಲಿ ಕಾಣಸಿಗುವ ಅತ್ಯಂತ ಅಸಹ್ಯಕರ ದೃಶ್ಯ. ಹೀಗೆ ಹೊರಜಗತ್ತಿನೊಂದಿಗೆ ಮಡಿವಂತಿಕೆಯಿಂದ ವರ್ತಿಸುವ ಹೆಣ್ಣುಮಕ್ಕಳು ತಮ್ಮ ಶಾರೀರಕ ಸಮತೋಲನ ಕಳೆದುಕೊಳ್ಳುತ್ತಾರೆ. ರಕ್ತಹೀನತೆ, ಕ್ಷಯ ಮುಂತಾದ ಗಂಭೀರ ಕಾಯಿಲೆಗಳಿಂದ ನರಳುತ್ತಾರೆ. ಅವರ ಮೂಳೆಗಳು ದುರ್ಬಲವಾಗುತ್ತವೆ. ಬುರ್ಖಾ ಮುಸ್ಲಿಂ ಹೆಂಗಸರ ಮಾನಸಿಕ, ನೈತಿಕ ಸತ್ವವನ್ನು ನಾಶ ಮಾಡುತ್ತದೆ. ಆರೋಗ್ಯಪೂರ್ಣ ಸಾಮಾಜಿಕ ಸಂಬಂಧ ಹೊಂದಿರದ ವ್ಯಕ್ತಿಗಳು ನೈತಿಕವಾಗಿ ಪತನವಾಗುತ್ತಾರೆ. ವಿಶಾಲವಾದ ಹೊರಜಗತ್ತಿನಿಂದ ಪ್ರತ್ಯೇಕಗೊಂಡವರು ಕ್ಷುಲ್ಲಕವಾದ ಕೌಟುಂಬಿಕ ಕಲಹದಲ್ಲಿ ಮುಳುಗುತ್ತಾರೆ. ತತ್ಪರಿಣಾಮವಾಗಿ ಅವರ ಜೀವನ ದೃಷ್ಟಿಯೇ ಸಂಕುಚಿತವಾಗುತ್ತದೆ. ಬುರ್ಖಾಧಾರಿಗಳು ಇತರೆ ಸಮುದಾಯಗಳ ತಮ್ಮ ಸೋದರಿಯರಿಗಿಂತ ಎಲ್ಲ ವಿಷಯದಲ್ಲೂ ಹಿಂದುಳಿಯುತ್ತಾರೆ. ಹೊರಗಿನ ಯಾವ ಚಟುವಟಿಕೆಯಲ್ಲೂ ಕ್ರಿಯಾಶೀಲರಾಗದವರು ಮಾನಸಿಕ ಗುಲಾಮತನದಿಂದ, ಕೀಳರಿಮೆಯಿಂದ ಕುಗ್ಗಿ ಹೋಗುತ್ತಾರೆ. ಅವರಲ್ಲಿ ಜ್ಞಾನದಾಹ ಇರುವುದಿಲ್ಲ. ಮನೆಯ ನಾಲ್ಕು ಗೋಡೆಯಿಂದ ಹೊರಗಿರುವ ಯಾವ ಜ್ಞಾನವಿಷಯದಲ್ಲೂ ಆಸಕ್ತಿ ತಳೆಯಬಾರದೆಂದು ಅವರಿಗೆ ಕಲಿಸಲಾಗುತ್ತದೆ. ಬುರ್ಖಾಧಾರಿಗಳು ಅಸಹಾಯಕರಾಗುತ್ತಾರೆ, ಯಾವುದೇ ಸವಾಲನ್ನು ಎದುರಿಸುವಲ್ಲಿ ಅಸಮರ್ಥರಾಗುತ್ತಾರೆ. ಕಾಮದ ವಿಷಯದಲ್ಲಿ ಗಂಡು ಹೆಣ್ಣುಗಳು ತಮ್ಮತಮ್ಮಲ್ಲೇ ಬೆಳೆಸಿಕೊಂಡಿರುವ ಅನುಮಾನವೇ ಈ ಬುರ್ಖಾಧಾರಣೆಯ ಮೂಲವಾಗಿದೆ. ಪರಸ್ಪರರ ಮೇಲೆ ನಿಗಾ ಇಡುವ ಉದ್ದೇಶದ್ದಾಗಿದೆ. ಆದರೆ ಈ ಪದ್ಧತಿ ಅನುಸರಿಸುವುದರಿಂದ ಆ ಉದ್ದೇಶ ಸಾಧನೆ ಉಂಟಾಗಲಿಲ್ಲ, ಬದಲಾಗಿ ಅವರ ನೈತಿಕತೆಯ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟಾದವು. ಮುಸ್ಲಿಂ ಪುರುಷರಿಗೆ ತಮ್ಮ ಕುಟುಂಬದ ಹೊರಗಿನ ಹೆಣ್ಣುಮಕ್ಕಳೊಂದಿಗೆ ಸಂವಹನವೇ ಅಸಾಧ್ಯವಾಯಿತು. ಗಂಡು ಹೆಣ್ಣುಗಳನ್ನು ಲಿಂಗಾಧಾರಿತವಾಗಿ ಪ್ರತ್ಯೇಕಿಸುವ ಸಮಾಜದಲ್ಲಿ ಅನಾರೋಗ್ಯಕರ ಲೈಂಗಿಕ ವರ್ತನೆ, ಅಸಹಜ ಹವ್ಯಾಸಗಳು ಮತ್ತು ರೋಗಗ್ರಸ್ತ ಪ್ರವೃತ್ತಿಗಳು ಹುಟ್ಟಿಕೊಳ್ಳುತ್ತವೆ. ಇದನ್ನೆಲ್ಲ ವಿವರಿಸಲು ಮನೋವಿಜ್ಞಾನಿಗಳು ಬೇಕಾಗಿಲ್ಲ. ನಮ್ಮ ಸಾಮಾನ್ಯ ಬುದ್ಧಿಗೇ ಅರ್ಥವಾಗುತ್ತದೆ. ಹಿಂದೂ ಸಮುದಾಯದಲ್ಲೂ ಪರ್ದಾ ಪದ್ಧತಿ ಇದೆ, ಅಲ್ಲಿ ಅದರ ದುಷ್ಪರಿಣಾಮವೂ ಉಂಟಾಗುತ್ತಿದೆ. ಆದರೆ ಒಂದು ವ್ಯತ್ಯಾಸವಿದೆ. ಮುಸ್ಲಿಮರು ಬುರ್ಖಾ ಪದ್ಧತಿಗೆ ಧಾರ್ಮಿಕತೆಯ ಲೇಪನ ನೀಡುತ್ತಾರೆ. ಆದರೆ ಹಿಂದೂಗಳಲ್ಲಿ ಆ

ಬಗೆಯ ನಂಬಿಕೆ ಇಲ್ಲ. ಪರ್ದಾ ಹಿಂದೂಗಳಿಗಿಂತಲೂ ಮುಸ್ಲಿಮರಲ್ಲಿ ಆಳವಾಗಿ ಬೇರೂರಿದೆ, ಇದನ್ನು ತೊಡೆದು ಹಾಕಬೇಕೆಂದರೆ ಧಾರ್ಮಿಕ ನಿಯಮಗಳು ಹಾಗೂ ಸಾಮಾಜಿಕ ಅಗತ್ಯಗಳ ನಡುವೆ ಘರ್ಷಣೆ ಏರ್ಪಡಬೇಕಾಗುತ್ತದೆ. ಹಿಂದೂಗಳು ಅಷ್ಟರ ಮಟ್ಟಿಗೆ ಈ ಪದ್ಧತಿಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಮುಸ್ಲಿಮರಲ್ಲಿ ಇದರ ಮೇಲೆ ನಿಷೇಧ ಹೇರಬೇಕೆಂಬ ಪ್ರಯತ್ನ ನಡೆದ ಯಾವ ಸ್ಪಷ್ಟ ರುಜುವಾತೂ ಕಾಣಸಿಗುವುದಿಲ್ಲ (ಪಾಕಿಸ್ತಾನ ಅಥವಾ ಭಾರತದ ವಿಭಜನೆ, 1945, ಪುಟ 230-231).

ಇನ್ನು ತಸ್ಲಿಮಾ ನಸ್ರೀನ್ ಹೀಗೆನ್ನುತ್ತಾರೆ: ಈ ಪದ್ಧತಿ 7ನೇ ಶತಮಾನದ ಕೆಲವು ಪುರುಷ ದುರಭಿಮಾನಿಗಳಿಂದ ಹುಟ್ಟಿಕೊಂಡಿತು. ಏಕೆಂದರೆ ಆ ಕಾಲಮಾನದಲ್ಲಿ ಹೆಂಗಸರನ್ನು ಕೇವಲ ಲೈಂಗಿಕ ಸುಖದ ವಸ್ತುವಿನಂತೆ ಕಾಣಲಾಗುತ್ತಿತ್ತು. ಹೆಣ್ಣಿನ ಸೌಂದರ್ಯ ನೋಡಿದರೆ ಗಂಡಿನಲ್ಲಿ ಕಾಮೋದ್ರೇಕವಾಗುತ್ತದಂತೆ. ಆದ್ದರಿಂದ ಹೆಂಗಸರು ಬುರ್ಖಾ ಹಿಜಾಬ್ ಧರಿಸಲೇ ಬೇಕು ಎಂದು ಅವರು ಕಟ್ಟಲೆ ಮಾಡಿದರು. 21ನೇ ಶತಮಾನದ ನಾವು ಹಿಜಾಬ್, ಬುರ್ಖಾ ಇತ್ಯಾದಿಗಳು ಹೆಣ್ಣಿನ ಮೇಲೆ ನಡೆಸುವ ದಬ್ಬಾಳಿಕೆಯ ಸಂಕೇತವೆಂದು ಭಾವಿಸುತ್ತೇವೆ. ಬುರ್ಖಾ ಹೆಣ್ಣನ್ನು ಒಂದು ಕಾಮದ ವಸ್ತುವಿನ ಮಟ್ಟಕ್ಕೆ ಇಳಿಸುತ್ತದೆ ಎಂಬುದು ನನ್ನ ಸ್ಪಷ್ಟ ಅಭಿಮತ. ಇದು ಹೆಂಗಸರಿಗೂ, ಹಾಗೆಯೇ ಗಂಡಸರಿಗೂ, ಅವಮಾನಕರವಾದ ಸಂಕೇತವಾಗಿದೆ. ಧರ್ಮಕ್ಕಿಂತ ಶಿಕ್ಷಣ ಮುಖ್ಯ. ಒಂದು ಸೆಕ್ಯೂಲರ್ ವ್ಯವಸ್ಥೆಯಲ್ಲಿ ಸೆಕ್ಯೂಲರ್ ವಸ್ತ್ರಸಂಹಿತೆ ಇರತಕ್ಕದ್ದು. ಅವರು ಬೇಕಿದ್ದರೆ ತಮ್ಮ ತಮ್ಮ ಮನೆ-ಮಠಗಳಲ್ಲಿ ತಮ್ಮ ನಂಬಿಕೆಯನ್ನು ಆಚರಿಸಿಕೊಳ್ಳಲಿ. ಆದರೆ ಒಂದು ಸೆಕ್ಯೂಲರ್ ಶಿಕ್ಷಣ ಸಂಸ್ಥೆಯಲ್ಲಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಸಾರಾ ಅಬೂಬಕರ್, ಬಾನು ಮುಷ್ತಾಕ್, ಕೆ. ಷರೀಫಾ ಮುಂತಾದ ನಮ್ಮ ಕನ್ನಡದ ಯಾವ ಪ್ರಮುಖ ಮುಸ್ಲಿಂ ಚಿಂತಕಿಯರು ಬುರ್ಖಾಧಾರಿಗಳಲ್ಲ ಎಂಬುದು ಗಮನಾರ್ಹ. ಪ್ರಮುಖ ಚಿಂತಕರು ಹಾಗು ಲೇಖಕರು ಸಹ ತಮ್ಮ ಮನೆಯ ಹೆಣ್ಣುಮಕ್ಕಳನ್ನು ಹೀಗೆ ಬುರ್ಖಾ ಸೆರೆಮನೆಯೊಳಗೆ ಬಂದಿಗಳನ್ನಾಗಿಸಿಲ್ಲ. ಸಾರಾ ಅಂತೂ ಬುರ್ಖಾಧಾರಣೆಯನ್ನು ತೀವ್ರವಾಗಿ ವಿರೋಧಿಸಿ ಲೇಖನವನ್ನೇ ಬರೆದಿದ್ದಾರೆ. ನನ್ನ ಮಗಳನ್ನು ಶಾಲೆಗೆ ಕಳಿಸುತ್ತೇನೆ, ಯಾವ ಕಾರಣಕ್ಕೂ ಅವಳಿಗೆ ಬುರ್ಖಾ ತೊಡಿಸುವುದಿಲ್ಲ ಎಂದು ನನ್ನ ತಂದೆ ನಿರ್ಧರಿಸಿದಾಗ ಅವರು ಸ್ಥಳೀಯ ಮುಸ್ಲಿಂ ನಾಯಕರ ವಿರೋಧ ಎದುರಿಸಬೇಕಾಯಿತು. ಆದರೂ ಅವರು ಧೃತಿಗೆಡಲಿಲ್ಲ ಎಂದು ತಮ್ಮ ಒಂದು ಲೇಖನದಲ್ಲಿ ಬರೆದುಕೊಂಡಿದ್ದಾರೆ.

ಇರಾನ್‌ನಂತಹ ದೇಶಗಳ ಹೆಂಗಸರು ಹಿಜಾಬನ್ನು ವಿರೋಧಿಸಿ ಅದನ್ನು ಬೆಂಕಿಗೆ ಹಾಕುತ್ತಿರುವಾಗ ಇಲ್ಲಿನ ಮುಸ್ಲಿಮರು ಬುರ್ಖಾಧಾರಣೆ ನಮ್ಮ ಪವಿತ್ರವಾದ ಧಾರ್ಮಿಕ ಆಚರಣೆ, ಯಾವ ಕಾರಣಕ್ಕೂ ಅದನ್ನು ಬಿಡುವುದಿಲ್ಲವೆಂದು ಹಟಕ್ಕೆ ಬಿದ್ದರೆ ಇನ್ನೇನು ಮಾಡಲಾದೀತು? ಅವರು ನಂಬಿರುವ ದೇವರೇ ಅವರಿಗೆ ಸದಸದ್ವಿವೇಕ ನೀಡಲಿ ಎಂದು ಪ್ರಾರ್ಥಿಸಬಹುದು ಅಷ್ಟೇ. ಆದರೆ ಕರ್ನಾಟಕದಲ್ಲಿನ ಹಿಜಾಬ್ ವಿವಾದ ಜಗತ್ತಿನ ಇತರೆ ಭಾಗಗಳಲ್ಲಿ ಕಂಡುಬರುವ ಹಿಜಾಬ್ ವಿರೋಧಕ್ಕಿಂತಲೂ ವಿಭಿನ್ನವಾದುದು. ಇದನ್ನು ಜಗತ್ತಿನ ಇತರೆ ಹಿಜಾಬ್ ವಿವಾದದೊಂದಿಗೆ ಹೋಲಿಸಲಾಗದು, ಹೋಲಿಸಲೂ ಕೂಡದು.

ಕೆಲವು ಕಾಲೇಜು ವಿದ್ಯಾರ್ಥಿಗಳು ಹಿಜಾಬನ್ನು ಪ್ರತಿಭಟಿಸಿ ಕೇಸರಿ ಶಾಲು ಹಾಕಿಕೊಂಡು ತರಗತಿಗೆ ಹಾಜರಾಗಿದ್ದರು. ಒಂದು ಹೆಣ್ಣು ಮೈಯೆಲ್ಲ ಮುಚ್ಚಿಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುತ್ತಿದ್ದರೆ ಆಕೆ ಹೊರಗಿನ ಪುರುಷ ಸಮಾಜಕ್ಕೆ ಯಾವ ಸಂದೇಶ ನೀಡುತ್ತಿರುತ್ತಾಳೆ? ಈ ಸಮಾಜದ ಗಂಡಸರು ಕಾಮ ಪಿಪಾಸುಗಳು, ಅತ್ಯಾಚಾರಿಗಳು ಆದ್ದರಿಂದ ನನ್ನ ಜಾಗರೂಕತೆಯಲ್ಲಿ ನಾನಿದ್ದೇನೆ ಎಂಬ ಸಂದೇಶವನ್ನಲ್ಲವೇ? ಸಭ್ಯ ಸಮಾಜದಲ್ಲಿ ಯಾವ ಪುರುಷನೂ ಇಂತಹ ಮಿಥ್ಯಾರೋಪ ಸಹಿಸುವುದಿಲ್ಲ. ತನ್ನನ್ನು ನೀಚನೆಂದು ಕಾಣುವ ಮನಸ್ಥಿತಿಯನ್ನು ವಿರೋಧಿಸಿಯೇ ತೀರುತ್ತಾನೆ. ಅದರಲ್ಲೂ ವರ್ಷಗಟ್ಟಲೆ ಜೊತೆಯಾಗಿಯೇ ಕಲಿಯುವ ತನ್ನ ಸಹಪಾಠಿಯೇ ತನ್ನ ಬಗ್ಗೆ ಹೀಗೆ ಸಂಕುಚಿತವಾಗಿ ಆಲೋಚಿಸಿದರೆ, ಆ ಆಲೋಚನೆಯ ಸಂಕೇತವನ್ನು ಮೈಮೇಲೆ ಧರಿಸಿದರೆ, ಸಹಜವಾಗಿಯೇ ಇಂದಿನ ತರುಣರು ಅದನ್ನು ತಮ್ಮ ಘನತೆ, ನೈತಿಕತೆ, ಸಂಯಮಕ್ಕೆ ಅವಮಾನವೆಂದೇ ಭಾವಿಸುವುದು.

ಆದ್ದರಿಂದ ಕರ್ನಾಟಕದ ಹಿಜಾಬ್ ವಿವಾದವನ್ನು ಧಾರ್ಮಿಕ, ಸೈದ್ಧಾಂತಿಕ ಹಿನ್ನೆಲೆಯಲ್ಲಿ ನೋಡದೇ ಒಂದು ಪ್ರತ್ಯೇಕ ಘಟನೆಯನ್ನಾಗಿ, ಯುವಸಮುದಾಯದಲ್ಲಿ ಇತ್ತೀಚೆಗೆ ಬೆಳೆದಿರುವ ಒಂದು ಮನೋವೈಜ್ಞಾನಿಕ ಪ್ರಕರಣವನ್ನಾಗಿ ನೋಡಬೇಕಾಗುತ್ತದೆ.

ಯಾವುದೇ ಧಾರ್ಮಿಕ ಸಂಕೇತ ಕೆಡುಕೂ ಅಲ್ಲ, ಒಳಿತೂ ಅಲ್ಲ. ಅದು ನಮ್ಮ ಮತ್ತು ಸಮಾಜದ ನಡುವೆ ಯಾವ ಸಂಬಂಧ ಏರ್ಪಡಿಸುತ್ತದೆ ಎಂಬುದನ್ನು ಅವಲಂಬಿಸಿದೆ. ನಮ್ಮನ್ನು ಎಲ್ಲರೊಂದಿಗೆ ಒಬ್ಬರನ್ನಾಗಿ ಮಾಡುವ ಎಲ್ಲ ಸಂಕೇತಗಳೂ ಧಾರ್ಮಿಕ ಸಂಕೇತಗಳೇ. ಹಾಗಲ್ಲದೇ ಅದು ನಮ್ಮನ್ನು ಸಮಾಜದ ಇತರರಿಗಿಂತ ಮೇಲ್ದರ್ಜೆಯವರೆಂದು ಅಥವಾ ಸಮಾಜದ ಇತರರು ನೀಚರು, ಕಾಮುಕರು ಎಂಬ ಸಂದೇಶ ನೀಡುತ್ತಿದ್ದಲ್ಲಿ ಅದನ್ನು ಕೇಡಿನ ಸಂಕೇತವೆಂದು ಭಾವಿಸಬೇಕಲ್ಲದೇ ಧಾರ್ಮಿಕ ಸಂಕೇತವೆಂದು ತಪ್ಪಾಗಿ ಭಾವಿಸಬಾರದು.

ಭಟ್ಟರ್ ಸ್ಕಾಚ್

- **ಮೋಹನ ಸಿದ್ದೇಗೌಡ, ಮಂಡ್ಯ**
ಭಟ್ರೇ, ಅತ್ತೆಗೂ, ಇಂಟರ್‌ನೆಟ್‌ಗೂ ಇರೋ ಸಾಮ್ಯತೆ ಏನು ಗೊತ್ತಾ?
- **ಎರಡೂ ಕಡೆ ನಮಗೆ 'ಕನೆಕ್ಷನ್' ಸಿಗೋದು ಸ್ವಲ್ಪ ಕಷ್ಟ, ಸಿಕ್ಕರೂ ಯಾವಾಗ 'ಡಿಸ್ಕನೆಕ್ಟ್' ಆಗುತ್ತೋ ಅಂತ ಭಯ!**

- **ನಾಗೇಶ ಕಾತರಕಿ, ಬೆಳಗಾವಿ**
ಭಟ್ರೇ, ಫಿಶ್ ಯಾಕೆ ಯಾವಾಗಲೂ ನೀರಲ್ಲೇ ಇರುತ್ತವೆ?
- **ಯಾಕಂದ್ರೆ ಹೊರಗಡೆ ಬಂದರೆ ಸೆಲ್ಫಿಶ್ ಮಂದಿ ಇರ್ತಾರೆ ಅನ್ನೋದು ಗೊತ್ತಿದೆ!**

- **ಗಣೇಶ ಮಡಿವಾಳ, ಹುಬ್ಬಳ್ಳಿ**
ಭಟ್ರೇ, ಮದುವೆ ಅಂದ್ರೆ ಏನು?
- **ಒಬ್ಬ ವ್ಯಕ್ತಿ ತನಗೆ ಗೊತ್ತಿಲ್ಲದ ಸಮಸ್ಯೆಗಳಿಗೆ, ತಾನೇ ಕಂಡುಕೊಳ್ಳುವ ಶಾಶ್ವತ ಪರಿಹಾರ!**

- **ನಾಗಾರ್ಜುನ ಪಿ., ಭದ್ರಾವತಿ**
ಭಟ್ರೇ, ಸೊಳ್ಳೆಗಳು ನಮ್ಮ ತಲೆ ಮೇಲೆ ಯಾಕೆ ಸುತ್ತುತ್ತಾ ಇರುತ್ತವೆ?
- **ನಮಗೆ ಬುದ್ಧಿ ಇಲ್ಲ ಅಂತ ಅವುಗಳಿಗೂ ಡೌಟ್ ಇರುತ್ತೆ, ಅದಕ್ಕೆ ಚೆಕ್ ಮಾಡೋಕೆ ಬರಬಹುದು ಅಂತೀಯಾ?!**

- **ವೆಂಕಟೇಶ ನಾಡಿಗ, ಕನಕಪುರ**
ಭಟ್ರೇ, ಒಬ್ಬ ಸೋಮಾರಿಗೂ, ವಿಜ್ಞಾನಿಗೂ ಇರೋ ಸಾಮ್ಯತೆ ಏನು?
- **ಇಬ್ಬರೂ ಯಾವಾಗಲೂ ಏನಾದರೂ ಒಂದು ಹೊಸ ದಾರಿ ಕಂಡುಹಿಡಿಯಲು ಪ್ರಯತ್ನಿಸುತ್ತಲೇ ಇರುತ್ತಾರೆ!**

- **ಜ್ಞಾನೇಂದ್ರ ಗುಬ್ಬಲಾಳ, (ಇಮೇಲ್ ಮೂಲಕ)**
ಭಟ್ರೇ, ಎಕ್ಸಾಮ್ ಹಾಲ್‌ಗೆ ಹೋಗುವಾಗ ಯಾಕೆ ಭಯ ಆಗುತ್ತೆ?
- **ನಮಗೆ ಗೊತ್ತಿರೋದು ಅಲ್ಲಿ ಕೇಳಲ್ಲ, ಅಲ್ಲಿ ಕೇಳಿರೋದು ನಮಗೆ ಗೊತ್ತಿರಲ್ಲ!**

- **ರಾಜಣ್ಣ, ಹಾಸನ**
ಭಟ್ರೇ, ಕ್ರಿಕೆಟ್‌ನಲ್ಲಿ ಔಟ್ ಆಗೋದು ಅಂದ್ರೆ ಏನು?
- **ಬ್ಯಾಟ್ಸ್‌ಮನ್ ಹೆಂಡತಿಯನ್ನು ನೋಡೋಕೆ ಅವಸರದಲ್ಲಿ ಮನೆಗೆ ಹೋಗೋದು!**

- **ಕ.ಮ. ಶಂಕರ, ಹಳಿಯಾಳ**
ಭಟ್ರೇ, ಡಾಕ್ಟರ್ ಯಾಕೆ ಯಾವಾಗಲೂ ಗೀಚುತ್ತಾರೆ?
- **'ನಾನು ಏನು ಬರೆದಿದ್ದೀನಿ ಅಂತ ನನಗೇ ಗೊತ್ತಿಲ್ಲ, ಇನ್ನು ನಿನಗೆ ಹೆಂಗೆ ಗೊತ್ತಾಗುತ್ತೆ?' ಅನ್ನೋದು ಅವರ ಪ್ಲಾನ್!**

- **ಸಿ. ಚಂದ್ರಣ್ಣ, ಮುದ್ದೇಬಿಹಾಳ**
ಭಟ್ರೇ, ಮನುಷ್ಯನಿಗೆ ಅತಿ ಹೆಚ್ಚು ಜ್ಞಾಪಕ ಶಕ್ತಿ ಯಾವಾಗ ಬರುತ್ತದೆ?
- **ಮೊಬೈಲ್ ಪಾಸ್‌ವರ್ಡ್ ಮರೆತು ಹೋದಾಗ!**

- **ಸುಧಾ ಸಿ. ಮೂರ್ತಿ, ಬೇಲೂರು**
ಭಟ್ರೇ, ಭೂಕಂಪ ಅಂದ್ರೆ ಏನು?
- **ಭೂಮಿಗೂ ಯಾವುದೋ ಜೋಕ್ ನೆನಪಾಗಿ ಜೋರಾಗಿ ನಗುತ್ತಾ ಇರೋದು!**

ಸರಕಾರವನ್ನೇ ಖಾಸಗಿಯವರಿಗೆ ಒಪ್ಪಿಸಿ ಬಿಡಿ!

ಲೋಕಮತ

ಲೋಕೇಶ್ ಕಾರ್ಯಗ

vveditoped@gmail.com

ಭಾರತದ ಪ್ರಜೆಗಳಾದ ನಾವು... ಎಂದು ಆರಂಭವಾಗುವ ನಮ್ಮ ಸಂವಿಧಾನದ ಪೀಠಿಕೆ ದೇಶವನ್ನು 'ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯ' ಎಂದು ಘೋಷಿಸುತ್ತದೆ. ಇಲ್ಲಿ 'ಸಮಾಜವಾದ' ಎನ್ನುವ ಪದಕ್ಕೆ ಕೇವಲ ರಾಜಕೀಯ ಅರ್ಥವಿಲ್ಲ; ಅದಕ್ಕೊಂದು ಆಳವಾದ ಆರ್ಥಿಕ ಮತ್ತು ಸಾಮಾಜಿಕ ಬದ್ಧತೆಯಿದೆ. ದೇಶದ ಸಂಪತ್ತು ಮತ್ತು ಸಂಪನ್ಮೂಲಗಳು ಕೆಲವೇ ಕೆಲವು ವ್ಯಕ್ತಿಗಳ ಕೈಯಲ್ಲಿ ಮಡುಗಟ್ಟದೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನವಾಗಿ ಹಂಚಿಕೆಯಾಗಬೇಕು, ಶಿಕ್ಷಣ, ಆರೋಗ್ಯ, ಸಾರಿಗೆ, ಬೆಳಕು ಮತ್ತು ನೀರಿನಂತಹ ಕನಿಷ್ಠ ಅಗತ್ಯಗಳನ್ನು ಒದಗಿಸುವುದು ಸರಕಾರದ ಪರಮ ಆದ್ಯತೆಯಾಗಿರಬೇಕು ಎನ್ನುವುದು ಈ ಕಲ್ಪನೆಯ ಆಶಯ.

ಆದರೆ, ಇಂದಿನ ಭಾರತದ ಆರ್ಥಿಕ ಚಿತ್ರಣವನ್ನು ನೋಡಿದರೆ ಸಂವಿಧಾನ ಶಿಲ್ಪಿಗಳು ಕಂಡ ಕನಸು ನುಚ್ಚುನೂರಾಗುತ್ತಿದೆಯೇ ಎಂಬ ದಟ್ಟವಾದ ಅನುಮಾನ ಕಾಡತೊಡಗಿದೆ. ಜಾಗತೀಕರಣದ ಹೆಸರಿನಲ್ಲಿ ಆರಂಭವಾದ ಆರ್ಥಿಕ ಸುಧಾರಣೆಗಳು ಇಂದು ಖಾಸಗೀಕರಣದ ಅತಿರೇಕಕ್ಕೆ ಬಂದು ನಿಂತಿವೆ. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಸಾಮಾನ್ಯ ನಾಗರಿಕ ಬಳಸುವ ಪ್ರತಿಯೊಂದು ಸೇವೆಯೂ ಒಂದೊಂದಾಗಿ ಕಾರ್ಪೊರೇಟ್ ಸಂಸ್ಥೆಗಳ ಪಾಲಾಗುತ್ತಿವೆ. ಸರಕಾರಗಳು ಕೇವಲ ತೆರಿಗೆ ವಸೂಲಿ ಮಾಡುವ 'ಕಲೆಕ್ಷನ್ ಏಜೆಂಟ್'ಗಳಾಗುತ್ತಿವೆ. ಕಲ್ಯಾಣ ರಾಜ್ಯದ ಹೊಣೆಗಾರಿಕೆಯಿಂದ ಸಂಪೂರ್ಣವಾಗಿ ನುಣುಚಿಕೊಳ್ಳುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಯಾವುದೇ ಹೊಸ ಯೋಜನೆಗಳನ್ನು ಪ್ರಕಟಿಸಿದರೂ ಅಲ್ಲಿ ಕೇಳಿಬರುವ ಮೊದಲ ಪದ 'ಪಿಪಿಪಿ' (Public&Private Partnership – ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವ). ಹೆದ್ದಾರಿಗಳ ನಿರ್ಮಾಣ, ಮೆಟ್ರೋ ರೈಲು, ರೈಲ್ವೆ ನಿಲ್ದಾಣಗಳ ನವೀಕರಣ, ವಿಮಾನ ನಿಲ್ದಾಣಗಳ ಆಧುನೀಕರಣ, ಬಂದರುಗಳ ಅಭಿವೃದ್ಧಿ ಮಾತ್ರವಲ್ಲ ಕಸ ಎತ್ತುವುದಕ್ಕೂ ಸರಕಾರಗಳು ಪಿಪಿಪಿ ಮಾದರಿಯನ್ನೇ ಜಪಿಸುತ್ತಿವೆ. ಈ ಮಾದರಿಯನ್ನು ಸಮರ್ಥಿಸಿಕೊಳ್ಳುವ ಆರ್ಥಿಕ ತಜ್ಞರು, ರಾಜಕೀಯ ನಾಯಕರು ಮತ್ತು ಅಧಿಕಾರಿಗಳು ನೀಡುವ ಒಂದೇ ನೆಪ ಎಂದರೆ, ಇದರಿಂದ ಸರಕಾರದ ಮೇಲಿನ ತತ್‌ಕ್ಷಣದ ಆರ್ಥಿಕ ಹೊರೆ ತಪ್ಪುತ್ತದೆ, ಖಾಸಗಿ ಬಂಡವಾಳ ಹರಿದುಬರುತ್ತದೆ ಮತ್ತು ಆಧುನಿಕ ತಂತ್ರಜ್ಞಾನ ಸಿಗುತ್ತದೆ.

ಮೇಲ್ನೋಟಕ್ಕೆ ಇದು ಆಕರ್ಷಕವಾಗಿ ಕಂಡರೂ, ಇದರ ಅಂತಿಮ ಹೊರೆ ಬೀಳುವುದು ಯಾರ ಮೇಲೆ? ಖಂಡಿತವಾಗಿಯೂ ಸಾಮಾನ್ಯ ನಾಗರಿಕನ ಜೇಬಿನ ಮೇಲೆ. ಮುಂಬೈ, ಚೆನ್ನೈ ಅಥವಾ ಕೋಲ್ಕತ್ತಾ ನಗರಗಳಲ್ಲಿ ದಶಕಗಳ ಹಿಂದೆ ಸರಕಾರವೇ ನೇರವಾಗಿ ಜಾರಿಗೆ ತಂದು, ನಿರ್ವಹಿಸುತ್ತಿರುವ ಸಬ್ ಅರ್ಬನ್ (ಉಪನಗರ) ರೈಲುಗಳನ್ನು ಗಮನಿಸಿ. ವಾಣಿಜ್ಯ ರಾಜಧಾನಿ ಇಂದಿಗೂ ಬಡವರ ಪಾಲಿಗೆ ಆಸರೆಯಾಗಿರುವುದು ಅಲ್ಲಿನ ಅಗ್ಗದ ರೈಲು ಸೇವೆಯಿಂದ. ನವಮುಂಬಯಿಯಲ್ಲಿ ಮನೆ ಮಾಡಿ ಕೊಂಡ ದಿನಗೂಲಿ ನೌಕರರು, ಕಾರ್ಮಿಕರು ಕೇವಲ 300 ರಿಂದ 400 ರೂಪಾಯಿಗಳ ಮಾಸಿಕ ಪಾಸ್ ಪಡೆದು ತಿಂಗಳು ಪೂರ್ತಿ ಛತ್ರಪತಿ ಶಿವಾಜಿ ಟರ್ಮಿನಸ್ ತನಕ ನಿರಾತಂಕವಾಗಿ ಪಯಣಿಸುತ್ತಾರೆ. ಇದು ಜನಸಾಮಾನ್ಯರ ಪಾಲಿಗೆ ಜೀವನಾಡಿಯಾಗಿದೆ. ನಮ್ಮದೇ ಮೈಸೂರು– ಬೆಂಗಳೂರು ಮಧ್ಯೆ 550 ರು. ಕೊಟ್ಟು ತಿಂಗಳ ಪಾಸ್ ಪಡೆದು ಸಾವಿರಾರು ಮಂದಿ ಪಯಣಿಸುತ್ತಾರೆ.

ಆದರೆ, ಇದಕ್ಕೆ ತದ್ವಿರುದ್ಧವಾದ ಉದಾಹರಣೆ ನಮ್ಮ ಕಣ್ಣಮುಂದಿರುವ 'ನಮ್ಮ ಮೆಟ್ರೋ'. ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಹಯೋಗದಲ್ಲಿ ಪ್ರತ್ಯೇಕ ಕಂಪನಿ (ಬಿಎಂಆರ್‌ಸಿಎಲ್) ಸ್ಥಾಪಿಸಿ, ದೇಶ–ವಿದೇಶಗಳ ಬ್ಯಾಂಕುಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಸಾಲ ತಂದು ಜಾರಿಗೊಳಿಸಲಾದ ಈ ಯೋಜನೆಯು ಸಾಮಾನ್ಯ ಜನರ ಪಾಲಿಗೆ ಅತ್ಯಂತ ದುಬಾರಿಯಾಗಿದೆ. ಇಲ್ಲಿ ಕೇವಲ 10 ಕಿಲೋಮೀಟರ್ ಪ್ರಯಾಣಿಸಬೇಕಾದರೂ 50ರಿಂದ 60 ರೂಪಾಯಿಗಳನ್ನು ವ್ಯಯಿಸಬೇಕು. ದಿನವೊಂದಕ್ಕೇ ನೂರು ರೂಪಾಯಿಗಿಂತ ಹೆಚ್ಚು ಸಾರಿಗೆಗೇ ಖರ್ಚು ಮಾಡಬೇಕೆಂದರೆ ಒಬ್ಬ ಬಡ ಅಥವಾ ಕೆಳ ಮಧ್ಯಮ ವರ್ಗದ ಕಾರ್ಮಿಕ ಮೆಟ್ರೋ ಹತ್ತಲು ಹೇಗೆ ಸಾಧ್ಯ? ಆಧುನಿಕತೆ ಎನ್ನುವುದು ಶ್ರೀಮಂತರಿಗೆ ಮಾತ್ರ ಸೀಮಿತವಾಗುವುದಾದರೆ ಸಂವಿಧಾನದಲ್ಲಿ ತಿಳಿಸಿದ 'ಸಮಾಜವಾದ'ದ ಸಮಪಾಲು, ಸಮಬಾಳು ನೀತಿಗೆ ಏನು ಅರ್ಥ ?

ಟೋಲ್ ಎಂಬ ಹಗಲು ದರೋಡೆ

ಕರ್ನಾಟಕದಲ್ಲಿ ನಾಲ್ಕು ದಶಕಗಳ ಹಿಂದೆಯೇ 'ನೈಸ್' ರಸ್ತೆಗೆ ಅನುಮತಿ ನೀಡುವ ಮೂಲಕ ರಸ್ತೆ ಸಂಚಾರದ ಖಾಸಗೀಕರಣ ಮತ್ತು ಬಡವರ ಭೂಮಿ ಕಿತ್ತು ಕಾರ್ಪೊರೇಟ್ ಕಂಪನಿಗಳಿಗೆ ನೀಡುವ ಕೆಟ್ಟ ಪರಂಪರೆಗೆ ನಾಂದಿ ಹಾಡಲಾಗಿತ್ತು. ಅಂದು ಆರಂಭವಾದ 'ಟೋಲ್' ಸಂಸ್ಕೃತಿ ಇಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಾರಿಗೆ ತರುತ್ತಿರುವ ಪ್ರತಿಯೊಂದು ರಸ್ತೆಯಲ್ಲೂ ಹೆಮ್ಮರವಾಗಿ ಬೆಳೆದಿದೆ. ದೇಶದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎನ್ನುವ ಪ್ರಚಾರ ಭರಾಟೆಯ ನಡುವೆ, ಪ್ರತಿ 20–30 ಕಿಲೋಮೀಟರ್‌ಗೊಂದು ಟೋಲ್ ಗೇಟ್‌ಗಳು ತಲೆಯೆತ್ತುತ್ತಿವೆ.

ಐದು ವರ್ಷಗಳ ಹಿಂದೆ ಬೆಂಗಳೂರಿನಿಂದ ಸಾಂಸ್ಕೃತಿಕ ನಗರಿ ಮೈಸೂರಿಗೆ ಹೋಗಿ ಬರಲು ಕೇವಲ ಇಂಧನದ ವೆಚ್ಚ ಸಾಕಾಗುತ್ತಿತ್ತು. ಆದರೆ ಇಂದು ಹೊಸದಾಗಿ ನಿರ್ಮಿಸಲಾದ ಎಕ್ಸ್‌ಪ್ರೆಸ್ ರಸ್ತೆಯಲ್ಲಿ ಕೇವಲ 120 ಕಿಲೋಮೀಟರ್ ಪ್ರಯಾಣಿಸಿ ಮರಳಿ ಬರಬೇಕೆಂದರೆ ಕನಿಷ್ಠ 720 ರೂಪಾಯಿಗಳನ್ನು ಕೇವಲ ಟೋಲ್ ಶುಲ್ಕದ ರೂಪದಲ್ಲೇ ಪಾವತಿಸಬೇಕು! ಹಾಗಿದ್ದರೆ ಪ್ರಜೆಗಳು ಕಟ್ಟುವ ರಸ್ತೆ ತೆರಿಗೆ, ಇಂಧನದ ಮೇಲಿನ ಸೆಸ್‌ಗಳೆಲ್ಲ ಎಲ್ಲಿಗೆ ಹೋಗುತ್ತಿವೆ? ಸರಕಾರ ರಸ್ತೆ ನಿರ್ಮಿಸಿಕೊಡುವುದು ನಾಗರಿಕರ ಮೂಲಭೂತ ಹಕ್ಕಲ್ಲವೇ? ಇನ್ನು ರೈಲ್ವೆಯತ್ತ ಮುಖ ಮಾಡಿದರೆ, ಪ್ರಗತಿಯ ಸಂಕೇತವೆಂದು ಬಿಂಬಿಸುತ್ತಿರುವ 'ವಂದೇ ಭಾರತ್' ರೈಲುಗಳ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಸಾಮಾನ್ಯ ರೈಲುಗಳಿಗಿಂತ ಮೂರ್ನಾಲ್ಕು ಗಂಟೆ ಮುಂಚಿತವಾಗಿ ತಲುಪಿಸುತ್ತದೆ ಎನ್ನುವ ಕಾರಣಕ್ಕೆ ಇದಕ್ಕೆ ದುಪ್ಪಟ್ಟು ಟಿಕೆಟ್ ದರವನ್ನು ನಿಗದಿಪಡಿಸಲಾಗಿದೆ. ಶ್ರೀಮಂತರು ಮತ್ತು ಮೇಲ್ಮಧ್ಯಮ ವರ್ಗದವರು ಇದನ್ನು ಸುಲಭವಾಗಿ ಬಳಸಬಹುದು. ಆದರೆ, ವಂದೇ ಭಾರತ್‌ಗಾಗಿ ಇದೇ ಹಳಿಯಲ್ಲಿ ಸಂಚರಿಸುತ್ತಿದ್ದ ಬಡವರ ಪಾಲಿನ ಪ್ಯಾಸೆಂಜರ್ ರೈಲುಗಳನ್ನು, ಎಕ್ಸ್‌ಪ್ರೆಸ್ ರೈಲುಗಳ ಜನರಲ್ ಬೋಗಿಗಳನ್ನು ಕಡಿತಗೊಳಿಸಲಾಗುತ್ತಿದೆ. ವೇಗದ ಹೆಸರಿನಲ್ಲಿ ಬಡವರ ಸಾರಿಗೆ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ.

ಅಕ್ಷರ, ಆರೋಗ್ಯದ ವ್ಯಾಪಾರೀಕರಣ

ಯಾವ ದೇಶದಲ್ಲಿ ಶಿಕ್ಷಣ ಮತ್ತು ಆರೋಗ್ಯ ಉದ್ಯಮವಾಗುತ್ತದೆಯೋ, ಆ ದೇಶದ ಪತನ ಆರಂಭವಾಗಿದೆ ಎಂದೇ ಅರ್ಥ. ಕರ್ನಾಟಕ ಸೇರಿದಂತೆ ಭಾರತದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಇಂದು ಶಿಕ್ಷಣ ಕ್ಷೇತ್ರವು ಸಂಪೂರ್ಣವಾಗಿ ಕಾರ್ಪೊರೇಟ್ ಉದ್ಯಮಿಗಳ ವಶವಾಗಿದೆ.

ಬೆಂಗಳೂರಿನಂತಹ ಮಹಾನಗರಗಳಲ್ಲಿ ಮಕ್ಕಳನ್ನು ಎಲ್‌ಕೆಜಿ ತರಗತಿಗೆ ಸೇರಿಸಬೇಕಾದರೂ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳ ದೇಣಿಗೆ ಅಥವಾ ಶುಲ್ಕ ನೀಡಬೇಕಾದ ದಯನೀಯ ಸ್ಥಿತಿಯಿದೆ. ಸರಕಾರಿ ಶಾಲೆಗಳನ್ನು ವ್ಯವಸ್ಥಿತವಾಗಿ ಮುಚ್ಚಲಾಗುತ್ತಿದೆ. ಸರಕಾರಿ ಕಾಲೇಜುಗಳಿಗೆ, ವಿವಿಗಳಿಗೆ ಕಾಯಂ ಉಪನ್ಯಾಸಕರನ್ನು ನೇಮಿಸದಿರುವ ಮೂಲಕ ವಿದ್ಯಾರ್ಥಿಗಳನ್ನು ದೂರವಿಡಲಾಗುತ್ತಿದೆ. ಇನ್ನೊಂದೆಡೆ ಖಾಸಗಿ ವಿವಿಗಳಿಗೆ ಸಲೀಸಾಗಿ ಅನುಮತಿ ನೀಡಲಾಗುತ್ತಿದೆ.

ವೈದ್ಯಕೀಯ ಶಿಕ್ಷಣದ ಕಥೆಯಂತೂ ಕೇಳುವುದೇ ಬೇಡ. ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ಬಹುತೇಕ ಎಲ್ಲವೂ ಖಾಸಗಿ ಒಡೆತನದಲ್ಲಿದ್ದು, ಅಲ್ಲಿ ಸೀಟು ಪಡೆಯಲು ಕೋಟ್ಯಂತರ ರೂಪಾಯಿಗಳ ಶುಲ್ಕ ತೆರಬೇಕು. ಇಷ್ಟೊಂದು ಹಣ ಹೂಡಿ ವೈದ್ಯರಾಗುವವರು ಮುಂದೆ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಹೇಗೆ ಸಾಧ್ಯ? ಅವರು ಸಹಜವಾಗಿಯೇ ತಮ್ಮ ಹೂಡಿಕೆಯನ್ನು ಜನರಿಂದ ವಸೂಲಿ ಮಾಡಲು ಮುಂದಾಗುತ್ತಾರೆ.

ಆರೋಗ್ಯ ಸೇವೆಯು ಇಂದು ಸಂಪೂರ್ಣ ವಾಗಿ ಖಾಸಗಿ ಆಸ್ಪತ್ರೆಗಳ 'ಮಾಫಿಯಾ' ಆಗಿ ಬದಲಾಗಿದೆ. ಕಾರ್ಪೊರೇಟ್ ಆಸ್ಪತ್ರೆಗಳು ರೋಗ ಪತ್ತೆ ಹಚ್ಚುವ ಮುನ್ನವೇ ಲಕ್ಷಾಂತರ ರೂಪಾಯಿಗಳ ಬಿಲ್ ಕೈಗಿಡುತ್ತವೆ. ಸರಕಾರಿ ಆಸ್ಪತ್ರೆಗಳು ಕೇವಲ ಹೆಸರಿಗಷ್ಟೇ ಎಂಬಂತಾಗಿದ್ದು, ಬಡವರು ಅನಿವಾರ್ಯವಾಗಿ ಸಾಲ, ಸೋಲ ಮಾಡಿ ಖಾಸಗಿ ಆಸ್ಪತ್ರೆಗಳ ಮೆಟ್ಟಿಲೇರುತ್ತಿದ್ದಾರೆ. ಸರಕಾರ ನೀಡುವ ಆಯುಷ್ಮಾನ್ ಕಾರ್ಡ್‌ಗಳು ಸಹ ಖಾಸಗಿ ಆಸ್ಪತ್ರೆಗಳ ಖಜಾನೆ ತುಂಬಿಸಲು ಬಳಕೆಯಾಗುತ್ತಿವೆಯೇ ವಿನಃ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುತ್ತಿಲ್ಲ.

ವಿದ್ಯುತ್ ಖಾಸಗೀಕರಣದ ಆತಂಕ

ಮೇಲಿನ ಎಲ್ಲ ಆತಂಕಗಳಿಗೆ ಕಾರಣವಾಗಿದ್ದು ಕರ್ನಾಟಕದ ಹೊಸ ಬೆಳವಣಿಗೆ. ಕರ್ನಾಟಕದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯ ಹಕ್ಕನ್ನು ತನಗೆ ನೀಡಬೇಕೆಂದು ಕೋರಿ ದೈತ್ಯ ಕಾರ್ಪೊರೇಟ್ ಸಂಸ್ಥೆಯಾದ ಟಾಟಾ ಪವರ್ ಕಂಪನಿ ಲಿಮಿಟೆಡ್, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮುಂದೆ ಅರ್ಜಿ ಸಲ್ಲಿಸಿದೆ. ಇದು ರಾಜ್ಯದ ಇಂಧನ ವಲಯದಲ್ಲಿ ಖಾಸಗೀಕರಣದ ಮೊದಲ ಬೃಹತ್ ಹೆಜ್ಜೆಯಂತೆ ಕಂಡು ಬರುತ್ತಿದೆ. ಶಿಕ್ಷಣ, ಆರೋಗ್ಯ ಮತ್ತು ಸಾರಿಗೆಯನ್ನು ಈಗಾಗಲೇ ಕಳೆದುಕೊಂಡಿರುವ ಜನರಿಗೆ, ಈಗ ಮನೆಯ ಬೆಳಕನ್ನೂ ಖಾಸಗಿಯವರಿಗೆ ಒಪ್ಪಿಸಲು ಸರಕಾರ ಸದ್ದಿಲ್ಲದೆ ದಾರಿ ಮಾಡಿಕೊಡುತ್ತಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ.

ವಿದ್ಯುತ್ ಸರಬರಾಜು ಮಂಡಳಿಗಳಾದ ಬೆಸ್ಕಾಂ, ಚೆಸ್ಕಾಂ, ಮೆಸ್ಕಾಂ, ಹೆಸ್ಕಾಂಗಳು ಈಗಾಗಲೇ ನಷ್ಟದಲ್ಲಿವೆ ಎಂಬ ನೆಪವೊಡ್ಡಿ ಇಡೀ ವ್ಯವಸ್ಥೆಯನ್ನು ಖಾಸಗಿಯವರಿಗೆ ಒಪ್ಪಿಸಿದರೆ ಏನಾಗಬಹುದು? ಖಾಸಗಿ ಕಂಪನಿಗಳ ಪರಮೋಚ್ಚ ಧ್ಯೇಯ ಲಾಭಗಳಿಸುವುದೇ ಆಗಿರುತ್ತದೆ. ಅವರು ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚು ಲಾಭ ತರುವ ಕೈಗಾರಿಕಾ ಮತ್ತು ನಗರ ಪ್ರದೇಶಗಳ ಮೇಲೆ ಕಣ್ಣಿಡುತ್ತಾರೆ. ಕ್ರಮೇಣ ವಿದ್ಯುತ್ ದರಗಳು ಗಗನಕ್ಕೇರುತ್ತವೆ. ಬಡವರ ಗುಡಿಸಲುಗಳ ದೀಪಗಳು ಆರಿಹೋಗಬಹುದು.

ಉಚಿತ ಪಂಪ್‌ಸೆಟ್‌ಗೆ ಸಂಚಕಾರ?

ಕರ್ನಾಟಕದಲ್ಲಿ ಮತ್ತು ದೇಶದ ಇತರ ಭಾಗಗಳಲ್ಲಿ ಕೃಷಿ ಕ್ಷೇತ್ರ ಜೀವಂತವಾಗಿರಲು ಪ್ರಮುಖ ಕಾರಣ ರೈತರ ಪಂಪ್‌ಸೆಟ್‌ಗಳಿಗೆ ಸರಕಾರ ನೀಡುತ್ತಿರುವ ಉಚಿತ ವಿದ್ಯುತ್. ಹಗಲಿರುಳು ಶ್ರಮಿಸಿ, ಸಾಲ ಮಾಡಿ ಬೋರ್‌ವೆಲ್ ಕೊರೆಸುವ ರೈತ, ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸಮರ್ಪಕ ಬೆಲೆ ಸಿಗದಿದ್ದರೂ ಕೃಷಿಯನ್ನು ಮುಂದುವರಿಸುತ್ತಿರುವುದಕ್ಕೆ ಉಚಿತ ವಿದ್ಯುತ್ ಬೆಂಗಾವಲಾಗಿದೆ. ಒಂದು ವೇಳೆ ವಿದ್ಯುತ್ ವಿತರಣಾ ವ್ಯವಸ್ಥೆ ಖಾಸಗಿ ಕಂಪನಿಗಳ ಸುಪರ್ದಿಗೆ ಸೇರಿದರೆ, ಈ ಉಚಿತ ಸೇವೆಗಳು ದೀರ್ಘಕಾಲ ಮುಂದುವರಿಯಲು ಸಾಧ್ಯವೇ ಇಲ್ಲ. ಆರಂಭದಲ್ಲಿ ಒಪ್ಪಂದದ ಪ್ರಕಾರ ಸರಕಾರ ಸಬ್ಸಿಡಿ ನೀಡಿದರೂ, ಕಾಲಕ್ರಮೇಣ ಖಾಸಗಿ ಕಂಪನಿಗಳು ನಷ್ಟದ ನೆಪವೊಡ್ಡಿ ಅಥವಾ ಸುಧಾರಣೆಯ ಹೆಸರಿನಲ್ಲಿ ಪ್ರತಿಯೊಂದು ಪಂಪ್‌ಸೆಟ್‌ಗೂ ಮೀಟರ್ ಅಳವಡಿಸಿ ಶುಲ್ಕ ವಸೂಲಿ ಮಾಡಲು ಆರಂಭಿಸುತ್ತವೆ. ಇದು ಈಗಾಗಲೇ ಸಂಕಷ್ಟದಲ್ಲಿರುವ ಕೃಷಿ ವಲಯಕ್ಕೆ ಮತ್ತು ಭಾರತದ ರೈತಾಪಿ ವರ್ಗಕ್ಕೆ ಮರ್ಮಾಘಾತ ನೀಡುವುದು ಖಚಿತ.

ಮಧ್ಯಮ ವರ್ಗ 'ಬಲಿಪಶು'

ಚುನಾವಣೆಗಳು ಬಂದಾಗ ರಾಜಕೀಯ ಪಕ್ಷಗಳು ಮತದಾರರನ್ನು ಸೆಳೆಯಲು ಉಚಿತ ಶಿಕ್ಷಣ, ಉಚಿತ ವಿದ್ಯುತ್, ಉಚಿತ ಸಾರಿಗೆ, ಉಚಿತ ರೇಷನ್ ಮುಂತಾದ ಆಕರ್ಷಕ 'ಗ್ಯಾರಂಟಿ' ಯೋಜನೆಗಳನ್ನು ಪ್ರಕಟಿಸುತ್ತವೆ. ಈ ಯೋಜನೆಗಳು ಬಡವರಿಗೆ ತಾತ್ಕಾಲಿಕ ಆಸರೆ ನೀಡುತ್ತವೆ ಎನ್ನುವುದು ನಿಜ. ಆದರೆ, ಇಂತಹ ಜನಪ್ರಿಯ ಯೋಜನೆಗಳನ್ನು ದೀರ್ಘಕಾಲದವರೆಗೆ ಸಾರ್ವಜನಿಕ ಹಣದಿಂದ ನಿಭಾಯಿಸುವುದು ಯಾವುದೇ ಸರಕಾರಕ್ಕೂ ಸುಲಭವಲ್ಲ. ಸರಕಾರಗಳು ಒಂದು ಕೈಯಿಂದ ಉಚಿತವಾಗಿ ನೀಡಿ, ಮತ್ತೊಂದು ಕೈಯಿಂದ ಪೆಟ್ರೋಲ್, ಡೀಸೆಲ್, ಮದ್ಯದ ಮೇಲಿನ ತೆರಿಗೆ, ಆಸ್ತಿ ತೆರಿಗೆ, ಕುಡಿಯುವ ನೀರಿನ ದರ ಮತ್ತು ವಿದ್ಯುತ್ ದರಗಳನ್ನು ಸದ್ದಿಲ್ಲದೆ ಏರಿಸುತ್ತವೆ. ಈ ತೆರಿಗೆಯ ಭಾರ ಯಾರ ಮೇಲೆ ಬೀಳುತ್ತದೆ? ಇಲ್ಲಿ ಅತಿ ಹೆಚ್ಚು ಸಂಕಷ್ಟಕ್ಕೀಡಾಗುತ್ತಿರುವುದು ದೇಶದ ಪ್ರಾಮಾಣಿಕ ತೆರಿಗೆದಾರನಾದ 'ಮಧ್ಯಮ ವರ್ಗ'.

ನಾಗರಿಕರಿಗೆ ಕನಿಷ್ಠ ಮೂಲಸೌಕರ್ಯಗಳಾದ ಸಮರ್ಪಕ ಶಿಕ್ಷಣ, ಕೈಗೆಟುಕುವ ಆರೋಗ್ಯ ಸೇವೆ, ಸಾರ್ವಜನಿಕ ಸಾರಿಗೆ, ಕುಡಿಯುವ ನೀರು ಮತ್ತು ನಿರಂತರ ವಿದ್ಯುತ್ ಒದಗಿಸುವುದು ಸರಕಾರದ ಸಾಂವಿಧಾನಿಕ ಕರ್ತವ್ಯ. ಇದನ್ನು ಲಾಭ–ನಷ್ಟದ ಲೆಕ್ಕಾಚಾರದಲ್ಲಿ ನೋಡಬಾರದು. ಸಾರ್ವಜನಿಕ ವಲಯದ ಸಂಸ್ಥೆಗಳನ್ನು ನಷ್ಟದ ನೆಪದಲ್ಲಿ ಖಾಸಗಿಯವರಿಗೆ ಮಾರಾಟ ಮಾಡುವ ಬದಲು, ಅವುಗಳಲ್ಲಿನ ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ತೊಡೆದುಹಾಕಲು ಸರಕಾರಗಳು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಬೇಕು.

ಒಂದು ವೇಳೆ ನಾಗರಿಕರಿಗೆ ಕನಿಷ್ಠ ಅಗತ್ಯಗಳನ್ನು ಒದಗಿಸಲು ಸರಕಾರಗಳಿಗೆ ಸಾಧ್ಯವಿಲ್ಲ ಎಂದಾದರೆ, ಈ ಬೃಹತ್ ಸರಕಾರಿ ಯಂತ್ರ, ನೂರಾರು ಶಾಸಕರು, ಸಂಸದರು, ಸಚಿವರು ಮತ್ತು ವೈಭವದ ವಿಧಾನಸೌಧಗಳು ಯಾರಿಗಾಗಿ ಬೇಕು? ಇದಕ್ಕಿಂತ ಇಡೀ ಸರಕಾರವನ್ನೇ ಟೆಂಡರ್ ಕರೆದು ಯಾವುದಾದರೂ ದೈತ್ಯ ಕಾರ್ಪೊರೇಟ್ ಕಂಪನಿಗೆ ಖಾಸಗೀಕರಣ ಗೊಳಿಸುವುದು ಒಳಿತು.

ಆದರೆ, ಹೀಗೆ ಮಾಡುವ ಮುನ್ನ ನಾವು ದೇಶದ ಸಂವಿಧಾನಕ್ಕೆ ಒಂದು ತಿದ್ದುಪಡಿ ತರಬೇಕಾಗುತ್ತದೆ. ಪೀಠಿಕೆಯಲ್ಲಿರುವ 'ಸಮಾಜವಾದ' ಮತ್ತು 'ಪ್ರಜಾಸತ್ತಾತ್ಮಕ ಗಣರಾಜ್ಯ' ಎಂಬ ಪವಿತ್ರ ಪದಗಳನ್ನು ಕೈಬಿಟ್ಟು, ಅದರ ಜಾಗದಲ್ಲಿ 'ಕಾರ್ಪೊರೇಟ್ ನಿಯಂತ್ರಿತ ಭಾರತ' ಎಂದು ಬರೆಯಬೇಕಾಗುತ್ತದೆ! ಇಷ್ಟೆಲ್ಲಾ ಕಹಿ ಸುದ್ದಿಗಳ ನಡುವೆ, ಕರ್ನಾಟಕದಲ್ಲಿ ನಡೆದ ಒಂದು ಆಶಾದಾಯಕ ಬೆಳವಣಿಗೆ ಕಂಡು ಬಂದಿದೆ. ದೇಶದಲ್ಲೇ ಮೊದಲ ಬಾರಿಗೆ ತುರ್ತು ಆರೋಗ್ಯ ಸೇವೆಯಾದ '108 ಅಂಬ್ಯುಲೆನ್ಸ್' ಸೇವೆಯನ್ನು ಖಾಸಗಿ ಸಂಸ್ಥೆಗಳ ಮುಷ್ಟಿಯಿಂದ ಬಿಡಿಸಿ, ಸರಕಾರವೇ ನೇರವಾಗಿ ನಿರ್ವಹಿಸಲು ನಿರ್ಧರಿಸಿದೆ.

ಆದರೆ ಆಸ್ಪತ್ರೆಗೆ ಕಳುಹಿಸುವುದಷ್ಟೇ ಸರಕಾರದ ಕೆಲಸವಾಗಬಾರದು. ಕೈಗೆಟುಕುವ ದರದಲ್ಲಿ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಭಾರತದಲ್ಲಿ ಸಾಧ್ಯವೆ?

'ವಿಶ್ವರಂಗ' ಬರಹ, ಬಹುದೊಡ್ಡ ವಿಚಾರವೊಂದನ್ನು ಮುಂದಿಟ್ಟಿದೆ ಅದೇ, ಇಂದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೇ ಸರ್ಜರಿ ಅವಶ್ಯಕತೆ ಇದೆ ಎಂಬುದು. ಒಂದೆಡೆ, ಪ್ರಜಾಪ್ರಭುತ್ವದಷ್ಟು ಒಳ್ಳೆಯ ವ್ಯವಸ್ಥೆ ಇನ್ನಾವುದೂ ಇಲ್ಲ ಅಂತ ಹೇಳುವ ನಾವೇ ಈಗ ಇದೇ ವ್ಯವಸ್ಥೆಗೆ ಸರ್ಜರಿಯ ಅವಶ್ಯಕತೆಯ ಮಾತನ್ನೂ ಆಡುತ್ತಿರುವುದಕ್ಕೂ ಬಲವಾದ ಕಾರಣ ಇರಲೇಬೇಕಲ್ಲವೆ? ಒಂದಂತೂ ನಿಜ. ಪ್ರಜಾಪ್ರಭುತ್ವ ವ್ಯವಸ್ಥೆ ನಿಂತಿರುವುದೇ ಪ್ರಜೆಗಳ ಮತದಿಂದ. ಯಾವ ರಾಜಕೀಯ ಪಕ್ಷಕ್ಕೆ ಹೆಚ್ಚು ಮತ ಬೀಳುತ್ತದೋ, ಅದೇ ರಾಜಕೀಯದ ಚುಕ್ಕಾಣಿ ಹಿಡಿಯುವುದು. ಇದರಲ್ಲೇನು ಆಪತ್ತು? ವಿಷಯ, ಅಷ್ಟು ಸರಳ ಅಲ್ಲವೇ ಅಲ್ಲ. ಸಂಖ್ಯೆಯೇ ಹೆಚ್ಚು ಪ್ರಾಮುಖ್ಯತೆ ಪಡೆದರೂ, ಒಂದು ವರ್ಗದ ಜನ ಮತವನ್ನೇ ಚಲಾಯಿಸದೇ ಇರುವುದು. ಇಲ್ಲೇ ಬರುವುದು ಆಪತ್ತು. ಆಯ್ಕೆ ಆದವರು ನಿಜವಾಗಿಯೂ 'ಜನಪ್ರತಿನಿಧಿ' ಎನಿಸಿ ಕೊಳ್ಳಲು ಅರ್ಹರೆ ಎಂಬುದು? ಕೇವಲ ಕೆಲವರ ಹಿತಾಸಕ್ತಿ ಕಾಯು ವಲ್ಲೇ ಆಸಕ್ತಿ ತೋರಿ, ಆಯ್ಕೆ ಆಗಿ ಬಂದರೆ ಅವರು ಸಮಷ್ಟಿಯಲ್ಲಿ ಹಿತ ಸಾಧಿಸಲು ಶಕ್ಯರೆ? ಮತದಾನ ಪವಿತ್ರವಾದದ್ದು, ನಾವೆಲ್ಲ ಮತ ಚಲಾಯಿ ಸಲೇಬೇಕು, ಇದು ನಮ್ಮ ಹಕ್ಕು ಮತ್ತು ಕರ್ತವ್ಯ ಎರಡೂ ಹೌದು ಎಂಬುದೆಲ್ಲ ಸರಿ. ಆದರೆ, ಚುನಾವಣೆ ಮುಗಿದ ಮೇಲಿನ ಅಂಕಿ– ಸಂಖ್ಯೆ ನೋಡಿದರೆ, ಕೇವಲ ಶೇ.45, 50, 60ರಷ್ಟು ಮತದಾನದ ವರದಿ ಬರುತ್ತದೆ. ಉಳಿದವರನ್ನು ಕೇಳುವವರೇ ಇಲ್ಲವೆ? ಲೇಖಕರೆಂದಂತೆ, ಮತದಾನ ಕಡ್ಡಾಯವಾಗಬೇಕು. ಯಾರು ಮತ ಚಲಾಯಿ ಸಲಿಲ್ಲವೋ ಅಂಥವರಿಗೆ ಕಠಿಣ ಶಿಕ್ಷೆ ಆಗಬೇಕು ಎಂದರೆ ಮತ್ತದೇ ಪ್ರಜಾಪ್ರಭುತ್ವ ವ್ಯವಸ್ಥೆಯೇ ಅಡ್ಡ ಬರುತ್ತದೆ. ಅಷ್ಟೊಂದು ಕಠಿಣ ಶಿಕ್ಷೆ ವಿಧಿಸಲು ಇದೇನು ನಿರಂಕುಶ ಆಡಳಿತ ವ್ಯವಸ್ಥೆಯೆ ಎಂದು. ಹಾಗಿದ್ದರೆ, ಪರಿಹಾರ? ವ್ಯವಸ್ಥೆಗೆ ಮೇಜರ್ ಸರ್ಜರಿ! ಸರ್ವತಂತ್ರ, ಸ್ವತಂತ್ರ ಭಾರತದ ಇಂದಿನ ವ್ಯವಸ್ಥೆಯಲ್ಲಿ ಇದು ಸಾಧ್ಯವೆ? ಜನ ಜಾಗೃತರಾಗುವುದೆಂದು? ಮತ ಚಲಾಯಿಸದೇ ಇರುವ ಹಿಂದಿನ ಉದ್ದೇಶ ಏನು? ಇದನ್ನು ಅರ್ಥಮಾಡಿಕೊಂಡರೆ, ವ್ಯವಸ್ಥೆ ತನ್ನಿಂದ ತಾನೆ ಸುಧಾರಿಸೀತು. ಇಂದು ಹೆಚ್ಚಿನವರು ಹೇಳುವ ಒಂದೇಮಾತೆಂದರೆ, ಯಾರೇ ಅಧಿಕಾರಕ್ಕೆ ಬರಲಿ, ನಾವು ಮಾಡುವ ಕೆಲಸ, ನಮ್ಮ ದುಡಿತ, ನಮ್ಮ 'ಹಣೆ ಬರಹ' ಬದಲಾಗದು ಎಂಬುದು. ಇಲ್ಲಿ ಅನಿಸುವುದಿಷ್ಟೇ. ವ್ಯವಸ್ಥೆಯಲ್ಲಿ ಸಮಸ್ಯೆ ಇಲ್ಲ. ಸಮಸ್ಯೆ ಇರುವುದು ವ್ಯವಸ್ಥೆಯ ಉಪಯೋಗ ಪಡೆಯುವವರಲ್ಲಿ. ನಾವೇನೋ, ನಮ್ಮ ಹಿತ ಕಾಯುವ ವ್ಯಕ್ತಿಯನ್ನು ಆರಿಸಿ ಕಳುಹಿಸಲು ಉತ್ಸುಕರಾಗಿರುತ್ತೇವೆ. ಆದರೆ, ದುರಂತ ಅಂದರೆ, ಆಯ್ಕೆ ಆಗಿ ಹೋದವ ಕೇವಲ ತನ್ನ, ತನ್ನ ಕುಟುಂಬದ ಉದ್ಧಾರವನ್ನೇ ಸದಾ ಯೋಚಿಸುವುದು. ಇಲ್ಲಿ ನಮ್ಮ ಅರ್ಹತೆಯನ್ನೇ ನಾವು ಪ್ರಶ್ನಿಸಿಕೊಳ್ಳಬೇಕು. ನಿಜವಾದ ಅರ್ಹ ವ್ಯಕ್ತಿ ಯಾರು ಎಂಬುದನ್ನು ಅರಿಯುವ ಅರ್ಹತೆಯೂ ಇಲ್ಲದೆ, ಆಸೆ, ಆಮಿಷಗಳಿಗೆ ತುತ್ತಾಗಿ, ನಮ್ಮ ಪವಿತ್ರ ಮತವನ್ನೇ ಮಾರಾಟಕ್ಕಿಡುತ್ತೇವೆ. ಇಲ್ಲಿಂದಲೇ ಆರಂಭಗೊಳ್ಳುವುದು ವ್ಯವಸ್ಥೆಯ ಅಧಃ ಪತನ !? ಹಾಗೆ ನೋಡಿದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸರಿ ಸಾಟಿ ಇನ್ನಾವುದೂ ಇಲ್ಲ. ಆದರೇನು, ಹೇಗೆ ಬಳಸಿಕೊಳ್ಳಬೇಕು ಎಂಬ ಅರಿವಿನ ಕೊರತೆ. ಸ್ವಾತಂತ್ರ್ಯ ಸಿಕ್ಕು 79 ವರ್ಷಗಳಾದರೂ, ನಾವಿನ್ನೂ ಅತಂತ್ರ ಸ್ಥಿತಿಯಲ್ಲೇ ಇದ್ದೇವೆ. ಇದನ್ನು ಸರಿಪಡಿಸುವವರಾರು ಮತ್ತು ಹೇಗೆ?

– ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ಆರ್ಥಿಕತೆಯ ದ್ವಿಮುಖ ಸವಾಲು

ಕರ್ನಾಟಕ ಸರಕಾರವು ಕನಿಷ್ಠ ವೇತನವನ್ನು ಶೇ.60ರಷ್ಟು ಹೆಚ್ಚಿಸಿರುವುದು ಸ್ವಾಗತಾರ್ಹ. ಇದರಿಂದ ಒಂದು ಕೋಟಿಗೂ ಹೆಚ್ಚು ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಲಿದ್ದು, ಬಡತನ ನಿರ್ಮೂಲನೆ ಮತ್ತು ಆರ್ಥಿಕ ಚಲನಶೀಲತೆಗೆ ಇದು ಬಲ ನೀಡುತ್ತದೆ. ಬೆಂಗಳೂರಿನಲ್ಲಿ ಕನಿಷ್ಠ ವೇತನ ಇಪ್ಪತ್ತು ಐದು ಸಾವಿರ ತಲುಪಿರುವುದು ಶ್ರಮದ ಗೌರವವನ್ನು ಹೆಚ್ಚಿಸಿದೆ. ಆದರೆ, ನಾಣ್ಯಕ್ಕೆ ಇನ್ನೊಂದು ಮುಖವಿದೆ. ಈ ಹಠಾತ್ ಆರ್ಥಿಕ ಹೊರೆಯಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನಷ್ಟ ಅನುಭವಿಸಬಹುದು. ಇದು ಅನೌಪಚಾರಿಕ ವಲಯದಲ್ಲಿ ಉದ್ಯೋಗ ಕಡಿತಕ್ಕೆ ಕಾರಣವಾಗುವ ಭೀತಿಯೂ ಇದೆ. ಸರಕಾರವು ಕೇವಲ ಕಡ್ಡಾಯ ವೇತನ ನಿಗದಿಪಡಿಸಿದರೆ ಸಾಲದು ಉದ್ಯಮಗಳು ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸುತ್ತಿವೆಯೇ ಎಂದು ಕಠಿಣ ಮೇಲ್ವಿಚಾರಣೆ ನಡೆಸಬೇಕು. ಜತೆಗೆ ಸಣ್ಣ ಉದ್ಯಮಗಳಿಗೆ ತೆರಿಗೆ ವಿನಾಯಿತಿ ಅಥವಾ ಸಬ್ಸಿಡಿ ನೀಡಿ ಪ್ರೋತ್ಸಾಹಿಸಬೇಕು. ಆಗ ಮಾತ್ರ ಕಾರ್ಮಿಕರ ಹಿತರಕ್ಷಣೆ ಮತ್ತು ಕೈಗಾರಿಕಾ ಪ್ರಗತಿ ಎರಡೂ ಸಮತೋಲನದಿಂದ ಸಾಗಲು ಸಾಧ್ಯ.

– ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಜಿರಳೆ ಸಹವಾಸ ಕೈ ಬಿಟ್ಟು ಸೈದ್ಧಾಂತಿಕ ದೋಣಿ ಏರಲಿ

ರಾಜಬೀದಿ

ವಿನಾಯಕ ಮಠಪತಿ

vveditoped@gmail.com

ಸ್ವಾತಂತ್ರ್ಯ ನಂತರದಲ್ಲಿ ಭಾರತವನ್ನು ಸುದೀರ್ಘ ಅವಧಿಗೆ ಆಳಿದ ಪಕ್ಷ ಕಾಂಗ್ರೆಸ್. ಸಾಮಾಜಿಕ ನ್ಯಾಯ, ಶೋಷಿತರ ಪರ ಧ್ವನಿ, ಬಡವರ ಪರ ಚಿಂತನೆ ಎಂಬ ಅಂಶಗಳನ್ನು ಮುಂದಿಟ್ಟುಕೊಂಡು ದಶಕಗಳ ಕಾಲ ರಾಜಕಾರಣ ಮಾಡಿದ ಪಕ್ಷ ಈಗ ಕೇವಲ ಅಧಿಕಾರದ ಲಾಭಕ್ಕಾಗಿ ಯಾವುದೇ ಶಕ್ತಿಗಳ ಜತೆ ನಿಲ್ಲುತ್ತೇನೆ ಎಂಬ ಮನಸ್ಥಿತಿಗೆ ಬಂದಿರುವುದು ವಿಪರ್ಯಾಸವೇ ಸರಿ. ಅಷ್ಟೇ ಅಲ್ಲ, ಹಳ್ಳಿಯಿಂದ ದಿಲ್ಲಿಯವರೆಗೆ ತಮ್ಮದೇ ಕಾರ್ಯಕರ್ತರ ಪಡೆ ಹೊಂದಿರುವ ಪಕ್ಷವೊಂದು ಸೈದ್ಧಾಂತಿಕ ನಿಲುವನ್ನು ಬದಲಿಸಿಕೊಂಡು ಸಾಗಿರುವ ಹಾದಿ ನೋಡಿದರೆ ಭವಿಷ್ಯದಲ್ಲಿ ಉಂಟಾಗುವ ಕರಾಳ ಪರಿಣಾಮಗಳು ಈಗಲೇ ಗೋಚರಿಸುತ್ತಿದೆ.

ಒಂದಾನೊಂದು ಕಾಲದಲ್ಲಿ ದೇಶದಲ್ಲಿ ಕಾಂಗ್ರೆಸ್ ಹೊರತಾದ ಪಕ್ಷವನ್ನು ಜನ ಅನುಮಾನದಿಂದ ನೋಡುತ್ತಿದ್ದರು. ಗಾಂಧಿ ಕುಟುಂಬ ಹೊರತುಪಡಿಸಿ ನಮ್ಮನ್ನು ಆಳುವ ವ್ಯಕ್ತಿ ಇಲ್ಲವೇನೋ ಎಂಬ ಭ್ರಮೆಯಲ್ಲಿ ಅಸಂಖ್ಯಾತ ದೇಶವಾಸಿಗಳಿದ್ದರು. ಈಗಿನ ಕಾಂಗ್ರೆಸ್ ನಾಯಕರು ಹೇಳಿಕೊಳ್ಳುವಂತೆ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದೇ ನಾವೇ ಎಂಬ ಮಾತನ್ನು ಒಪ್ಪುವುದಾದರೆ ಈ ಪಕ್ಷ ಸ್ಥಾಪನೆಯಾಗಿ ಬರೋಬ್ಬರಿ 140 ವರ್ಷಗಳಾಗಿವೆ. ಇಂತಹ ಅದ್ಭುತ ಇತಿಹಾಸ ಹೊಂದಿರುವ ಪಕ್ಷವೊಂದು ಸದ್ಯ ಜಿರಳೆಯ ಹಿಂದೆ ಬಿದ್ದಿರುವುದು ಏಕೆ ಎಂಬ ಪ್ರಶ್ನೆ ಅನೇಕರಲ್ಲಿ ಮೂಡುವುದು ಸಹಜ.

ಕಳೆದ ಒಂದು ವಾರದಿಂದ ದೇಶದಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಸದ್ದು ಮಾಡುತ್ತಿದೆ. ದೇಶದ ಮುಖ್ಯ ನ್ಯಾಯಮೂರ್ತಿಯೊಬ್ಬರ ಒಂದು ಹೇಳಿಕೆಯಿಂದ ಹುಟ್ಟಿ ಕೊಂಡ ಚಿಂತನೆ ಎಂದು ಕಾಕ್ರೋಚ್ ಪಕ್ಷದ ಸಂಸ್ಥಾಪಕ ಹೇಳುತ್ತಾನೆ. ಜತೆಗೆ ಪ್ರಸ್ತುತ ದೇಶದ ಆಡಳಿತ ವ್ಯವಸ್ಥೆಯ ಕುರಿತು ಗಮನ ಸೆಳೆಯಲು ಹುಟ್ಟಿಕೊಂಡ ಅಭಿಯಾನ ಎಂಬುದು ಕೆಲವರ ವಾದ. ಈ ಮಧ್ಯೆ ಸುದೀರ್ಘ ಇತಿಹಾಸ ಹೊಂದಿರುವ ಕೆಲ ರಾಜಕೀಯ ಪಕ್ಷಗಳು ಕಾಕ್ರೋಚ್‌ಗೆ ಬೆಂಬಲ ಘೋಷಿಸಿಯಾಗಿದೆ. ಇದೆಲ್ಲ ಏನೇ ಇರಬಹುದು, ದೇಶದ ಪ್ರಧಾನಿಯೊಬ್ಬರನ್ನು ಟೀಕಿಸುವ ದೃಷ್ಟಿಯಿಂದ ಹುಟ್ಟಿಕೊಂಡ ಕಾರಣಕ್ಕೆ ಕಾಕ್ರೋಚ್ ಜನತಾ ಪಕ್ಷವನ್ನು ಕಾಂಗ್ರೆಸ್ ಬಿಗಿದಪ್ಪಿಕೊಂಡಿರುವುದು ಕಣ್ಣಿಗೆ ಕಾಣುವ ಸತ್ಯ. ಕೈ ನಾಯಕರು ತಮ್ಮದೊಂದು ರಾಜಕೀಯ ಪಕ್ಷ ಎಂಬುವುದನ್ನೇ ಮರೆತು ಸೈದ್ಧಾಂತಿಕ ದೃಷ್ಟಿಕೋನ, ಗೊತ್ತು ಗುರಿ ಇಲ್ಲದ ಅಭಿಯಾನದ ಹಿಂದೆ ಬಿದ್ದಿರುವುದು ಈ ನಾಯಕರ ಮನಸ್ಥಿತಿ ಯಾವ ಮಟ್ಟಿಗೆ ಹಾಳಾಗಿದೆ ಎಂಬುದನ್ನು ತೋರಿಸುತ್ತದೆ. ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ಬದ್ಧತೆ ಈ ಮಟ್ಟಿಗೆ ಪಾತಾಳಕ್ಕೆ ಕುಸಿಯಿತಾ ಎಂಬ ಮಾತು ಕೇಳಿಬರುತ್ತಿವೆ.

ಸದ್ಯ ಕಾಂಗ್ರೆಸ್ ಮನಸ್ಥಿತಿ ಯಾವ ಮಟ್ಟಿಗೆ ಇದೆ ಎಂದರೆ ನರೇಂದ್ರ ಮೋದಿ ವಿರುದ್ಧ ಜಗತ್ತಿನ ಯಾವುದೇ ಭಾಗದಲ್ಲಿ ಆಂದೋಲನ ನಡೆದರೆ ಹಿಂದೆ ಮುಂದೆ ನೋಡದೆ ವಿರೋಧಿಗಳ ಬೆಂಬಲಕ್ಕೆ ನಿಲ್ಲುವ ಅವಸರದಲ್ಲಿದೆ. ಸುಮಾರು ಆರು ದಶಕಗಳಿಗೂ ಹೆಚ್ಚು ಅವಧಿಗೆ ಈ ದೇಶದ ಆಡಳಿತ ಚುಕ್ಕಾಣಿ ಹಿಡಿದ ಪಕ್ಷವೊಂದು ತನ್ನೆಲ್ಲಾ ಗತಕಾಲದ ಇತಿಹಾಸ ಗಾಳಿಗೆ ತೂರಿ ಇಂದು ನಡೆದುಕೊಳ್ಳುವ ಮನಸ್ಥಿತಿ ನೋಡಿದರೆ ಎಂತವರಿಗೂ ಅರ್ಥವಾಗುತ್ತದೆ, ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ಚಿಂತನೆ ಕುಸಿದಿದೆ ಎಂದು.

ಇದಕ್ಕೂ ಮೀರಿ ಅಹಿಂದ ನಾಯಕನಾಗಿ ದಶಕಗಳ ಕಾಲ ಹೋರಾಟದಿಂದಲೇ ಬೆಳೆದು ಸಿಎಂ ಹುದ್ದೆ ಅಲಂಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೀಟ್ ಹಗರಣ ಖಂಡಿಸಿ ನಡೆದ ಹೋರಾಟದ ವೇದಿಕೆಯಲ್ಲಿ ನಾನೂ ಕಾಕ್ರೋಚ್ ಎಂಬ ಟಿ–ಶರ್ಟ್ ಬಿಡುಗಡೆ ಮಾಡುವ ಮೂಲಕ ಅವರೂ ಜಿರಳೆ ಪಕ್ಷಕ್ಕೆ ಬೆಂಬಲ ನೀಡಿದ್ದಾಗಿದೆ.

ಒಂದು ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ಕೆಲವು ಜವಾಬ್ದಾರಿಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಹೊಸ ಚಿಂತನೆಗಳು ನಮ್ಮ ದೇಶದಲ್ಲಿ ಹುಟ್ಟುವುದು ಸಹಜ ಆದರೆ ಸುದೀರ್ಘ ಅವಧಿಗೆ ದೇಶವನ್ನಾಳಿದ ಅನುಭವ ಹೊಂದಿರುವ ಇವರು ಹೊಸ ಚಿಂತನೆಗಳ ಆಳ, ಅಗಲದ ಕುರಿತು ಪರಿಶೀಲನೆ ಮಾಡಬೇಕು. ದೇಶ ಒಡೆಯುವ ಉದ್ದೇಶಕ್ಕಾಗಿ ಹುಟ್ಟಿಕೊಂಡ ಚಿಂತನೆಗಳ ಜತೆಗೆ ರಾಜಕೀಯ ಲಾಭಕ್ಕಾಗಿ ನಿಂತರೆ ಮುಂದೊಮ್ಮೆ ಇದೇ ತಿರುಗುಬಾಣವಾಗುವ ಸಾಧ್ಯತೆಯೂ ಹೆಚ್ಚು. ಅಪ್ಪ, ಅಮ್ಮ ಇಲ್ಲದ, ನಾಯಕತ್ವ ಗುಣಗಳಿಲ್ಲದ, ದೇಶದ ಜನರ ಭಾವನೆಗಳಿಗೆ ಬೆಲೆ ಇಲ್ಲದ ಕೇವಲ ರಾಜಕೀಯ ವಿರೋಧ ಹಾಗೂ ಆಂತರಿಕ ಭದ್ರತೆಗೆ ಸವಾಲೆಸೆಯುವ ಕಾಕ್ರೋಚ್ ಜನತಾ ಪಕ್ಷದಂತಹ ಹೊಸ ಚಿಂತನೆಗಳ ಹಿಂದೆ ಬೀಳದೆ ಕಾಂಗ್ರೆಸ್ ದಶಕಗಳಿಂದ ಕಟ್ಟಿಕೊಂಡು ಬಂದ ತನ್ನ ಅದ್ಭುತ ಸೈದ್ಧಾಂತಿಕ ಬದ್ಧತೆಯ ಜತೆ ಸಾಗಿದರೆ ದೇಶಕ್ಕೂ ಒಳಿತು ಪಕ್ಷಕ್ಕೂ ಒಳಿತು. ಕಾಂಗ್ರೆಸ್ ಜಿರಳೆಯ ಸಹವಾಸ ಬಿಟ್ಟು ಸೈದ್ಧಾಂತಿಕ ದೋಣಿಯಲ್ಲಿ ಸಾಗಿದರೆ ಚೆಂದ.

ಪಕ್ಷ ಹುಟ್ಟಿದ್ದು ಭಾರತದಲ್ಲಲ್ಲ

ಮೇ.15 ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಆಡಿದ ಆ ಮಾತು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿತ್ತು. ಪ್ರಕರಣವೊಂದರ ಕುರಿತು ನಡೆದ ವಿಚಾರಣೆ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅಕ್ರಮವಾಗಿ ನುಸುಳಿಕೊಂಡು ಇಡೀ ವ್ಯವಸ್ಥೆಯನ್ನು ಹಾಳುಮಾಡಲಾಗುತ್ತಿದೆ. ಉದ್ಯೋಗದ ಕೊರತೆ ಮತ್ತು ತಮ್ಮ ವೃತ್ತಿಯಲ್ಲಿ ಸ್ಥಾನ ಪಡೆಯಲು ಅಸಮರ್ಥತೆಯಿಂದಾಗಿ ಕೆಲವು ಯುವಕರು ಎಲ್ಲೆಡೆ ಜಿರಳೆಗಳಂತೆ ಹರಡುತ್ತಿದ್ದಾರೆ. ಅವರಲ್ಲಿ ಕೆಲವರು ಮಾಧ್ಯಮಗಳನ್ನು ಸೇರುತ್ತಾರೆ, ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗುತ್ತಾರೆ, ಕೆಲವರು ಆರ್‌ಟಿಐ ಕಾರ್ಯಕರ್ತರಾಗುತ್ತಾರೆ, ಕೆಲವರು ಈ ರೀತಿಯ ಕಾರ್ಯಕರ್ತರಾಗುತ್ತಾರೆ ಮತ್ತು ನಂತರ ಎಲ್ಲರ ಮೇಲೆ ದಾಳಿ ಮಾಡಲು ಪ್ರಾರಂಭಿಸುತ್ತಾರೆ ಎಂದು ಹೇಳಿಕೆ ನೀಡಿದ್ದರು.

ಈ ಜಿರಳೆ ಹೇಳಿಕೆಯನ್ನೇ ಆಧಾರವಾಗಿಟ್ಟುಕೊಂಡು ನ್ಯಾಯಾಂಗ, ಶಾಸಕಾಂಗ ಹಾಗೂ ಕಾರ್ಯಾಂಗದಲ್ಲಿ ಆಗುತ್ತಿರುವ ಲೋಪಗಳ ಕೆಲ ಉದಾಹರಣೆಗಳನ್ನು ಎತ್ತಿತೋರಿಸುವ ಉದ್ದೇಶದಿಂದ ಕಾಕ್ರೋಚ್ ಜನತಾ ಪಾರ್ಟಿ ಹೆಸರಿನಲ್ಲಿ 'ಅಭಿಜಿತ್ ದಿಪ್ಕೆ' ಎಂಬ ಯುವಕ ಸಾಮಾಜಿಕ ಜಾಲತಾಣದಲ್ಲಿ ಆಂದೋಲನ ಸೃಷ್ಟಿಸಿದ್ದಾನೆ. ನೋಡನೋಡುತ್ತಿದ್ದಂತೆ ಇನ್ಸ್ಟಾಗ್ರಾಮ್‌ನಲ್ಲಿ 14 ದಶಲಕ್ಷ ಹಿಂಬಾಲಕರನ್ನು ಪಡೆದುಕೊಂಡ ಪೇಜ್ ಸಾಕಷ್ಟು ಸಂಚಲನ ಹುಟ್ಟುಹಾಕಿತ್ತು.

ವಿಡಂಬನಾತ್ಮಕ ರಾಜಕೀಯ ಚಳವಳಿಗೆ ಅನೇಕರು ಕಡಿಮೆ ಅವಧಿಯಲ್ಲೇ ಅಪಾರ ಬೆಂಬಲವನ್ನೂ ಸೂಚಿಸಿದ್ದಾಗಿತ್ತು. ಸಮಯ ಕಳೆದಂತೆ ಈ ವಿಡಂಬನಾತ್ಮಕ ರಾಜಕೀಯ ಚಳವಳಿಯ ಹಿಂದೆ ಕಾಣದ ಕೈಗಳ ಆಟ ಇರುವುದೂ ಸ್ಪಷ್ಟವಾಗಿದೆ. ಮೋದಿ ವಿರೋಧಿ ಒಕ್ಕೂಟದಿಂದ ಪ್ರಾರಂಭವಾದ ಚಳವಳಿಯನ್ನು ರೂಪಿಸಿರುವವರು ಇದೇ ಆಮ್ ಆದ್ಮಿ ಪಕ್ಷ ಎಂಬುವುದಂತು ಗುಟ್ಟಾಗಿ ಉಳಿದಿಲ್ಲ. ಇನ್ನೂ ಈ ಆಂದೋಲನದ ಮುಂಚೂಣಿ ವ್ಯಕ್ತಿಗಳು ಅಮೆರಿಕದಲ್ಲಿ ಕುಳಿತು ಚಳವಳಿ ನಡೆಸುತ್ತಿರುವುದು ದೇಶದ ಜನಕ್ಕೆ ತಿಳಿಯದಾಗಿದೆ. ಈ ಮಧ್ಯೆ ದೇಶದ ಆಂತರಿಕ ಭದ್ರತೆಗೆ ಸವಾಲು ಎಸೆಯುವ ಹಿನ್ನೆಲೆಯಲ್ಲಿ ಇಡೀ ಕಾಕ್ರೋಚ್ ಪಾರ್ಟಿಯ ಅಕೌಂಟ್‌ಗಳನ್ನು ಸಾಮಾಜಿಕ ಜಾಲತಾಣದಿಂದ ಅಳಿಸಿ ಹಾಕುವ ಮೂಲಕ ಬಂದ ವೇಗದಲ್ಲೇ ಜಿರಳೆ ಗೂಡು ಸೇರಿಯಾಗಿದೆ.

ಜೆನ್ ಝಿ ಹೋರಾಟಕ್ಕೆ ಸಿದ್ಧತೆ

ಇತ್ತೀಚಿನ ದಿನಗಳಲ್ಲಿ ಜಗತ್ತಿನ ಅನೇಕ ರಾಷ್ಟ್ರಗಳು ಜೆನ್ ಝಿ ಮಾದರಿ ಹೋರಾಟಕ್ಕೆ ತುತ್ತಾಗಿವೆ. ಇದರಲ್ಲಿ ಕೆಲ ರಾಷ್ಟ್ರಗಳಲ್ಲಿ ಆಡಳಿತಾತ್ಮಕ ಬದಲಾವಣೆಗಳಾಗಿವೆ. ಇನ್ನೂ ಕೆಲವು ಕಡೆ ಭ್ರಷ್ಟಾಚಾರ, ತೆರಿಗೆ ಹೆಚ್ಚಳ ಸೇರಿದಂತೆ ಆಡಳಿತ ಪಕ್ಷದ ವಿರುದ್ಧ ಆಕ್ರೋಶ ಹೊರಹಾಕುವ ಯೋಜನಾಬದ್ಧ ಹೋರಾಟಗಳು ನಡೆದಿದ್ದು ಇವು ಯಶಸ್ವಿಯಾಗಿವೆ. ಆದರೆ, ಒಂದು ದೇಶದ ಆಂತರಿಕ ಭದ್ರತೆ ಸೇರಿದಂತೆ ಕೋಟ್ಯಂತರ ಜನರ ಭಾವನೆಗೆ ವಿರುದ್ಧವಾಗಿ ಷಡ್ಯಂತ್ರ ನಡೆಸುವುದರ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವ ಮೂಲ ಉದ್ದೇಶದಿಂದ ನಡೆಯುವ ಹೋರಾಟಗಳ ಮೇಲೆ ಒಂದು ಕಣ್ಣಿಡುವುದು ಅನಿವಾರ್ಯ.

ನೇಪಾಳ, ಬಾಂಗ್ಲಾದೇಶ, ಇಂಡೋನೇಷ್ಯಾ, ಮೊರೊಕ್ಕೊ, ಪೆರು, ಕೀನ್ಯಾ ದೇಶಗಳು ಈಗಾಗಲೇ ಜೆನ್ ಝಿ ಹೋರಾಟಕ್ಕೆ ಸಿಲುಕಿ ನಲುಗಿರುವ ದೇಶಗಳು. ಯಾವ ವ್ಯವಸ್ಥೆಯನ್ನು ಬದಲಾಯಿಸಿ ದೇಶದ ಜನರ ಸಂಕಷ್ಟ ನಿವಾರಿಸುವ ಮಾತು ಕೊಟ್ಟು ನಡೆಸಿದ ಬಾಂಗ್ಲಾದೇಶದ ಜೆನ್ ಝಿ ಹೋರಾಟ ಈಗ ಹಳ್ಳ ಹಿಡಿದಾಗಿದೆ. ಮೂಲಭೂತವಾದಿಗಳ ಕೈಯಲ್ಲಿ ಸಿಲುಕಿ ದೇಶ ಹಿಂದೆಂದಿಗಿಂತಲೂ ಹೆಚ್ಚು ನರಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ದುರಂತ ಉದಾಹರಣೆಗಳು ನಮ್ಮ ಮುಂದಿವೆ. ಭಾರತದಲ್ಲಿ ಈ ರೀತಿಯ ಜೆನ್ ಝಿ ಹೋರಾಟ ನಡೆಸಿ ಇಲ್ಲಿನ ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಹಾಳು ಮಾಡುವ ಪ್ರಯತ್ನಗಳು ನಡೆಯುತ್ತಿರಬಹುದು. ಆದರೆ, ಇದನ್ನು ಎಚ್ಚರಿಕೆಯಿಂದ ತಡೆಗಟ್ಟುವ ಪ್ರಯತ್ನ ನಿರಂತರವಾಗಿ ಸಾಗಬೇಕು.

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಪ್ರಶ್ನೆ ಕೇಳಲು ಸಾಕಷ್ಟು ಅವಕಾಶಗಳಿವೆ. ಜತೆಗೆ ಪ್ರಜಾಪ್ರಭುತ್ವ ಅಡಿಯಲ್ಲಿ ಸ್ಥಾಪನೆಯಾದ ಸರಕಾರಗಳಿಗೆ ಪಾಠ ಕಲಿಸಲು ಪ್ರಜೆಗಳಿಗೆ ಸಾಕಷ್ಟು ಅವಕಾಶ ಕಲ್ಪಿಸಲಾಗಿದೆ.

ಮತದಾನದ ಹಕ್ಕನ್ನು ಬಳಸಿ ರಾಜಕೀಯ ವ್ಯವಸ್ಥೆಯ ಮೂಗುದಾರವನ್ನು ಪ್ರಜೆಗಳೇ ಹಿಡಿದುಕೊಳ್ಳುವ ಅವಕಾಶ ನಮ್ಮಲ್ಲಿದೆ. ಇಂತಹ ಅತ್ಯುನ್ನತ ಅವಕಾಶ ಬಳಸಿಕೊಂಡು ವ್ಯವಸ್ಥೆ ವಿರುದ್ಧ ಸಂಘಟಿತ ಹೋರಾಟ ಮಾಡುತ್ತ ಬದಲಾವಣೆ ತರುವ ಗುಣ ಭಾರತೀಯರಿಗೆ ರಕ್ತದಲ್ಲೇ ಬಂದಿದೆ. ನಮ್ಮ ದೇಶಕ್ಕೆ ಯಾವತ್ತೂ ಜೆನ್ ಝಿ ಮಾದರಿ ಹೋರಾಟ ಸ್ಫೂರ್ತಿಯಾಗಲಾರದು.

ಹೋರಾಟದ ಗುಣ ಭಾರತೀಯರಿಗೆ ಹುಟ್ಟಿನಿಂದಲೂ ಇದೆ. ಪರಕೀಯರ ಆಳ್ವಿಕೆ ವಿರುದ್ಧ ದಶಕಗಳ ಕಾಲ ಹೋರಾಡಿ ಸ್ವಾತಂತ್ರ್ಯ ಪಡೆದ ಧೀಮಂತ ದೇಶ ನಮ್ಮದು. ಇಂತಹ ಮಣ್ಣಿನಲ್ಲಿ ಜೆನ್ ಝಿ ಮಾದರಿ ಹೋರಾಟ ನಡೆಸಿ ದೇಶದ ಮಾನ ಹರಾಜು ಹಾಕುವ ಪ್ರಯತ್ನಕ್ಕೆ ಎಂದಿಗೂ ಯಶಸ್ಸು ಸಿಗುವುದಿಲ್ಲ. ಜತೆಗೆ ನಮ್ಮನ್ನಾಳುವ ಸರಕಾರಗಳು ಜನರ ಬೇಡಿಕೆಗಳ ಕುರಿತು ಅರಿವು ಇಟ್ಟುಕೊಳ್ಳಬೇಕಾಗುತ್ತದೆ. ಪ್ರಧಾನಿಯೇ ಇರಲಿ, ಮುಖ್ಯಮಂತ್ರಿಯೇ ಇರಲಿ, ಯಾವುದೇ ಪಕ್ಷದ ಸರಕಾರ ಆಡಳಿತದಲ್ಲಿರಲಿ. ಜನರ ಭಾವನೆಗೆ ತಕ್ಕಂತೆ ಕೆಲಸ ಮಾಡುವುದನ್ನು ನಿರಂತರವಾಗಿ ಮಾಡುತ್ತಿದ್ದರೆ ಜಿರಳೆಯ ಕಾಟ ತಪ್ಪುತ್ತದೆ.

ಪರ್ವದಿನ

ಮೊಹಮ್ಮದ್ ಅಜರುದ್ದೀನ್ ಅಕ್ಕಿಹೆಬ್ಬಾಳು

ತ್ಯಾಗ, ಸಹಬಾಳ್ವೆಯ ಹಬ್ಬ ಬಕ್ರೀದ್

ಇಸ್ಲಾಂ ಧರ್ಮದ ಅತ್ಯಂತ ಪವಿತ್ರ ಮತ್ತು ಮಹತ್ವದ ಹಬ್ಬಗಳಲ್ಲಿ ಒಂದಾದ 'ಬಕ್ರೀದ್' ಅಥವಾ 'ಈದ್–ಉಲ್–ಅಧಾ' ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ, ಬದಲಾಗಿ ಇದು ಮಾನವೀಯತೆಯ ಉನ್ನತ ಮೌಲ್ಯಗಳನ್ನು ಸಾರುವ ಒಂದು ಮಹಾನ್ ಸಂದೇಶವಾಗಿದೆ. ತ್ಯಾಗ, ಬಲಿದಾನ, ಅಚಲ ನಂಬಿಕೆ ಮತ್ತು ಸಮಾಜದ ಕಡೆಗಿನ ಜವಾಬ್ದಾರಿ ನೆನಪಿಸುವ ಈ ಹಬ್ಬ ಪ್ರಪಂಚದಾದ್ಯಂತ ಕೋಟ್ಯಂತರ ಮುಸ್ಲಿಂ ಬಾಂಧವರ ಪಾಲಿಗೆ ಅತ್ಯಂತ ಭಕ್ತಿಪೂರ್ವಕ ದಿನ. ಪ್ರವಾದಿ ಇಬ್ರಾಹಿಂ ಅವರ ಅಚಲ ದೈವಭಕ್ತಿಯ ಸ್ಮರಣಾರ್ಥ ಆಚರಿಸಲಾಗುವ ಈ ಹಬ್ಬ, ಮನುಷ್ಯನು ದೇವರ ಆದೇಶಕ್ಕೆ ಹೇಗೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಳ್ಳಬೇಕು ಎಂಬುದನ್ನು ತೋರಿಸಿಕೊಟ್ಟಿದೆ. ಈ ಹಬ್ಬದ ಮೂಲ ಉದ್ದೇಶ ನಮ್ಮಲ್ಲಿರುವ ಅಹಂಕಾರ, ಸ್ವಾರ್ಥ, ಕೆಟ್ಟ ಗುಣ ತ್ಯಾಗ ಮಾಡಿ, ದೇವರ ಪ್ರೀತಿ ಮತ್ತು ಸಮಾಜದ ಕಲ್ಯಾಣಕ್ಕಾಗಿ ಬದುಕುವುದಾಗಿದೆ.



ಬಕ್ರೀದ್ ಹಬ್ಬದ ಇತಿಹಾಸ ಸಾವಿರಾರು ವರ್ಷ ಹಳೆಯದು. ಪ್ರವಾದಿ ಇಬ್ರಾಹಿಂ ಅವರು ದೇವರಿಗೆ ಅತ್ಯಂತ ಪ್ರಿಯವಾದದ್ದನ್ನು ಬಲಿಕೊಡಲು ಕನಸಿನಲ್ಲಿ ಆದೇಶವನ್ನು ಪಡೆದರು. ಅವರು ತಮ್ಮ ಅತ್ಯಂತ ಪ್ರೀತಿಯ ಪುತ್ರ ಇಸ್ಮಾಯಿಲ್ ಅವರನ್ನು ಬಲಿಕೊಡಲು ಸಿದ್ಧರಾದಾಗ, ಅವರ ಅಚಲವಾದ ದೈವಭಕ್ತಿಯನ್ನು ಕಂಡು ದೇವರು ಮೆಚ್ಚಿಕೊಂಡನು. ಅವರ ಭಕ್ತಿಯ ಪರೀಕ್ಷೆಯ ಅಂತಿಮ ಕ್ಷಣದಲ್ಲಿ, ದೇವರು ಇಸ್ಮಾಯಿಲ್ ಅವರ ಬದಲಾಗಿ ಒಂದು ಪ್ರಾಣಿಯನ್ನು ಬಲಿಕೊಡಲು ಕಳುಹಿಸಿದನು. ಇಂದಿಗೂ ಮುಸ್ಲಿಮರು ಈ ದಿನದಂದು ಪ್ರಾಣಿ ಬಲಿದಾನವನ್ನು ಮಾಡುವುದರ ಮೂಲಕ ಪ್ರವಾದಿ ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ದೇವರ ಆದೇಶಕ್ಕೆ ತಲೆಬಾಗುವ ಸಂಕೇತವನ್ನು ಪ್ರದರ್ಶಿಸುತ್ತಾರೆ.

ಬಕ್ರೀದ್ ಸಾಮಾಜಿಕ ಸಮಾನತೆಯನ್ನು ಸಾರುವ ಒಂದು ಮಹಾನ್ ವೇದಿಕೆ. ಹಬ್ಬದ ದಿನ ಮುಸ್ಲಿಮರು ಹೊಸ ಬಟ್ಟೆಗಳನ್ನು ಧರಿಸಿ, ಮಸೀದಿಗಳಿಗೆ ತೆರಳಿ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ. ಈ ಸಾಮೂಹಿಕ ಪ್ರಾರ್ಥನೆಯು ಶ್ರೀಮಂತ–ಬಡವ ಎಂಬ ಬೇಧಭಾವವಿಲ್ಲದೆ ಎಲ್ಲರನ್ನೂ ಒಂದೇ ಸಾಲಿನಲ್ಲಿ ನಿಲ್ಲಿಸುತ್ತದೆ, ಇದು ಇಸ್ಲಾಂ ಧರ್ಮದ ಸಮಾನತೆಯ ಸಿದ್ಧಾಂತಕ್ಕೆ ಸಾಕ್ಷಿಯಾಗಿದೆ. ಬಲಿಕೊಟ್ಟ ಪ್ರಾಣಿಯ ಮಾಂಸವನ್ನು ಮೂರು ಸಮಾನ ಭಾಗಗಳಾಗಿ ವಿಂಗಡಿಸುವ ಪದ್ಧತಿಯು ಬಹಳ ವೈಜ್ಞಾನಿಕ ಮತ್ತು ಸಾಮಾಜಿಕ ಮಹತ್ವವನ್ನು ಹೊಂದಿದೆ. ಒಂದು ಭಾಗವನ್ನು ಬಡವರು ಮತ್ತು ನಿರ್ಗತಿಕರಿಗಾಗಿ, ಇನ್ನೊಂದು ಭಾಗವನ್ನು ಬಂಧು–ಮಿತ್ರರಿಗಾಗಿ, ಮತ್ತು ಮೂರನೇ ಭಾಗವನ್ನು ತಮ್ಮ ಕುಟುಂಬಕ್ಕಾಗಿ ಇರಿಸಿಕೊಳ್ಳುತ್ತಾರೆ.

ಈ ಹಬ್ಬವು ಮುಸ್ಲಿಂ ಸಮಾಜದಲ್ಲಿ ಸಹೋದರತ್ವ ಮತ್ತು ಸ್ನೇಹದ ಬಂಧವನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಬ್ಬದ ದಿನದಂದು ಜನರು ತಮ್ಮ ಹಳೆಯ ಮುನಿಸುಗಳನ್ನು ಮರೆತು, ಪರಸ್ಪರ ಅಪ್ಪುಗೆಯ ಮೂಲಕ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಈದ್ ಮುಬಾರಕ್ ಎಂಬ ಮಾತು ಕೇವಲ ಹಾರೈಕೆಯಲ್ಲ, ಅದು ಪ್ರೀತಿ ಮತ್ತು ಗೌರವದ ಸಂಕೇತ. ಮನೆ ಮನೆಗೆ ತೆರಳಿ ಸಿಹಿತಿಂಡಿ ಹಂಚುವುದು, ನೆರೆಹೊರೆಯವರೊಂದಿಗೆ ಹಬ್ಬದ ಊಟ ಸವಿಯುವುದು ಮತ್ತು ಬಡವರಿಗೆ ದಾನ ಮಾಡುವುದು ಈ ದಿನದ ವಿಶೇಷತೆ. ಈ ಆಚರಣೆಗಳು ಸಮಾಜದಲ್ಲಿನ ಅಂತರವನ್ನು ಕಡಿಮೆ ಮಾಡಿ, ಎಲ್ಲರನ್ನೂ ಒಂದು ಕುಟುಂಬದಂತೆ ಬದುಕಲು ಪ್ರೇರೇಪಿಸುತ್ತವೆ. ಹಜ್ ಯಾತ್ರೆ ಇಸ್ಲಾಂ ಧರ್ಮದ ಐದು ಸ್ತಂಭಗಳಲ್ಲಿ ಒಂದಾಗಿದ್ದು, ಬಕ್ರೀದ್ ಹಬ್ಬದ ಸಮಯದಲ್ಲಿ ಅನೇಕ ಮುಸ್ಲಿಮರು ಪವಿತ್ರ ಮಕ್ಕಾಗೆ ತೆರಳಿ ಯಾತ್ರೆಯನ್ನು ಪೂರೈಸುತ್ತಾರೆ. ಮಕ್ಕಾದ ಕಾಬಾದ ದರ್ಶನ ಮತ್ತು ಯಾತ್ರೆಯು ಮುಸ್ಲಿಮರ ಪಾಲಿಗೆ ಒಂದು ಜೀವನದ ಸಾರ್ಥಕ ಕ್ಷಣವಾಗಿದೆ.

ಬಕ್ರೀದ್ ಸಂದರ್ಭದಲ್ಲಿ ದಾನ–ಧರ್ಮಗಳಿಗೂ ಹೆಚ್ಚಿನ ಮಹತ್ವವಿದೆ. ಬಡವರಿಗೆ ಸಹಾಯ ಮಾಡುವುದು, ಅನಾಥರ ಅಗತ್ಯಗಳನ್ನು ಪೂರೈಸುವುದು ಮತ್ತು ರೋಗಿಗಳ ಆರೋಗ್ಯ ವಿಚಾರಿಸುವುದು ಧರ್ಮದ ಒಂದು ಭಾಗ. ಇಸ್ಲಾಂ 'ಜಕಾತ್' ಅಥವಾ ದಾನದ ಮೂಲಕ ಸಂಪತ್ತಿನ ಹಂಚಿಕೆಯನ್ನು ಒತ್ತಿಹೇಳುತ್ತದೆ. ಈ ಹಬ್ಬ ಸಾಮಾಜಿಕ ಸಾಮರಸ್ಯಕ್ಕೆ ನಾಂದಿ ಹಾಡುತ್ತದೆ. ವಿವಿಧ ಧರ್ಮದ ಸ್ನೇಹಿತರನ್ನು ಮತ್ತು ಬಂಧುಗಳನ್ನು ಮನೆಗೆ ಆಹ್ವಾನಿಸಿ, ಸಂಭ್ರಮ ಹಂಚಿಕೊಳ್ಳುವ ಮೂಲಕ ಐಕ್ಯತೆ ಬಲಪಡಿಸಲು ಇದು ಸಹಕಾರಿ. ಬಕ್ರೀದ್ ಹಬ್ಬ ಆತ್ಮಾವಲೋಕನಕ್ಕೆ ಒಂದು ಸುಂದರ ಸಮಯ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:131

ಸಮಾಚಾರ ಸಣ್ಣದಲ್ಲ

ಮಧು ಹಂತಕರಿಗೆ ಆಜೀವ ಸೆರೆವಾಸ

ಕೊಚ್ಚಿ: 2018ರಲ್ಲಿ ಬುಡಕಟ್ಟು ಜನಾಂಗದ ಅಟ್ಟಪ್ಪಾಡಿ ಮಧು ಎಂಬಾತನನ್ನು ಉದ್ರಿಕ್ತ ಗುಂಪೊಂದು ಅಟ್ಟಾಡಿಸಿಕೊಂಡು ಕಲ್ಲು-ದೊಣ್ಣೆಗಳಿಂದ ಹೊಡೆದು ಬರ್ಬರವಾಗಿ ಹತ್ಯೆ ಮಾಡಿದ್ದ ಪ್ರಕರಣದಲ್ಲಿ 12 ಆರೋಪಿಗಳನ್ನು ದೋಷಿಗಳು ಎಂದು ಹೈಕೋರ್ಟ್‌ನ ಕೊಚ್ಚಿ ವಿಭಾಗೀಯ ಪೀಠ, ಸೋಮವಾರ ಮಹತ್ವದ ತೀರ್ಪು ನೀಡಿದೆ. 12 ಆರೋಪಿಗಳಿಗೂ ಜೀವಾವಧಿ ಸೆರೆವಾಸದ ಶಿಕ್ಷೆ ವಿಧಿಸಿದೆ. ಆದರೆ, 1ನೇ ಆರೋಪಿಯನ್ನು ಖುಲಾಸೆಗೊಳಿಸಿದೆ. 16 ಆರೋ ಪಿಯ ಶಿಕ್ಷೆಯಲ್ಲಿ ಬದಲಾವಣೆ ಮಾಡಿ ಸೋಮವಾರ ತೀರ್ಪು ಪ್ರಕಟಿಸಿದೆ. ಬುಡಕಟ್ಟು ಜನಾಂಗದ ವ್ಯಕ್ತಿಯನ್ನು ಸಾರ್ವಜನಿಕವಾಗಿ ಅಟ್ಟಾಡಿಸಿ ಕೊಂಡು ಹೊಡೆದ ಕೊಂದ ಪ್ರಕರಣ ಕ್ರೂರ ಮೃಗಗಳು ಬೇಟೆಯಾಡಿದಂತೆ ಇದೆ ಎಂದು ನ್ಯಾಯಾಧೀಶ ಎ.ರಾಜಾ ವಿಜಯರಾಘವನ್ ಮತ್ತು ನ್ಯಾ.ಕೆ.ವಿ. ಜಯಕುಮಾರ್ ಅವರು ಪೀಠ ಅಭಿಪ್ರಾಯಪಟ್ಟಿದೆ. ಭಾರತೀಯ ದಂಡ ಸಂಹಿತೆಯ(ಐಪಿಸಿ) ಸೆಕ್ಷನ್ 304, ಎಸ್‌ಸಿ/ಎಸ್‌ಟಿ ಕಾಯಿದೆಯ ಸೆಕ್ಷನ್ 3(2)(4) ಮತ್ತು ಐಪಿಸಿ ಸೆಕ್ಷನ್ 149ರಡಿ ಶಿಕ್ಷೆ ವಿಧಿಸಲಾಗಿದೆ.

ಸಣ್ಣ ರೈತರ 50,000 ರು. ಬೆಳೆ ಸಾಲ ಮನ್ನಾ

ಚೆನ್ನೈ: ತಮಿಳುನಾಡು ರಾಜ್ಯದ ಸಣ್ಣ ಹಿಡುವಳಿದಾರರ 50,000 ರು.ವರೆಗಿನ ಸಹಕಾರಿ ಬ್ಯಾಂಕ್ ಬೆಳೆ ಸಾಲವನ್ನು ಮನ್ನಾ ಮಾಡುವುದಾಗಿ ಮುಖ್ಯಮಂತ್ರಿ ವಿಜಯ್ ಘೋಷಿಸಿದ್ದಾರೆ. ದೊಡ್ಡ ರೈತರಿಗೆ ಬೆಳೆಸಾಲದ ಪರಿಹಾರ ಮೊತ್ತವಾಗಿ 5,000 ರು. ಘೋಷಿಸಿದ್ದಾರೆ. ಈ ಯೋಜನೆಯಿಂದ 14.22 ಲಕ್ಷ ರೈತರಿಗೆ ಪ್ರಯೋಜನವಾಗುವ ನಿರೀಕ್ಷೆಯಿದೆ. ಇದರಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ 2,044 ಕೋಟಿ ರು. ವೆಚ್ಚವಾಗಲಿದೆ ಎಂದು ಸಿಎಂ ಕಚೇರಿ ತಿಳಿಸಿದೆ.

ಫ್ರಾನ್ಸ್ ಗರಿಷ್ಠ ತಾಪ: ಯಾತ್ರಿಕರ ಪರಿತಾಪ

ಪ್ಯಾರಿಸ್: ಯುರೋಪ್ ಖಂಡವನ್ನು ತೀವ್ರ ಸ್ವರೂಪದ ಬಿಸಿಗಾಳಿ ಆವರಿಸಿದೆ. ಪರಿಣಾಮ, ಫ್ರಾನ್ಸ್‌ನಲ್ಲಿ ಕಳೆದ ಕೆಲದಿನಗಳಿಂದ ಬಿಸಿಲ ತಾಪ ಹೆಚ್ಚುತ್ತಲೇ ಇದೆ. ಪ್ಯಾರಿಸ್‌ನಿಂದ ನೈಸ್ ನಗರಕ್ಕೆ ಸಂಚರಿಸುತ್ತಿದ್ದ ರೈಲಿನಲ್ಲಿದ್ದ ಸಾವಿರಾರು ಪ್ರಯಾಣಿಕರು ತಾಪ ತಡೆಯಲಾರದೇ ಪರಿತಪಿಸಿದ್ದಾರೆ. ಬೋಗಿಗಳ ಒಳಗೆ ಕೂರಲಾಗದೆ, ಬಿಸಿ ಗಾಳಿಯನ್ನು ಉಸಿರಾಡಲಾಗದೇ ಸಣ್ಣ ಮಕ್ಕಳು ಮತ್ತು ವೃದ್ಧರು ಸೇರಿದಂತೆ ಪ್ರಯಾಣಿಕರು ಕಷ್ಟ ಅನುಭವಿಸಿದರು. ತಾಂತ್ರಿಕ ದೋಷದಿಂದ ರೈಲು ಮಾರ್ಗ ಮಧ್ಯೆ ನಿಲುಗಡೆಯಾದಾಗ ರೈಲು ಬೋಗಿಗಳಲ್ಲಿನ ಎಸಿ ವ್ಯವಸ್ಥೆ ಸರಿಯಾಗಿ ಕೆಲಸ ನಿರ್ವಹಿಸದ ಕಾರಣ ಪ್ರಯಾಣಿಕರು ಪರಿತಪಿಸಿದ್ದಾರೆ. ಬೋಗಿಯೊಳಗೆ ಕೂರಲಾರದೆ ಪ್ರಯಾಣಿಕರೆಲ್ಲರೂ ಕೆಳಗಿಳಿದು, ಹೊರಗೆ ನೆರಳಿನಲ್ಲಿ ಕೂತು-ನಿಂತು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಈ ಸಂದರ್ಭದ ವಿಡಿಯೋ ವೈರಲ್ ಆಗಿದೆ.

ಇಂಜಿನಿಯರ್‌ಗಳಿಗೆ 'ಸೇಯ್ಲ್' ಉದ್ಯೋಗ

ದೆಹಲಿ: ಕೇಂದ್ರ ಸರಕಾರದ ಒಡೆತನದಲ್ಲಿರುವ 'ಸ್ಟೀಲ್ ಅಥಾರಿಟಿ ಆಫ್ ಇಂಡಿಯ ಲಿ.'(ಎಸ್‌ಎಐಎಲ್ -ಸೇಯ್ಲ್)ನಲ್ಲಿ ಇಂಜಿನಿಯರಿಂಗ್ (ಕನಿಷ್ಠ ಶೇ.65 ಅಂಕ) ಪದವೀಧರರಿಗೆ 48 'ಯುವ ವೃತ್ತಿಪರ' ಹುದ್ದೆಗಳು ಕಾದಿವೆ. ಅರ್ಹ ಬಿಇ/ಬಿಟೆಕ್ ಪದವೀಧರರಿಂದ ಅರ್ಜಿ ಅಹ್ವಾನಿಸಲಾಗಿದ್ದು, ಅಧಿಸೂಚನೆ ಹೊರಡಿಸಲಾಗಿದೆ. ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಸಿವಿಲ್, ಕಂಪ್ಯೂಟರ್ ಸೈನ್ಸ್, ಐಟಿ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಪಡೆದವರಿಗೆ ಈ ಹುದ್ದೆಗಳಲ್ಲಿ ಅವಕಾಶ. ಹೆಚ್ಚುವರಿಯಾಗಿ ಎಂಟೆಕ್ ಅಥವಾ ಎಂಬಿಎ ಪದವಿ ಹೊಂದಿರುವವರಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಮೊದಲ ಆದ್ಯತೆ.3 ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ. ಮಾಸಿಕ 1.40 ಲಕ್ಷ ರು.ವರೆಗೆ ವೇತನವಿದೆ. ಸರಕಾರಿ ನೌಕರಿ ಅರಸುತ್ತಿರುವವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಪಶ್ಚಿಮ ಬಂಗಾಳದ ದುರ್ಗಾಪುರ ಸ್ಟೀಲ್ ಪ್ಲಾಂಟ್, ಐಐಎಸ್‌ಸಿಒ ಸ್ಟೀಲ್ ಪ್ಲಾಂಟ್ ಮತ್ತು ಅಲಾಯ್ ಸ್ಟೀಲ್ ಪ್ಲಾಂಟ್‌ಗಳಲ್ಲಿ ಉದ್ಯೋಗ ಖಾಲಿ ಇವೆ.ಮೊದಲು ಬಂದ ಅರ್ಜಿಗಳನ್ನು ಪರಿಶೀಲಿಸಿ ಅಗತ್ಯವಿದ್ದರೆ ಕಂಪ್ಯೂಟರ್ ಆಧಾರಿತ ಸಾಮರ್ಥ್ಯ ಪರೀಕ್ಷೆ ನಡೆಸಲಾಗುವುದು. ಬಳಿಕ ತಾಂತ್ರಿಕ ಜ್ಞಾನ-ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಒರೆಹಚ್ಚಲು ವೈಯಕ್ತಿಕ ಸಂದರ್ಶನ ನಡೆಸಿ ಅರ್ಹರ ಶಾರ್ಟ್‌ಲಿಸ್ಟ್ ಸಿದ್ಧಪಡಿಸಲಾಗುತ್ತದೆ. ಈ ಪಟ್ಟಿಯಲ್ಲಿರುವವರಿಗೆ ಬಳಿಕ ವೈದ್ಯಕೀಯ ಪರೀಕ್ಷೆ ನಡೆಸಿ ಅಂತಿಮ ಆಯ್ಕೆ ಮಾಡಲಾಗುವುದು.

{ರತ್ನಾ ದೇಬನಾಥ್ }
ಪ.ಬಂ. ಬಿಜೆಪಿ ಶಾಸಕಿ

ನಬನ್ನಾ ಭವನದ 14ನೇ ಮಹಡಿಯಲ್ಲಿ ಸಿಎಂ ಸುವೇಂದು ಅಧಿಕಾರಿ ಅವರನ್ನು ಭೇಟಿ ಮಾಡಿದೆ. ಸದ್ಯ ನಾನು-ಮಮತಾ ಬ್ಯಾನರ್ಜಿ ಇಬ್ಬರೂ ದುಃಖಿತರೆ. ನಾನು ಏಕಮಾತ್ರ ಪುತ್ರಿ ಕಳೆದುಕೊಂಡೆ. ಆದರೆ ಜನರ ಸೇವೆಗೆ ಅರ್ಪಿಸಿಕೊಂಡೆ. ಮಮತಾ 14ನೇ ಮಹಡಿಯಲ್ಲಿನ ಸಿಎಂ ಕುರ್ಚಿ ಕಳೆದುಕೊಂಡರು. ಮಾಜಿ ಸಿಎಂ ಇನ್ನಷ್ಟು ದುರಂತ ಕಾಣಲಿದ್ದಾರೆ, ಕಾದು ನೋಡಿ.

ವಲಯದಲ್ಲಿ ಚೀನಾ ಪ್ರಾಬಲ್ಯ ತಡೆಗೆ ಹೊಸ ಕಾರ್ಯಯೋಜನೆ: ಮಾರ್ಕ್ ರುಬಿಯೊ | 'ಕ್ವಾಡ್' ಸದಸ್ಯ ದೇಶಗಳ ವಿದೇಶಾಂಗ ಸಚಿವರ ವಿಶೇಷ ಸಭೆಯ ಮಹತ್ವದ ತೀರ್ಮಾನ | ಅಮೂಲ್ಯ ಖನಿಜಗಳ ವಿನಿಮಯ, ಇಂಧನ ಲಭ್ಯತೆ, ಪ್ರಾದೇಶಿಕ ಭದ್ರತೆಗೆ ಹೆಚ್ಚು ಗಮನ

ಇಂಡೋ-ಪೆಸಿಫಿಕ್ ಭದ್ರತಾ ಸಹಕಾರ ವೃದ್ಧಿ: ಕ್ವಾಡ್

ದೆಹಲಿ: 'ಇಂಡೋ-ಪೆಸಿಫಿಕ್ ಮೆರಿಟೈಮ್ ಸರ್ವೆಲೆನ್ಸ್ ಕೋ-ಆಪರೇಷನ್ ಇನಿಶಿಯೇಟಿವ್'(ಇಂಡೊ-ಪೆಸಿಫಿಕ್ ಸಾಗರ ವಲಯದ ಕಾವಲಿಗೆ ಕ್ವಾಡ್ ಸದಸ್ಯ ದೇಶಗಳ ಸಹಕಾರ) ಎಂಬ ಮಹತ್ವದ ಘೋಷಣೆಯನ್ನು ಅಮೆರಿಕದ ವಿದೇಶಾಂಗ ಸಚಿವ ಮಾರ್ಕೊ ರುಬಿಯೋ ಅವರು ಮಂಗಳವಾರ ದೆಹಲಿಯಲ್ಲಿ ನಡೆದ 'ಕ್ವಾಡ್' ದೇಶಗಳ ವಿಶೇಷ ಸಭೆಯಲ್ಲಿ ಹೊರಡಿಸಿದ್ದಾರೆ.

ದೆಹಲಿಯಲ್ಲಿ ಮಂಗಳವಾರ ಆಯೋಜಿತವಾಗಿದ್ದ 'ಕ್ವಾಡ್' ಸದಸ್ಯ ದೇಶಗಳ ವಿದೇಶಾಂಗ ಸಚಿವರುಗಳ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಇಂಡೋ-ಪೆಸಿಫಿಕ್ ವಲಯದಲ್ಲಿ ಭದ್ರತೆ ಮತ್ತು ಆರ್ಥಿಕ ಸಹಕಾರವನ್ನು ಬಲಪಡಿಸುವ ಅಗತ್ಯವಿದೆ ಎಂದರು. ಈ ದಿಸೆಯಲ್ಲಿ ಕೆಲವು ಮಹತ್ವದ ಯೋಜನೆಗಳನ್ನು ಘೋಷಿಸಿದರು.

ಈ ಎಲ್ಲಾ ಯೋಜನೆಗಳ ಮೂಲಕ 'ಕ್ವಾಡ್' ಸದಸ್ಯ ದೇಶಗಳು ತಮ್ಮ ಸಾಗರ ಸೀಮಾ ನಿಗಾ ವ್ಯವಸ್ಥೆಯ ಸೌಲಭ್ಯಗಳನ್ನು ಪರಸ್ಪರ ಹಂಚಿಕೊಳ್ಳಲಿವೆ. ಇದು ಇಂಡೊ-ಪೆಸಿಫಿಕ್ ವಲಯದಲ್ಲಿನ ಸಾಗರ ಭದ್ರತೆ ಮತ್ತು ಗುಪ್ತ ಮಾಹಿತಿ ವಿನಿಮಯವನ್ನು ಮತ್ತಷ್ಟು ಬಲಪಡಿಸಲಾಗುತ್ತದೆ ಎಂದು ರುಬಿಯೊ ವಿವರಿಸಿದರು.

ಇದೇ ವೇಳೆ, 'ಇಂಡೋ-ಪೆಸಿಫಿಕ್ ಮೆರಿಟೈಮ್ ಡೊಮೇನ್ ಅವೇರ್‌ನೆಸ್ ಇನಿಶಿಯೇಟಿವ್' ಯೋಜನೆಯ ವಿಸ್ತರಣೆಗೂ ಒಪ್ಪಿಗೆ ನೀಡಲಾಗಿದೆ. ಆ ಮೂಲಕ ಇಂಡೋ-ಪೆಸಿಫಿಕ್ ವಲಯದಲ್ಲಿನ ದೇಶಗಳಿಗೆ ಆ ಭಾಗದ ಸಾಗರ ಚಟುವಟಿಕೆಗಳ ಕುರಿತು ತಕ್ಷಣದ ಮಾಹಿತಿ ಲಭ್ಯವಾಗಲಿದೆ.

ಇದೇ ವೇಳೆ ಸಾಗರ ಭದ್ರತೆಯ ಮಹತ್ವವನ್ನು ಒತ್ತಿಹೇಳಿದ ರುಬಿಯೋ, ಜಾಗತಿಕ ಸಮುದ್ರ ವ್ಯಾಪಾರದ ಸುಮಾರು 60 ಶೇಕಡಾ ಇಂಡೋ-ಪೆಸಿಫಿಕ್ ಪ್ರದೇಶದ ಮೂಲಕ ಸಾಗುತ್ತದೆ. ಆದ್ದರಿಂದ ಈ ಪ್ರದೇಶದ ಭದ್ರತೆ ಕೇವಲ ನಾಲ್ಕು ರಾಷ್ಟ್ರಗಳಿಗಷ್ಟೇ ಅಲ್ಲ, ಜಗತ್ತಿನ ಅನೇಕ ದೇಶಗಳಿಗೂ ಅತ್ಯಂತ ಮುಖ್ಯ ಎಂದು ತಿಳಿಸಿದರು.

ಇದರೊಂದಿಗೆ ಪ್ರಮುಖ ಖನಿಜ ಸಂಪನ್ಮೂಲಗಳ ಸರಬರಾಜು ಸರಪಳಿಯನ್ನು ಬಲಪಡಿಸಲು 'ಕ್ವಾಡ್ ಕ್ರಿಟಿಕಲ್ ಮಿನರಲ್ಸ್ ಫ್ರೇಮ್‌ವರ್ಕ್' ಒಪ್ಪಂದಕ್ಕೂ ಬರಲಾಗಿದೆ. ಗಣಿಗಾರಿಕೆ, ಸಂಸ್ಕರಣೆ ಹಾಗೂ ಮರುಬಳಕೆ ಕ್ಷೇತ್ರಗಳಲ್ಲಿ ಹೂಡಿಕೆ ಮತ್ತು ಸಹಕಾರವನ್ನು ಹೆಚ್ಚಿಸುವ ಮೂಲಕ ಪ್ರಮುಖ ಖನಿಜ ಸಂಪನ್ಮೂಲಗಳ ಪೂರೈಕೆಯನ್ನು ಸುರಕ್ಷಿತಗೊಳಿಸುವ ಈ ಯೋಜನೆಯ ಉದ್ದೇಶವಾಗಿದೆ

ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ, ಆಸ್ಟ್ರೇಲಿಯ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಹಾಗೂ ಜಪಾನ್ ವಿದೇಶಾಂಗ ಸಚಿವ ತೋಶಿಮಿಟ್ಸು ಮೋಟೆಗಿ ಸಭೆಯಲ್ಲಿದ್ದರು. ಇಂಡೋ-ಪೆಸಿಫಿಕ್ ವಲಯದಲ್ಲಿ ಚೀನಾ ದೇಶದ ವಿಸ್ತರಣಾ ನೀತಿ ಹೆಚ್ಚುತ್ತಿದ್ದು, ಭದ್ರತಾ ಸವಾಲುಗಳು ಎದುರಾಗಿದೆ. ಈ ಸಂದರ್ಭದಲ್ಲೇ 'ಕ್ವಾಡ್' ಸಭೆ ಆಯೋಜಿತವಾಗಿರುವುದು ಬಹಳ ಮಹತ್ವದ್ದಾಗಿದೆ.

ದೆಹಲಿಯಲ್ಲಿ ಮಂಗಳವಾರ 'ಕ್ವಾಡ್' ಸದಸ್ಯ ದೇಶಗಳ ವಿಶೇಷ ಸಭೆಯಲ್ಲಿ ವಿದೇಶಾಂಗ ಸಚಿವರಾದ ಆಸ್ಟ್ರೇಲಿಯದ ಪೆನ್ನಿ ವಾಂಗ್, ಭಾರತದ ಜೈಶಂಕರ್, ಜಪಾನ್‌ನ ತೋಶಿಮಿಟ್ಸು ಮೋಟೆಗಿ ಮತ್ತು ಅಮೆರಿಕದ ಮಾರ್ಕೊ ರುಬಿಯೊ.

ಸಮಸ್ಯೆ ಚರ್ಚೆಯಿಂದ ಪರಿಹಾರ ಹುಡುಕುವತ್ತ

ಅಮೆರಿಕದ ವಿದೇಶಾಂಗ ಸಚಿವನಾಗಿ ನಾನು ಅಧಿಕಾರ ಸ್ವೀಕರಿಸಿದ ಬಳಿಕ ನಡೆದ ಮೊದಲ 'ಕ್ವಾಡ್' ಸಭೆ ಇದು ಎಂದು ರುಬಿಯೊ ಸಂತಸ ವ್ಯಕ್ತಪಡಿಸಿದರು. 'ಕ್ವಾಡ್' ಒಕ್ಕೂಟದ ಬಗ್ಗೆ ಅಮೆರಿಕಕ್ಕೆ ಬದ್ಧತೆ ಇದೆ. ಕಳೆದೊಂದು ವರ್ಷದಲ್ಲಿ ಸಮಸ್ಯೆಗಳ ಬಗೆಗಷ್ಟೇ ಮಾತನಾಡುವ ವೇದಿಕೆ, ಈಗ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಕಾರ್ಯೋನ್ಮುಖ ಮೈತ್ರಿಕೂಟವಾಗಿ ಬೆಳೆದಿದೆ ಎಂದು ಹೆಮ್ಮೆಯಿಂದ ಹೇಳಿದರು. ಇತ್ತೀಚಿನ ಜಾಗತಿಕ ಬೆಳವಣಿಗೆಗಳು 'ಕ್ವಾಡ್' ಸಹಕಾರದ ಅಗತ್ಯವನ್ನು ಇನ್ನಷ್ಟು ಹೆಚ್ಚಿಸಿವೆ ಎಂದು ಹೇಳಿದ ರುಬಿಯೊ, ಇಂಧನ ದ್ರವ್ಯಗಳ ಲಭ್ಯತೆ, ಸರಕು ಸಾಗಣೆ ಸರಪಳಿ, ಸಾಗರ ಸ್ವಾತಂತ್ರ್ಯ ಮತ್ತು ಭದ್ರತೆ ಹಾಗೂ ಮಾನವೀಯ ನೆರವು ಹಂಚಿಕೊಳ್ಳುವ ವಿಭಾಗಗಳಲ್ಲಿ ಕ್ವಾಡ್ ಮಹತ್ವದ ಪಾತ್ರ ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಂದರು ಸೌಲಭ್ಯ ವೃದ್ಧಿ ಯೋಜನೆ

ಪೆಸಿಫಿಕ್ ದ್ವೀಪ ರಾಷ್ಟ್ರಗಳ ಬಂದರು ಮೂಲಸೌಕರ್ಯ ಅಭಿವೃದ್ಧಿಗೆ 'ಕ್ವಾಡ್' ಸಹಭಾಗಿತ್ವದ ಮತ್ತೊಂದು ಮಹತ್ವದ ಯೋಜನೆಯನ್ನೂ ರುಬಿಯೊ ಘೋಷಿಸಿದರು. ಮೊದಲ ಹಂತದಲ್ಲಿ ಫಿಜಿ ದೇಶದ ಬಂದರು ಅಭಿವೃದ್ಧಿಗೆ ಕ್ವಾಡ್ ರಾಷ್ಟ್ರಗಳು ಒಟ್ಟಾಗಿ ಕೆಲಸ ಮಾಡಲಿವೆ. ಪೆಸಿಫಿಕ್ ದ್ವೀಪಗಳಲ್ಲಿ ಬಂದರು ಸೌಲಭ್ಯಗಳ ಕೊರತೆ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಫಿಜಿಯ ಬಂದರು ಮೂಲಸೌಕರ್ಯ ಅಭಿವೃದ್ಧಿಗೆ ನಾವು ಕೈಜೋಡಿಸುತ್ತಿದ್ದೇವೆ. ಇದು ಕ್ವಾಡ್ ರಾಷ್ಟ್ರಗಳು ಒಟ್ಟಾಗಿ ಕೈಗೆತ್ತಿಕೊಳ್ಳುತ್ತಿರುವ ಮೊದಲ ಬಂದರು ಯೋಜನೆ ಎಂದು ಮಾರ್ಕೊ ರುಬಿಯೊ ಹೇಳಿದರು.

'ಕ್ವಾಡ್' ಒಕ್ಕೂಟವನ್ನು ಇನ್ನಷ್ಟು ಬಲಿಷ್ಠ ಮತ್ತು ಪರಿಣಾಮಕಾರಿ ಆಗಿಸುವ ನಿಟ್ಟಿನಲ್ಲಿನ ಕಾರ್ಯಗಳಿಗೆ ನಾವು ಬದ್ಧರಾಗಿದ್ದೇವೆ. ಶಾಂತಿಯುತ, ಸ್ಥಿರ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್ ವಲಯದ ನಿರ್ಮಾಣವೇ ನಮ್ಮ ಗುರಿ.

-ಪೆನ್ನಿ ವಾಂಗ್ ಆಸ್ಟ್ರೇಲಿಯ ವಿದೇಶಾಂಗ ಸಚಿವೆ

'ಕ್ವಾಡ್' ಸಭೆಯಲ್ಲಿ ಜೈಶಂಕರ್ ಮಹತ್ವದ ಕರೆ

ಇಂಡೋ-ಪೆಸಿಫಿಕ್‌ನಲ್ಲಿ ಶಾಂತಿ, ಸ್ಥಿರತೆ, ಸಮೃದ್ಧಿಗೆ ವಿಶ್ವಾಸಿ ಪಾಲುದಾರಿಕೆ ಅಗತ್ಯ

ದೆಹಲಿ: ಇಂಡೋ-ಪೆಸಿಫಿಕ್ ವಲಯದಲ್ಲಿ ಶಾಂತಿ, ಸ್ಥಿರತೆ, ಆರ್ಥಿಕ ಅಭಿವೃದ್ಧಿ ಬಲಪಡಿಸಲು 'ಕ್ವಾಡ್' ಒಕ್ಕೂಟದ ಸದಸ್ಯ ರಾಷ್ಟ್ರಗಳ ನಡುವೆ ನಂಬಿಕೆಗೆ ಅರ್ಹವಾದ ಮತ್ತು ಪಾರದರ್ಶಕವಾದ ಸಹಭಾಗಿತ್ವದ ಅಗತ್ಯವಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ. ದೆಹಲಿಯಲ್ಲಿ ಮಂಗಳವಾರ 'ಕ್ವಾಡ್' ಸದಸ್ಯ (ಭಾರತ, ಅಮೆರಿಕ, ಆಸ್ಟ್ರೇಲಿಯ ಮತ್ತು ಜಪಾನ್) ದೇಶಗಳ ವಿದೇಶಾಂಗ ಸಚಿವರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜೈಶಂಕರ್, ತಂತ್ರಾತ್ಮಕ ನಂಬಿಕೆ ವೃದ್ಧಿ, ಸಾಗರ ಭದ್ರತೆ ಖಚಿತಪಡಿಸುವುದು, ಆರ್ಥಿಕ ಆಯ್ಕೆಗಳಿಗೆ ಉತ್ತೇಜನ ಹಾಗೂ ಸದಸ್ಯ ದೇಶಗಳಲ್ಲಿ ಪರಸ್ಪರಗೆ ಸಹಕಾರ ನೀಡುವ ಮನೋಭಾವ ಬೆಳೆಸುವ ಅಗತ್ಯವಿದೆ. ಇದನ್ನೆಲ್ಲಾ ಸಾಧಿಸಲು ನಂಬಿಕೆಗೆ ಅರ್ಹ ವಾದ ಮತ್ತು ಪಾರದರ್ಶಕ ಸಹಭಾಗಿತ್ವವೇ ಉತ್ತಮ ಮಾರ್ಗ ಎಂದು ಗಮನ ಸೆಳೆದರು.

ಇಂಡೋ-ಪೆಸಿಫಿಕ್ ವಲಯದಲ್ಲಿ ಎದುರಾಗುತ್ತಿರುವ ನಿರ್ದಿಷ್ಟ ಭದ್ರತಾ ಸವಾಲುಗಳ ಕುರಿತು ಮಾತನಾಡಿದ ಜೈಶಂಕರ್, ಕ್ವಾಡ್ ಸದಸ್ಯ ದೇಶಗಳ ಗಮನ ಇಂಡೋ-ಪೆಸಿಫಿಕ್ ವಲಯದ ಮೇಲೆಯೇ ಇರಬೇಕಿದೆ. ಜಾಗತಿಕ ಮಟ್ಟದಲ್ಲಿ ಸರಕು ಸಾಗಣೆ ಸರಪಳಿ ಬಲಪಡಿಸುವುದು, ಸಂಪರ್ಕ ಮಾರ್ಗಗಳ ಅಡೆತಡೆ ನಿವಾರಣೆ, ಉತ್ಪಾದನೆ ಮತ್ತು ಸಂಪನ್ಮೂಲಗಳ ಕೇಂದ್ರೀಕರಣ, ಪ್ರಮುಖ ಮೂಲಸೌಕರ್ಯಗಳ ಕೊರತೆ ಮೊದಲಾದ ಸವಾಲುಗಳನ್ನು ಎದುರಿಸಬೇಕಿದೆ. ಈ ಎಲ್ಲವು ಹೊಸ ಸದಸ್ಯ ದೇಶಗಳ ಸಹಭಾಗಿತ್ವದ ಅಗತ್ಯವನ್ನು ಎತ್ತಿ ತೋರಿಸುತ್ತವೆ ಎಂದು ಸಭೆಯ ಗಮನ ಸೆಳೆದರು. ಆ ಮೂಲಕ ಇಂಡೋ-ಪೆಸಿಫಿಕ್ ವಲಯವು ಜಾಗತಿಕ ಬೆಳವಣಿಗೆ ಮತ್ತು ಸ್ಥಿರತೆಗೆ ಪ್ರಮುಖ ಚಾಲಕಶಕ್ತಿಯಾಗಿಯೇ ಮುಂದುವರಿಯಬೇಕಿದೆ ಎಂದು ಉತ್ತೇಜನದ ಮಾತನಾಡಿದರು.



ಇತ್ತೀಚಿನ ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕ್ವಾಡ್ ಸಹಕಾರದ ಮಹತ್ವ ಹೆಚ್ಚಾಗಿದೆ. ಇಂಧನ ಭದ್ರತೆ, ನಾವಿಗೇಶನ್ ಸ್ವಾತಂತ್ರ್ಯ, ಪ್ರಮುಖ ಖನಿಜ ಸಂಪನ್ಮೂಲಗಳು ಸೇರಿದಂತೆ ಜಗತ್ತು ಎದುರಿಸುತ್ತಿರುವ ದೊಡ್ಡ ಸವಾಲುಗಳಿಗೆ 'ಕ್ವಾಡ್' ಒಕ್ಕೂಟ ಸಮರ್ಥ ಪರಿಹಾರ ನೀಡುವ ಸಾಮರ್ಥ್ಯ ಹೊಂದಿದೆ.

-ಮಾರ್ಕೊ ರುಬಿಯೊ
ಅಮೆರಿಕ ವಿದೇಶಾಂಗ ಸಚಿವ

ಕಾರ್ಯೋನ್ಮುಖ ತಂತ್ರಾತ್ಮಕ ಒಕ್ಕೂಟ

4 ಬಲಿಷ್ಠ ಸದಸ್ಯ ರಾಷ್ಟ್ರಗಳ 'ಕ್ವಾಡ್' ಒಕ್ಕೂಟವೀಗ ಕೇವಲ ಚರ್ಚಾ ವೇದಿಕೆಯಾಗಿ ಉಳಿದಿಲ್ಲ. ಕಾರ್ಯೋನ್ಮುಖ ತಂತ್ರಾತ್ಮಕ ಮೈತ್ರಿಕೂಟವಾಗಿ ರೂಪಾಂತರಗೊಳ್ಳುತ್ತಿದೆ ಎಂದು ರುಬಿಯೊ ಸಂತಸ ವ್ಯಕ್ತಪಡಿಸಿದರು. ಇಲ್ಲಿ ಸಭೆ ಸೇರಿರುವ ನಾಲ್ಕೂ 'ಕ್ವಾಡ್' ಸದಸ್ಯ ರಾಷ್ಟ್ರಗಳು ಜಗತ್ತಿನ ಒಟ್ಟು 'ಜಿಡಿಪಿ'ಯ 3ನೇ 1 ಭಾಗವನ್ನು ಹೊಂದಿವೆ. 200 ಕೋಟಿ ಜನಸಂಖ್ಯೆಗೆ ಪ್ರತಿನಿಧಿಗಳಾಗಿವೆ. ಈ ರಾಷ್ಟ್ರಗಳು ಬಲಿಷ್ಠ ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ಆರ್ಥಿಕ ಅಭಿವೃದ್ಧಿಯ ಸಾಮಾನ್ಯ ಗುರಿಗಳನ್ನು ಹೊಂದಿವೆ ಎಂದು ಮಾರ್ಕೊ ಹೇಳಿದರು.

ಸಿಎಂ ವಿಜಯ್ ಬಗ್ಗೆ ಹೊಟ್ಟೆಕಿಚ್ಚು

ಅಮರಾವತಿ: ತಮಿಳುನಾಡು ನೂತನ ಮುಖ್ಯಮಂತ್ರಿ ವಿಜಯ್ ಪಕ್ಷ ಸ್ಥಾಪಿಸಿ ಬಹಳ ಬೇಗ ಯಶಸ್ಸು ಸಾಧಿಸಿದ್ದು ನೋಡಿ ನನಗೆ ಸ್ವಲ್ಪ ಅಸೂಯೆಯಾಗಿದ್ದು ನಿಜ ಎಂದು ಆಂಧ್ರ ಪ್ರದೇಶ ಉಪ ಮುಖ್ಯ ಮಂತ್ರಿ, ಜನಸೇನಾ ಪಕ್ಷದ ನಾಯಕ ಪವನ್ ಕಲ್ಯಾಣ್ ಪಕ್ಷದ ಕಾರ್ಯಕ್ರಮದಲ್ಲಿ ಮನಬಿಚ್ಚಿ ಹೇಳಿಕೊಂಡಿದ್ದಾರೆ. ನಾನು 15 ವರ್ಷಗಳಿಂದ ರಾಜಕೀಯ ದಲ್ಲಿದ್ದೇನೆ. ರಾಜಕೀಯ ಪಕ್ಷದ ನಿರ್ವಹಣೆ ಎಂದರೆ ಲಕ್ಷಾಂತರ ಜನರನ್ನು ಒಂದುಗೂ ಡಿಸುವ ಸವಾಲು. ಕುಟುಂಬ ಸದಸ್ಯರ ಮನವೊಲಿ ಸುವುದೇ ಅಸಾಧ್ಯವಾಗಿರುತ್ತದೆ. ಸಮಾಜ ಪರಿವರ್ತಿಸಲು ಯತ್ನಿಸುವುದು ದೊಡ್ಡ ಸವಾಲಿನ ಕೆಲಸ ಎಂದರು. ತಮಿಳುನಾಡಿನ ರಾಜಕೀಯ ಬೆಳವಣಿಗೆ ನೋಡುತ್ತಿರುವೆ. ವಿಜಯ್ ಬಲು ಬೇಗ ಯಶಸ್ಸು ಸಾಧಿಸಿದ್ದಾರೆ. ಕಟೌಟ್, ಜಾಲತಾಣ ಬಳಸಿಯೇ ಸುಲಭವಾಗಿ ಚುನಾವಣೆ ಗೆದ್ದರು. ಅವರ ಸುಲಭದ ಯಶಸ್ಸು ಕಂಡು ನನಗೆ ಹೊಟ್ಟೆ ಉರಿ ಉಂಟಾಗಿದ್ದು ಸುಳ್ಳಲ್ಲ ಎಂದು ನಗುತ್ತಾ ಹೇಳಿದರು.



ಲಖನೌ-ಆಗ್ರಾ ಎಕ್ಸ್‌ಪ್ರೆಸ್‌ವೇ ಸ್ಲೀಪರ್ ಬಸ್ ಪಲ್ಟಿ; 6 ಸಾವು

ಲಖನೌ: ಉತ್ತರ ಪ್ರದೇಶದ ಉನ್ನಾವೋ ಜಿಲ್ಲೆಯಲ್ಲಿನ ಲಖನೌ-ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ವೇಗವಾಗಿ ಸಾಗಿದ್ದ ಲಕ್ಸುರಿ ಸ್ಲೀಪರ್ ಬಸ್ ಮಂಗಳವಾರ ಮುಂಜಾನೆ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. 6 ಪ್ರಯಾಣಿಕರು ಸಾವನ್ನಪ್ಪಿದ್ದು, 19 ಮಂದಿ ಗಾಯಗೊಂಡಿದ್ದಾರೆ. ಬಸ್ ದೆಹಲಿಯಿಂದ ಗೋರಖಪುರಕ್ಕೆ ಸಂಚರಿಸುತ್ತಿತ್ತು. ಚಾಲಕನಿಗೆ ನಿದ್ರೆಯ ಮಂಪರು ಆವರಿಸಿದ್ದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಬಸ್ ಬಹುತೇಕ ಜಖಂಗೊಂಡಿದ್ದು, ಕಿಟಕಿ ಗಾಜುಗಳೆಲ್ಲಾ ಪುಡಿಯಾಗಿವೆ. ಅಪಘಾತದ ತೀವ್ರತೆಗೆ ಕೆಲ ಪ್ರಯಾಣಿಕರು ಕಿಟಕಿಯಿಂದ ಹೊರಗೆ ಹಾರಿ ಬಿದ್ದಿದ್ದಾರೆ.

ಕೆಲವು ಪ್ರಯಾಣಿಕರು ಬಸ್‌ನ ಆಸನಗಳ ನಡುವೆ ಸಿಲುಕಿಕೊಂಡು ಗಾಯಗೊಂಡಿದ್ದರು. ಅವರನ್ನು ಹೊರತೆಗೆಯಲು ವಿಶೇಷ ಕಟಿಂಗ್ ಉಪಕರಣ ಬಳಸಿ ಬಸ್‌ನ ಹೊರಕವಚವನ್ನು ಕತ್ತರಿಸಬೇಕಾಯಿತು. ಉತ್ತರ ಪ್ರದೇಶ ಎಕ್ಸ್‌ಪ್ರೆಸ್ ವೇ ಇಂಡಸ್ಟ್ರಿಯಲ್ ಡೆವಲಪ್ಮೆಂಟ್ ಅಥಾರಿಟಿ ಸಿಬ್ಬಂದಿ, ಸ್ಥಳೀಯ ಪೊಲೀಸ್, ಜಿಲ್ಲಾಡಳಿತದ ರಕ್ಷಣಾ ತಂಡಗಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ.

ಗಂಭೀರವಾಗಿ ಗಾಯಗೊಂಡಿದ್ದ ಕೆಲವರನ್ನು ಲಖನೌ ನಗರದ ಕಿಂಗ್ ಜಾರ್ಜ್ ವೈದ್ಯಕೀಯ ವಿವಿಯ ಟ್ರಾಮಾ ಸೆಂಟರ್‌ಗೆ ದಾಖಲಿಸಲಾಗಿದೆ.

ಪೂರ್ಣ ಆಯ್ಕೆ ಪ್ರಕ್ರಿಯೆ ಬೀಜಿಂಗ್ ಹಕ್ಕು: ಚೀನಾ ಕಠಿಣ ಸಂದೇಶ

ಉತ್ತರಾಧಿಕಾರಿ ಆಯ್ಕೆ: ಭಾರತ ದೂರವಿರಲಿ

ದೆಹಲಿ: ಟಿಬೆಟ್ ಜನರ ಧರ್ಮಗುರು, ಆಧ್ಯಾತ್ಮಿಕ ನಾಯಕ ದಲೈ ಲಾಮಾ ಉತ್ತರಾಧಿಕಾರಿ ನೇಮಕ ಸಂಬಂಧ ಚೀನಾ ಸರಕಾರ ಭಾರತಕ್ಕೆ ಎಚ್ಚರಿಕೆ ಸಂದೇಶ ರವಾನಿಸಿದೆ. ಚೀನಾದ ಈ ನಡೆಯಿಂದ ಭಾರತದ ಜತೆಗಿನ ಅದರ ರಾಜತಾಂತ್ರಿಕ ಸಂಬಂಧ ಮತ್ತೆ ಹದಗೆಡುವ ಸಾಧ್ಯತೆಯಿದೆ.



ದಲೈ ಲಾಮಾ ಉತ್ತರಾಧಿಕಾರಿ ಆಯ್ಕೆ ಪ್ರಕ್ರಿಯೆ ಸಂಪೂರ್ಣವಾಗಿ ಚೀನಾದ ಆಂತರಿಕ ಮತ್ತು ಕಾನೂನಾತ್ಮಕ ವಿಷಯ. ಇದರಲ್ಲಿ ಯಾವುದೇ ವಿದೇಶಿ ಶಕ್ತಿ, ನೆರೆದೇಶ ಹಸ್ತಕ್ಷೇಪ ಮಾಡಬಾರದು. ದಲೈ ಲಾಮಾ ಉತ್ತರಾಧಿಕಾರಿ ನೇಮಕ ಪ್ರಕ್ರಿಯೆಯು ಚೀನಾದ ಕಟ್ಟುನಿಟ್ಟಾದ ಧಾರ್ಮಿಕ ನಿಯಮಗಳು, ಐತಿಹಾಸಿಕ ಸಂಪ್ರದಾಯ ಮತ್ತು ರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿಯೇ ನಡೆಯಬೇಕು ಎಂದು ಚೀನಾದ ವಿದೇಶಾಂಗ ಸಚಿವಾಲಯ ಜಾಗತಿಕ ಮಾಧ್ಯಮಗಳ ಮುಂದೆಯೇ ತನ್ನ ನಿಲುವು ಪ್ರಕಟಿಸಿದೆ.

ಧರ್ಮಶಾಲಾದಲ್ಲಿ ನಡೆಯಲಿರುವ ಧಾರ್ಮಿಕ ಸಮಾರಂಭಕ್ಕೂ ಮುನ್ನ ಅಧಿಕೃತ ಹೇಳಿಕೆ ಹೊರಡಿಸಿರುವ ಚೀನಾ, ದಲೈಲಾಮಾ ಉತ್ತರಾಧಿಕಾರಿ ನೇಮಕ ವಿಚಾರದಿಂದ ಭಾರತ ಬಹಳ ದೂರ ಇರಬೇಕು ಎಂದು ಆಗ್ರಹಿಸಿದೆ ಎಂದು 'ದಿ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ನೆಲೆಸಿರುವ ದಲೈ ಲಾಮಾ ಮತ್ತು ಟಿಬೆಟ್‌ನ ಪ್ರಮುಖ ಬೌದ್ಧ ಧರ್ಮಗುರುಗಳು ಉನ್ನತ ಮಟ್ಟದ ಧಾರ್ಮಿಕ ಸಮಾರಂಭ ಮತ್ತು ಸಭೆ ಆಯೋಜಿಸಿದ್ದಾರೆ. ಈ ಸಭೆಯಲ್ಲಿ 15ನೇ ದಲೈ ಲಾಮಾ ಅವರ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿ ಕರಡು ನಿಯಮಗಳ ಬಗ್ಗೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ. ಈ ಕಾರ್ಯಕ್ರಮಕ್ಕೆ ಭಾರತ ಸರಕಾರದ ಪ್ರತಿನಿಧಿಗಳು ಅಥವಾ ಭಾರತದ ವಿವಿಧ ಕ್ಷೇತ್ರಗಳ ಪ್ರಮುಖ ನಾಯಕರು ಬೆಂಬಲ ನೀಡಬಹುದು ಎಂಬ ಆತಂಕ ಚೀನಾವನ್ನು ಕಾಡುತ್ತಿದೆ. ಇದೇ ಕಾರಣವಾಗಿ ಸಮಾರಂಭಕ್ಕೂ ಮುನ್ನವೇ ಚೀನಾ ಭಾರತಕ್ಕೆ ರಾಜತಾಂತ್ರಿಕ ಒತ್ತಡ ಹೇರಲು ಯತ್ನಿಸಿದೆ ಎಂದು ಅದರ ಎಚ್ಚರಿಕೆ ಸಂದೇಶವನ್ನು ಅರ್ಥೈಸಲಾಗಿದೆ.

ಭಾರತದ ಸ್ಪಷ್ಟ ನಿಲುವು

ಭಾರತ ಸರಕಾರ ಹಿಂದಿನಿಂದಲೂ 14ನೇ ದಲೈ ಲಾಮಾ ಅವರನ್ನು ಅತ್ಯುನ್ನತ ಆಧ್ಯಾತ್ಮಿಕ ನಾಯಕರಾಗಿ ಗೌರವಿಸುತ್ತಾ, ಅವರಿಗೆ ಭಾರತದಲ್ಲಿ ಆಶ್ರಯ ನೀಡಿದೆ. ಉತ್ತರಾಧಿಕಾರ ವಿಚಾರ ಸಂಪೂರ್ಣವಾಗಿ ಧಾರ್ಮಿಕ ವಿಷಯವಾಗಿದೆ. ಟಿಬೆಟ್‌ನ ಬೌದ್ಧ ಸಮುದಾಯ ಮತ್ತು ಸ್ವತಃ ದಲೈ ಲಾಮಾ ಅವರೇ ತಮ್ಮ ಸಂಪ್ರದಾಯದಂತೆ ನಿರ್ಧಾರ ಕೈಗೊಳ್ಳಲು ಸ್ವತಂತ್ರರು ಎಂಬ ನಿಲುವು ಭಾರತದ್ದಾಗಿದೆ. 'ನನ್ನ ಉತ್ತರಾಧಿಕಾರಿಯನ್ನು ಚೀನಾ ಸರಕಾರ ಆಯ್ಕೆ ಮಾಡಲು ಸಾಧ್ಯವಿಲ್ಲ. ನನ್ನ ಪುನರ್ಜನ್ಮವು ಮುಕ್ತ ದೇಶದಲ್ಲಿ (ಭಾರತ ಅಥವಾ ಮಂಗೋಲಿಯಾದಲ್ಲಿ) ಸಂಭವಿಸಲಿದೆ. ಚೀನಾ ನಿಯಂತ್ರಣದಲ್ಲಿರುವ ಟಿಬೆಟ್‌ನಲ್ಲಿ ಅಲ್ಲ ಎಂದು 14ನೇ ದಲೈ ಲಾಮಾ ಈ ಮೊದಲೇ ಸ್ಪಷ್ಟವಾಗಿ ಹೇಳಿದ್ದರು.

ಅತಿಮುಖ್ಯ ಖನಿಜ ಸಹಕಾರ: ಭಾರತ-ಅಮೆರಿಕ ಒಪ್ಪಂದ

ದೆಹಲಿ: ಅತ್ಯಗತ್ಯ ಮತ್ತು ಅಪರೂಪದ ಖನಿಜಗಳ ಪೂರೈಕೆ ಹಾಗೂ ಸಂಸ್ಕರಣೆಗೆ ಸಂಬಂಧಿಸಿ ಐತಿಹಾಸಿಕ ಕಾರ್ಯತಂತ್ರ ಒಪ್ಪಂದಕ್ಕೆ ಭಾರತ-ಅಮೆರಿಕ ದೇಶಗಳು ದೆಹಲಿಯಲ್ಲಿ ಮಂಗಳವಾರ ಸಹಿ ಹಾಕಿವೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ ಅವರು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಬಳಿಕ ಜಂಟಿ ಸುದ್ದಿಗೋಷ್ಠಿ ನಡೆಸಿ ವಿವರ ನೀಡಿದರು.

ಅತಿ ಮುಖ್ಯವಾದ ಖನಿಜಗಳ ಗಣಿಗಾರಿಕೆ, ಸಂಸ್ಕರಣೆ, ಮರುಬಳಕೆ ಮತ್ತು ಬಂಡವಾಳ ಹೂಡಿಕೆ ಸೇರಿದಂತೆ ಸಮಗ್ರ ಖನಿಜ ಪೂರೈಕೆ ಸರಪಳಿಯಲ್ಲಿ ಉಭಯ ದೇಶಗಳ ಸಹಕಾರವನ್ನು ಈಗಿನ ಒಪ್ಪಂದು ಮತ್ತಷ್ಟು ಬಲಪಡಿಸಲಿದೆ ಎಂದು ಜೈಶಂಕರ್ ಹೇಳಿದ್ದಾರೆ.

ಎರಡೂ ದೇಶಗಳಿಗೆ ದೀರ್ಘಾವಧಿಯಲ್ಲಿ ಖನಿಜ ಸರಬರಾಜು ಅತ್ಯಂತ ಅಗತ್ಯ. ನವೀನ ಆರ್ಥಿಕ ವ್ಯವಸ್ಥೆಗಳಿಗೆ ಈ ಖನಿಜಗಳೇ ಬೆನ್ನೆಲುಬಿನಂತಿವೆ ಎಂದು ರುಬಿಯೊ ತಿಳಿಸಿದ್ದಾರೆ.

ಫೆ.4ರಂದು ವಾಷಿಂಗ್ಟನ್‌ನಲ್ಲಿ ನಡೆದ 'ಕ್ರಿಟಿಕಲ್ ಮಿನರಲ್ಸ್ ಫೋರಂ'ನಲ್ಲಿ ಭಾರತ ಭಾಗವಹಿಸಿದ ಬಳಿಕ ಈ ಸಹಕಾರ ಒಪ್ಪಂದಕ್ಕೆ ಅಡಿಪಾಯ ಬಿದ್ದಿದೆ. ನಂತರ ಭಾರತ ಕ್ರಿಟಿಕಲ್ ಮಿನರಲ್ಸ್ ಯೋಜನೆಗೆ ಸೇರಿದ ಬಳಿಕ ಇದಕ್ಕೆ ಮತ್ತಷ್ಟು ವೇಗ ಸಿಕ್ಕಿತು ಎಂದು ವಿವರಿಸಿದರು.

ತಂತ್ರಜ್ಞಾನ ಆಧಾರಿತವಾದ ಅಮೆರಿಕ-ಭಾರತದಂತಹ ಆರ್ಥಿಕ ದೇಶಗಳು ಪ್ರಮುಖ ಕೈಗಾರಿಕೆಗಳಿಗೆ ಅತ್ಯಗತ್ಯವಾದ ಮೂಲ ಖನಿಜ ಸಂಪನ್ಮೂಲಗಳನ್ನು ಒಂದೇ ದೇಶದ(ಚೀನಾ) ಏಕಸ್ವಾಮ್ಯಕ್ಕೆ ಬಿಟ್ಟುಕೊಡಲು ಸಾಧ್ಯವಿಲ್ಲ. ಯುದ್ಧದ ಸಮಯದಲ್ಲಷ್ಟೇ ಅಲ್ಲ, ರಾಜಕೀಯ ಒತ್ತಡದ ಸಾಧನವಾಗಿಯೂ ಈ ಕ್ರಿಟಿಕಲ್ ಮಿನರಲ್ಸ್ ಬಳಕೆಯಾಗುವ ಅಪಾಯವಿದೆ ಎಂದರು.

ಐಆರ್‌ಜಿಸಿ ಉಗ್ರತೆ ಗುರುತಿಸಲಿ

ದೆಹಲಿ: ಇರಾನ್ ದೇಶದ ಸೇನೆಯ ಬೇರೆಯದೇ ವಿಭಾಗವಾಗಿರುವ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್'(ಐಆರ್‌ಜಿಸಿ) ಅನ್ನು 'ಭಯೋತ್ಪಾದಕ ಸಂಘಟನೆ' ಎಂದು ಘೋಷಿಸಬೇಕಿದೆ. ಭಾರತವೂ ಹಾಗೆ ಮಾಡಲಿದೆ ಎಂಬ ನಿರೀಕ್ಷೆ ಇದೆ ಎಂದು ಪರಮಾಪ್ತ ರಾಷ್ಟ್ರ ಇಸ್ರೇಲ್ ಹೇಳಿದೆ. ಇರಾನ್‌ನಲ್ಲಿನ ಇಸ್ಲಾಮಿಕ್ ಕ್ರಾಂತಿ ನಂತರ ಅಯತೊಲ್ಲಾ ರುಹೊಲ್ಲಾ ಖೊಮೇನಿ 1979ರಲ್ಲಿ ಸ್ಥಾಪಿಸಿದ ಈ ಪಡೆ ತನ್ನದೇ ದೇಶದ ಸೇನಾಪಡೆ, ನೌಕಾಪಡೆ, ವಾಯುಸೇನೆ, ಗುಪ್ತಚರ ಘಟಕ ಮತ್ತು ವಿಶೇಷ ಕಾರ್ಯಾಚರಣೆ ವಿಭಾಗವನ್ನು ಹೊಂದಿ ವಿಶಾಲವಾದ ಸೇನಾ, ರಾಜಕೀಯ ಮತ್ತು ಆರ್ಥಿಕ ವಿಭಾಗವಾಗಿ ವಿಸ್ತರಣೆಯಾಗಿದೆ. ಮುಕ್ತ ಜಗತ್ತಿಗೆ 'ಐಆರ್‌ಜಿಸಿ' ಅಪಾಯಕಾರಿಯಾಗಿದೆ. ಭಯೋತ್ಪಾದನೆ ಸಂಬಂಧಿತ ಚಟುವಟಿಕೆಗಳಿಗೆ ಉಗ್ರಗಾಮಿ ಗುಂಪುಗಳಿಗೆ ಬೆಂಬಲ ನೀಡುತ್ತಿರುವ ಆರೋಪದಡಿ ಐಆರ್‌ಜಿಸಿ ವಿರುದ್ಧ ಕ್ರಮ ಕೈಗೊಳ್ಳಲು ಅಮೆರಿಕ, ಕೆನಡಾ, ಆಸ್ಟ್ರೇಲಿಯ. ಅರ್ಜೆಂಟಿನಾ ಮತ್ತಿತರ ದೇಶಗಳು ಮತ್ತು ಯುರೋಪ್ ಒಕ್ಕೂಟ ಮುಂದಾಗಿವೆ. ಇನ್ನೂ ಹಲವು ದೇಶಗಳು ಐಆರ್‌ಜಿಸಿಯ ಸ್ವರೂಪ ಮತ್ತು ಚಟುವಟಿಕೆಗಳನ್ನು ಈಗಾಗಲೇ ಗುರುತಿಸಿವೆ. ಭಾರತ ಇದೇ ರೀತಿಯ ನಿರ್ಧಾರ ಪ್ರಕಟಿಸಲಿದೆ ಎಂಬ ನಿರೀಕ್ಷೆ ಇದೆ ಎಂದು ಇಸ್ರೇಲ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿಯತ್ತ ಟಿಎಂಸಿಯ 12 ಸಂಸದರು: ದೀದಿಗೆ ಆಘಾತ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಸೋಲು ಕಂಡ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದೊಳಗೆ ಆಂತರಿಕ ಸಂಘರ್ಷ ನಡೆದಿದ್ದು, 12 ಸಂಸದರು ಟಿಎಂಸಿ ತೊರೆದು ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂಬ ಮಾತುಗಳು ಕೇಳಿಬಂದಿದೆ. ಈಗಷ್ಟೇ ಚುನಾವಣೆಯಲ್ಲಿ ಹೀನಾಯವಾಗಿ ಸೋತಿರುವ ಮಮತಾ ಬ್ಯಾನರ್ಜಿ ಅವರಿಗೆ ಮತ್ತೊಂದು ಭಾರಿ ಆಘಾತ ಎದುರಾಗಿದೆ. 2 ದಶಕದ ಹಿಂದೆ ಕಷ್ಟಪಟ್ಟು ಕಟ್ಟಿ ಬೆಳೆಸಿದ ಪಕ್ಷವನ್ನು, ಪಕ್ಷದ ನಾಯಕರನ್ನೂ ಉಳಿಸಿಕೊಳ್ಳುವುದೇ ಈಗ ಮಮತಾಗೆ ಸವಾಲಿನಂತಾಗಿದೆ.

ಟಿಎಂಸಿಯ 29 ಲೋಕಸಭಾ ಸದಸ್ಯರಲ್ಲಿ 12 ಮಂದಿ ಬಿಜೆಪಿ ಸಂಪರ್ಕದಲ್ಲಿದ್ದು, ಶೀಘ್ರದಲ್ಲೇ ಕಮಲ ಪಕ್ಷಕ್ಕೆ ಸೇರಲಿದ್ದಾರೆ. ಅವರಷ್ಟೇ ಅಲ್ಲದೇ, ಇನ್ನೂ 5-6 ಸಂಸದರನ್ನೂ ಜತೆಗೆ ಕರೆದೊಯ್ಯುವ ಬಗ್ಗೆ 12 ಸಂಸದರು ಮಾತುಕತೆ ನಡೆಸುತ್ತಿದ್ದಾರೆ. ಇವರಲ್ಲಿ, ಮಮತಾ ಮತ್ತು ಅಭಿಷೇಕ್ ಬ್ಯಾನರ್ಜಿಗೆ ಆಪ್ತರಾದ ಕೆಲ ಸಂಸದರೂ ಸೇರಿದ್ದಾರೆ. ಪಕ್ಷಾಂತರ ತಡೆ ಕಾನೂನಿನ ಹೊಡೆತ ತಪ್ಪಿಸಿಕೊಳ್ಳಲು 20 ಸಂಸದರನ್ನು ಒಟ್ಟುಗೂಡಿಸಿ ಕರೆದೊಯ್ಯುವ ತಂತ್ರ ರೂಪಿಸಲಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿರುವುದಾಗಿ ದೈನಿಕ್ ಜಾಗರಣ್ ವರದಿ ಪ್ರಕಟಿಸಿದೆ. ಸಿಎಂ ಸುವೇಂದು ಅವರು ಇತ್ತೀಚೆಗೆ ನಡೆಸಿದ ಸಭೆಯಲ್ಲಿ ಟಿಎಂಸಿ ಸಂಸದೆ ಕಾಕೋಳಿ ಮತ್ತಿತರ ಶಾಸಕರು ಭಾಗವಹಿಸಿದ್ದರು. ಪ್ರಸ್ತುತ ಲೋಕಸಭೆಯಲ್ಲಿ ಬಿಜೆಪಿಯ 240 ಸಂಸದರಿದ್ದು, ಎನ್‌ಡಿಎ ಮಿತ್ರಪಕ್ಷಗಳ ಬೆಂಬಲದಲ್ಲಿ ಸರಕಾರ ನಡೆಸಲಾಗುತ್ತಿದೆ. ಟಿಎಂಸಿಯಿಂದ 20 ಸಂಸದರು ಬಿಜೆಪಿಗೆ ಬಂದರೆ ಪಕ್ಷದ ಸ್ವಂತ ಬಲ ಮತ್ತಷ್ಟು ಹೆಚ್ಚುತ್ತದೆ, ಮಿತ್ರಪಕ್ಷಗಳ ಮೇಲಿನ ಅವಲಂಬನೆ ತಗ್ಗುತ್ತದೆ ಎಂಬುದು ಬಿಜೆಪಿ ಲೆಕ್ಕಾಚಾರವಾಗಿದೆ.

ಎಐಎಡಿಎಂಕೆ ಮತ್ತೊಬ್ಬ ಶಾಸಕ ರಾಜೀನಾಮೆ

ಚೆನ್ನೈ: ತಮಿಳುನಾಡಿನಲ್ಲಿ ದಿನವೂ ರಾಜಕೀಯ ಪಕ್ಷಗಳಲ್ಲಿ ಬದಲಾವಣೆಗಳಾಗುತ್ತಿವೆ. ಎಐಎಡಿಎಂಕೆ ಪಕ್ಷದ ಎರಡೂ ಬಣಗಳು ದಿನಕ್ಕೊಬ್ಬರಂತೆ ಶಾಸಕರನ್ನು ಕಳೆದುಕೊಳ್ಳುತ್ತಿವೆ. ಪಕ್ಷದೊಳಗೆ ಆಂತರಿಕ ಬಿಕ್ಕಟ್ಟು ದಿನೇ ದಿನೇ ಹೆಚ್ಚುತ್ತಿದೆ. ಸೋಮವಾರ ಮೂವರು ಎಐಎಡಿಎಂಕೆ ಶಾಸಕರು ರಾಜೀನಾಮೆ ನೀಡಿದ್ದರು. ಮಂಗಳವಾರ ಮತ್ತೊಬ್ಬ ಶಾಸಕ ರಾಜೀನಾಮೆ ನೀಡಿದ್ದಾರೆ. ಅಂಬಸಮುದ್ರಂ ಕ್ಷೇತ್ರದ ಶಾಸಕ, ಎಡಪ್ಪಾಡಿ ಪಳನಿಸ್ವಾಮಿ ಅವರ ಆಪ್ತ ಎಸಕ್ಕಿ ಸುಬಯಾ ಸ್ಪೀಕರ್‌ಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಸ್ಪೀಕರ್ ಅಂಗೀಕರಿಸಿದ್ದಾರೆ. ಆ ಬಳಿಕ ಎಸಕ್ಕಿ ಸುಬಯಾ ವಿಜಯ್ ನೇತೃತ್ವದ ಟಿವಿಕೆಗೆ ಸೇರ್ಪಡೆಯಾಗಿದ್ದಾರೆ. ಮೊದಲು ಸುಬಯಾ ಟೈಪ್ ಮಾಡಿ ಮುದ್ರಿಸಿದ ರಾಜೀನಾಮೆ ಪತ್ರ ಸಲ್ಲಿಸಿದ್ದರು. ಅದನ್ನು ಸ್ವೀಕರಿಸಲು ಸ್ಪೀಕರ್ ನಿರಾಕರಿಸಿದ ಬಳಿಕ ಸುಬಯಾ ಕೈಯಲ್ಲೇ ರಾಜೀನಾಮೆ ಪತ್ರ ಬರೆದು ಸಲ್ಲಿಸಿದರು.

ರಾಮರಹೀಮಗೆ ಮತ್ತೆ 30 ದಿನಗಳ ಪೆರೋಲ್

ದೆಹಲಿ: ಸಾಧ್ವಿಗಳ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ಜೈಲುವಾಸದಲ್ಲಿರುವ ಪಂಜಾಬ್-ಹರಿಯಾಣ ಭಾಗದಲ್ಲಿನ 'ಸಿರ್ಸಾ ಡೇರಾ ಸಚ್ಚಾ ಸೌದಾ'ದ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್‌ಗೆ ಮತ್ತೊಮ್ಮೆ ಪೆರೋಲ್ (ಶಿಕ್ಷೆಯ ರಜಾ ಅವಧಿ) ಮಂಜೂರಾಗಿದ್ದು, 30 ದಿನಗಳ ಕಾಲ ಜೈಲಿನಿಂದ ಹೊರಗಿರಲು ಅವಕಾಶವಾಗಿದೆ. ಮಂಗಳವಾರ ಬೆಳಗ್ಗೆ 7ಕ್ಕೆಲ್ಲಾ ರೋಹ್ಟಕ್‌ನ ಸುನಾರಿಯಾ ಜೈಲಿನಿಂದ ಹೊರಬಿದ್ದ ಗುರ್ಮೀತ್, ಬಿಗಿ ಭದ್ರತೆಯಲ್ಲಿ ಸಿರ್ಸಾ ಆಶ್ರಮಕ್ಕೆ ತೆರಳಿದ್ದಾನೆ.

2026ರಲ್ಲಿಯೇ ಇದು ಆತನಿಗೆ ಸಿಕ್ಕಿರುವ 2ನೇ ಪೆರೋಲ್ ಆಗಿದೆ. ಇದಕ್ಕೂ ಮೊದಲು, ಜನವರಿಯಲ್ಲಿ 40 ದಿನಗಳ ಪೆರೋಲ್ ಮೇಲೆ ಗುರ್ಮೀತ್ ಜೈಲಿನಾಚೆ ಬಂದಿದ್ದ. ತನ್ನದೇ ಆಶ್ರಮದ ಇಬ್ಬರು ಶಿಷ್ಯೆಯರ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣಗಳಲ್ಲಿ 2017ರಲ್ಲಿ ವಿಶೇಷ ಸಿಬಿಐ ನ್ಯಾಯಾಲಯದಿಂದ 20 ವರ್ಷಗಳ ಶಿಕ್ಷೆಗೊಳಗಾದ ಗುರ್ಮೀತ್, ಅದರಲ್ಲಿ 406 ದಿನಗಳನ್ನು ಜೈಲಿನಾಚೆಯೇ ಕಳೆದಿದ್ದಾನೆ. ಈ ಅಪರಾಧ ಪ್ರಕರಣದಲ್ಲಿ ಈವರೆಗೆ ಗುರ್ಮೀತ್ ಒಟ್ಟು 16 ಬಾರಿ ಪೆರೋಲ್ ಪಡೆದಿದ್ದಾನೆ.

ಟ್ರಂಪ್ ಹೆಸರಿನ ಎಮ್ಮೆ 3 ಲಕ್ಷ ರು.ಗೆ ಮಾರಾಟ

ಢಾಕಾ: ಬಾಂಗ್ಲಾದೇಶದಲ್ಲೊಂದು ಎಮ್ಮೆ ತನ್ನ ಹೊಂಬಣ್ಣದ ಕೂದಲು, ಮುಖ ಚಹರೆಯ ಕಾರಣಕ್ಕೆ ದೊಡ್ಡ ಮಟ್ಟದಲ್ಲಿ ಸುದ್ದಿಗೆ ಗ್ರಾಸವೊದಗಿಸಿದೆ. ಅಪರೂಪ ಅಲ್ಬಿನೋ ತಳಿಯ ಎಮ್ಮೆ ಎಮ್ಮೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಸರಿಡಲಾಗಿದೆ. ಇದೇ ಕಾರಣವಾಗಿ ಎಮ್ಮೆಯ ವಿಡಿಯೊ ಮತ್ತು ಫೋಟೊಗಳ ಜಾಲತಾಣದಲ್ಲಿ ವೈರಲ್ ಆಗಿದ್ದು, ಭಾರೀ ಸದ್ದು ಮಾಡುತ್ತಿವೆ. ಎಮ್ಮೆಗೆ 'ಟ್ರಂಪ್' ಎಂದೇ ಹೆಸರಿಡಲಾಗಿದೆ ಎಂದು ಮಾಲೀಕ ಜಿಯಾ ಉದ್ದಿನ್ ಮೃಡಾರ್ ಹೇಳಿದ್ದಾರೆ. ಈ ಎಮ್ಮೆಯ ತಲೆಗೂದಲ ಶೈಲಿ, ಮುಖ ಚಹರೆ ಅಮೆರಿಕ ಅಧ್ಯಕ್ಷ ಟ್ರಂಪ್‌ರನ್ನೇ ಹೋಲುತ್ತದೆ ಎಂಬ ಕಾರಣಕ್ಕೆ ಜನರು ಎಮ್ಮೆಯನ್ನು ನೋಡಲು ಮುಗಿಬಿದ್ದು ಬರುತ್ತಿದ್ದಾರೆ.



ಢಾಕಾ ನಗರ ಸಮೀಪದ ನಾರಾಯಣಗಂಜ್ ಜಿಲ್ಲೆಯ ಫಾರಂನಲ್ಲಿರುವ ಈ ಎಮ್ಮೆ 700 ಕಿಲೊ ತೂಕವಿದೆ. ಕಿಲೋಗೆ 550 ಟಾಕಾ(427.62 ರು.) ಲೆಕ್ಕದಲ್ಲಿ ಮಾರಾಟ ಮಾಡಲಾಗಿದೆ. ಈದ್ ಉಲ್ ಅದಾಃ(ಬಕ್ರೀದ್) ಹಬ್ಬದ ಕುರ್ಬಾನಿಗಾಗಿ ಈ ಎಮ್ಮೆಯನ್ನು ಢಾಕಾದ ಜಿಂಜಿರಾ ಪ್ರದೇಶದ ಮೊಹಮ್ಮದ್ ಶರೋನ್ ಎಂಬ ವ್ಯಾಪಾರಿ 3.30 ಲಕ್ಷ ಟಾಕಾ(3 ಲಕ್ಷ ರು.)ಗೆ ಖರೀದಿಸಿದ್ದಾರೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ರಾಜ್ಯದಲ್ಲಿ ಶಂಕಿತ ಎಬೋಲಾ ವೈರಸ್ ?



ಬೆಂಗಳೂರು: ಬೆಂಗಳೂರಿನಲ್ಲಿ ಎಬೋಲಾ ವೈರಸ್ ರೋಗದ ಶಂಕಿತ ಪ್ರಕರಣವೊಂದು ಪತ್ತೆಯಾಗಿದೆ ಎನ್ನಲಾಗುತ್ತಿದ್ದು, ಜನತೆಯಲ್ಲಿ ತೀವ್ರ ಆತಂಕ ಮೂಡಿಸಿದೆ. ಉಗಾಂಡಾ ದೇಶದಿಂದ ಬಂದ 28 ವರ್ಷದ ವಿದೇಶಿ ಮಹಿಳೆಯಲ್ಲಿ ಎಬೋಲಾ ರೋಗದ ಲಕ್ಷಣಗಳು ಕಾಣಿಸಿಕೊಂಡಿದ್ದು, ಸದ್ಯ ಅವರನ್ನು ತೀವ್ರ ನಿಗಾದಲ್ಲಿ ಇರಿಸಲಾಗಿದೆ. ಉಗಾಂಡಾ ದೇಶದ ಕ್ಯಾಂಪಾಲಾ ಮೂಲದ ನಾಗಿರೆ ಲತಿಫಾ (28) ಎಂಬ ಮಹಿಳೆ, ಕಳೆದ ಮೇ 23ರಂದು ಬೆಂಗಳೂರಿಗೆ ಆಗಮಿಸಿದ್ದರು. ರಾಯಲ್ ಏಸ್ ಬೂಟಿಕ್ ಹೋಟೆಲ್‌ನ ರೂಮ್ ನಂಬರ್ 303ರಲ್ಲಿ ತಂಗಿದ್ದರು. ಮಹಿಳೆಗೆ ಎಬೋಲಾ ಮಾದರಿಯ ಆರೋಗ್ಯ ಸಮಸ್ಯೆಗಳು ಪತ್ತೆಯಾಗುತ್ತಿದ್ದಂತೆ ಎಚ್ಚೆತ್ತ ಆರೋಗ್ಯ ಇಲಾಖೆ, ತಕ್ಷಣವೇ ಆದೇಶ ಹೊರಡಿಸಿ ಇಂದು ಆಂಬುಲೆನ್ಸ್ ಮೂಲಕ ಅವರನ್ನು ಐಸೋಲೇಷನ್‌ಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಪುಣೆ ಲ್ಯಾಬ್ ವರದಿಗೆ ಕಾತರ: ಶಂಕಿತ ಮಹಿಳೆಯಿಂದ ಮೇ 25ರಂದೇ ರಕ್ತ ಹಾಗೂ ಇತರ ಅಗತ್ಯ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಈ ಸ್ಯಾಂಪಲ್‌ಗಳನ್ನು ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ಲ್ಯಾಬ್‌ಗೆ ಕಳುಹಿಸಲಾಗಿದ್ದು, ವೈದ್ಯಕೀಯ ವರದಿಗಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ಕಾಯುತ್ತಿದ್ದಾರೆ. ವರದಿ ಬಂದ ಬಳಿಕವಷ್ಟೇ ಮಹಿಳೆಗೆ ಎಬೋಲಾ ಸೋಂಕು ತಗುಲಿದೆಯೇ ಇಲ್ಲವೇ ಎಂಬುದು ಅಧಿಕೃತವಾಗಿ ದೃಢವಾಗಲಿದೆ. ವರದಿ ಬಳಿಕ ಸೂಕ್ತ ಕ್ರಮಕ್ಕೆ ಆರೋಗ್ಯ ಇಲಾಖೆ ಮುಂದಾಗಲಿದೆ.

ಕಾರ್ಯಕರ್ತರಿಗೆ ಪರಿಷತ್ ಸ್ಥಾನ ನೀಡಲು ಮನವಿ

ಬೆಂಗಳೂರು: ಪಕ್ಷದ ಸಂಘಟನೆಗಾಗಿ ತಳ ಮಟ್ಟದಿಂದ ನಿರಂತರವಾಗಿ ಶ್ರಮಿಸುತ್ತಿರುವ ನಿಷ್ಠಾವಂತ ಕಾರ್ಯಕರ್ತರು ಮತ್ತು ಮುಖಂಡರ ಸೇವೆಯನ್ನು ಗುರುತಿಸಿ, ಮುಂಬರುವ ವಿಧಾನಪರಿಷತ್ ಸ್ಥಾನಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಿಕೊಡುವಂತೆ ಈ ಸಂದರ್ಭದಲ್ಲಿ ನಾಯಕರ ಬಳಿ ಒಕ್ಕೊರಲಿನ ಮನವಿ ಸಲ್ಲಿಸಲಾಯಿತು. ಪಕ್ಷದ ಬೆಳವಣಿಗೆಗೆ ಶ್ರಮಿಸುತ್ತಿರುವ ವರಿಗೆ ಮನ್ನಣೆ ನೀಡುವಂತೆ ಕೋರಿದ ನಮ್ಮ ಮನವಿಗೆ ನಾಯಕರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯ ದರ್ಶಿಗಳು ಹಾಗೂ ರಾಜ್ಯಸಭಾ ಸದಸ್ಯ ಡಾ. ಸೈಯದ್ ನಾಸಿರ್ ಹುಸೇನ್ ಮತ್ತು ಎಐಸಿಸಿ ಕಾರ್ಯದರ್ಶಿ ಹಾಗೂ ಕರ್ನಾ ಟಕದ ಉಸ್ತುವಾರಿ ಅಭಿಷೇಕ್ ದತ್ ಅವ ರನ್ನು ಭೇಟಿಯಾಗಿ ಮಹತ್ವದ ಮಾತುಕತೆ ನಡೆಸಲಾಯಿತು. ಪಕ್ಷದ ಸಂಘಟನೆಗಾಗಿ ತಳಮಟ್ಟದಿಂದ ನಿರಂತರವಾಗಿ ಶ್ರಮಿಸುತ್ತಿರುವ ನಿಷ್ಠಾವಂತ ಕಾರ್ಯಕರ್ತರು ಮತ್ತು ಮುಖಂಡರ ಸೇವೆ ಯನ್ನು ಗುರುತಿಸಿ, ಮುಂಬರುವ ವಿಧಾನ ಪರಿಷತ್ ಸ್ಥಾನಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಿಕೊಡುವಂತೆ ಈ ಸಂದರ್ಭದಲ್ಲಿ ನಾಯಕರ ಬಳಿ ಒಕ್ಕೊರಲಿನ ಮನವಿ ಸಲ್ಲಿಸ ಲಾಯಿತು. ಪಕ್ಷದ ಬೆಳವಣಿಗೆಗೆ ಶ್ರಮಿ ಸುತ್ತಿರು ವವರಿಗೆ ಮನ್ನಣೆ ನೀಡುವಂತೆ ಕೋರಿದ ನಮ್ಮ ಮನವಿಗೆ ನಾಯಕರು ಸಕಾರಾತ್ಮಕ ವಾಗಿ ಸ್ಪಂದಿಸಿದ್ದಾರೆ. ನಿಯೋಗ ದಲ್ಲಿ ಕಾಂಗ್ರೆಸ್ ಮುಖಂಡರಾದ ಎ.ಎನ್. ನಟರಾಜ್ ಗೌಡ, ಬಿ.ಆರ್.ನಾಯ್ಡು, ಮೆಹರೋಜ್ ಖಾನ್, ಶಾಕಿರ್ ಸನದಿ, ಮಂಜುನಾಥ್ ಸುಣಗಾರ್, ಕಾಂತಾ ನಾಯಕ್, ರಾಜೇಶ್ವರಿ ಪಾಟೀಲ್, ಸುನಿಲ್ ಹನುಮಣ್ಣನವರ್ ಇದ್ದರು.

ವಿನಯ್ ಮೇಲ್ಮನವಿ: ಆಕ್ಷೇಪಣೆಗೆ ಸೂಚನೆ

ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದುಪಡಿಸಬೇಕು ಎಂದು ಕೋರಿ ಮಾಜಿ ಶಾಸಕ ವಿನಯ ಕುಲಕರ್ಣಿ ಮತ್ತು ಚಂದ್ರಶೇಖರ ಇಂಡಿ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಗಳ ವಿಚಾರಣೆಯನ್ನು ಹೈಕೋರ್ಟ್ ಜೂನ್ 2ಕ್ಕೆ ಮುಂದೂಡಿದೆ. 'ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ವಿನಯ ಕುಲಕರ್ಣಿ ಹಾಗೂ ಚಂದ್ರಶೇಖರ ಇಂಡಿ ಸಲ್ಲಿಸಿರುವ ಪ್ರತ್ಯೇಕ ಮೇಲ್ಮನವಿಗಳನ್ನು ರಜಾಕಾಲದ ನ್ಯಾಯಪೀಠದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಸುಪ್ರೀಂಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ, ಅರ್ಜಿದಾರರಿಗೆ ಶಿಕ್ಷೆ ವಿಧಿಸಿರುವ ಕಾರಣ ಅವರು ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಸದ್ಯ ಖಾಲಿಯಿರುವ ಅವರ ಸ್ಥಾನಕ್ಕೆ ಮಧ್ಯಂತರ ಚುನಾವಣೆ ಘೋಷಣೆ ಮಾಡುವ ಸಾಧ್ಯತೆಯಿದೆ. ಹಾಗಾಗಿ, ಚುನಾವಣೆ ಘೋಷಣೆಗೆ ತಡೆ ನೀಡಬೇಕು ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ವಿಧಾನಸೌಧದಲ್ಲಿ ಹದಗೆಟ್ಟ ಆಡಳಿತ: ವಿಜಯೇಂದ್ರ

ಬೆಂಗಳೂರು: ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆಶಿ ಮತ್ತವರ ಬೆಂಬಲಿಗ ಸಚಿವರನ್ನು ಕಾಂಗ್ರೆಸ್ ಹೈಕಮಾಂಡ್ ದೆಹಲಿಗೆ ಕರೆಯಿಸಿಕೊಂಡಿದ್ದರಿಂದ ಇಂದು ವಿಧಾನಸೌಧ ಕಳೆಗುಂದಿತ್ತು. ಬಹುತೇಕ ಸಚಿವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದರಿಂದ ರಾಜ್ಯದ ಶಕ್ತಿ ಕೇಂದ್ರ ಬಣಗುಟ್ಟುತ್ತಿತ್ತು. ಇದೇ ವಿಚಾರವನ್ನು ಮುಂದಿಟ್ಟುಕೊಂಡು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸರಕಾರ ವನ್ನು ಟೀಕಿಸಿದ್ದಾರೆ. ರಾಜ್ಯದ ಶಕ್ತಿ ಸೌಧ ಬಿಕೋ ಎನ್ನುತ್ತಿದೆ, ರಾಜ್ಯದ ಮಹಾಜನತೆಯಲ್ಲಿ ನನ್ನ ವಿನಂತಿ – ವಿಧಾನಸೌಧದಲ್ಲಿ ಆಡಳಿತ ಹುಡುಕ ಬೇಡಿ, ನೀವೂ ದೆಹಲಿಗೆ ಹೋಗಿ ಎಂಬರ್ಥದಲ್ಲಿ ಟ್ವೀಟ್ ಮಾಡಿದ್ದಾರೆ. ಇಡೀ ಕಾಂಗ್ರೆಸ್ ಸರಕಾರವೇ ದೆಹಲಿಗೆ ತನ್ನ ಹೈಕಮಾಂಡ್ ದರ್ಬಾರ್‌ನಲ್ಲಿ ಹಾಜರಿ ಹಾಕಲು 'ಅಧಿಕಾರ ಹಪಾಹಪಿ'ಯ ಡೆಪ್ಯುಟೇಶನ್ ಮೇಲೆ ತೆರಳಿದೆ. ಕಾಂಗ್ರೆಸ್ಸಿನ ಕುರ್ಚಿ ಕುಸ್ತಿಯ ಜಾಗತಿಕ ಸಮಸ್ಯೆಗೆ ದೆಹಲಿಯಲ್ಲಿ ಪರಿಹಾರ ಹುಡುಕಲಾಗುತ್ತಿದೆ ಎಂದು ಕಿಡಿಕಾರಿದ್ದಾರೆ. ಇವರು ಅಧಿಕಾರಕ್ಕೆ ಬಂದಿದ್ದೇ ಸಿಎಂ ಕುರ್ಚಿಗಾಗಿ ಕಾದಾಟ ಮಾಡಲು, ದೆಹಲಿಯಲ್ಲಿ ಲಾಬಿ ಮಾಡಿಕೊಂಡು ಕೂರಲು ಎಂದು ಜನರಿಗೆ ಅರ್ಥವಾಗಿದೆ ಎಂದರು.

ವರ್ಷದಿಂದ ಪೋಸ್ಟಿಂಗ್ ಸಿಗದ ಕೆಲ ಅಬಕಾರಿ ನಿರೀಕ್ಷಕರು ಅತಂತ್ರ | ಸಮಸ್ಯೆ ಇತ್ಯರ್ಥಪಡಿಸಿ ಹೊಸ ಕೌನ್ಸೆಲಿಂಗ್ ಆರಂಭಕ್ಕೆ ಒತ್ತಾಯ

ಗೊಂದಲದ ಗೂಡಾದ ಅಬಕಾರಿ ಕೌನ್ಸೆಲಿಂಗ್ ವರ್ಗಾವಣೆ



ಬೆಂಗಳೂರು: ವರ್ಗಾವಣೆ ದಂಧೆಗೆ ಅಂಕುಶ ಹಾಕುವ ನಿಟ್ಟಿನಲ್ಲಿ ಅಬಕಾರಿ ಇಲಾಖೆಯಲ್ಲಿ 2025ರ ಜು.8ರಿಂದ ಜಾರಿಗೆ ಬಂದಿರುವ ಆನ್‌ಲೈನ್ ಕೌನ್ಸೆಲಿಂಗ್ ವರ್ಗಾವಣೆ ಪ್ರಕ್ರಿಯೆ ಗೊಂದಲದ ಗೂಡಾಗಿದೆ.

ಕಳೆದ ವರ್ಷ ಸರಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಸಂದರ್ಭದಲ್ಲಿ ಅಬಕಾರಿ ಇಲಾಖೆಯಲ್ಲಿ ಗ್ರೂಪ್ ಸಿ ವೃಂದದ 151 ಅಬಕಾರಿ ನಿರೀಕ್ಷಕರು, 114 ಉಪ ನಿರೀಕ್ಷಕರು, 7 ಮುಖ್ಯ ಪೇದೆ ಮತ್ತು 415 ಪೇದೆ ಸೇರಿ ಒಟ್ಟು 687 ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಸೇವಾವಧಿ ಹಿರಿತನ ಆಧಾರದ ಮೇರೆಗೆ ಕೌನ್ಸಿಲಿಂಗ್ ಮೂಲಕ ವರ್ಗಾಯಿಸಲಾಗಿತ್ತು. ಸೇವಾ ಹಿರಿತನ ಮತ್ತು ಅಂಕಗಳ ಆಧಾರದಲ್ಲಿ ಅಬಕಾರಿ ನಿರೀಕ್ಷಕರು, ಕಾನೂನುಬದ್ಧವಾಗಿ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದರು. ಕೆಲವರಿಗೆ ಪೋಸ್ಟಿಂಗ್ ನೀಡಲಾಗಿತ್ತು, ಅದರಂತೆ, ಆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ನಂತರ ಉಂಟಾದ ನ್ಯಾಯಾಂಗ ವ್ಯಾಜ್ಯಗಳ ಪರಿಣಾಮವಾಗಿ ಕೆಲ ಅಬಕಾರಿ ನಿರೀಕ್ಷಕರಿಗೆ ವರ್ಷದಿಂದ ಪೋಸ್ಟಿಂಗ್ ಸಿಗದೆ ಕಂಗಾಲಾಗಿದ್ದಾರೆ.

ಇದೀಗ, ಹಿಂದಿನ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಉಂಟಾಗಿರುವ ಗೊಂದಲವನ್ನು ಇತ್ಯರ್ಥಪಡಿಸದೆ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಆನ್‌ಲೈನ್ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಲು ಇಲಾಖೆ ಮುಂದಾಗಿದೆ. ಇದಕ್ಕೆ ಹುದ್ದೆ ಸಿಗದೆ ಅತಂತ್ರ ಸ್ಥಿತಿಯಲ್ಲಿರುವ ನಿರೀಕ್ಷಕರ ಪರವಾಗಿ ಅಬಕಾರಿ ವಲಯದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿದೆ. ಸರಕಾರ ಜಾರಿಗೊಳಿಸಿದ ವರ್ಗಾವಣೆ ನೀತಿ ಹಾಗೂ ಕೌನ್ಸೆಲಿಂಗ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಉದ್ದೇಶಕ್ಕೆ ನ್ಯಾಯಾಲಯದ ಆದೇಶದಿಂದ ಅಡ್ಡಿಯಾಗಿರುವ ಹಿನ್ನೆಲೆ ಇಲಾಖೆ, ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸುವ ಮೂಲಕ ಅನುಕೂಲಕರ ಆದೇಶ ಪಡೆದುಕೊಂಡಲ್ಲಿ ಮಾತ್ರ ಮೂಲ ಕೌನ್ಸೆಲಿಂಗ್ ಪ್ರಕ್ರಿಯೆ ಉದ್ದೇಶ ಸಂಪೂರ್ಣವಾಗಿ ಈಡೇರಲಿದೆ.

ಪಾರದರ್ಶಕತೆ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಿದ ಉನ್ನತ ಅಧಿಕಾರಿಗಳ ಉದ್ದೇಶ ಉತ್ತಮವಾಗಿತ್ತು. ಆದರೆ, ಈಗಾಗಲೇ ಆಯ್ಕೆಗೊಂಡು ಹುದ್ದೆ ಸಿಗದೆ ಅತಂತ್ರ ಸ್ಥಿತಿಯಲ್ಲಿರುವ ಅಧಿಕಾರಿಗಳ ಸಮಸ್ಯೆ ಬಗೆಹರಿಸಿ ಹೊಸ ಕೌನ್ಸೆಲಿಂಗ್ ಆರಂಭಿಸಬೇಕು. ಹಾಗಾಗಿ, ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಂತೆ ಅಧಿಕಾರಿಗಳ ಹಕ್ಕು ರಕ್ಷಿಸಿ ನ್ಯಾಯಸಮ್ಮತ ಪರಿಹಾರ ಸರಕಾರ ಕೈಗೊಳ್ಳಬೇಕು ಎಂಬ ಅಭಿಪ್ರಾಯ ಇಲಾಖೆಯ ವಲಯದಲ್ಲಿ ಕೇಳಿಬಂದಿದೆ.

ಪ್ರಸಕ್ತ ವರ್ಷದಿಂದ ಗ್ರೂಪ್ ಬಿ ವೃಂದದ ಅಧಿಕಾರಿಗಳ ವರ್ಗ

ಕಳೆದ ವರ್ಷ ಇಲಾಖೆಯಲ್ಲಿ ಗ್ರೂಪ್ ಸಿ ವೃಂದದ ಅಬಕಾರಿ ನಿರೀಕ್ಷರು, ಉಪ ನಿರೀಕ್ಷಕರು, ಮುಖ್ಯಪೇದೆ ಮತ್ತು ಪೇದೆಗಳನ್ನು ಸೇವಾ ಹಿರಿತನ ಆದಾರದಲ್ಲಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿತ್ತು.ಇದರಿಂದಾಗಿ ಸಾವಿರಾರು ಅಧಿಕಾರಿಗಳಿಗೆ ಅನುಕೂಲವಾಗುವ ಜತೆಗೆ ವರ್ಗಾವಣೆಗೆ ಕೋಟ್ಯಂತರ ರು. ಹಣ ನೀಡುವುದು ತಪ್ಪಿತ್ತು. ಇದೀಗ ಮೊದಲ ಬಾರಿ ಸರಕಾರ, ಗ್ರೂಪ್ ಬಿ ವೃಂದದ ಅಬಕಾರಿ ಉಪ ಅಧೀಕ್ಷಕರು, ಅಧೀಕ್ಷಕರನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆಗೆ ಬಜೆಟ್‌ನಲ್ಲಿ ಘೋಷಿಸಿತ್ತು. ಅದರಂತೆ, ಈ ಬಾರಿ ಸಾರ್ವತ್ರಿಕ ವರ್ಗಾವಣೆ ಸಂದರ್ಭದಲ್ಲಿ ಉಪ ಅಧೀಕ್ಷಕರು, ಅಧೀಕ್ಷಕರು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಗೊಳ್ಳಲಿದ್ದಾರೆ. ಒಟ್ಟಿನಲ್ಲಿ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಒಟ್ಟು ಶೇ.85 ಹುದ್ದೆಗಳಲ್ಲಿ ಕಾರ್ಯನಿರ್ವ ಹಿಸುತ್ತಿರುವ ಗ್ರೂಪ್ ಬಿ ಮತ್ತು ಸಿ ವೃಂದದ ಅಧಿಕಾರಿಗಳು, ಹಿರಿತನ ಆಧಾರದಲ್ಲಿ ವರ್ಗಾವಣೆಗೊಳ್ಳಲಿದ್ದಾರೆ.

ದ್ವೇಷ ಭಾಷಣ ಮಸೂದೆಗೆ ಕೇಂದ್ರ ಬ್ರೇಕ್

ಬೆಂಗಳೂರು: ದ್ವೇಷ ಭಾಷಣವನ್ನು ನಿಗ್ರಹಿಸಲು ಕರ್ನಾಟಕ ಸರಕಾರ ರೂಪಿ ಸಿರುವ ಹೊಸ ಮಸೂದೆಯ ಅಗತ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ತನ್ನ ಅಭಿಪ್ರಾಯ ತಿಳಿಸಿದೆ. ಅಲ್ಲದೇ, ಈಗಿ ರುವ ಕಾನೂನುಗಳೇ ಸಮಸ್ಯೆಯನ್ನು ಪರಿಹರಿ ಸಲು ಶಕ್ತವಾಗಿವೆ ಎಂದೂ ತನ್ನ ಜ್ಞಾಪಕ ಪತ್ರದಲ್ಲಿ ಸ್ಪಷ್ಟಪಡಿಸಿದೆ.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮಸೂದೆಗೆ ಸಹಿ ಹಾಕಲು ನಿರಾಕರಿಸಿದ ನಂತರ, ಕರ್ನಾ ಟಕ ಸರಕಾರವು ಫೆಬ್ರವರಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಒಪ್ಪಿಗೆಗಾಗಿ ಮಸೂದೆಯನ್ನು ಗೃಹ ಸಚಿವಾಲಯಕ್ಕೆ ಕಳುಹಿಸಿತ್ತು. ಇದರ ಪರಿಶೀಲನೆ ಬಳಿಕ ಕೇಂದ್ರ ಗೃಹ ಸಚಿವಾಲಯವು ತನ್ನ ನಿಲುವನ್ನು ಕರ್ನಾಟಕ ಸರಕಾರಕ್ಕೆ ತಿಳಿಸಿದೆ.ಈ ಮಸೂದೆಯನ್ನು ಸಿಎಸ್ ವಿಭಾಗ ದಲ್ಲಿ ಪರಿಶೀಲಿಸಲಾಗಿದೆ. ಈ ಕುರಿತ ಬಿಕ್ಕಟ್ಟುಗಳನ್ನು ಪರಿಹರಿಸಲು ಈಗಾ ಗಲೇ ಭಾರತೀಯ ನ್ಯಾಯ ಸಂಹಿತಾ- 2023 ಮತ್ತು ಇತರ ಚಾಲ್ತಿಯಲ್ಲಿರುವ ಕಾನೂನುಗಳೇ ಸದೃಢವಾಗಿವೆ. ಪ್ರತ್ಯೇಕ ಶಾಸನವನ್ನು ಜಾರಿಗೆ ತರುವುದರಿಂದ ನಕಲು ಮತ್ತು ಏಕರೂಪತೆಯ ಕೊರತೆ ಉಂಟಾಗಬಹುದು ಎಂದು ಗೃಹ ಸಚಿವಾಲಯ ತನ್ನ ಜ್ಞಾಪನಾ ಪತ್ರದಲ್ಲಿ ಹೇಳಿದೆ.

ರಾಜ್ಯಪಾಲರಿಂದ ವಾಪಾಸಾದ ಮಸೂದೆ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಮಸೂದೆಯು ಸಾಂವಿಧಾನಿಕವಾಗಿ ರಕ್ಷಿಸಲ್ಪಟ್ಟ ಪ್ರಜಾ ಪ್ರಭುತ್ವದ ಚರ್ಚೆಯ ಮೇಲೆ ತೀವ್ರ ಹಾನಿಕಾರಕ ಪರಿಣಾಮ ಬೀರುತ್ತದೆ ಎಂದು ಹೇಳುವ ಮೂಲಕ ತಮ್ಮ ಒಪ್ಪಿಗೆ ಯನ್ನು ನೀಡದೆಯೇ ಮಸೂದೆಯನ್ನು ರಾಜ್ಯ ಸರಕಾರಕ್ಕೆ ವಾಪಸ್ ಕಳುಹಿಸಿ ದ್ದರು. ಮಸೂದೆಯ ಪ್ರಕಾರ, ದ್ವೇಷ ಅಪರಾಧ ಎಂದರೆ ಭಾಷಣದ ಸಂವಹನ, ಪ್ರಕಟಣೆ ಅಥವಾ ಪ್ರಸರಣ ಅಥವಾ ಅಂತಹ ದ್ವೇಷ ಭಾಷಣವನ್ನು ಉತ್ತೇಜಿಸುವ, ಪ್ರಚಾರ ಮಾಡುವ, ಪ್ರಚೋದಿಸುವ, ಮೃತ ಅಥವಾ ಜೀವಂತ ವ್ಯಕ್ತಿ ಅಥವಾ ವ್ಯಕ್ತಿಗಳ ಅಥವಾ ಸಂಸ್ಥೆಗಳ ಗುಂಪಿನ ವಿರುದ್ಧ ಅಸಂಗತತೆ ಅಥವಾ ದ್ವೇಷ ಅಥವಾ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಯಾವುದೇ ಕೃತ್ಯವಾಗಿದೆ. ಪೂರ್ವಾಗ್ರಹ ಪೀಡಿತ ಹಿತಾಸಕ್ತಿ ಎಂದರೆ ಧರ್ಮ, ಜನಾಂಗ, ಜಾತಿ ಅಥವಾ ಸಮುದಾಯ, ಲಿಂಗ, ಲಿಂಗ, ಲೈಂಗಿಕ ದೃಷ್ಟಿಕೋನ, ಜನ್ಮಸ್ಥಳ, ವಾಸಸ್ಥಳ, ಭಾಷೆ, ಅಂಗ ವೈಕಲ್ಯ ಅಥವಾ ಬುಡಕಟ್ಟು ಆಧಾರದ ಮೇಲೆ ಪಕ್ಷಪಾತಗಳನ್ನು ಒಳಗೊಂಡಿ ರುತ್ತದೆ.

ವಿರೋಧದ ನಡುವೆ ಮಸೂದೆಗೆ ಅಂಗೀಕಾರ: ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ವಿಪಕ್ಷ ಗಳಾದ ಬಿಜೆಪಿ ಮತ್ತು ಜೆಡಿಎಸ್‌ನ ತೀವ್ರ ವಿರೋಧದ ನಡುವೆಯೂ ಎರಡೂ ಸದನಗಳಲ್ಲಿ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳು (ತಡೆಗಟ್ಟುವಿಕೆ) ಮಸೂದೆ–2025 ಮಸೂದೆಯನ್ನು ಅಂಗೀಕರಿಸಲಾಗಿತ್ತು. ದ್ವೇಷ ಅಪರಾಧ ಕ್ಕಾಗಿ ಒಂದು ವರ್ಷದ ಜೈಲು ಶಿಕ್ಷೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ, 50 ಸಾವಿರ ರೂಪಾಯಿ ದಂಡ ವಿಧಿಸಬಹುದು. ಪುನರಾವರ್ತಿತ ಅಪರಾಧಗಳಿಗೆ ಗರಿಷ್ಠ ಏಳು ವರ್ಷಗಳ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ವಿಧಿಸುವ ಅವಕಾಶವನ್ನು ಮಸೂದೆಯಲ್ಲಿ ನೀಡಲಾಗಿದೆ.

ಜೆಎಸ್‌ಎಸ್: ರಾಷ್ಟ್ರೀಯ ವಿಚಾರ ಸಂಕಿರಣ

ಜೆಎಸ್‌ಎಸ್‌ನಲ್ಲಿ ವಿಚಾರ ಸಂಕಿರಣಕ್ಕೆ ಪ್ರವೀಣ್ ಸಿ. ರಾಮಮೂರ್ತಿ ಚಾಲನೆ ನೀಡಿದರು.

ಬೆಂಗಳೂರು: ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿಯ ರಸಾಯನ ಶಾಸ್ತ್ರ ವಿಭಾಗವು ಎಲೆಕ್ಟ್ರೋ ಕೆಮಿಕಲ್ ಸೊಸೈಟಿ ಆಫ್ ಇಂಡಿಯಾ ಸಹಯೋಗದಲ್ಲಿ ಅಡ್ವಾನ್ಸ್ಡ ಮೆಟೀರಿಯಲ್ಸ್ ಫಾರ್ ಎನರ್ಜಿ, ಎನ್ವಿರಾ ನ್ಮೆಂಟ್ ಅಂಡ್ ಬಯೋಮೆಡಿಕಲ್ ಅಪ್ಲಿಕೇಶನ್ಸ್ ಎಂಬ ವಿಷಯದ ಮೇಲೆ ಕಳೆದ ಶುಕ್ರವಾರ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿತ್ತು. ಪ್ರಧಾನ ಉಪನ್ಯಾಸಕರಾಗಿ ಭಾಗವಹಿಸಿದ್ದ ಐಐ ಎಸ್‌ಸಿ ಬೆಂಗಳೂರಿನ ಮೆಟೀರಿಯಲ್ಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಹಾಗೂ ಇಂಟರ್‌ಡಿಸಿಪ್ಲಿನರಿ ಸೆಂಟರ್ ಫಾರ್ ವಾಟರ್ ರಿಸರ್ಚ್ ಅಧ್ಯಕ್ಷ ಪ್ರವೀಣ್ ಸಿ. ರಾಮಮೂರ್ತಿ ಮಾಲಿನ್ಯ ಪತ್ತೆ, ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಪರಿಸರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ನವೀನ ಮಾಲಿಕ್ಯೂಲರ್ ಹಾಗೂ ಮೆಟೀರಿಯಲ್ ಆಧಾರಿತ ಸಂವೇದಕ ತಂತ್ರಜ್ಞಾನಗಳ ಪಾತ್ರವನ್ನು ಅವರು ವಿವರಿಸಿದರು. ಮೈಸೂರು ಜೆಎಸ್‌ಎಸ್ ಮಹಾ ವಿದ್ಯಾಪೀಠ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಬಸವ ಕುಮಾರ್ ಕೆ.ಜಿ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಅಧ್ಯಾ ಪಕರಲ್ಲಿ ಸಂಶೋಧನೆ ಹಾಗೂ ನವೀನತೆಯನ್ನು ಉತ್ತೇಜಿ ಸುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ಬೆಂಗಳೂರು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲ ಡಾ. ಭೀಮಸೇನ್ ಸೊರಗಾಂವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ರೂಪಶ್ರೀ ಬಿ. ಸ್ವಾಗತಿಸಿದರು. ಸಂಶೋಧನಾ ಡೀನ್ ಹಾಗೂ ಸಮ್ಮೇಳ ನದ ಜನರಲ್ ಚೇರ್ ಡಾ ಮಹೇಶ್ ಬಿ, ಅವರು ಸಂಸ್ಥೆ ಮತ್ತು ರಸಾಯನಶಾಸ್ತ್ರ ವಿಭಾಗದ ಸಂಶೋಧನಾ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ವಿವಿಧ ಸಂಸ್ಥೆಗಳ ಸಂಶೋಧಕರು, ಅಧ್ಯಾಪಕರು, ಕೈಗಾರಿಕಾ ತಜ್ಞರು ಹಾಗೂ ವಿದ್ಯಾರ್ಥಿಗಳು ಸಮ್ಮೇಳನದಲ್ಲಿ ಭಾಗವಹಿಸಿ, ವಸ್ತು ವಿಜ್ಞಾನ ಮತ್ತು ಎಲೆಕ್ಟ್ರೋಕೆಮಿಕಲ್ ಅನ್ವಯಿಕೆಗಳ ಕ್ಷೇತ್ರಗಳಲ್ಲಿ ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು.

ಶಿವರಾಜ್ ಸಿಂಗ್ ಚೌಹಾಣ್ ರಚಿಸಿರುವ ಕೃತಿ ಲೋಕಾರ್ಪಣೆಗೊಳಿಸಿದ ಎಚ್.ಡಿ.ದೇವೇಗೌಡ

ಅಪನಾಪನ್ ಎಲ್ಲ ಭಾಷೆಗಳಿಗೆ ಅನುವಾದ ಆಗಲಿ

ಶಿವರಾಜ್ ಸಿಂಗ್ ಚೌಹಾಣ್ ಅವರ 'ಅಪನಾಪನ್' ಕೃತಿ ಲೋಕಾರ್ಪಣೆ ಮಾಡಿದ ದೇವೇಗೌಡರು.

ದೆಹಲಿ: ಎರಡು ರಾಜ್ಯಗಳ ನದಿ ನೀರು ಹಚಿಕೆಯ ಬಗ್ಗೆ ನರ್ಮದಾ ನದಿ ನೀರು ಹಂಚಿಕೆ ವಿಚಾರದಲ್ಲಿ ಅಂದು ಗುಜರಾತ್ ಮುಖ್ಯಮಂತ್ರಿಗಳಾಗಿದ್ದ ನರೇಂದ್ರ ಮೋದಿ ಹಾಗೂ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರ ನಡುವೆ ನಡೆದಿದ್ದ ಸೌಹಾರ್ದ ಚರ್ಚೆ ಅತ್ಯಂತ ಮಾದರಿ ಮತ್ತು ಅನುಕರಣೀಯ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

ಕೇಂದ್ರದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ತಮ್ಮ ಒಡನಾಟ, ರಾಜಕೀಯ ಪ್ರಯಾಣದ ಬಗ್ಗೆ ರಚಿಸಿರುವ 'ಅಪನಾಪನ್' ಕೃತಿಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2006ರಲ್ಲಿ ದೆಹಲಿಯಲ್ಲಿ ಶಿವರಾಜ್ ಸಿಂಗ್ ಮತ್ತು ನರೇಂದ್ರ ಮೋದಿ ಅವರ ನಡುವೆ ಸರ್ದಾರ್ ಸರೋವರ ಯೋಜನೆ ಮತ್ತು ನರ್ಮದಾ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಸಭೆ ನಡೆಯಿತು. ಆಗ ಇಬ್ಬರೂ ಅವರವರ ರಾಜ್ಯಗಳ ಮುಖ್ಯಮಂತ್ರಿಗಳಾಗಿದ್ದರು. ಗುಜರಾತ್ ಮತ್ತು ಮಧ್ಯಪ್ರದೇಶ ಎರಡೂ ರಾಜ್ಯಗಳು ಒಟ್ಟಿಗೆ ಪ್ರಯೋಜನ ಪಡೆಯಬಹುದಾದ ಸಹಕಾರಿ ಚೌಕಟ್ಟನ್ನು ಮೋದಿ ಅವರು ರೂಪಿಸಿದ್ದರು. ಪರಸ್ಪರ ಸಹಕಾರ ತತ್ವದ ಚೌಕಟ್ಟಿನಲ್ಲಿ ನಡೆದ ಈ ಸಭೆ ಯಶಸ್ವಿ ಯಾಯಿತು. ಅದೊಂದು ಉತ್ತಮ ಸಭೆ. ಅಂತಾರಾಜ್ಯ ಜಲ ವಿವಾದಗಳ ಪರಿಹಾರದ ನಿಟ್ಟಿನಲ್ಲಿ ಅದು ಮಾದರಿ ಚರ್ಚೆ ಎಂದು ಬಣ್ಣಿಸಿದರು.

ನರ್ಮದಾ ನೀರಿನ ಹಂಚಿಕೆ ಮತ್ತು ಸರ್ದಾರ್ ಸರೋವರ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ಬಗ್ಗೆ ಒಮ್ಮತ ಸಾಧಿಸಲು ಪ್ರಧಾನಿಯಾಗಿದ್ದಾಗ ತಾವು ನಡೆಸಿದ ಪ್ರಯತ್ನಗಳನ್ನು ನೆನಪು ಮಾಡಿಕೊಂಡ ದೇವೇಗೌಡರು, 1996ರಲ್ಲಿ ನಾನು ಸೌಹಾರ್ದಯುತ ಮತ್ತು ಒಮ್ಮತ-ಆಧರಿತ ಪರಿಹಾರಕ್ಕೆ ಬರಲು ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ಕರೆದಿದ್ದೆ. ನಂತರ ಸುಪ್ರೀಂಕೋರ್ಟ್ ಆ ಪರಿಹಾರ ಸೂತ್ರವನ್ನು ಅಂಗೀಕರಿಸಿತು. ನರ್ಮದಾ ನದಿ ನೀರು ಗುಜರಾತ್ ಮತ್ತು ಮಧ್ಯಪ್ರದೇಶದ ಜನರಿಗೆ ಪ್ರಯೋಜನವನ್ನು ನೀಡುತ್ತಲೇ ಇದೆ ಎಂಬುದು ನನಗೆ ಬಹಳ ಸಂತೋಷದ ಸಂಗತಿ ಎಂದರು.

> ನರೇಂದ್ರ ಮೋದಿ ಅವರು ಬಹಳ ಪರಿಣಾಮಕಾರಿ ಆಡಳಿತಗಾರ ಮತ್ತು ಅನೇಕ ಉತ್ತಮ ವಿಚಾರಗಳನ್ನು ಹೊಂದಿರುವ ವ್ಯಕ್ತಿ. 2014ರಲ್ಲಿ ಮೋದಿ ಅವರು ಈ ರಾಷ್ಟ್ರದ ಆಡಳಿತ ವಹಿಸಿಕೊಂಡು ಅನೇಕ ಉತ್ತಮ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಇಡೀ ಜಗತ್ತು ಭಾರತದತ್ತ ತಿರುಗಿ ನೋಡುವಂತೆ ಆಯಿತು.
>
> -**ಎಚ್.ಡಿ.ದೇವೇಗೌಡ** ಮಾಜಿ ಪ್ರಧಾನಿ

2019 ಸೆಪ್ಟೆಂಬರ್ ತಿಂಗಳಲ್ಲಿ ಸರ್ದಾರ್ ಸರೋವರ ಅಣೆಕಟ್ಟು ಪೂರ್ಣ ಮಟ್ಟಕ್ಕೆ ತುಂಬಿದಾಗ, ನಾನು ಬೆಂಗಳೂರಿನಿಂದ ಅಲ್ಲಿಗೆ ಹೋಗಿ ಅಣೆಕಟ್ಟನ್ನು, ಅದರ ಪೂರ್ಣ ಸಾಮರ್ಥ್ಯವನ್ನು ವೀಕ್ಷಿಸಿದೆ. ಇದು ನನಗೆ ಸಾರ್ಥಕದ ಕ್ಷಣವಾಗಿತ್ತು ಎಂದು ಹೇಳಿದರು.

ಹಾಗೆಯೇ 'ಅಪಾನಪಣ್' ಪುಸ್ತಕದ ಶೀರ್ಷಿಕೆ ತಮಗೆ ಬಹಳ ಇಷ್ಟವಾಯಿತು ಎಂದು ಹೇಳಿದ ಅವರು; ಇದು ಇಬ್ಬರು ಸಹೋದ್ಯೋಗಿಗಳ ಜತೆಗಿನ ಆಳವಾದ ಬಾಂಧವ್ಯವನ್ನು ಬೆಳೆಸಿಕೊಳ್ಳುವ ಮತ್ತು ಅನುಭವಿಸುವ ಬಗ್ಗೆ ಮತ್ತು ಆತ್ಮೀಯತೆ, ರಕ್ತ ಸಂಬಂಧ ಮತ್ತು ಏಕತೆಯ ಭಾವನೆ ಬಗ್ಗೆ ಈ ಕೃತಿ ಹೇಳುತ್ತದೆ. ಮೋದಿ ಮತ್ತು ಶಿವರಾಜ್ ಸಿಂಗ್ ಅವರ ನಡುವಿನ ದೀರ್ಘ ಕಾಲದ ಒಡನಾಟ, ಬಾಂಧವ್ಯವು ಅವರ ಶಿಸ್ತು ಮತ್ತು ಸಮರ್ಪಣಾ ಭಾವದಿಂದ ಒಟ್ಟಾಗಿ ಸಾಧಿಸಿದ ಧ್ಯೇಯದ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ಈ ಇಬ್ಬರ ಪ್ರಯಾಣ ಈಗ ಇತಿಹಾಸದ ಭಾಗವಾಗಿದೆ ಎಂದು ಮಾಜಿ ಪ್ರಧಾನಿಗಳು ಬಣ್ಣಿಸಿದರು.

ಈ ಪುಸ್ತಕವು ವಿಶಿಷ್ಟ ರಾಜಕೀಯ ಜೀವನ ಚರಿತ್ರೆ ಅಥವಾ ಸಾಂಪ್ರದಾಯಿಕ ಆತ್ಮಚರಿತ್ರೆಯಲ್ಲ. ಇದು ಮೋದಿ ಅವರೊಂದಿಗಿನ ಮಹತ್ವದ ಪ್ರಯಾಣದ ಬಗ್ಗೆ ಶಿವರಾಜ್ ಸಿಂಗ್ ಅರ್ಥಪೂರ್ಣವಾಗಿ ಬರೆದಿದ್ದಾರೆ. ಅಲ್ಲದೆ, ಕೃತಿಯಲ್ಲಿ ಒಂದು ನಿರ್ದಿಷ್ಟ ಔದಾರ್ಯತೆ ಮತ್ತು ನಮ್ರತೆ ಇದೆ, ಅದು ಶಿವರಾಜ್ ಸಿಂಗ್ ಅವರು ಅಧಿಕಾರಕ್ಕೆ ಬರುವ ಮೊದಲೇ ಮೋದಿ ಅವರಿಂದ ಕಲಿತದ್ದನ್ನು ಮುಕ್ತವಾಗಿ ಹೇಳಿದ್ದಾರೆ. ಕಲಿಕೆ ಮತ್ತು ಔದಾರ್ಯದ ಈ ಸ್ವೀಕೃತಿ ಸಾರ್ವಜನಿಕ ಜೀವನ ಮತ್ತು ರಾಜಕೀಯದಲ್ಲಿ ಬಹಳ ಅಪರೂಪ. ಇದು ಶಿವರಾಜ್ ಸಿಂಗ್ ಅವರು ಬಹಳ ವಿಶೇಷ ವ್ಯಕ್ತಿ ಎಂಬುದನ್ನು ತೋರಿಸುತ್ತದೆ ಹಾಗೂ ಆ ವಿಶೇಷ ವ್ಯಕ್ತಿಗೆ ಇನ್ನೊಬ್ಬ ವಿಶೇಷ ವ್ಯಕ್ತಿಯನ್ನು, ಅಂದರೆ ಮೋದಿ ಅವರನ್ನು ಹೇಗೆ ಗುರುತಿಸುವುದು? ಮತ್ತು ಅವರ ಬಂಧಗಳನ್ನು ಹೇಗೆ ಗಾಢವಾಗಿಸಬೇಕೆಂಬುದು ತಿಳಿದಿದೆ. ಅವರ ದೀರ್ಘಕಾಲದ ಸ್ನೇಹ ಮತ್ತು ಸಹೋದರತ್ವವು ಈ ರಾಷ್ಟ್ರದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದೆ ಎಂದು ದೇವೇಗೌಡರು ಬಣ್ಣಿಸಿದರು. ಅತ್ಯಂತ ಉತ್ತಮವಾದ ಈ ಕೃತಿ ಆದಷ್ಟು ಬೇಗ ಕನ್ನಡವು ಸೇರಿದಂತೆ ಭಾರತದ ಎಲ್ಲ ಭಾಷೆಗಳಿಗೆ ಅನುವಾದ ಆಗಲಿ ಎಂದು ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಹೇಳಿದರು. ವಿಶ್ರಾಂತ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಹಾಗೂ ಶಿವರಾಜ್ ಸಿಂಗ್ ಚೌಹಾಣ್ ಇದ್ದರು.

ಕನ್ನಡಕ್ಕೆ ಶೀರ್ಷಿಕೆ ಸಿದ್ಧ

ಕೃತಿಯ ಶೀರ್ಷಿಕೆ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ನನ್ನ ಮಾತೃಭಾಷೆ ಕನ್ನಡದ ಮೂಲಕ ಈ ಶೀರ್ಷಿಕೆ ಅರ್ಥವನ್ನು ಆಸ್ವಾದಿಸುವ ಪ್ರಯತ್ನ ಮಾಡಿದೆ. ನನ್ನ ಭಾಷೆಯಲ್ಲಿ 'ಅಪನಾಪನ್' ಎಂದರೆ 'ಆಪ್ತ' ಅಥವಾ 'ಆಪ್ತಭಾವ' ಎಂದು ಅರ್ಥ ಬರುತ್ತದೆ. ಅದೊಂದು ಸುಂದರವಾದ ಪದ. ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದರೆ ನಿಮಗೆ ಈಗಲೇ ಶೀರ್ಷಿಕೆ ಸಿದ್ಧವಾಗಿದೆ ಎಂದು ದೇವೇಗೌಡರು ಹೇಳಿದಾಗ ಇಡೀ ಸಭಾಂಗಣ ಕರತಾಡನದಲ್ಲಿ ಮುಳುಗಿತು.

ಅಂಧ ಸ್ನೇಹಿತೆಯ ನಗ-ನಗದು ದೋಚಿದ ದಂಪತಿ ಬಂಧನ

ಬೆಂಗಳೂರು: ಸ್ನೇಹಿತೆ ಮೇಲೆ ಇಟ್ಟಿದ್ದ ನಂಬಿಕೆಯನ್ನೇ ದುರುಪಯೋಗಪಡಿಸಿಕೊಂಡ ಚಾಲಾಕಿ ದಂಪತಿಯು ಆಕೆಯ ಬಳಿಯಿದ್ದ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿದ ಆರೋಪದಡಿ ಇಬ್ಬರನ್ನು ರಾಜರಾಜೇಶ್ವರಿ ನಗರ ಪೊಲೀಸರು ಬಂಧಿಸಿದ್ದಾರೆ.

66 ವರ್ಷ ಪದ್ಮಜಾ ರಾವ್ ಎಂಬುವರು ನೀಡಿದ ದೂರಿನ ಮೇರೆಗೆ ದಂಪತಿ ಶರ್ಮಿಳಾ ಹಾಗೂ ಅವರ ಪತಿ ಗಣೇಶ್ ಕುಮಾರ್ ಅವರನ್ನು ಬಂಧಿಸಲಾಗಿದೆ. ದಂಪತಿಯಿಂದ 35 ಲಕ್ಷ ಮೌಲ್ಯದ 230 ಗ್ರಾಂ ಚಿನ್ನ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಹಿನ್ನೆಲೆ: ಪದ್ಮಜಾ ರಾವ್ ಪತಿ ನಿಧನವಾಗಿದ್ದು, ಮಗಳೊಂದಿಗೆ ಬನಶಂಕರಿ ಯಲ್ಲಿ ಈ ಹಿಂದೆ ವಾಸ ಮಾಡುತ್ತಿದ್ದರು. 30 ವರ್ಷಗಳ ಹಿಂದೆ ರೆಟಿನಾ ಸಮಸ್ಯೆಯಿಂದಾಗಿ ಬಹುತೇಕ ಎರಡೂ ಕಣ್ಣುಗಳು ಪದ್ಮಜಾ ಅವರಿಗೆ ಕಾಣಿಸುತ್ತಿರಲಿಲ್ಲ. ವೈಯಕ್ತಿಕ ಸಮಸ್ಯೆಯಿಂದ ಬಳಲುತ್ತಿದ್ದ ಪದ್ಮಜಾ ಅವರಿಗೆ ಸ್ನೇಹಿತೆಯಾಗಿದ್ದ ಶರ್ಮಿಳಾ, ತನ್ನ ಮನೆಗೆ ಬಂದರೆ ಆರೈಕೆ ಮಾಡುವುದಾಗಿ ಹೇಳಿದ್ದರು. ಇದರಂತೆ ಕಳೆದ ಎಂಟು ವರ್ಷಗಳಿಂದ ಬಿಎಂಎಲ್ ಬಡಾವಣೆಯ ಬಾಡಿಗೆ ಮನೆಯಲ್ಲಿದ್ದರು.

2024ರಲ್ಲಿ ಬ್ಯಾಂಕ್‌ನಲ್ಲಿದ್ದ ಇಟ್ಟಿದ್ದ 530 ಗ್ರಾಂ ಚಿನ್ನ ಬಿಡಿಸಿ ಬೇರೆ ಬ್ಯಾಂಕ್‌ವೊಂದರ ಲಾಕರ್‌ನಲ್ಲಿ ಇಡಲು ಪದ್ಮಜಾ ಮುಂದಾ ಗಿದ್ದರು. ಚಿನ್ನಾಭರಣ ಹಾಗೂ 49 ಲಕ್ಷ ಹಣವನ್ನು ಸ್ನೇಹಿತೆ ಮನೆಯ ಲಾಕರ್‌ನಲ್ಲಿಟ್ಟು ಅದರ ಕೀಯನ್ನ ತನ್ನ ಬಳಿ ಇಟ್ಟುಕೊಂಡಿದ್ದರು. ಈ ಮಧ್ಯೆ ಡೆಬಿಟ್ ಕಾರ್ಡ್ ನಾಪತ್ತೆಯಾಗಿತ್ತು. ಮತ್ತೊಂದೆಡೆ ಲಾಕರ್‌ನ ಕೀ ಸಹ ಕಾಣೆಯಾಗಿತ್ತು. ಸ್ನೇಹಿತೆ ಶರ್ಮಿಳಾಗೆ ವಿಷಯ ತಿಳಿಸಿ ಮತ್ತೊಂದು ಕೀ ಮಾಡಿಕೊಡುವಂತೆ ಹೇಳಿದ್ದರು. ಇದಕ್ಕೊಪ್ಪಿದ ದಂಪತಿ ಬಳಿಕ ನಿರ್ಲಕ್ಷ್ಯಿಸಿದ್ದರು. ಅನ್ಯರ ಸಹಾಯ ಪಡೆದು ಕೀ ಮಾಡಿಸಿಕೊಂಡು ಲಾಕರ್ ತೆರೆದಾಗ ಚಿನ್ನಾಭರಣ ಹಾಗೂ 49 ಲಕ್ಷ ಹಣ ನಾಪತ್ತೆಯಾಗಿರುವುದು ಗೊತ್ತಾಗಿದೆ ಎಂದು ದೂರಿನಲ್ಲಿ ವೃದ್ಧೆ ಆರೋಪಿಸಿದ್ದರು. ಈ ಬಗ್ಗೆ ಸ್ನೇಹಿತೆಯನ್ನ ಪ್ರಶ್ನಿಸಿದಾಗ ಚಿನ್ನಾ ಭರಣ ಪಡೆದುಕೊಂಡಿರುವುದನ್ನ ಒಪ್ಪಿಕೊಂ ಡಿದ್ದರು. ಅನುಮತಿಯಿಲ್ಲದೆ ಯಾಕೆ ಎತ್ತಿಕೊಂ ಡಿರಿ ಎಂಬ ಪ್ರಶ್ನೆಗೆ ಹಣದ ಅಗತ್ಯವಿದ್ದಿದ್ದರಿಂದ ಈ ಕೃತ್ಯವೆಸಗಿದೆ. ಚಿನ್ನವನ್ನ ಅಡವಿಟ್ಟಿದ್ದು, ಬಿಡಿಸಿಕೊಡುವುದಾಗಿ ಶರ್ಮಿಳಾ ಹೇಳಿದ್ದರು. ಕೆಲ ದಿನಗಳ ಬಳಿಕ ಚಿನ್ನಾಭರಣ ವಾಪಸ್ ನೀಡುವಂತೆ ಪ್ರಶ್ನಿಸಿದಾಗ ಪದ್ಮಾಜಾ ಅವರನ್ನು ದಂಪತಿ ಗದರಿಸಿದ್ದರು. ಈ ಬಗ್ಗೆ ಮಗಳು ಹಾಗೂ ಅಳಿಯನನ್ನು ಕರೆಯಿಸಿ ವಿಚಾರಿಸಿದಾಗ ಚಿನ್ನ ಹಾಗೂ ಹಣ ನೀಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದ್ದರು ಎಂದು ದೂರಿನಲ್ಲಿ ಮಹಿಳೆ ತಿಳಿಸಿದ್ದರು. ಪ್ರಕರಣ ದಾಖಲಿಸಿಕೊಂಡು ಪೊಲೀಸರು ದಂಪತಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜೂ.5ರಂದು ಭಾರತದ ಮೊದಲ ಸಂಪೂರ್ಣ ಎಥೆನಾಲ್ ಆಧರಿತ ಫ್ಲೆಕ್ಸ್–ಇಂಧನ ವಾಹನ ಬಿಡುಗಡೆ: ಕೇಂದ್ರ ಸಚಿವ ಗಡ್ಕರಿ

ವಿಶ್ವ ಪರಿಸರ ದಿನದಂದು ಮಾರುತಿ ಫ್ಲೆಕ್ಸ್ ಮಾರುಕಟ್ಟೆಗೆ

ನಾಗಪುರ: ಜೂನ್ 5ರ ವಿಶ್ವ ಪರಿಸರ ದಿನದಂದು ಮಾರುತಿ ಸುಜುಕಿ ಭಾರತದ ಮೊದಲ ಫ್ಲೆಕ್ಸ್–ಇಂಧನ ವಾಹನ ಬಿಡುಗಡೆ ಮಾಡಲು ನಿರ್ಧರಿಸಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ನಾಗಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ವಿಚಾರವನ್ನು ಬಹಿರಂಗಪಡಿಸಿದರು.

ಈ ವಾಹನ 'ಇ100' ದರ್ಜೆಯ ಇಂಧನದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ ಎಂದು ಗಡ್ಕರಿ ಹೇಳಿದ್ದಾರೆ. ದೆಹಲಿಯಲ್ಲಿ ನಡೆಯುವ ವಿಶೇಷ ಕಾರ್ಯಕ್ರಮದಲ್ಲಿ ವಾಹನವನ್ನು ಅನಾವರಣಗೊಳಿಸಲು ನಿರ್ಧರಿಸಲಾಗಿದೆ. ಪರ್ಯಾಯ ಇಂಧನವಾದ ಎಥೆನಾಲ್ ಅಳವಡಿಸಿಕೊಳ್ಳುವ ಮೂಲಕ ಈ ಎಫ್‌ಎಫ್‌ವಿ ಬಿಡುಗಡೆಯು ಹಸಿರು ಇಂಧನಗಳ ಕಡೆಗೆ ಭಾರತ ತೆಗೆದುಕೊಂಡ ಪ್ರಮುಖ ಹೆಜ್ಜೆಯ ಆರಂಭವನ್ನು ಗುರುತಿಸುತ್ತದೆ.

ಫ್ಲೆಕ್ಸ್ ಇಂಧನ ಎಂದರೇನು?: ಫ್ಲೆಕ್ಸ್ ಫ್ಯೂಯೆಲ್ ವೆಹಿಕಲ್ಸ್ ಪೆಟ್ರೋಲ್, ಎಥೆನಾಲ್ ಅಥವಾ ಎರಡರ ಮಿಶ್ರಣದಿಂದ ಚಲಿಸಲು ವಿನ್ಯಾಸಗೊಳಿಸಲಾದ ವಾಹನಗಳಾಗಿವೆ. ಪೆಟ್ರೋಲ್‌ನೊಂದಿಗೆ ಬೆರೆಸಿದ ಎಥೆನಾಲ್‌ನ ಶೇಕಡಾವಾರು ಪ್ರಮಾಣವನ್ನು ಅವಲಂಬಿಸಿ ಈ ಇಂಧನಗಳನ್ನು ಇ20, ಇ85, ಇ100 ಮತ್ತು ಮುಂತಾದ ಶ್ರೇಣಿಗಳಾಗಿ ವರ್ಗೀಕರಿಸಲಾಗಿದೆ. ಆದರೆ ನಿರ್ದಿಷ್ಟವಾಗಿ ಇ100ಗೆ ಸಂಬಂಧಿಸಿದಂತೆ, ಇದು 100 ಪ್ರತಿಶತ ಎಥೆನಾಲ್‌ನಿಂದ ಕೂಡಿದ ಇಂಧನವನ್ನು ಸೂಚಿಸುತ್ತದೆ. ಇದು ಪೆಟ್ರೋಲ್‌ನೊಂದಿಗೆ ಬೆರೆಸಲು ಉದ್ದೇಶಿಸಲಾದ ಮಿಶ್ರಣವಲ್ಲ, ಬದಲಿಗೆ ನೇರವಾಗಿ ಟ್ಯಾಂಕ್‌ಗೆ ತುಂಬಿಸಿ ಹಾಗೆಯೇ ಬಳಸಬಹುದಾದ ಜೈವಿಕ ಇಂಧನವಾಗಿದೆ.

ಸ್ಟ್ಯಾಂಡರ್ಡ್ ಪೆಟ್ರೋಲ್ ಮತ್ತು ಇ20ಗೆ ಹೋಲಿಸಿದರೆ ಇ100 ಹೆಚ್ಚಿನ ಆಕ್ಟೇನ್ ರೇಟಿಂಗ್ ಹೊಂದಿದೆ. ಪರಿಣಾಮವಾಗಿ ಇ100ಗಾಗಿ ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ ಎಂಜಿನ್‌ಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ದಹನಗೊಳ್ಳುತ್ತದೆ. ಇದರಿಂದಾಗಿ ಒಟ್ಟಾರೆ ದಕ್ಷತೆಯನ್ನು ಹೆಚ್ಚಿಸುತ್ತದೆ. ಆದರೆ ಇ100 ಪ್ರಮಾಣಿತ ಪೆಟ್ರೋಲ್ ವಾಹನಗಳಿಗೆ ಸೂಕ್ತವಲ್ಲ. ಏಕೆಂದರೆ ಎಥೆನಾಲ್ ಕೊರೋಸಿವ್ ಆಗಿರು ವುದರಿಂದ ಶಕ್ತಿ ಉತ್ಪಾದನೆಯ ವಿಷಯ ದಲ್ಲಿ ವಿಭಿನ್ನವಾಗಿ ವರ್ತಿಸುತ್ತದೆ. ಆದ್ದರಿಂದ ಅಗತ್ಯ ಮಾರ್ಪಾಡುಗಳನ್ನು ಮಾಡದೆ ಪ್ರಮಾಣಿತ ಪೆಟ್ರೋಲ್ ವಾಹನಗಳಲ್ಲಿ ಇ100 ಬಳಸುವುದು ಕಾರ್ಯಸಾಧ್ಯವಲ್ಲ. ಕಚ್ಚಾ ತೈಲ ಆಮದುಗಳನ್ನು ಕಡಿಮೆ ಮಾಡುವುದು, ಮಾಲಿನ್ಯ ತಗ್ಗಿಸುವುದು ಮತ್ತು ರೈತರಿಗೆ ಲಾಭ ಖಚಿತಪಡಿಸುವುದು ಮುಂತಾದ ಪ್ರಾಥಮಿಕ ಉದ್ದೇಶ ಗಳೊಂದಿಗೆ ಭಾರತ ಸರ್ಕಾರ ಇ100 ಅನ್ನು ಸಕ್ರಿಯವಾಗಿ ಪ್ರಚಾರ ಮಾಡುತ್ತಿದೆ. ಎಥೆನಾಲ್ ಅನ್ನು ಸಾಮಾನ್ಯ ಜನರಿಗೆ ಲಭ್ಯ ವಾಗುವಂತೆ ಮಾಡುವಲ್ಲಿ ಫ್ಲೆಕ್ಸ್–ಇಂಧನ ವಾಹನಗಳು ಪ್ರಮುಖ ಪಾತ್ರ ವಹಿಸಲು ಸಿದ್ಧವಾಗಿವೆ.

ಮಾರುತಿ ಸುಜುಕಿ ಹೇಳುವುದೇನು?: ಕಂಪನಿಯ ನಾಲ್ಕನೇ ತ್ರೈಮಾಸಿಕ (ಕ್ಯೂ4) ಗಳಿಕೆ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಮಾರುತಿ ಸುಜುಕಿಯ ಕಾರ್ಪೊರೇಟ್ ವ್ಯವಹಾರಗಳ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಭಾರ್ತಿ, ಮಾರುತಿ ಸುಜುಕಿ ಸರ್ಕಾರದ ಎಥೆನಾಲ್ ಉಪಕ್ರಮವನ್ನು ಬೆಂಬಲಿಸಲು ಸಿದ್ಧವಾಗಿದೆ. ಹೆಚ್ಚಿದ ಎಥೆನಾಲ್ ಮಿಶ್ರಣ ಅಥವಾ ಫ್ಲೆಕ್ಸ್–ಇಂಧನ ವ್ಯವಸ್ಥೆಗಳ ಅಳವಡಿಕೆಗೆ ಅನುಕೂಲವಾಗುವಂತೆ ನಾವು ಅಗತ್ಯ ತಂತ್ರಜ್ಞಾನ ಹೊಂದಿದ್ದೇವೆ. ಆದರೆ ಫ್ಲೆಕ್ಸ್–ಇಂಧನ ವಾಹನಗಳು ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುವ ಸಾಧ್ಯತೆಯಿಲ್ಲ. ಇದಕ್ಕೆ ಪ್ರಾಥಮಿಕ ಕಾರಣಗಳು ವಾಹನ ಮಾದರಿಗಳ ಸೀಮಿತ ಲಭ್ಯತೆ ಮತ್ತು ರಾಷ್ಟ್ರವ್ಯಾಪಿ ಎಥೆನಾಲ್ ಪಂಪ್‌ಗಳ ಜಾಲದ ಕೊರತೆ. ಈ ಹಂತದಲ್ಲಿ ಮಾರಾಟವು ಸಾಕಷ್ಟು ಕಡಿಮೆ ಇರುತ್ತದೆ. ಆದರೂ ಐದು ರಿಂದ ಹತ್ತು ವರ್ಷಗಳ ಅವಧಿಯಲ್ಲಿ ಅವು ಕ್ರಮೇಣ ಗಮನಾರ್ಹ ಮಟ್ಟವನ್ನು ತಲುಪುವ ನಿರೀಕ್ಷೆಯಿದೆ ಎಂದು ವಿವರಿಸಿದರು.

ಆರಂಭಿಕ ಹಂತದಲ್ಲಿ ಹೆಚ್ಚಿನ-ಎಥೆನಾಲ್–ಮಿಶ್ರ ಇಂಧನಗಳನ್ನು ಬೆಂಬಲಿಸಲು ವಾಹನಗಳನ್ನು ವಿನ್ಯಾಸಗೊಳಿಸುವುದರಿಂದ ಪ್ರತಿ ವಾಹನಕ್ಕೆ ಸುಮಾರು ₹40,000ರಿಂದ ₹50,000ರಷ್ಟು ಹೆಚ್ಚುವರಿ ವೆಚ್ಚದ ಹೊರೆ ಉಂಟಾಗುತ್ತದೆ ಎಂದು ಉದ್ಯಮ ಮೂಲಗಳು ಅಂದಾಜಿಸುತ್ತವೆ. ಆದರೆ ನಿರ್ದಿಷ್ಟ ವಾಹನ ಮಾದರಿ ಮತ್ತು ತಯಾರಕರನ್ನು ಅವಲಂಬಿಸಿ ಈ ವೆಚ್ಚ ಬದಲಾಗಬಹುದು.

ತಕ್ಷಣಕ್ಕೆ ವಾಣಿಜ್ಯ ಮಾರಾಟ ಕಷ್ಟ

ಭಾರತ್ ಮೊಬಿಲಿಟಿ ಎಕ್ಸ್‌ಪೋ 2025ರಲ್ಲಿ ಮಾರುತಿ ಸುಜುಕಿ ಸಬ್–ಕಾಂಪ್ಯಾಕ್ಟ್ ಎಸ್‌ಯುವಿ ಫ್ರಾಂಕ್ಸ್ ಮತ್ತು ಜನಪ್ರಿಯ ಹ್ಯಾಚ್‌ಬ್ಯಾಕ್ ವ್ಯಾಗನ್‌ಆರ್ ಎರಡಕ್ಕೂ ಫ್ಲೆಕ್ಸ್–ಇಂಧನ ವಾಹನ ಪರಿಕಲ್ಪನೆಗಳನ್ನು ಪ್ರದರ್ಶಿಸಿತು. ಆದರೆ ಈ ವರ್ಷದ ವಿಶ್ವ ಪರಿಸರ ದಿನದಂದು ಯಾವ ಫ್ಲೆಕ್ಸ್–ಇಂಧನ ವಾಹನಗಳನ್ನು ಅಧಿಕೃತವಾಗಿ ಅನಾವರಣಗೊಳಿಸಲಾಗುತ್ತದೆ ಎಂಬುದು ಇನ್ನೂ ದೃಢಪಟ್ಟಿಲ್ಲ. ಪ್ರಸ್ತುತ ಭಾರತದಲ್ಲಿ ಒಂದೇ ಒಂದು ಫ್ಲೆಕ್ಸ್–ಇಂಧನ ನಾಲ್ಕು ಚಕ್ರದ ವಾಹನ ಲಭ್ಯವಿಲ್ಲ ಎಂಬುದು ಗಮನಾರ್ಹ. ಇ100 ಇಂಧನವು ಭಾರತದಾದ್ಯಂತ ಚಿಲ್ಲರೆ ಪಂಪ್‌ಗಳಲ್ಲಿ ವ್ಯಾಪಕವಾಗಿ ಲಭ್ಯವಾಗುವ ಮೊದಲೇ ಎಫ್‌ಎಫ್‌ವಿ ವ್ಯಾಗನ್‌ಆರ್ ಅಥವಾ ಫ್ರಾಂಕ್ಸ್‌ನ ಪರಿಚಯದೊಂದಿಗೆ ಮಾರುತಿ ಸುಜುಕಿ ಈ ವಿಭಾಗಕ್ಕೆ ವಾಣಿಜ್ಯಿಕವಾಗಿ ಪ್ರವೇಶಿಸುವ ಮೊದಲ ವಾಹನ ತಯಾರಕರಾಗಲು ಸಜ್ಜಾಗಿದೆ. ಟೊಯೋಟಾ, ಟಾಟಾ, ಹ್ಯುಂಡಾಯ್ ಮತ್ತು ಮಹೀಂದ್ರಾದಂತಹ ಕಂಪನಿಗಳು ಭಾರತ್ ಮೊಬಿಲಿಟಿ ಎಕ್ಸ್‌ಪೋ 2025ರಲ್ಲಿ ಹಲವಾರು ಫ್ಲೆಕ್ಸ್–ಇಂಧನ ಮಾದರಿಗಳನ್ನು ಪ್ರದರ್ಶಿಸಿದರೂ ಅವುಗಳಲ್ಲಿ ಯಾವುದೂ ಇಲ್ಲಿಯವರೆಗೆ ಲಭ್ಯವಾಗಿಲ್ಲ.

ಸಮಾಚಾರ ಸಣ್ಣದಲ್ಲ

ಪದ್ಮಶ್ರೀ ಅಂಕೇಗೌಡರನ್ನು ಸನ್ಮಾನಿಸಿದ ಎಚ್‌ಡಿಕೆ

ಪದ್ಮಶ್ರೀ ಪುರಸ್ಕೃತ ಅಂಕೇಗೌಡರನ್ನು ದೆಹಲಿಯ ನಿವಾಸಕ್ಕೆ ಕರೆಯಿಸಿ ಸನ್ಮಾನಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ.

ದೆಹಲಿ: ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಪಾಂಡವಪುರದ ಪುಸ್ತಕ ಮನೆ ಅಂಕೇಗೌಡರನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ದೆಹಲಿಯ ತಮ್ಮ ನಿವಾಸಕ್ಕೆ ಕರೆಯಿಸಿ ಸನ್ಮಾನಿಸಿದರು. ಅಂಕೇಗೌಡರನ್ನು ಅಭಿನಂದಿಸಿದ ಸಚಿವರು ಪುಸ್ತಕ ಮನೆ ಬೆಳೆಸುವ ನಿಟ್ಟಿನಲ್ಲಿ ವಿಚಾರ ವಿನಿಮಯ ಮಾಡಿಕೊಂಡರು. ಅವರು ಅಂಕೇಗೌಡರೊಂದಿಗಿನ ಚಿತ್ರಗಳನ್ನು ಎಕ್ಸ್ ಹಾಗೂ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ. ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಲು ಆಗಮಿಸಿದ್ದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಶ್ರೀ ಎಂ. ಅಂಕೇಗೌಡರು ಸತ್ಕರಿಸಿ ಗೌರವಿಸುವ ಭಾಗ್ಯ ನನ್ನದಾಯಿತು. ಶ್ರೀ ಅಂಕೇಗೌಡರ ಪುಸ್ತಕ ಪ್ರೇಮ ಅನನ್ಯ ಎಂದಿದ್ದಾರೆ. ಮುಂದಿನ ತಲೆಮಾರಿಗೂ ಓದಿನ ಪರಂಪರೆಯನ್ನು ಮುಂದುವರಿಸುವ ಅವರ ಅಚಲತೆ, ಕಾಳಜಿ ನಮಗೆಲ್ಲರಿಗೂ ಪ್ರೇರಣಾದಾಯಕ. ಕನ್ನಡ ಸಾಹಿತ್ಯ ಮಾತ್ರವಲ್ಲ, ಜಗತ್ತಿನ ಅನೇಕ ಭಾಷೆಗಳ ಅನೇಕಾನೇಕ ಶ್ರೇಷ್ಠ ಕೃತಿಗಳು ಇವರ ಸಂಗ್ರಹದಲ್ಲಿವೆ. ಕನ್ನಡನಾಡಿನ ಹೆಮ್ಮೆ ಆಗಿರುವ ಶ್ರೀಯುತರಿಗೆ ಅವರ 'ಪುಸ್ತಕ ಮನೆ'ಯನ್ನು ಉಳಿಸಿ ಮತ್ತು ಬೃಹತ್ ಆಗಿ ಬೆಳೆಸುವ ನಿಟ್ಟಿನಲ್ಲಿ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

ಫ್ರೀ ಸ್ಯಾನಿಟರಿ ಪ್ಯಾಡ್, ಪ್ರತ್ಯೇಕ ಶೌಚಾಲಯ: ಸುಪ್ರೀಂ ಕೋರ್ಟ್

ನವದೆಹಲಿ: ಶಾಲೆಗಳಲ್ಲಿ ಸ್ಯಾನಿಟರಿ ನ್ಯಾಪ್ಕಿನ್‌ಗಳು ಮತ್ತು ಸರಿಯಾಗಿ ಕಾರ್ಯನಿರ್ವಹಿಸುವ ಮಹಿಳಾ ಶೌಚಾಲಯಗಳಿಲ್ಲ ಎಂಬ ಕಾರಣಕ್ಕೆ ಹುಡುಗಿಯರು ಶಾಲೆಯಿಂದ ಹೊರಗುಳಿಯುವಂತೆ ಆಗಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಜನವರಿ 30ರ ಡಾ. ಜಯಾ ಠಾಕೂರ್ ವಿರುದ್ಧ ಯುನಿಯನ್ ಆಫ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಭಾರತೀಯ ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಮುಟ್ಟಿನ ಆರೋಗ್ಯವನ್ನು ನ್ಯಾಯಾಲಯವು ಮೂಲಭೂತ ಹಕ್ಕಾಗಿ ಘೋಷಿಸಿ. ಉಚಿತ ನ್ಯಾಪ್ಕಿನ್‌ಗಳು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತರಗತಿ 6ರಿಂದ 12ನೇ ತರಗತಿಗಳ ಬಾಲಕಿಯರಿಗೆ ಉಚಿತವಾಗಿ ಆಕ್ಸೊ-ಜೈವಿಕ ವಿಘಟನೀಯ ನೈರ್ಮಲ್ಯ ನ್ಯಾಪ್ಕಿನ್‌ಗಳನ್ನು ಒದಗಿಸಬೇಕು. ತೀರ್ಪಿನ ನಂತರ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ನಿಟ್ಟಿನಲ್ಲಿ ಪ್ರಯತ್ನಗಳು ವೇಗ ಗೊಂಡಿವೆ ಎಂದು ಕೇಂದ್ರ ಸರಕಾರ ವರದಿ ಮಾಡಿವೆ.

ಡಾಲರ್ ಎದುರು ಮತ್ತೆ 47 ಪೈಸೆ ಕುಸಿದ ರುಪಾಯಿ

ಮುಂಬೈ: ಪಶ್ಚಿಮ ಏಷ್ಯಾದಲ್ಲಿ ಮತ್ತೆ ಉದ್ವಿಗ್ನ ವಾತಾವರಣ ನಿರ್ಮಾಣ ಮತ್ತು ಕಚ್ಚಾ ತೈಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಅಮೆರಿಕ ಡಾಲರ್ ಎದುರು ಭಾರತದ ರುಪಾಯಿ ಮೌಲ್ಯ ಮತ್ತೆ 47 ಪೈಸೆ ಕುಸಿದು 95.73ಕ್ಕೆ ತಲುಪಿದೆ. ಅಮೆರಿಕ ಡಾಲರ್‌ಗೆ ಹೆಚ್ಚಿದ ಬೇಡಿಕೆ ಮತ್ತು ದುರ್ಬಲ ದೇಶೀಯ ಪೇಟೆಗಳು ಸಹ ರುಪಾಯಿ ಮೇಲೆ ಒತ್ತಡ ಹೆಚ್ಚಿಸಿವೆ ಎಂದು ವಿದೇಶಿ ವ್ಯಾಪಾರಿಗಳು ಹೇಳಿದ್ದಾರೆ. ಅಂತರಬ್ಯಾಂಕ್ ವಿದೇಶಿ ವಿನಿಮಯದಲ್ಲಿ ಅಮೆರಿಕ ಡಾಲರ್ ಎದುರು ರು. 95.43ರಲ್ಲಿ ಆರಂಭವಾದ ರುಪಾಯಿ ಮೌಲ್ಯ ದಿನದ ವಹಿವಾಟಿನಲ್ಲಿ 95.33ರವರೆಗೆ ಏರಿತ್ತು. ದಿನದ ಅಂತ್ಯಕ್ಕೆ 95.73ರಲ್ಲಿ ಸ್ಥಿರಗೊಂಡಿತು. ಈ ಮೂಲಕ 47 ಪೈಸೆ ಕುಸಿತ ದಾಖಲಿಸಿತು. ಸೋಮವಾರ 34 ಪೈಸೆ ಏರಿಕೆ ಕಂಡಿದ್ದ ರುಪಾಯಿ ಮೌಲ್ಯ ದಿನದಾಂತ್ಯಕ್ಕೆ 95.26ರಲ್ಲಿ ಸ್ಥಿರಗೊಂಡಿತ್ತು. ಡಾಲರ್ ಮಾರಾಟ ಮಾಡುವ ಮೂಲಕ ರುಪಾಯಿ ಮೌಲ್ಯ ಚೇತರಿಕೆಗೆ ಆರ್‌ಬಿಐ ಕ್ರಮ ಕೈಗೊಂಡಿತ್ತು. ಈ ನಡುವೆ, ದೇಶೀಯ ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ 479.26 ಅಂಗಳ ಕುಸಿತ ಕಂಡು 76,009.70ಕ್ಕೆ ತಲುಪಿದರೆ, ನಿಫ್ಟಿ 118 ಅಂಶಗಳ ಕುಸಿತ ಕಂಡು 23,913.70ಕ್ಕೆ ತಲುಪಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಸೋಮವಾರ 821.75 ಕೋಟಿ ರು. ಮೌಲ್ಯದ ಷೇರು ಖರೀದಿಸಿದ್ದಾರೆ ಎಂದು ವಿನಿಮಯ ದತ್ತಾಂಶದಿಂದ ತಿಳಿದು ಬಂದಿದೆ.

{ ಡೊನಾಲ್ಡ್ ಟ್ರಂಪ್ } ಅಮೆರಿಕ ಅಧ್ಯಕ್ಷ

ಇರಾನ್ ಜತೆಗಿನ ಮಾತುಕತೆ ಉತ್ತಮವಾಗಿ ಸಾಗುತ್ತಿದೆ. ಒಂದೋ ಅದ್ಭುತ ಒಪ್ಪಂದವಾಗಲಿದೆ, ಇಲ್ಲವಾದರೆ ಒಪ್ಪಂದವೇ ಆಗುವುದಿಲ್ಲ. ನನ್ನ ನಿರ್ಧಾರ, ಒಬಾಮಾ ಆಡಳಿತ ಇರಾನ್ ಜತೆ 2015ರಲ್ಲಿ ಮಾಡಿಕೊಂಡ ಪರಮಾಣು ಒಪ್ಪಂದಕ್ಕೆ ಪೂರ್ಣ ವಿರುದ್ಧವಾಗಿದೆ. ಅಬ್ರಹಾಂ ಅಕಾರ್ಡ್‌ಗೆ ಇರಾನ್ ಕೂಡಾ ಸಹಿ ಹಾಕಬೇಕಿದೆ. ಖಮೇನಿ ಕಠಿಣ ನಿಲುವಿನಿಂದ ತಡವಾಗುತ್ತಿದೆ.

ವಿಶ್ರಾಂತ ಕುಲಪತಿ, ನಿವೃತ್ತ ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿ ಸೇರಿ 6 ಮಂದಿ ಲೋಕಾ ವಶಕ್ಕೆ

ಪಶು ವೈದ್ಯಕೀಯ ವಿವಿ ಹಗರಣ: 6 ಮಂದಿ ಬಂಧನ

ಬೀದರ್: ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಕಲಿ ಬಿಲ್ ಸೃಷ್ಟಿಸಿ 45 ಕೋಟಿ ರು. ಹಗರಣ ಮಾಡಿ, ಅಕ್ರಮ ಎಸಗಿರುವ ಆರೋಪದ ಮೇರೆಗೆ ಲೋಕಾಯುಕ್ತ ಪೊಲೀಸರು ವಿವಿ ವಿಶ್ರಾಂತ ಕುಲಪತಿ, ನಿವೃತ್ತ ಕಂಟ್ರೋಲರ್ ಸೇರಿದಂತೆ ಆರು ಜನರನ್ನು ಬಂಧಿಸಿದ್ದಾರೆ.

ವಿಶ್ರಾಂತ ಕುಲಪತಿ ಎಚ್.ಡಿ.ನಾರಾಯಣಸ್ವಾಮಿ, ನಿವೃತ್ತ ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿ ಕೆ.ಎಲ್. ಸುರೇಶ್, ಎಫ್‌ಡಿಎ. ಮೃತ್ಯುಂಜಯ ಹಿರೇಮಠ, ಬೆಂಗಳೂರು ಎಂಟರ್‌ಪ್ರೈಸೆಸ್ ಮಾಲೀಕರಾದ ಬೊಪ್ಪಣ್ಣ, ಮಂಜುನಾಥ ಹಾಗೂ ರಾಮಗೊಂಡ ಬಂಧಿತರು.

2017-18ರಲ್ಲಿ 45 ಕೋಟಿ ರು. ಗೂ ಅಧಿಕ ಹಣ ನಕಲಿ ಬಿಲ್ ಸೃಷ್ಟಿಸಿ ಅಕ್ರಮ ಎಸಗಿರುವ ಆರೋಪವಿದೆ. ಈ ಅವಧಿಯಲ್ಲಿ ನಾರಾಯಣಸ್ವಾಮಿ ಕುಲಪತಿ, ಕೆ.ಎಲ್.ಸುರೇಶ್ ಕಂಟ್ರೋಲರ್ ಆಗಿದ್ದರು. ವಿವಿ ಎಫ್‌ಡಿಎ. ಮೃತ್ಯುಂಜಯ ಹಿರೇಮಠ ಅವರು ಬೆಂಗಳೂರಿನ ಖಾಸಗಿ ಎಂಟರ್ ಪ್ರೈಸೆಸ್ ಜತೆಯಲ್ಲಿ ಸೇರಿಕೊಂಡು ಅಕ್ರಮ ಎಸಗಿರುವ ಆರೋಪವಿದೆ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ. ಲೋಕಾಯುಕ್ತ ಎಡಿಜಿಪಿ ಮನೀಷ್ ಕರ್ಬಿಕರ್, ಐಜಿಪಿ ಎ.ಎಸ್.ಸುಬ್ರಹ್ಮಣ್ಯೇಶ್ವರರಾವ್, ಎಸ್‌ಪಿಗಳಾದ ಬದ್ರಿನಾಥ, ಸಿದ್ದರಾಜು ಅವರ ಮಾರ್ಗ ದರ್ಶನದಲ್ಲಿ ಬೀದರ್ ಲೋಕಾಯುಕ್ತ ಡಿವೈಎಸ್‌ಪಿ ಹಣಮಂತರಾಯ, ಸಂತೋಷ ರಾಠೋಡ್ ಸೇರಿದಂತೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಏನಿದು ಪ್ರಕರಣ?

2017-18ರ ಅವಧಿಯಲ್ಲಿ ವಿಶ್ವವಿದ್ಯಾಲಯದ ಸಾಮಗ್ರಿ ಖರೀದಿಯಲ್ಲಿ ನಕಲಿ ಬಿಲ್‌ಗಳನ್ನು ಸೃಷ್ಟಿಸಿ 45 ಕೋಟಿ ರು.ಗೂ ಅಧಿಕ ಹಣವನ್ನು ಲೂಟಿ ಮಾಡಿದ್ದರು. ಬಳಿಕ 2021ರಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದರು. ತನಿಖೆಯನ್ನು ತೀವ್ರಗೊಳಿಸಿ 2025ರ ಸೆಪ್ಟೆಂಬರ್ 10ರಂದು ಏಕಕಾಲಕ್ಕೆ ರಾಜ್ಯದ 25ಕ್ಕೂ ಹೆಚ್ಚು ಕಡೆಗಳಲ್ಲಿ ದಾಳಿ ನಡೆಸಿ ಪ್ರಮುಖ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು.

ಈ ಹಗರಣದಲ್ಲಿ ವಿಶ್ವವಿದ್ಯಾಲಯದ ಉನ್ನತಾಧಿಕಾರಿಗಳು, ಸಿಬ್ಬಂದಿ ಹಾಗೂ ಖಾಸಗಿ ಎಂಟರ್ ಪ್ರೈಸೆಸ್ ಮಾಲೀಕರು ಶಾಮೀಲಾಗಿ ಯಾವುದೇ ಸಾಮಗ್ರಿ ಖರೀದಿಸದೆಯೇ ನಕಲಿ ಬಿಲ್‌ಗಳನ್ನು ಸೃಷ್ಟಿಸಿರುವುದು ಸಾಬೀತಾಗಿದೆ. ಇದೀಗ ಬೀದರ್ ಜಿಲ್ಲಾ ಸತ್ರ ನ್ಯಾಯಾಲಯ ವಾರೆಂಟ್ ಹೊರಡಿಸಿತ್ತು. ಇದರ ಬೆನ್ನಲ್ಲೇ ಸಕ್ರಿಯವಾದ ಲೋಕಾಯುಕ್ತ ಪೊಲೀಸರು ಕೆಲವರನ್ನು ಬೀದರ್ ಹಾಗೂ ಕೆಲ ಆರೋಪಿಗಳನ್ನು ಬೆಂಗಳೂರಿನಲ್ಲಿ ಬಂಧಿಸಿ ಬೀದರ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಬೀದರ್ ನಗರದ ಜಿಲ್ಲಾ ಕಾರಾಗೃಹಕ್ಕೆ ಒಪ್ಪಿಸಿದ್ದಾರೆ.

ಬಕ್ರೀದ್ ವೇಳೆ ನಿಷೇಧಿತ ಪ್ರಾಣಿಗಳ ಬಲಿ ನೀಡಬೇಡಿ

ದೆಹಲಿ: ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಮರು ಯಾವುದೇ ಕಾರಣಕ್ಕೂ ನಿಷೇಧಿತ ಪ್ರಾಣಿಗಳ ಬಲಿ ನೀಡಬಾರದು ಹಾಗೂ ಪ್ರಾಣಿ ಬಲಿ ಚಿತ್ರಗಳನ್ನು ಸಾಮಾಜಿಕ ಜಾಲತಾಣ ಗಳಲ್ಲಿ ಹಂಚಿಕೊಳ್ಳಬಾರದು ಎಂದು ಜಮೀಯತ್ ಉಲಮಾ-ಎ-ಹಿಂದ್ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಮನವಿ ಮಾಡಿದ್ದಾರೆ. ಮುಸ್ಲಿಮರಿಗೆ ಸಂದೇಶ ನೀಡಿರುವ ಮದನಿ, ಧಾರ್ಮಿಕ ನಿಯಮಗಳ ಪ್ರಕಾರ ಯಾರಿಗೆ ಪ್ರಾಣಿ ಬಲಿ ನೀಡುವುದು ಕಡ್ಡಾಯವಾಗಿದೆಯೋ ಅವರು ಈ ಕರ್ತವ್ಯ ನೆರವೇರಿಸಬೇಕು. ಆದರೆ ಪ್ರಸ್ತುತ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಮುಸ್ಲಿಮರು ಸ್ವಯಂ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅಗತ್ಯ ಎಂದಿದ್ದಾರೆ.



ಇದಕ್ಕೂ ಮುನ್ನ ಮಾತನಾಡಿದ್ದ ಮದನಿ, ದೇಶದ ಬಹುಸಂಖ್ಯಾತರು ಹಸುವನ್ನು ಪವಿತ್ರವೆಂದು ಭಾವಿಸಿ ತಾಯಿಯ ಸ್ಥಾನ ನೀಡಿರುವುದರಿಂದ ಅದನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಲು ಸರಕಾರಕ್ಕೆ ಇರುವ ರಾಜಕೀಯ ಅಡಚಣೆಯಾದರೂ ಏನು? ಎಂದು ಪ್ರಶ್ನಿಸಿದ್ದರು.

ಪಶ್ಚಿಮ ಬಂಗಾಳದ ಗಡಿಯಲ್ಲಿ ಗುಂಪುಗೂಡಿದ ಬಾಂಗ್ಲಾದ ಅಕ್ರಮ ವಲಸಿಗರು

ಜಲ್ದೀ ಭಾಗೊ, ನಹೀ ತೊ: ಸುವೇಂದು ಎಚ್ಚರಿಕೆ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಬೆನ್ನಲ್ಲೇ ಬಾಂಗ್ಲಾದೇಶದ ಅಕ್ರಮ ನುಸುಳುಕೋರರ ವಿರುದ್ಧ ಕಠಿಣ ಕ್ರಮ ಶುರುವಾಗಿದೆ. ಪರಿಣಾಮವಾಗಿ ಅಕ್ರಮ ಬಾಂಗ್ಲಾದೇಶಿ ವಲಸಿಗರು ರಾಜ್ಯ ತೊರೆಯಲಾರಂಭಿಸಿದ್ದಾರೆ. ಉತ್ತರ 24 ಪರಗಣ ಜಿಲ್ಲೆಯ ಹಕೀಂಪುರ ಗಡಿಯ ಬಳಿ ಬಾಂಗ್ಲಾದೇಶೀಯರು ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದಾರೆ. ಆದರೆ, ಬಾಂಗ್ಲಾದೇಶದ ಗಡಿ ಕಾವಲು ಪಡೆಯೂ, ಇವರನ್ನು ತಮ್ಮ ದೇಶದೊಳಕ್ಕೆ ಬಿಟ್ಟುಕೊಳ್ಳಲು ಸಿದ್ಧವಾಗದೇ ಇರುವುದು ಅಕ್ರಮ ವಲಸಿಗರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಸದ್ಯ ರಾಜ್ಯದಲ್ಲಿ ನೂತನ ಸರಕಾರದಿಂದ 'ಡಿಟೆಕ್ಟ್, ಡಿಲೀಟ್, ಡಿಪೋರ್ಟ್' (ಪತ್ತೆಹಚ್ಚಿ, ತೆಗೆದುಹಾಕಿ, ಗಡಿಪಾರು) ನೀತಿಯಿಂದಾಗಿ ಅಕ್ರಮ ಬಾಂಗ್ಲಾದೇಶಿ ವಲಸಿಗರಿಗೆ ಬಂಧನದ ಭೀತಿ ಎದುರಾಗಿದೆ. ಇದರ ಮಧ್ಯೆಯೇ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು 'ಜಲ್ದೀ ಜಲ್ದೀ ಭಾಗೊ, ನಹೀ ತೊ...'(ಬೇಗ ಬೇಗ ಓಡಿಹೋಗಿ, ಇಲ್ಲಾಂದರೆ...) ಎಂದು ಮಂಗಳವಾರ ಎಚ್ಚರಿಕೆ ನೀಡಿದ್ದಾರೆ. ಇದು ಹಕೀಂಪುರ ಗಡಿ ಬಳಿ ಅಲ್ಲಲ್ಲಿ ಗಂಟುಮೂಟೆ ಸಮೇತ ಉಳಿದುಕೊಂಡಿರುವ ಅಕ್ರಮ ಬಾಂಗ್ಲಾದೇಶಿ ವಲಸಿಗರಲ್ಲಿ ಭಯದಿಂದ ನಡುಗುವಂತೆ ಮಾಡಿದೆ. ಸುವೇಂದು ಅವರು ರಾಜ್ಯದಲ್ಲಿರುವ ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುವ ಬದಲು ನೇರ ಗಡಿ ಭದ್ರತಾ ಪಡೆ (ಬಿಎಸ್‌ಎಫ್)ಗೆ ಹಸ್ತಾಂತರಿಸಿರಿ ಎಂದು ಮೇ 20ರಂದೇ ಆದೇಶಿಸಿದ್ದಾರೆ. ಅಲ್ಲದೇ ಅಕ್ರಮ ವಲಸಿಗರನ್ನು ಸೆರೆಯಲ್ಲಿಡಲು ಹೋಲ್ಡಿಂಗ್ ಸೆಂಟರ್‌ಗಳನ್ನು ಸ್ಥಾಪಿಸಲು ರಾಜ್ಯದ 23 ಜಿಲ್ಲಾಡಳಿತಗಳಿಗೂ ರಾಜ್ಯದ ಗೃಹ ಇಲಾಖೆ ಸೂಚನೆ ನೀಡಿದೆ. ಈ ಕುರಿತು ವಾರಕ್ಕೊಮ್ಮೆ ಸಿಎಂ ಕಚೇರಿಗೆ ವರದಿ ಸಲ್ಲಿಸಬೇಕು ಎಂದೂ ಆದೇಶಿಸಲಾಗಿದೆ. ಪ್ರಸ್ತುತ ಬಿಎಸ್‌ಎಫ್ ಅಧಿಕಾರಿಗಳು ಅಕ್ರಮ ವಲಸಿಗರ ಬಯೋಮೆಟ್ರಿಕ್ ದತ್ತಾಂಶ ಮತ್ತು ಗುರುತು ಪರಿಶೀಲಿಸು ತ್ತಿದ್ದಾರೆ. ಬಾಂಗ್ಲಾದೇಶದ ಗಡಿಭದ್ರತಾ ಅಧಿಕಾರಿಗಳ ಜತೆ ಚರ್ಚಿಸಿ ಗಡಿಪಾರು ಪ್ರಕ್ರಿಯೆ ನಡೆಸಲು ಯತ್ನಿಸುತ್ತಿದ್ದಾರೆ ಎನ್ನಲಾಗಿದೆ.

ಪಶ್ಚಿಮ ಬಂಗಾಳದ ಹಕೀಂಪುರ ಗಡಿ ಭಾಗದಲ್ಲಿ ಗುಂಪುಗೂಡಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರು.

ಸ್ವರಕ್ಷಣೆ ಹೆಸರಲ್ಲಿ ಟ್ರಂಪ್ ಇಬ್ಬಂದಿತನ: ಇರಾನ್ ಕಿಡಿ

ಇರಾನ್ ಕ್ಷಿಪಣಿ ಉಡಾವಣೆ ತಾಣಗಳಿಗೆ ಅಮೆರಿಕ ದಾಳಿ

ವಾಷಿಂಗ್ಟನ್: ಅಮೆರಿಕ ಸೇನಾಪಡೆಗಳು ಇರಾನ್‌ನ ದಕ್ಷಿಣ ಭಾಗದಲ್ಲಿ ಸ್ವರಕ್ಷಣೆ ಹೆಸರಲ್ಲಿ ಇರಾನ್ ಕ್ಷಿಪಣಿ ಉಡಾವಣೆ ತಾಣಗಳ ಮೇಲೆ ದಾಳಿ ನಡೆಸುತ್ತಿದ್ದು, ಪಶ್ಚಿಮ ಏಷ್ಯಾ ಭಾಗದಲ್ಲಿ ಮತ್ತೆ ಉದ್ವಿಗ್ನತೆ ನೆಲೆಸುವಂತೆ ಮಾಡಿದೆ.

ಇರಾನ್ ಪಡೆಗಳಿಂದ ಅಮೆರಿಕ ಸೈನಿಕರಿಗೆ ಎದುರಾಗಬಹುದಾದ ಅಪಾಯಗಳನ್ನು ತಡೆಗಟ್ಟಲೆಂದೇ ಕ್ಷಿಪಣಿ ಉಡಾವಣೆ ತಾಣಗಳು ಹಾಗೂ ಸಮುದ್ರದಲ್ಲಿ ನೆಲಬಾಂಬ್‌ಗಳನ್ನು ಅಳವಡಿಸುವ ಇರಾನ್ ನೌಕಾಪಡೆ ದೋಣಿಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಅಮೆರಿಕದ ರಕ್ಷಣಾ ಪ್ರಧಾನ ಕಚೇರಿಯಾದ ಪೆಂಟಗನ್‌ನ 'ಸೆಂಟ್ರಲ್ ಕಮಾಂಡ್' ಹೇಳಿದೆ. ಕದನ ವಿರಾಮವಿರುವುದರಿಂದ ಈ ಸ್ವರಕ್ಷಣೆ ಕ್ರಮಗಳನ್ನು ಬಹಳ ಸಂಯಮದಿಂದ ಕೈಗೊಳ್ಳಲಾಗಿದೆ ಎಂದು ವಿವರಿಸಿದೆ.

ಒಂದೆಡೆ, ಅಮೆರಿಕ-ಇರಾನ್ ಮಧ್ಯೆ, ರಾಜತಾಂತ್ರಿಕ ಮಾತುಕತೆ ನಡೆದಿರುವಾಗ, ಮತ್ತೊಂದೆಡೆ ಅಮೆರಿಕ ದಾಳಿ ಸರಿಯೇ ಎಂದು ಇರಾನ್ ಕಿಡಿಕಾರಿದೆ.

ಯುದ್ಧ ವಿಸ್ತರಣೆಯಾಗುವುದನ್ನು ತಪ್ಪಿಸಲು ಪಶ್ಚಿಮ ಏಷ್ಯಾದ ಹಲವು ದೇಶಗಳು ಬಯಸುತ್ತಿರುವ ಕಾರಣ ಅಮೆರಿಕ-ಇರಾನ್ ನಡುವಿನ ರಾಜತಾಂತ್ರಿಕ ಮಾತುಕತೆಗಳಲ್ಲಿ ಇನ್ನೂ ಮಹತ್ವ ಉಳಿದಿದೆ ಎನ್ನಲಾಗಿದೆ. ಭವಿಷ್ಯ ದಲ್ಲಿ ಇರಾನ್ ಕೂಡ ಅಬ್ರಹಾಂ ಒಪ್ಪಂದಗಳ ಭಾಗವಾಗುವ ಸಾಧ್ಯತೆ ಇದೆ ಎಂದು ಟ್ರಂಪ್ ಹೇಳಿದ್ದಾರೆ. ಪ್ರಸ್ತುತ ಸ್ಥಿತಿಯಲ್ಲಿ ಇದು ದೂರದ ಸಾಧ್ಯತೆಯಂತೆ ಕಂಡರೂ, ಪಶ್ಚಿಮ ಏಷ್ಯಾದಲ್ಲಿ ದೀರ್ಘ ಕಾಲದ ಶಾಂತಿ ಮತ್ತು ರಾಜತಾಂತ್ರಿಕ ಮರುಸಂರಚನೆ ಗುರಿಯನ್ನು ಅಮೆರಿಕ ಮುಂದೆ ಇರಿಸುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ.

ಕಚ್ಚಾ ತೈಲ ಬೆಲೆ ಇಳಿಕೆಯಾದರೂ ಪೆಟ್ರೋಲ್, ಡೀಸೆಲ್ ದರ ಏರಿಕೆ ಏಕೆ?

ದೆಹಲಿ: ದೇಶದಲ್ಲಿ ಇಂಧನ ದರಗಳು ನಿರಂತರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಕಳೆದ 12 ವರ್ಷಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕುಸಿದಿದ್ದರೂ, ಅದರ ಲಾಭವನ್ನು ಜನರಿಗೆ ನೀಡಿ ಏಕೆ ಪರಿಹಾರ ಒದಗಿಸಿಲ್ಲ? ಎಂದು ಅವರು ಪ್ರಶ್ನಿಸಿದ್ದಾರೆ.

ಪಿಐಬಿ ಅಧಿಕೃತ ಪ್ರಕಟಣೆಯನ್ನು ಉಲ್ಲೇಖಿಸಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಖರ್ಗೆ, ಸರಿಯಾಗಿ 12 ವರ್ಷಗಳ ಹಿಂದೆ, ಅಂದರೆ 2014ರ ಮೇ 26ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡಾಗ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 108.05 ಡಾಲರ್ ಇತ್ತು. ಆಗ ಡಾಲರ್ ಎದುರು ರುಪಾಯಿ ಮೌಲ್ಯ 58.59 ರು. ಇತ್ತು. ಆ ಸಮಯದಲ್ಲಿ ದೇಶದಲ್ಲಿ ಪೆಟ್ರೋಲ್ ದರ ಲೀಟರ್‌ಗೆ 71.51 ರು. ಮತ್ತು ಡೀಸೆಲ್ ದರ 56.71 ರು. ಇತ್ತು. ಆದರೆ ಇಂದು ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 99 ಡಾಲರ್‌ಗಿಂತಲೂ ಕೆಳಗಿದೆ. ಹೀಗಿದ್ದರೂ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಕ್ರಮವಾಗಿ ಲೀಟರ್‌ಗೆ 102.12 ರು. ಮತ್ತು 95.20 ರು. ಗೆ ಏರಿಕೆಯಾಗಿವೆ. ಅಂದರೆ, ಕಚ್ಚಾ ತೈಲ ಅಗ್ಗವಾಗಿದ್ದರೂ ಪೆಟ್ರೋಲ್ ಶೇ.42.8ರಷ್ಟು ಮತ್ತು ಡೀಸೆಲ್ ಶೇ.67.9ರಷ್ಟು ತುಟ್ಟಿಯಾಗಿದೆ ಎಂದು ಖರ್ಗೆ ಆಕ್ರೋಶ ಹೊರಹಾಕಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯು ಸಾರಿಗೆಯಿಂದ ಹಿಡಿದು ಆಹಾರ ಪದಾರ್ಥಗಳವರೆಗೆ ಪ್ರತಿಯೊಂದು ವಲಯದ ಮೇಲೂ ಪ್ರಭಾವ ಬೀರುತ್ತದೆ ಎಂಬುದು ತಿಳಿದಿದೆ. ಜನಸಾಮಾನ್ಯರ ಮೇಲೆ ಹಣದುಬ್ಬರದ ಹೊರೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆದಾಗ್ಯೂ, ಸರಕಾರದ ಲಾಭಕೋರತನ ಮಾತ್ರ ಎಗ್ಗಿಲ್ಲದೆ ಮುಂದುವರಿದಿದೆ. ಪ್ರಶ್ನೆ ತೀರಾ ಸರಳವಾಗಿದೆ. ಕಚ್ಚಾ ತೈಲ ಬೆಲೆ ಇಳಿಕೆಯಾದಾಗ ಪೆಟ್ರೋಲ್ ಮತ್ತು ಡೀಸೆಲ್ ಏಕೆ ದುಬಾರಿಯಾಗುತ್ತಿವೆ? ಸಾರ್ವಜನಿಕರಿಗೆ ಯಾವುದೇ ರಿಯಾಯಿತಿ ಏಕೆ ನೀಡುತ್ತಿಲ್ಲ? ಎಂದು ಪ್ರಶ್ನಿಸಿದ್ದಾರೆ.

ತೈಲ, ಅನಿಲ ನಿಕ್ಷೇಪಗಳ ಹುಡುಕಾಟ ಆರಂಭ

ನವದೆಹಲಿ: ಭಾರತವು ಶೀಘ್ರದಲ್ಲೇ ತನ್ನ ಭೂಗರ್ಭದಲ್ಲಿ ಅಡಗಿರುವ ತೈಲ ಮತ್ತು ನೈಸರ್ಗಿಕ ಅನಿಲದ ಪತ್ತೆಗಾಗಿ ಹುಡುಕಾಟವನ್ನು ಪ್ರಾರಂಭಿಸಲು ಮುಂದಾಗಿದೆ. ತಕ್ಷಣವೇ ಕೊರೆಯುವಿಕೆ ನಡೆಸುವ ಬದಲು, ಆಧುನಿಕ ತಂತ್ರಜ್ಞಾನ ಬಳಸಿ, ಭೂಗರ್ಭದ ದತ್ತಾಂಶಗಳನ್ನು ಮರುಪರಿಶೀಲಿಸಲು ಸರಕಾರ ಮುಂದಾಗಿದೆ. ಇದು ಆಧುನಿಕ ತಂತ್ರಜ್ಞಾನದ ನೆರವಿನೊಂದಿಗೆ ಭಾರತದೊಳಗೆ ಅಡಗಿರುವ ತೈಲ ಮತ್ತು ಅನಿಲ ನಿಕ್ಷೇಪಗಳನ್ನು ಅನ್ವೇಷಿಸಲು ಕೇಂದ್ರ ಸರಕಾರವು ನೀಡಿದ ಪ್ರಮುಖ ಸಂಕೇತವಾಗಿದೆ.

ಸೋಮವಾರ ಹೊರಡಿಸಿದ ಸಾರ್ವಜನಿಕ ಪ್ರಕಟಣೆಯಲ್ಲಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಹಳೆಯ ಭೂಕಂಪನ ದತ್ತಾಂಶಗಳನ್ನು ಮರುಸಂಸ್ಕರಣೆ ಮಾಡಲು ಮತ್ತು ದೇಶಾದ್ಯಂತದ ಸೆಡಿಮೆಂಟರಿ ಬೇಸಿನ್‌ಗಳಲ್ಲಿ ಹೊಸ 3ಡಿ ಭೂಕಂಪನ ಸಮೀಕ್ಷೆಗಳನ್ನು ನಡೆಸಲು ಕಂಪನಿಗಳನ್ನು ಆಹ್ವಾನಿಸಿದೆ. ಸರಳವಾಗಿ ಹೇಳುವುದಾದರೆ, ಹಿಂದಿನ ಸಮೀಕ್ಷೆಗಳು ಕೈಬಿಟ್ಟಿರಬಹುದಾದ ಸಂಭಾವ್ಯ ತೈಲ ಮತ್ತು ಅನಿಲ ನಿಕ್ಷೇಪಗಳನ್ನು ಪತ್ತೆಹಚ್ಚಲು ಇಂದಿನ ಸುಧಾರಿತ ಇಮೇಜಿಂಗ್ ಮತ್ತು ವಿಶ್ಲೇಷಣಾತ್ಮಕ ಸಾಧನಗಳನ್ನು ಬಳಸಿ ದಶಕಗಳಷ್ಟು ಹಳೆಯದಾದ ಭೂವೈಜ್ಞಾನಿಕ ದತ್ತಾಂಶಗಳನ್ನು ಮರುಪರಿಶೀಲಿಸಲು ಸರಕಾರ ಬಯಸಿದೆ.

ಮುಖ್ಯ ಉದ್ದೇಶವೇನು?

ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಮೇಲೆ ಹೆಚ್ಚು ಅವಲಂಬಿತವಾಗಿದೆ. ಇಂಧನ ಭದ್ರತೆಯನ್ನು ಬಲಪಡಿಸುವುದು ಮತ್ತು ದೇಶೀಯ ಉತ್ಪಾದನೆ ಹೆಚ್ಚಿಸಲು, ದೇಶದ ತೈಲ ಅಗತ್ಯತೆಯ ಶೇ.85ರಷ್ಟು ಆಮದುಗಳ ಮೂಲಕ ಪೂರೈಸಲಾಗುತ್ತಿದೆ. ಇದು ಜಾಗತಿಕ ಸಂಘರ್ಷಗಳು ಮತ್ತು ಬೆಲೆ ಏರಿಕೆಯ ಸಮಯದಲ್ಲಿ ಇಂಧನ ಭದ್ರತೆಯ ಬಗ್ಗೆ ಹೆಚ್ಚು ಕಳವಳವನ್ನು ಸೃಷ್ಟಿಸಿದೆ. ಇಂಧನ ಭದ್ರತೆಯನ್ನು ಬಲಪಡಿಸುವುದು ಮತ್ತು ದೇಶೀಯ ಉತ್ಪಾದನೆ ಹೆಚ್ಚಿಸುವುದು.

ಯಾರ ಉಸ್ತುವಾರಿ?

ಪೆಟ್ರೋಲಿಯಂ ಸಚಿವಾಲಯದ ತಾಂತ್ರಿಕ ವಿಭಾಗವಾದ ಹೈಡ್ರೋಕಾರ್ಬನ್‌ಗಳ ಮಹಾ ನಿರ್ದೇಶನಾಲಯ.

ಎಲ್ಲೆಲ್ಲಿ ಸಮೀಕ್ಷೆ?

ಭಾರತದ ಪೂರ್ವ ಕರಾವಳಿ ಭಾಗ, ಪೂರ್ಣಿಯಾ ಮತ್ತು ಮಹಾನದಿ ಬೇಸಿನ್, ಕೃಷ್ಣ ಗೋದಾವರಿ ಬೇಸಿನ್, ಕಾವೇರಿ ಬೇಸಿನ್ ಮತ್ತು ಅಂಡಮಾನ್ (ಪೂರ್ವ) ಜಲಾನಯನ ಪ್ರದೇಶ.

ಸಚಿವ ಸಂಪುಟ ಸ್ಥಾನಮಾನ: ಅರ್ಜಿ ವಿಚಾರಣೆಗೆ ನಕಾರ

ದೆಹಲಿ: ಕರ್ನಾಟಕದ ವಿವಿಧ ನಿಗಮ, ಮಂಡಳಿಗೆ ನೇಮಿಸಿರುವ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ರಾಜ್ಯ ಸರಕಾರವು ಸಚಿವ ಸಂಪುಟದ ಸ್ಥಾನಮಾನ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಅರ್ಜಿದಾರರಿಗೆ ಹೈಕೋರ್ಟ್ ಮುಂದೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಸೂಚಿಸಿದೆ. ಹೈಕೋರ್ಟ್‌ನಲ್ಲಿ ಈ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಸ್ವಾತಂತ್ರ್ಯ ನೀಡುವ ಜತೆಗೆ ಈ ಅರ್ಜಿಯನ್ನು ವಿಲೇವಾರಿ ಮಾಡಲಾಗಿದೆ ಎಂದು ಪೀಠ ತಿಳಿಸಿದೆ. ಕಳೆದ ಮಾರ್ಚ್ 4ರಂದು ಹೈಕೋರ್ಟ್ ಈ ಅರ್ಜಿಯನ್ನು ವಜಾಗೊಳಿಸಿತ್ತು.

ಎಲ್ಲ ಧರ್ಮಗಳಿಗೆ ಸಮಾನ ಕಾನೂನು

ಭಾರತದಲ್ಲಿ ವಿವಾಹ, ವಿಚ್ಛೇದನ, ದತ್ತು, ವಾರಸುದಾರಿಕೆ ಹಾಗೂ ಕುಟುಂಬ ಸಂಬಂಧಿತ ವಿಷಯಗಳಲ್ಲಿ ವಿವಿಧ ಧರ್ಮಗಳಿಗೆ ಬೇರೆ ಬೇರೆ ವೈಯಕ್ತಿಕ ಕಾನೂನುಗಳು ಜಾರಿಯಲ್ಲಿವೆ. ಇವುಗಳನ್ನು ಒಂದೇ ಸಾಮಾನ್ಯ ಕಾನೂನಿನಡಿ ತರಬೇಕೆಂಬ ಉದ್ದೇಶದಿಂದ ಏಕರೂಪ ನಾಗರಿಕ ಸಂಹಿತೆ ಕುರಿತು ದೇಶಾದ್ಯಂತ ಮತ್ತೆ ಚರ್ಚೆ ಪ್ರಾರಂಭವಾಗಿದೆ. ಭಾರತ ಸಂವಿಧಾನದ ವಿಧಿ 44ರಲ್ಲಿ ರಾಜ್ಯವು ದೇಶದಾದ್ಯಂತವಿರುವ ನಾಗರಿಕರಿಗೆ ಏಕರೂಪ ನಾಗರಿಕ ಸಂಹಿತೆ ಒದಗಿಸಲು ಪ್ರಯತ್ನಿಸಬೇಕು ಎಂದು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಉಲ್ಲೇಖಿಸಲಾಗಿದೆ. ಇದು ಮೂಲಭೂತ ಹಕ್ಕುಗಳ ಭಾಗವಲ್ಲ ಕೇವಲ ಸರಕಾರಕ್ಕೆ ಮಾರ್ಗದರ್ಶಕ ತತ್ವವಾಗಿದೆ.

» ಉತ್ತರಾಖಂಡ ರಾಜ್ಯವು ಯುಸಿಸಿ ಜಾರಿಗೆ ಕಾನೂನು ಅಂಗೀಕರಿಸಿರುವ ಮೊಟ್ಟ ಮೊದಲ ರಾಜ್ಯವಾಗಿದೆ.

ಯುಸಿಸಿ ಎಂದರೇನು?

ಏಕರೂಪ ನಾಗರಿಕ ಸಂಹಿತೆ ಎಂದರೆ ಧರ್ಮಭೇದವಿಲ್ಲದೆ ಎಲ್ಲ ಭಾರತೀಯ ನಾಗರಿಕರಿಗೆ ಒಂದೇ ರೀತಿಯ ವೈಯಕ್ತಿಕ ಕಾನೂನು ಅನ್ವಯಿಸುವ ವ್ಯವಸ್ಥೆ. ಈಗ ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ ಸಮುದಾಯಗಳಿಗೆ ಪ್ರತ್ಯೇಕ ವೈಯಕ್ತಿಕ ಕಾನೂನುಗಳಿವೆ. ಯುಸಿಸಿ ಜಾರಿಯಾದರೆ ವಿವಾಹ, ವಿಚ್ಛೇದನ, ಪಾಲನೆ, ದತ್ತು ಮತ್ತು ಆಸ್ತಿ ಹಂಚಿಕೆ ವಿಷಯಗಳಲ್ಲಿ ಒಂದೇ ಕಾನೂನು ಅನ್ವಯವಾಗಲಿದೆ.

ಯುಸಿಸಿ ಜಾರಿಯಾದರೆ?

- » ಮಹಿಳೆಯರ ಹಕ್ಕುಗಳಿಗೆ ಹೆಚ್ಚು ರಕ್ಷಣೆ
- » ವಿವಿಧ ವೈಯಕ್ತಿಕ ಕಾನೂನುಗಳಿಂದ ಉಂಟಾಗುವ ಅಸಮಾನತೆ ನಿವಾರಣೆ
- » ಒಂದು ದೇಶ - ಒಂದು ಕಾನೂನು ತತ್ವದಿಂದ ರಾಷ್ಟ್ರೀಯ ಏಕತೆ ಬಲವಾಗಲಿದೆ

ವಿರೋಧಕ್ಕೆ ಕಾರಣಗಳೇನು?

- » ವೈಯಕ್ತಿಕ ಕಾನೂನುಗಳು ಧಾರ್ಮಿಕ ಆಚರಣೆಗಳ ಭಾಗವಾಗಿರುವುದರಿಂದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ
- » ಭಾರತದ ವೈವಿಧ್ಯಮಯ ಸಂಸ್ಕೃತಿಗೆ ಒಂದೇ ಕಾನೂನು ಅನ್ವಯಿಸುವುದು ದೊಡ್ಡ ಸವಾಲಿನ ವಿಷಯ

ಸುಪ್ರೀಂ ಉಲ್ಲೇಖ?

1985 ಶಾ ಬಾನೋ
» ಮೊಹಮ್ಮದ್ ಅಹ್ಮದ್ ಖಾನ್ ವಿರುದ್ಧ ಶಾ ಬಾನೋ ಬೇಗಂ
- ವಿಚ್ಛೇದಿತ ಮುಸ್ಲಿಂ ಮಹಿಳೆಗೆ ಜೀವನಾಂಶ ನೀಡಬೇಕು. ದೇಶದಲ್ಲಿ ಸಮಾನ ನಾಗರಿಕ ಸಂಹಿತೆ ಅಗತ್ಯವಿದೆ ಎಂದು ಹೇಳಿತ್ತು.

1995 ಸರಳಾ ಮುದ್ಗಲ್
» ಸರಳಾ ಮುದ್ಗಲ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ
- 2ನೇ ವಿವಾಹಕ್ಕಾಗಿ ಧರ್ಮಾಂತರಗೊಂಡ ಪ್ರಕರಣದಲ್ಲಿ, ವೈಯಕ್ತಿಕ ಕಾನೂನು ಗೊಂದಲ ಮೂಡಿಸುತ್ತಿದೆ. ಯುಸಿಸಿ ಜಾರಿಗೆ ಕ್ರಮ ಕೈಗೊಳ್ಳಬೇಕು.

1985 ಜಾನ್ ವಲ್ಲಮಟ್ಟಂ
» ಜಾನ್ ವಲ್ಲಮಟ್ಟಮ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ
- ಕ್ರೈಸ್ತರ ಆಸ್ತಿ ಸಂಬಂಧಿತ ಕಾನೂನು ವಿಚಾರಣೆ ವೇಳೆ ಸಂವಿಧಾನದ ವಿಧಿ 44ಅನ್ನು ಉಲ್ಲೇಖಿಸಿ ಯುಸಿಸಿ ಅಗತ್ಯತೆಯನ್ನು ನೆನಪಿಸಿತು.

2017 ಶಾಯರಾ ಬಾನೋ
» ಶಾಯರಾ ಬಾನೋ ವಿರುದ್ಧ ಯೂನಿಯನ್ ಆಫ್ ಇಂಡಿಯಾ
- ತ್ರಿವಳಿ ತಲಾಖ್ ಅಸಂವಿಧಾನಿಕ ಎಂದು ಕೋರ್ಟ್ ಘೋಷಿಸಿತು. ಈ ಪ್ರಕರಣದ ನಂತರ ದೇಶದಲ್ಲಿ ಯುಸಿಸಿ ಕುರಿತ ಚರ್ಚೆ ಮತ್ತೆ ತೀವ್ರಗೊಂಡಿತು.

ತಲೆಬುರುಡೆಯೊಳಗೆ 2 ಮಿದುಳು? 2 ಮನಸ್ಸು?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಬೆಳಗ್ಗೆ ಸ್ನಾನವನ್ನು ಮುಗಿಸಿ, ಬಟ್ಟೆ ಹಾಕಿಕೊಳ್ಳಲೆಂದು ಬೀರುವಿನ ಬಾಗಿಲನ್ನು ತೆಗೆದಿದ್ದೀರಿ. ಯಾವ ಬಣ್ಣದ ಅಂಗಿಯನ್ನು ಹಾಕಿಕೊಳ್ಳಬೇಕೆಂದು ಯೋಚಿಸುತ್ತಿದ್ದೀರಿ. ನಿಮ್ಮ ಬಲಗೈ ಮುಂದಕ್ಕೆ ಬಂದು ಹ್ಯಾಂಗರಿನಲ್ಲಿ ತೂಗುಹಾಕಿದ್ದ ಕೆಂಪುಬಣ್ಣದ ಅಂಗಿಯನ್ನು ತೆಗೆದುಕೊಂಡಿತು. ತಕ್ಷಣವೇ ನಿಮ್ಮ ಎಡಗೈ ಸಹಾ ಮುಂದಕ್ಕೆ ಬಂದು ಹ್ಯಾಂಗರಿನಲ್ಲಿ ತೂಗುಹಾಕಿದ್ದ ನೀಲಿ ಬಣ್ಣದ ಷರ್ಟ್ ಅನ್ನು ಎತ್ತಿಕೊಂಡಿತು. ಬಲಗೈ ಕೆಂಪು ಬಣ್ಣದ ಅಂಗಿಯನ್ನು ಧರಿಸಲು ಹೊರಟಾಗ, ಎಡಗೈ ಅದನ್ನು ತಡೆಯಿತು. ತಕ್ಷಣವೇ ಎರಡೂ ಕೈಗಳ ನಡುವೆ ಜಗ್ಗಾಟ ಶುರುವಾಯಿತು. ಒಂದು ಕೈ ಅಂಗಿಯನ್ನು ತೊಡಲು ಮುಂದಾದರೆ, ಮತ್ತೊಂದು ಕೈ, ಆ ಅಂಗಿಯನ್ನು ತೊಡದಂತೆ ತಡೆಯಲಾರಂಭಿಸಿತು. ಎರಡೂ ನಿಮ್ಮ ಕೈಗಳೇ! ನಿಮ್ಮ ಕೈಗಳ ನಡುವೆಯೇ ಈಗ ಸ್ಪರ್ಧೆ ಏರ್ಪಟ್ಟಿದೆ! 'ಟಗ್ ಆಫ್ ವಾರ್' ಆಟವು ನಿಮ್ಮದೇ ಆದ ಎರಡು ಕೈಗಳ ನಡುವೆ ನಡೆಯುತ್ತಿದೆ!

ಮಹಾನ್ ಸೇತುವೆ

ನಿಮ್ಮ ಮೈಯಲ್ಲಿ ಯಾವುದೇ ದೆವ್ವ ಹೊಕ್ಕಿಲ್ಲ. ನೀವು ಕನಸನ್ನೂ ಕಾಣುತ್ತಿಲ್ಲ. ಇದು ವೈಜ್ಞಾನಿಕ ಕಥೆಯೂ ಅಲ್ಲ. ನೀವು ವಾಸ್ತವ ಜಗತ್ತಿನಲ್ಲಿಯೇ ಇದ್ದೀರಿ. ವಾಸ್ತವದ ಜಗತ್ತಿನಲ್ಲಿಯೇ ನಿಮ್ಮದೇ ಎರಡು ಕೈಗಳ ನಡುವೆ ಹೋರಾಟ ನಡೆಯುತ್ತಿದೆ. ಇದು ಸತ್ಯ. ಯಾಕೆ ಹೋರಾಟ ನಡೆಯುತ್ತಿದೆ ಎನ್ನುವ ಪ್ರಶ್ನೆಯು ನಿಮ್ಮ ಮನಸ್ಸಿನಲ್ಲಿ ಮೂಡುತ್ತಿದೆ. ಅದಕ್ಕೆ ಉತ್ತರ ಸರಳ. ನಿಮ್ಮ ಮಿದುಳಿನ ಎಡ ಅರೆಗೋಳ (ಲೆಫ್ಟ್ ಹೆಮಿಸ್ಫಿಯರ್) ಮತ್ತು ಬಲ ಅರೆಗೋಳಗಳ (ರೈಟ್ ಹೆಮಿಸ್ಫಿಯರ್) ನಡುವೆ ಸಂಪರ್ಕವನ್ನು ಸಾಧಿಸುವ ಮಹಾನ್ ನರ ಸೇತುವೆ ಅಡ್ಡನರದಿಂಡು ಅಥವ ಕಾರ್ಪಸ್ ಕೆಲೋಸಮ್ ನನ್ನು ಛೇದಿಸಲಾಗಿದೆ! ಹಾಗಾಗಿ ನಿಮ್ಮ ತಲೆಯ ಒಂದು ಬುರುಡೆಯೊಳಗೆ ಎರಡು ಮಿದುಳು ಒಟ್ಟೊಟ್ಟಿಗೆ ಬದುಕುತ್ತಿವೆ. ಒಂದು ಮಿದುಳು ಕೆಂಪು ಬಣ್ಣದ ಅಂಗಿಯನ್ನು ಹಾಕಿಕೊಳ್ಳುವಂತೆ ಹೇಳುತ್ತಿದ್ದರೆ, ಮತ್ತೊಂದು ಮಿದುಳು ನೀಲಿ ಅಂಗಿಯನ್ನು ಹಾಕಿಕೊಳ್ಳಲು ಹೇಳುತ್ತಿದೆ! ನಿಮ್ಮ ಮಿದುಳಿನ ಒಳಗೆ ನೀವು ಇಬ್ಬರಾಗಿದ್ದೀರಿ. ಇಬ್ಬಿಬ್ಬರ ಜತೆಯಲ್ಲಿ ಒಟ್ಟಿಗೆ ಬದುಕುತ್ತಿದ್ದೀರಿ!

ಅಪಸ್ಮಾರ

1960ರ ದಶಕದಲ್ಲಿ ಯಾವುದೇ ಔಷಧಗಳಿಗೆ ಬಗ್ಗದ ಉಗ್ರ ಅಪಸ್ಮಾರವನ್ನು (ಫಿಟ್ಸ್, ಎಪಿಲೆಪ್ಸಿ) ಗುಣಪಡಿಸಲು ಮಿದುಳಿನ ಎರಡು ಅರೆಗೋಳಗಳ ನಡುವೆ ಸಂಪರ್ಕವನ್ನು ಕಲ್ಪಿಸುವ ಅಡ್ಡನರದಿಂಡನ್ನು ಸಂಪೂರ್ಣವಾಗಿ ಛೇದಿಸುತ್ತಿದ್ದರು. ಹೀಗೆ ಛೇದಿಸಿದಾಗ ಆ ಉಗ್ರ ಅಪಸ್ಮಾರವು ನಿಲ್ಲುತ್ತಿತ್ತು. ಆದರೆ, ಮನುಕುಲಕ್ಕೆ ತಿಳಿಯದಂತಹ ಪ್ರಕೃತಿಯ ಒಂದು ರಹಸ್ಯವು ಆಗ ಹೊರ ಬಂದಿತು, ''ಮನುಷ್ಯನ ತಲೆಯ ಬುರುಡೆಯೊಳಗಿರುವ ಎರಡು ಅರೆಗೋಳಗಳು ಎರಡು ವಿಭಿನ್ನ ಮನಸ್ಸುಗಳ ರೂಪದಲ್ಲಿ ಆಲೋಚನೆಯನ್ನು ಮಾಡ ಬಲ್ಲವು, ಭಾವನೆಗಳನ್ನು ಅನುಭವಿಸಬಲ್ಲವು ಹಾಗೂ ಪರಸ್ಪರ ವಿರುದ್ಧವಾಗಿ ವರ್ತಿಸಬಲ್ಲವು!''

ನರಶಸ್ತ್ರವೈದ್ಯರು ಅಡ್ಡನರದಿಂಡನ್ನು ಛೇದಿಸುವುದರ ಮೂಲಕ ಮನಸ್ಸನ್ನು ಎರಡಾಗಿ ಒಡೆಯುವಂತಹ ಪ್ರಯೋಗವನ್ನು ಏಕೆ ಮಾಡಿದರು ಎನ್ನುವ ಪ್ರಶ್ನೆಗೆ ಉತ್ತರವನ್ನು ಪಡೆಯಲು ಮಿದುಳಿನ ರಚನೆಯನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ತಲೆಬುರುಡೆಯೊಳಗೆ ಮಿದುಳು, ಎರಡು ಅರೆಗೋಳಗಳ ರೂಪದಲ್ಲಿದೆ. ಎಡ ಮತ್ತು ಬಲ ಅರೆಗೋಳ. ಈ ಎರಡೂ ಅರೆಗೋಳಗಳ ನಡುವೆ ಪರಸ್ಪರ ಸಂಪರ್ಕವನ್ನು ಕಲ್ಪಿಸುವ 200 ದಶ ಲಕ್ಷಕ್ಕೂ ಹೆಚ್ಚಿನ ನರತಂತುಗಳಿವೆ. ಇದುವೇ ಅಡ್ಡನರ ದಿಂಡು ಅಥವಾ ಕಾರ್ಪಸ್ ಕೆಲೋಸಮ್. ಇದು ಇಂಗ್ಲಿಷ್ ವರ್ಣಮಾಲೆ 'ಸಿ' ಆಕಾರದಲ್ಲಿ ಎರಡೂ ಅರೆಗೋಳಗಳ ನಡುವೆ ಹೈ ಸ್ಪೀಡ್ ಡೇಟ ಕೇಬಲ್ ರೀತಿಯಲ್ಲಿ ಪ್ರತಿಕ್ಷಣವೂ ಬಿಲಿಯಗಟ್ಟಲೆ ಮಾಹಿತಿ ವಿನಿಮಯವನ್ನು ನಡೆಸುತ್ತದೆ. ನಮ್ಮ ಮಿದುಳಿನಲ್ಲಿ 86 ಶತಕೋಟಿ ನರಕೋಶಗಳಿವೆ. ನರಕೋಶಗಳು ವಿದ್ಯುತ್ ಮತ್ತು ರಾಸಾಯನಿಕ ಶಕ್ತಿಯಿಂದ ಕೆಲಸಮಾಡುತ್ತವೆ. ನಮ್ಮ ಎಡ ಮತ್ತು ಬಲ ಅರೆಗೋಳಗಳು ಸ್ವತಂತ್ರವಾಗಿ ಕೆಲಸ ಮಾಡುತ್ತವೆಯಾದರೂ, ಅನೇಕ ವಿಚಾರಗಳಿಗೆ ಸಂಬಂಧಪಟ್ಟಹಾಗೆ ಪರಸ್ಪರ ಮಾತು ಕತೆ ಅಭಿಪ್ರಾಯ ವಿನಿಮಯವನ್ನು ಮಾಡಿಕೊಂಡು ಆನಂತರ ಒಟ್ಟಿಗೆ ಒಂದು ತೀರ್ಮಾನಕ್ಕೆ ಬರುತ್ತದೆ. ಹಾಗಾಗಿ ನಮ್ಮ ಸಮಗ್ರ ವ್ಯಕ್ತಿತ್ವಕ್ಕೆ ಈ ಅಡ್ಡನರದಿಂಡು ಆರೋಗ್ಯವಾಗಿರ ಬೇಕು.

ವಿದ್ಯುತ್ ಚಂಡಮಾರುತ

ನರವಿಜ್ಞಾನಿಗಳಿಗೆ ಅನಾದಿ ಕಾಲದಿಂದಲೂ ಈ ಅಡ್ಡನರ ದಿಂಡಿನ ಕೆಲಸವೇನು ಎನ್ನುವುದು ತಿಳಿದಿರಲಿಲ್ಲ. ಬಹುಶಃ ಎರಡೂ ಅರೆಗೋಳಗಳು ಮಿದುಳನ್ನು ಬುರುಡೆಯೊಳಗೆ ಸ್ಥಿರವಾಗಿ ಇರಲು ನೆರವಾಗುತ್ತವೆ ಎಂದು ಭಾವಿಸಿದ್ದರು. ಆದರೆ, ಗುಣಪಡಿಸಲಾಗದ ಮಹಾ ಅಪಸ್ಮಾರದಲ್ಲಿ (ಇಂಟ್ರಾಕ್ಟಬಲ್ ಗ್ರಾಮ್ಡ್- ಮಾಲ್ ಎಪಿಲೆಪ್ಸಿ) ಎರಡು ಗೋಳಗಳ ನಡುವೆ ಸಂಪರ್ಕವನ್ನು ಕಲ್ಪಿಸುವ ಅಡ್ಡನರದಿಂಡು ಎಂಬ ಸೂಪರ್ ಹೈ-ವೇ ಪ್ರಧಾನ ಪಾತ್ರವನ್ನು ವಹಿಸುತ್ತಿದೆ ಎನ್ನುವ ವಿಚಾರವು ಸಾವಕಾಶವಾಗಿ ತಿಳಿದು ಬರಲಾರಂಭಿಸಿತು.

ಅಪಸ್ಮಾರವು ಹೇಗೆ ಉಂಟಾಗುತ್ತದೆ?

ಅಪಸ್ಮಾರ ಎಂದರೆ ಅದು ವಿದ್ಯುತ್ ಚಂಡಮಾರುತ! ನರಕೋಶಗಳೆಲ್ಲ ವಿದ್ಯುತ್ಶಕ್ತಿಯ ಸಹಕಾರದಿಂದ ಕೆಲಸ ಮಾಡುತ್ತೇವೆ ಎನ್ನುವುದನ್ನು ಈಗಾಗಲೇ ತಿಳಿದಿದ್ದೇವೆ. ಅಪಸ್ಮಾರದಲ್ಲಿ ಯಾವುದೋ ಒಂದು ಅರೆಗೋಳದ ಒಂದು ಮೂಲೆಯಲ್ಲಿ ಅಸಹಜ ವಿದ್ಯುತ್ ಚಟುವಟಿಕೆ ಆರಂಭವಾಗುತ್ತದೆ. ಈ ಅಸಹಜ ಚಟುವಟಿಕೆಯು ಉಗ್ರಾವತಾರವನ್ನು ತಾಳಿ ವಿದ್ಯುತ್ ಚಂಡಮಾರುತವಾಗಿ, ಇಡೀ ಅರೆಗೋಳದ ಪೂರ್ಣ ವ್ಯಾಪಿಸಿ, ಆನಂತರ ಅಡ್ಡನರದಿಂಡಿನ ಮೂಲಕ ಮತ್ತೊಂದು ಅರೆಗೋಳಕ್ಕೂ ವ್ಯಾಪಿಸಿ, ಇಡೀ ಮಿದುಳನ್ನು ಅಲ್ಲೋಲಕಲ್ಲೋಲಗೊಳಿಸುತ್ತದೆ. ಈ ವಿದ್ಯುತ್ ಚಂಡಮಾರುತದ ಕಾರಣ ಮಿದುಳು ತತ್ತರಿಸುತ್ತದೆ. ಇದು ಮಹಾ ಅಪಸ್ಮಾರದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ತಕ್ಷಣವೇ ತೀವ್ರ ಸ್ವರೂಪದ ಸೆಳವು (ಫಿಟ್ಸ್) ಕಾಣಿಸಿಕೊಳ್ಳುತ್ತದೆ. ಪ್ರಜ್ಞೆಯು ಸಂಪೂರ್ಣವಾಗಿ ಹೊರಟುಹೋಗುತ್ತದೆ. ವ್ಯಕ್ತಿಯು ಅಸಹಾಯಕನಾಗಿ ಕೆಳಕ್ಕೆ ಬೀಳುತ್ತಾನೆ. ನಮಗೆ ತಿಳಿದಿರುವ ಯಾವ ಒಂದು ಚಿಕಿತ್ಸೆಯು ಈ ಮಹಾ ಅಪಸ್ಮಾರವನ್ನು ತಡೆಯಲಾರದು.

ಸ್ಪ್ಲಿಟ್ ಬ್ರೈನ್ ಸರ್ಜರಿ

1960ರ ದಶಕದಲ್ಲಿ ಕ್ಯಾಲ್ಟೆಕ್ (ಕ್ಯಾಲಿಫೋರ್ನಿಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಇಬ್ಬರು ಧೈರ್ಯಶಾಲಿ ನರಶಸ್ತ್ರವೈದ್ಯರು, ಫಿಲಿಪ್ ವೋಗೆಲ್ ಹಾಗೂ ಜೋಸೆಫ್ ಬೋಗೆನ್ ಒಂದು ದಿಟ್ಟ ನಿರ್ಧಾರವನ್ನು ಮಾಡಿದರು. ಅದುವರೆಗೂ ಯಾರೂ ಅಂತಹ ವಿಚಾರದ ಬಗ್ಗೆ ಯೋಚಿಸಿರಲಿಲ್ಲ. ಅಪಸ್ಮಾರದ ವಿದ್ಯುತ್ ಚಂಡಮಾರುತವು ಒಂದು ಅರೆಗೋಳದಿಂದ ಮತ್ತೊಂದು ಅರೆಗೋಳಕ್ಕೆ ಅಡ್ಡನರದಿಂಡನ ಮೂಲಕವೇ ಹಾಯುತ್ತದೆ ಎನ್ನುವುದು ಅವರಿಗೆ ತಿಳಿದಿತ್ತು! ಹಾಗಾಗಿ ಈ ನರ ಮಹಾಸೇತುವೆಯನ್ನೇ ತುಂಡರಿಸಿಬಿಟ್ಟರೆ!? ಎನ್ನುವ ತಾರ್ಕಿಕ ಹಿನ್ನೆಲೆಯಲ್ಲಿ ಈ ಅಡ್ಡನರದಿಂಡನ್ನು ಛೇದಿಸಿದರು. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ ಕಾರ್ಪಸ್ ಕೆಲೋಸಾಟಮಿ ಎಂದು ಕರೆದರು. ಜನಸಾಮಾನ್ಯರ ಭಾಷೆಯಲ್ಲಿ ಇದು ಸ್ಪ್ಲಿಟ್ ಬ್ರೈನ್ ಸರ್ಜರಿ ಎಂದು ಹೆಸರಾಯಿತು. ನರ ಮಹಾ ಸೇತುವೆಯನ್ನು ತುಂಡರಿಸುತ್ತಿರುವಂತೆಯೇ ಬಹಳಷ್ಟು ರೋಗಿಗಳಲ್ಲಿ ನಾಟಕೀಯವಾಗಿ ಅಪಸ್ಮಾರವು ನಿಂತಿತು! ಅಡ್ಡನರದಿಂಡು ಛೇದನಕ್ಕೆ ಒಳಗಾದ ರೋಗಿಗಳಿಗೆ ಎಚ್ಚರವಾಯಿತು. ಅವರ ಮಾತುಕತೆ, ನಡವಳಿಕೆ ಎಲ್ಲ ಸಹಜವಾಗಿತ್ತು. ಆರಾಮವಾಗಿ ಮಾತನಾಡಲಾರಂಭಿಸಿದರು. ಅವರ ದೈನಂದಿನ ಚಟವಟಿಕೆಗಳಲ್ಲಿ ತೊಡಗಿಕೊಂಡರು. ಸಮುದ್ರದಲ್ಲಿ ಚಂಡಮಾರುತವು ಏಳುವುದಕ್ಕೆ ಮೊದಲು ಇಡೀ ಕಡಲು ಪ್ರಶಾಂತವಾಗಿರುತ್ತದೆ. ಹಾಗಾಗಿ ಶಸ್ತ್ರಚಿಕಿತ್ಸೆಗೆ ಒಳಗಾದವರ ಈ ಸಹಜತೆ ಮನೋವ್ಯಾಪಾರಗಳು ಅಲ್ಲೋಲಕಲ್ಲೋಲವಾಗುವುದನ್ನು ತೋರುವ ಮೊದಲಿನ ಪ್ರಶಾಂತತೆಯಾಗಿತ್ತು ಎನ್ನುವುದನ್ನು ಯಾರೂ ಗಮನಿಸಿರಲಿಲ್ಲ.

ಕ್ಯಾಲ್ಟೆಕ್ ಪ್ರಯೋಗಗಳು

ಅಡ್ಡನರದಿಂಡು ಛೇದನವು ಬಹುಪಾಲು ರೋಗಿಗಳಲ್ಲಿ ಅಪಸ್ಮಾರವನ್ನು ಗುಣಪಡಿಸಿತಾದರೂ ಮನುಷ್ಯನ ಮಾನಸ ಸರೋವರದ ಒಳಗೆ ಅಡಗಿರುವ ಅಸಂಖ್ಯ ರಹಸ್ಯಗಳಲ್ಲಿ ಕೆಲವನ್ನು ಹೊರಗೆಡಹಿದವು. ಅವುಗಳಲ್ಲಿ ಒಬ್ಬ ಮನುಷ್ಯನ ದೇಹದಲ್ಲಿ ಒಂದು ಮನಸ್ಸು ಇರುತ್ತದೆಯೇ ಅಥವಾ ಆ ಮನಸ್ಸು ಛೇದನಕ್ಕೆ ಒಳಗಾಗಿ ಎರಡಾಗುತ್ತದೆಯೇ ಎನ್ನುವ ಪ್ರಶ್ನೆಯು ವಿಜ್ಞಾನಿಗಳನ್ನು ಆಳವಾಗಿ ಕೆದಕಲಾರಂಭಿಸಿತು. ರೋಜರ್ ಸ್ಪೆರ್ರಿ (1913-1994) ಎಂಬ ನರಜೀವವಿಜ್ಞಾನಿ ಹಾಗೂ ಆತನ ಪ್ರತಿಭಾವಂತ ಶಿಷ್ಯ ಮೈಕೇಲ್ ಗಝ್ಝನಿಗ, (1939-) ಅಡ್ಡನರದಿಂಡು ಛೇದನಕ್ಕೆ ಒಳಗಾಗಿದ್ದ ವ್ಯಕ್ತಿಗಳ ಬಗ್ಗೆ ಕ್ಯಾಲ್ಟೆಕ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರಯೋಗಗಳನ್ನು ನಡೆಸಲಾರಂಬಿಸಿದರು. ಈ ಇಬ್ಬರು ವಿಜ್ಞಾನಿಗಳು ತಮ್ಮ ಪ್ರಯೋಗಗಳನ್ನು ಆರಂಭಿಸುವುದಕ್ಕೆ ಮೊದಲು ಮಿದುಳಿನ ಬಗ್ಗೆ ನಮಗೇನು ತಿಳಿದಿತ್ತು ಎನ್ನುವುದನ್ನು ಸ್ಥೂಲವಾಗಿ ತಿಳಿಯುವುದೊಳಿತು. ಎಡ ಅರೆಗೋಳವು, ದೇಹದ ಬಲಭಾಗವನ್ನು ನಿಯಂತ್ರಿಸುತ್ತದೆ. ಹಾಗೆಯೇ ಬಲ ಅರೆಗೋಳವು ದೇಹದ ಎಡ ಭಾಗವನ್ನು ನಿಯಂತ್ರಿಸುತ್ತದೆ. ಉದಾಹರಣೆಗೆ ನಮ್ಮ ಬಲಗಣ್ಣು ನೋಡುವ ಮಾಹಿತಿಯು ಎಡ ಅರೆಗೋಳವನ್ನು ತಲುಪುತ್ತದೆ. ಹಾಗೆಯೇ ಎಡಗಣ್ಣು ನೋಡುವ ಮಾಹಿತಿಯೆಲ್ಲವೂ ಬಲ ಅರೆಗೋಳಕ್ಕೆ ಹೋಗುತ್ತದೆ.





ಮಿದುಳು ಈ ಎರಡೂ ಅರೆಗೋಳಗಳ ಮಾಹಿತಿಯನ್ನು ಸಮನ್ವಯಗೊಳಿಸಿ, ಎರಡು ಅರೆಗೋಳಗಳು ಏನನ್ನು ತೋರಿಸುತ್ತಿವೆ ಎನ್ನುವ ಸಮಗ್ರ ಚಿತ್ರವನ್ನು ಪಡೆಯುತ್ತದೆ. ಹೀಗೆ ಸಮಗ್ರ ಚಿತ್ರವನ್ನು ಪಡೆಯಲು ಕಾರಣ ಅಡ್ಡನರದಿಂಡು ಅಥವ ಕಾರ್ಪಸ್ ಕೆಲೋಸಮ್. ಏಕೆಂದರೆ ಎರಡೂ ಕಣ್ಣುಗಳಿಂದ ಬರುವ ಮಾಹಿತಿಯು ಎರಡೂ ಗೋಳಗಳ ನಡುವೆ ಪರಸ್ಪರ ವಿನಿಮಯ ವಾಗುತ್ತದೆ.

ಇಬ್ಬರು ವಿಜ್ಞಾನಿಗಳು ಅಡ್ಡನರದಿಂಡು ಛೇದನಕ್ಕೆ ಒಳಗಾದವರ ಮೇಲೆ ಪ್ರಯೋಗವನ್ನು ನಡೆಸುತ್ತಿದ್ದರು. ಹಾಗಾಗಿ ಬಲ ಕಣ್ಣು ತೋರುವ ಮಾಹಿತಿಯು ಎಡ ಅರೆಗೋಳದಲ್ಲೇ ಉಳಿಯುತ್ತಿತ್ತು. ಎಡ ಅರೆಗೋಳ ತೋರುವ ಮಾಹಿತಿಯು ಬಲ ಅರೆಗೋಳದಲ್ಲೇ ಉಳಿಯುತ್ತಿತ್ತು. ಅಡ್ಡನರದಿಂಡು ಛೇದನಕ್ಕೆ ಒಳಗಾಗಿದ್ದ ಕಾರಣ, ಎರಡೂ ಮಿದುಳು ತಮ್ಮ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿರಲಿಲ್ಲ. ಮಿದುಳಿನ ಒಂದೊಂದು ಅರೆಗೋಳಗಳಲ್ಲಿ ಆ ಗೋಳಗಳಿಗೆ ವಿಶಿಷ್ಟವಾದ ಕೆಲವು ಕೆಲಸಗಳನ್ನು ನಿಯಂತ್ರಿಸುವ ಕೇಂದ್ರಗಳು ಇರುತ್ತವೆ. ಉದಾಹರಣೆಗೆ ಮಾತುಕತೆಗೆ ಸಂಬಂಧಿಸಿದ ವಾಕ್ ಕೇಂದ್ರ ಅಥವಾ ವಾಕ್ ಕ್ಷೇತ್ರವು (ಸ್ಪೀಚ್ ಸೆಂಟರ್ ಆರ್ ಸ್ಪೀಚ್ ಏರಿಯ) ಎಡ ಅರೆಗೋಳದಲ್ಲಿದೆ.

ವಿಜ್ಞಾನಿಗಳು ಬಹಳವಾದ ಸರಳವಾದ, ಸುಲಭವಾದ, ನವಿರಾದ ಪ್ರಯೋಗಗಳನ್ನು ನಡೆಸಿ ಮಿದುಳಿನ ಅದ್ಭುತ ರಹಸ್ಯಗಳನ್ನು ಭೇದಿಸಿದರು. ಆ ಪ್ರಯೋಗಗಳ ಸ್ಥೂಲ ಪರಿಚಯವನ್ನು ಮಾಡಿಕೊಳ್ಳೋಣ.ವಿಜ್ಞಾನಿಗಳು ಬಲಗಣ್ಣಿಗೆ ಮಾತ್ರ ಕಾಣುವ ಹಾಗೆ ಬೀಗದ ಕೈ (ಕೀ) ಎಂಬ ಶಬ್ದವನ್ನು ತೋರಿಸಿದರು. ಆ ಶಬ್ದವು ಬಲಗಣ್ಣಿನಿಂದ ಮಿದುಳಿನ ಎಡ ಅರೆಗೋಳಕ್ಕೆ ಹೋಯಿತು. ಎಡ ಅರೆಗೋಳದಲ್ಲಿ ವಾಕ್ ಕೇಂದ್ರವಿದೆ. ಹಾಗಾಗಿ ಪ್ರಯೋಗಕ್ಕೆ ಒಳಗಾಗಿದ್ದ ವ್ಯಕ್ತಿಯು ಬೀಗದ ಕೈ ಎಂದು ಹೇಳಿದ.

ಈಗ ಅದೇ ಬೀಗದ ಕೈ ಎನ್ನುವ ಶಬ್ದವನ್ನು ಎಡಗಣ್ಣಿಗೆ ಮಾತ್ರ ಕಾಣುವಂತೆ ತೋರಿಸಿದರು. ಬೀಗದ ಕೈ ಎನ್ನುವ ಶಬ್ದವು ಬಲ ಅರೆಗೋಳಕ್ಕೆ ಹೋಗಿ ತಲುಪಿತು. ಆದರೆ, ಮಾತಿನ ಕೇಂದ್ರವು ಎಡ ಅರೆಗೋಳದಲ್ಲಿತ್ತಲ್ಲವೆ! ಬಲ ಅರೆಗೋಳದಿಂದ ಮಾಹಿತಿಯು ಎಡ ಅರೆಗೋಳಕ್ಕೆ ಹೋಗದ ಹಾಗೆ ಅಡ್ಡ ನರದಿಂಡನ್ನು ಛೇದಿಸಲಾಗಿತ್ತಲ್ಲವೆ! ಹಾಗಾಗಿ ವ್ಯಕ್ತಿಗೆ ತಾನು ಓದುತ್ತಿರುವುದು ಬೀಗದ ಕೈ ಎನ್ನುವ ಶಬ್ದ ಎಂದು ಗೊತ್ತಿದ್ದರೂ ಆತ ಅದನ್ನು ಉಚ್ಚರಿಸಲಾಗದಾದ. ಏನು ಕಾಣುತ್ತಿದೆ ನಿಮಗೆ? ಎಂದು ಪ್ರಶ್ನೆಯನ್ನು ಕೇಳಿದಾಗ ಆತನು ನನಗೇನೂ ಕಾಣುತ್ತಿಲ್ಲ ಎಂಬ ಉತ್ತರವನ್ನು ನೀಡಿದ. ಅಂದರೆ ವ್ಯಕ್ತಿಯ ಮಿದುಳಿನ ಒಂದು ಅರೆಗೋಳಕ್ಕೆ ತಾನೇನು ನೋಡುತ್ತಿದ್ದೇನೆ ಎಂದು ತಿಳಿದಿತ್ತು. ಆದರೆ, ಅದೇನು ಎನ್ನುವುದನ್ನು ಹೇಳುವ ಸಾಮರ್ಥ್ಯವು ಮತ್ತೊಂದು ಅರೆಗೋಳಕ್ಕೆ ಇರಲಿಲ್ಲ ಎನ್ನುವ ತೀರ್ಮಾನಕ್ಕೆ ಬಂದರು!

ಪಾರ್ಲಿಮೆಂಟ್

ಬಲ ಅರೆಗೋಳವು ಯಾವುದೋ ಒಂದು ವಸ್ತುವನ್ನು ಎತ್ತಿಕೊಳ್ಳುವಂತೆ ಸೂಚಿಸುತ್ತದೆ. ಎಡ ಅರೆಗೋಳವು ಸೇಬನ್ನು ಎತ್ತಿಕೊಂಡಿತು. ತಾನು ಸೇಬನ್ನು ಎತ್ತಿಕೊಂಡಿದ್ದೇನೆ ಎಂಬ ವಿಚಾರವು ನಿಜಕ್ಕೂ ಎಡ ಅರೆಗೋಳಕ್ಕೆ ತಿಳಿದಿಲ್ಲ. ಆದರೂ ತಾನು ಏನನ್ನೋ ಎತ್ತಿಕೊಂಡಿದ್ದೇನೆ ಎನ್ನುವುದನ್ನು ಗ್ರಹಿಸಿ ಈ ಮಾವಿನ ಹಣ್ಣು ತುಂಬಾ ಚೆನ್ನಾಗಿದೆ. ಕೋಲಾರದ ಶ್ರೀನಿವಾಸಪುರದಲ್ಲಿ ಮಾವನ್ನು ಬೆಳೆಯುವ ತುಂಬಾ ತೋಟಗಳಿವೆ. ಈ ಸಲ ಮಾನ್ಸೂನ್ ಪೂರ್ವ ಮಳೆಯ ಕಾರಣ, ಆಲಿಕಲ್ಲಿಗೆ ಸಿಕ್ಕಿ ತುಂಬಾ ಮಾವು ಉದುರಿಹೋಯಿತು. ಹಾಗಾಗ ಬಾರದಿತ್ತು ಎಂದು ಕಥೆಯನ್ನು ಕಟ್ಟುತ್ತದೆ ವಾಕ್ ಕೇಂದ್ರವಿರುವ ಎಡ ಅರೆಗೋಳ! ಕೆಲವು ಸಲ ನಮ್ಮ ಮಿದುಳು ಏನೋ ಒಂದು ಕೆಲಸವನ್ನು ಮಾಡುತ್ತದೆ. ಆದರೆ ನಮ್ಮಲ್ಲಿರುವ ಪ್ರಜ್ಞೆಗೆ ಯಾಕೆ ಮಿದುಳು ಆ ಕೆಲಸವನ್ನು ಮಾಡಿತು ಎಂದು ನಿಖರವಾಗಿ ತಿಳಿದಿರುವುದಿಲ್ಲ. ಆದರೆ, ಕೆಲಸವನ್ನು ಆಗಲೇ ಮಾಡಿಮುಗಿಸಿರುವ ಕಾರಣ, ಅದಕ್ಕೆ ಏನೋ ಒಂದು ವಿವರಣೆಯನ್ನು ನಮ್ಮ ಪ್ರಜ್ಞೆಯು ಕೊಡುತ್ತದೆ. ನಮ್ಮ ಪ್ರಜ್ಞೆ ಎನ್ನುವುದು, ನಾನು ಹೇಳುವುದೇ ಅಂತಿಮ ಎಂದು ತೀರ್ಮಾನವನ್ನು ಕೊಡುವ ಮಹಾರಾಜನಲ್ಲ! ಪಾರ್ಲಿಮೆಂಟಿನಲ್ಲಿ ಹಲವು ಸಂಸದರು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಹೇಳುವ ಪ್ರಧಾನ ಮಂತ್ರಿಯಂತೆ! ಮಿದುಳಿನ ವಿವಿಧ ಭಾಗಗಳಿಂದ ಬರುವ ಮಾಹಿತಿಯನ್ನು, ಅನಿಸಿಕೆಯನ್ನು, ಪರ-ವಿರೋಧ ಅಭಿಪ್ರಾಯಗಳನ್ನೆಲ್ಲ ಕ್ರೋಢೀಕರಿಸಿ ನಮ್ಮ ಪ್ರಜ್ಞೆಯು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಚಿತ್ರವಿಚಿತ್ರ ಘಟನೆಗಳು

ಅಡ್ಡ ನರದಿಂಡು ಛೇದನಕ್ಕೆ ಒಳಗಾದ ರೋಗಿಗಳು ಅನೇಕ ಚಿತ್ರವಿಚಿತ್ರ ಕಥೆಗಳನ್ನು ಹೇಳಲಾರಂಭಿಸಿದರು. ಒಬ್ಬ ರೋಗಿಯ ಬಲಗೈ ತನ್ನ ಹೆಂಡತಿಯನ್ನು ಅಪ್ಪಿಕೊಳ್ಳಲು ಮುಂದಾಯಿತು. ಕೂಡಲೇ ಆತನ ಎಡಗೈ ಮುಂದೆಬಂದು, ಅಪ್ಪಿಕೊಳ್ಳಲು ಅವಕಾಶವನ್ನೇ ಕೊಡದಂತೆ ಆಕೆಯನ್ನು ದೂಡಿತು! ಅಡ್ಡನರದಿಂಡು ಛೇದನಕ್ಕೆ ಒಳಗಾದ ಒಬ್ಬ ವ್ಯಕ್ತಿಗೆ ಧೂಮಪಾನವೆಂದರೆ ಬಹಳ ಇಷ್ಟ. ಆತನ ಬಲಗೈ ಧೂಮಪಾನವನ್ನು ಮಾಡಲು ಸಿಗರೇಟ್ ಅನ್ನು ಎತ್ತಿಕೊಂಡಾಗ, ಅವನ ಎಡಗೈ ಬಲಗೈಯೊಡನೆ ಜಗಳವಾಡಿ ಸಿಗರೇಟನ್ನು ಕಿತ್ತು ಬಿಸಾಡಿತು. ಮತ್ತೊಬ್ಬ ವ್ಯಕ್ತಿಯ ಬಲಗೈ, ಅಂಗೈ ಗುಂಡಿಗಳನ್ನು ಬಿಚ್ಚುತ್ತಾ ಬಂದರೆ, ಎಡಗೈ ಅಂಗಿ ಗುಂಡಿಗಳನ್ನು ಹಾಕುತ್ತಾ ಬಂದಿತು! ಯಕ್ಷಪ್ರಶ್ನೆ! ಸ್ಪ್ಲಿಟ್ ಬ್ರೈನ್ ಪ್ರಯೋಗಗಳಿಂದ ಮನಸ್ಸು ಎನ್ನುವುದು ವಿಭಜನೆಗೊಳಗಾಗಲು ಸಾಧ್ಯ ಎನ್ನುವುದು ಅರ್ಥವಾಗಿದೆ. ಆದರೆ, ಆತ್ಮ ಎನ್ನುವುದು ಇದ್ದರೆ, ಅದೂ ವಿಭಜನೆಗೆ ಒಳಗಾಗುವುದೇ?

ಸಂಜೋಗ ಮುನ್ನುಡಿ: ಕೊಳಲು.com(edy)

ಪ್ರಸ್ತುತ ಒತ್ತಡದ ಬದುಕಿನಿಂದ ಕೆಲ ಹೊತ್ತಾದರೂ ಮುಕ್ತರಾಗಲು ನಗು ಒಂದು ಟಾನಿಕ್‌ನಂತೆ ಕೆಲಸ ಮಾಡುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕಳೆದ ಕೆಲವು ದಶಕಗಳಿಂದ, ನಾಡಿನ ಪ್ರಖ್ಯಾತ ಬಾನ್ಸುರಿ ವಾದಕ ಪಂ. ಪ್ರವೀಣ ಗೋಡಖಿಂಡಿ ಅವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಸಂಗೀತ ಕ್ಷೇತ್ರದಲ್ಲಿ ಅನುಪಮ ಕಾರ್ಯ ಮಾಡುತ್ತಿರುವ ಬೆಂಗಳೂರಿನ 'ಸಂಜೋಗ' ಸಂಸ್ಥೆ, ಇದೀಗ 'ಕೊಳಲು. com (edy)' ಎಂಬ ಲಘುಹಾಸ್ಯ ನಾಟಕದ ಮೂಲಕ ಮತ್ತೊಂದು ಆಯಾಮದಲ್ಲಿ ಕೆಲಸ ಮಾಡಲು ಸಿದ್ಧವಾಗಿದೆ.

ಪಂ. ಪ್ರವೀಣ ಗೋಡಖಿಂಡಿ ಅವರ ಕೊಳಲು ನುಡಿಸುವ ಕೈಗಳಿಂದ ಮೊದಲ ಬಾರಿಗೆ ರಚಿತವಾಗಿರುವ ಈ ನಾಟಕದ ತಾಲೀಮು ಆರಂಭಗೊಂಡಿದ್ದು, ಬರುವ ಜೂನ್ 12 ಮತ್ತು 13 ರಂದು ಬೆಂಗಳೂರಿನ ಎನ್‌ಆರ್ ಕಾಲೊನಿಯಲ್ಲಿರುವ ಡಾ. ಸಿ. ಅಶ್ವತ್ಥ ಕಲಾಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ಕೇವಲ ಎರಡು ಪಾತ್ರಗಳಿರುವ, ಸಂಗೀತ ಮತ್ತು ಹಾಸ್ಯದ ಜುಗಲಬಂದಿಯಲ್ಲಿ ಅನಾವರಣಗೊಳ್ಳುವ ಈ ನಾಟಕ ಸಂಗೀತವನ್ನೇ ಬದುಕನ್ನಾಗಿಸಿಕೊಂಡಿರುವ ಬ್ರಹ್ಮಚಾರಿ ಸಂಗೀತಗಾರ ಪ್ರದೀಪ ಬಾಡಗಂಡಿ ಮತ್ತು ಹೆಂಡತಿಯಿಂದ ದೂರವಾಗಿ ಯಾವುದೋ ಕಾರಣಕ್ಕಾಗಿ ಸಂಗೀತ ಕಲಿಯಲು ಅವರ ಬಳಿ ಬರುವ ಕಿಟ್ಟ್ಯಾ ಇವರ ನಡುವಿನ ಬದುಕಿನ ಸತ್ಯಗಳು ಮತ್ತು ಸಮಕಾಲೀನ ಸಂಗತಿಗಳನ್ನು ಅತ್ಯಂತ ನವಿರಾಗಿ ರಂಗದ ಮೇಲೆ ತೆರೆದಿಡುತ್ತದೆ. ಶಾಸ್ತ್ರೀಯ ಸಂಗೀತ ಮತ್ತು ಹಾಸ್ಯ ಸಂಗತಿಗಳೇ ಜೀವಾಳವಾಗಿರುವ ಈ ನಾಟಕ ಒಂದು ಹೊಸ ಅನುಭವ ನೀಡುವ ನಂಬಿಕೆ ತಂಡಕ್ಕಿದೆ. ಮೊಟ್ಟ ಮೊದಲ ಬಾರಿಗೆ ನಾಟಕ ರಚಿಸಿ, ಸಂಗೀತಗಾರ ಪ್ರದೀಪ ಬಾಡಗಂಡಿ ಪಾತ್ರದಲ್ಲಿ ಅಭಿನಯಿಸಿ, ನಿರ್ದೇಶಿಸಿದ್ದಾರೆ ಪಂ. ಪ್ರವೀಣ ಗೊಡಖಿಂಡಿ ಅವರು. ಅವರೊಂದಿಗೆ ನಾಡಿನ ಪ್ರಖ್ಯಾತ ನಗೆ ನಾಟಕಕಾರ, 'ಆಲ್ ದಿ ಬೆಸ್ಟ್', 'ಸಹಿ ರೀ ಸಹಿ', 'ಸೂಪರ್ ಸಂಸಾರ' ಸೇರಿದಂತೆ ಹಲವಾರು ನಗೆ ನಾಟಕಗಳ ಮೂಲಕವೇ ನಾಡಿನಾದ್ಯಂತ ಹೆಸರಾಗಿದ್ದ ದಿ. ಡಾ. ಯಶವಂತ ಸರದೇಶಪಾಂಡೆ ಅವರೊಂದಿಗೆ ಮೂರು ದಶಕಗಳಿಗೂ ಹೆಚ್ಚು ಕಾಲ ರಂಗಭೂಮಿಯಲ್ಲಿ ಕೆಲಸ ಮಾಡಿದ ಧಾರವಾಡದ ರವಿ ಕುಲಕರ್ಣಿ ಕಿಟ್ಟ್ಯಾನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಡಾ. ಯಶವಂತ ಸರದೇಶಪಾಂಡೆ ಅವರ ಮಾರ್ಗದರ್ಶನದಲ್ಲಿ ರೂಪಗೊಂಡು, ಅವರೇ ಅಭಿನಯಿಸಿ, ಪ್ರದರ್ಶನಗೊಳ್ಳಬೇಕಿದ್ದ ಈ ನಾಟಕ, ದುರದೃಷ್ಟವಶಾತ್ ಅವರ ಅಗಲಿಕೆಯಿಂದಾಗಿ ರಂಗದ ಮೇಲೆ ಬರಲು ಸಾಧ್ಯವಾಗಿರಲಿಲ್ಲ. ಇದೇ ಜೂನ್ 13 ರಂದು ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ, ಅವರ ಸ್ಮರಣೆಯಲ್ಲಿ, ರಂಗಭೂಮಿಗೆ ಅವರ ಕೊಡುಗೆಯನ್ನು ನೆನಪಿಸಿಕೊಳ್ಳುವ, ಅವರಿಗೆ ಗೌರವ ಸಲ್ಲಿಸುವ ಕಾರಣವಾಗಿ 'ಕೊಳಲು. com (edy)' ನಾಟಕ ಪ್ರದರ್ಶನಗೊಳ್ಳಲಿದೆ. ನಾಟಕಕ್ಕೆ ಕಿರಣ ಗೋಡಖಿಂಡಿ ಅವರ ಹಿನ್ನೆಲೆ ಸಂಗೀತ, ಷಡ್ಜ ಗೋಡಖಿಂಡಿ ಅವರ ಶೀರ್ಷಿಕೆ ಗೀತೆ, ಸಾರಿಕಾ ಪ್ರವೀಣ ಅವರ ವಸ್ತ್ರವಿನ್ಯಾಸ, ಪ್ರದೀಪ ಕುಲಕರ್ಣಿ ಮತ್ತು ಸಂಜೋಗ ಶಿಷ್ಯವೃಂದದ ಸಹಾಯದಿಂದ ಜೂನ್ 12 ಮತ್ತು 13 ರಂದು ಸಂಜೆ 6.30 ಕ್ಕೆ ಡಾ. ಸಿ. ಅಶ್ವತ್ಥ ಕಲಾಮಂದಿರ, ಎನ್.ಆರ್. ಕಾಲೊನಿ, ಬೆಂಗಳೂರು ಇಲ್ಲಿ ಪ್ರದರ್ಶನವಿದ್ದು, ಪ್ರವೇಶ ಪತ್ರಗಳನ್ನು Book my Showನಲ್ಲಿ ಕಾಯ್ದಿರಿಸಬಹುದು.

ಹಳೆಯ ದೇಗುಲಕ್ಕೆ ಹೊಸ ರೂಪ!

• ಅಜಯ್ ಅಂಚೆಪಾಳ್ಯ

ನಮ್ಮ ರಾಜ್ಯದಲ್ಲಿ ಹೊಯ್ಸಳರ ಕಾಲದ ಕೆತ್ತನೆಗಳು, ಹೊಳಪಿನ ಕಂಬಗಳ ವಾಸ್ತು ನಿರ್ಮಿತಿಗಳು ಹಲವು ರಚನೆಗಳು ಅಲ್ಲಲ್ಲಿ ಹರಡಿವೆ. ಕೆಲವು ಇಂದಿಗೂ ರಕ್ಷಣೆಯಲ್ಲಿವೆ. ಇನ್ನು ಕೆಲವು, ಚಾರಿತ್ರಿಕ ಕಾರಣಗಳಿಂದಾಗಿ ಪಾಳು ಬಿದ್ದಿವೆ. ಇತ್ತೀಚೆಗೆ ಅಂತಹ ಸ್ಥಳಗಳನ್ನು ಸ್ವಚ್ಛ ಮಾಡುವ ಉತ್ಸಾಹಿಗಳು ಅಲ್ಲಲ್ಲಿ ಚಟುವಟಿಕೆಯಿಂದಿದ್ದಾರೆ. ಹಾಸನ ಜಿಲ್ಲೆಯ ಹಿರೇಕಡಲೂರಿನ ಚನ್ನಕೇಶವ ದೇಗುಲವು ಒಂದು. ಪಾಳು ಬಿದ್ದ ವಾಸ್ತುರತ್ನ, ಅಪರೂಪದ ಕೆತ್ತನೆಗಳನ್ನು ಹೊಂದಿರುವ ನಿರ್ಮಿತಿ; ಅದರ ಆವರಣದ ಹೊರಭಾಗವು ಗಿಡ ಗಂಟಿಗಳಿಂದ ತುಂಬಿಹೋಗಿತ್ತು. ಗೋಪುರದ ಬಳಿಯೂ ಮುಳ್ಳುಗಿಡಗಳು ಬೆಳೆದಿದ್ದವು. 'ಪುನರಪಿ ಫೌಂಡೇಶನ್'ನ ಸದಸ್ಯರು ಈ ದೇಗುಲದ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಿ, ದೇಗುಲವು ಹೊರ ನೋಟಕ್ಕೆ ದಕ್ಕುವಂತೆ ಮಾಡಿದ್ದಾರೆ. ಮುಳ್ಳು ಗಿಡಗಳಿಂದ ತುಂಬಿದ್ದ ತಮ್ಮೂರಿನ ದೇಗುಲವನ್ನು ಯುವ ಜನತೆಯ ತಂಡವೊಂದು ಸ್ವಚ್ಛಗೊಳಿಸಿದ್ದನ್ನು ಕಂಡು ಆ ಹಳ್ಳಿಯ ಜನರು ಸಂತಸಪಟ್ಟು, ತಾವೂ ಸ್ವಯಂ ಸೇವಕರಾಗಿ ಕೈಜೋಡಿಸಿ, ಸಹಕರಿಸಿದ್ದಾರೆ. ಈಗ ಆ ಹಳ್ಳಿಯ ಜನರಲ್ಲಿ ಮತ್ತು ಪುರಾತನ ವಾಸ್ತುಶಿಲ್ಪದ ಅಭಿಮಾನಿಗಳಲ್ಲಿ ಇನ್ನೊಂದು ಆಸೆ, ಮೂಡಿದೆ: ಇಂತಹ ಸುಂದರ ವಾಸ್ತುನಿರ್ಮಿತಿಯ ಕೆಲವು ಭಾಗಗಳು ಕಾಲನ ಹೊಡೆತಕ್ಕೆ ಸಿಕ್ಕಿ ನಲುಗಿವೆ, ಕೆಲವು ಶಿಲಾ ನಿರ್ಮಿತಿಯ ಭಾಗಗಳು ಭಿನ್ನಗೊಂಡಿವೆ, ಕಿಡಿಗೇಡಿಗಳ ಕೈಯಲ್ಲಿ ವಿರೂಪಗೊಂಡಿವೆ; ಇವೆಲ್ಲವನ್ನೂ ಸರಿಪಡಿಸಲು, ವೈಜ್ಞಾನಿಕವಾಗಿ ಜೀರ್ಣೋದ್ಧಾರ ನಡೆಸುವ ಅಗತ್ಯವಿದೆ; ಅದನ್ನು ಸದ್ಯದಲ್ಲೇ ಕೈಗೊಳ್ಳಲು ಯಾರಾದರೂ ದಾನಿಗಳು ಮುಂದೆಬಂದಾರೆಯೇ ಎಂಬುದೇ ಅಂತಹ ನಿರೀಕ್ಷೆ, ಆಸೆ! ಹೊಯ್ಸಳ ಶಿಲ್ಪಗಳನ್ನು ಹೊಂದಿರುವ ಈ ವಾಸ್ತುನಿರ್ಮಿತಿಯ ಜೀರ್ಣೋದ್ಧಾರ ನಡೆಸಿ, ಮೂಲ ರೂಪದಲ್ಲೇ ಮರುನಿರ್ಮಿಸಿದರೆ, ಶತಮಾನಗಳ ಹಿಂದಿನ ಆ ಅಜ್ಞಾತ ಶಿಲ್ಪಿಗಳಿಗೆ ಧನ್ಯವಾದ ಸಲ್ಲಿಸಿದಂತಾಗುತ್ತದೆ, ಅಲ್ಲವೆ! ▸▸ ಚಿತ್ರ: ಶಶಿಧರ ಎಚ್.ಜಿ. ಮತ್ತು ಅಂತರ್ಜಾಲ

ಅದ್ಯಧಾರಾ ಸದಾಧಾರಾ: ಭೋಜಪ್ರಬಂಧದ ಅಮರ ಕಾವ್ಯ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಧಾರಾನಗರಿಯ ಅರಮನೆ ಅಂದು ಎಂದಿನಂತೆ ಕಾವ್ಯದ ಗಂಧದಿಂದ ಕಂಗೊಳಿಸುತ್ತಿತ್ತು. ಮಾಳವದೇಶದ ಅರಸ ಭೋಜರಾಜ ಸಿಂಹಾಸನದ ಮೇಲೆ ಕುಳಿತಿದ್ದರೂ, ಅವನ ದೃಷ್ಟಿ ಮಾತ್ರ ಅರಮನೆಯ ದ್ವಾರದ ಕಡೆಯೇ ಇತ್ತು. ರಾಜನಿಗೆ ರಾಜ್ಯದ ವೈಭವಕ್ಕಿಂತ, ಸಂಪತ್ತಿಗಿಂತ ತನ್ನ ಆಸ್ಥಾನದ ಕವಿಗಳು ಉಲಿಸುವ ಕಾವ್ಯದ ಸಾಲುಗಳೇ ಪರಮ ಆನಂದವನ್ನು ನೀಡುತ್ತಿದ್ದವು. ಆಸ್ಥಾನದಲ್ಲಿ ಕವಿಯೊಬ್ಬ ಪ್ರಾಸಬದ್ಧವಾದ, ಚಮತ್ಕಾರಭರಿತ ಪದ್ಯವೊಂದನ್ನು ವಾಚಿಸಿದಾಗ, ಭೋಜರಾಜ ಭಾವುಕನಾಗಿ ಎದ್ದು ನಿಂತು, ಅಕ್ಷರ ಲಕ್ಷ! ಎಂದು ಘೋಷಿಸಿದ. ಅಂದರೆ, ಆ ಪದ್ಯದ ಒಂದೊಂದು ಅಕ್ಷರಕ್ಕೂ ಒಂದೊಂದು ಲಕ್ಷದಂತೆ ಧನಸಹಾಯ! ಕಲೆಗೆ ಮತ್ತು ಸರಸ್ವತಿಯ ಪುತ್ರರಿಗೆ ರಾಜ ನೀಡುತ್ತಿದ್ದ ಗೌರವ ಅಂತಹದ್ದಾಗಿತ್ತು.

ಇಡೀ ಆಸ್ಥಾನದಲ್ಲಿ ಎಷ್ಟು ಜನ ಪಂಡಿತರಿದ್ದರೂ ಭೋಜರಾಜನ ಮನಸ್ಸು ಸದಾ ಹಂಬಲಿಸುತ್ತಿದ್ದುದು ಆ ಒಬ್ಬನಿಗಾಗಿ... ಅವನೇ 'ಕವಿರತ್ನ ಕಾಳಿದಾಸ.'

ಕಾಳಿದಾಸ ಮತ್ತು ಭೋಜರಾಜನ ಸ್ನೇಹವು ಕೇವಲ ಒಬ್ಬ ರಾಜ ಮತ್ತು ಆಸ್ಥಾನದ ಕವಿಯ ನಡುವಿನದ್ದಾಗಿರಲಿಲ್ಲ; ಅದು ಎರಡು ಶರೀರಗಳ ನಡುವಿನ ಒಂದೇ ಆತ್ಮದ ಬಂಧ. ಇತಿಹಾಸಕಾರರು ಕಾಳಿದಾಸನನ್ನು ಚಂದ್ರಗುಪ್ತ ವಿಕ್ರಮಾದಿತ್ಯನ ಕಾಲದವನೆಂದು ಕರೆದರೂ, ಸಾಹಿತ್ಯದ ಲೋಕ ಮಾತ್ರ ಇವರಿಬ್ಬರನ್ನೂ ಬೇರ್ಪಡಿಸಲಾಗದ ಜೋಡಿಯನ್ನಾಗಿ ನೋಡಿತ್ತು. ಒಮ್ಮೆ ಸಣ್ಣ ಮುನಿಸಿನಿಂದ ಕಾಳಿದಾಸ ಅರಮನೆ ತೊರೆದು ಹೋದಾಗ ಭೋಜರಾಜನಿಗೆ ಜಗತ್ತೇ ಶೂನ್ಯವೆನಿಸಿತು. ಕವಿ ಇಲ್ಲದ ಧಾರಾನಗರಿ ಅನಾಥವಾಯಿತು. ರಾಜನು ತನ್ನ ಗೆಳೆಯನನ್ನು ಮರಳಿ ಪಡೆಯಲು ಒಂದು ಕಠಿಣವಾದ ಒಗಟಿನ ಪದ್ಯವನ್ನು ಸಾರಿದನು. ವೇಷ ಮರೆಸಿಕೊಂಡು ದೇಶ ಸಂಚಾರ ಮಾಡುತ್ತಿದ್ದ ಕಾಳಿದಾಸ, ಆ ಒಗಟನ್ನು ಕೇಳಿ ಅದನ್ನು ಪೂರ್ಣಗೊಳಿಸಿ ಅರಮನೆಗೆ ಕಳುಹಿಸಿದನು. ಆ ಸಾಲುಗಳನ್ನು ನೋಡಿದ ತಕ್ಷಣ ಭೋಜರಾಜನ ಕಣ್ಣುಗಳು ಆನಂದಭಾಷ್ಪದಿಂದ ತುಂಬಿ ಬಂದವು. ಇದು ನನ್ನ ಕಾಳಿದಾಸನದೇ ಬರಹ! ಎಂದು ಓಡಿಹೋಗಿ ಗೆಳೆಯನನ್ನು ಆಲಿಂಗಿಸಿಕೊಂಡಾಗ ಇಡೀ ಆಸ್ಥಾನವೇ ಭಾವುಕವಾಯಿತು.

ಒಮ್ಮೆ ಭೋಜರಾಜನಿಗೆ ತೀವ್ರವಾದ ಶಿರೋವೇದನೆ ಕಾಣಿಸಿಕೊಂಡಿತು. ಅರಮನೆಯ ವೈದ್ಯರೆಲ್ಲ ಕೈಚೆಲ್ಲಿದಾಗ, ದೇವಲೋಕದ ವೈದ್ಯರಾದ ಅಶ್ವಿನೀ ದೇವತೆಗಳೇ ಭೂಮಿಗೆ ಬಂದರು. ರಾಜನಿಗೆ ಶಸ್ತ್ರಚಿಕಿತ್ಸೆ ಮಾಡುವುದು ಅನಿವಾರ್ಯವಾಗಿತ್ತು. ಆ ಭೀಕರ ನೋವನ್ನು ರಾಜ ತಡೆದುಕೊಳ್ಳಲೆಂದು ಅಶ್ವಿನೀ ದೇವತೆಗಳು ಒಂದು ಚಮತ್ಕಾರಿಕ ಚೂರ್ಣವನ್ನು ತಂದರು, ಅದೇ 'ಮೋಹಚೂರ್ಣ'. ಇಂದಿನ ಆಧುನಿಕ ವೈದ್ಯಕೀಯ ಜಗತ್ತಿನ ಅರಿವಳಿಕೆಯಂತೆ ಕಾರ್ಯನಿರ್ವಹಿಸುವ ಆ ಚೂರ್ಣವನ್ನು ರಾಜನ ಮೂಗಿಗೆ ಹಿಡಿಯಲಾಯಿತು. ರಾಜ ಗಾಢವಾದ ನಿದ್ರೆಗೆ ಜಾರಿದನು. ದೇವವೈದ್ಯರು ರಾಜನ ತಲೆಬುರುಡೆಯನ್ನು ತೆರೆದು, ರೋಗವನ್ನು ನಿವಾರಿಸಿ, ಪುನಃ ಗಾಯವನ್ನು ಮಾಯಿಸಿ ಎಚ್ಚರಿಸಿದರು. ರಾಜ ಕಣ್ಣು ಬಿಟ್ಟಾಗ ಅವನಿಗೆ ಎದುರಿಗೆ ಮೊದಲು ಕಂಡದ್ದೇ ಕಾಳಿದಾಸನ ಮುಖ.



ಕಾಲ ಉರುಳಿತು. ಒಮ್ಮೆ ಕಾಳಿದಾಸನಿಗೆ ತನ್ನ ಮೇಲಿರುವ ಸ್ನೇಹದ ಆಳ ಎಷ್ಟು ಎಂಬುದನ್ನು ಪರೀಕ್ಷಿಸಲು ಭೋಜರಾಜನಿಗೆ ಒಂದು ಚೇಷ್ಟೆಯ ಆಲೋಚನೆ ಬಂದಿತು. ತಾನು ನಿಧನನಾಗಿದ್ದೇನೆ ಎಂಬ ಸುಳ್ಳು ಸುದ್ದಿಯನ್ನು ಭೋಜರಾಜನೇ ಹರಡಿಸಿದನು. ಈ ಆಘಾತಕಾರಿ ಸುದ್ದಿಯನ್ನು ಕೇಳಿದ ತಕ್ಷಣ, ಮಹಾಕವಿ ಕಾಳಿದಾಸನ ಹೃದಯವೇ ಒಡೆದುಹೋದಂತಾಯಿತು. ಆ ತೀವ್ರ ಆಘಾತದಲ್ಲಿ ಕಾಳಿದಾಸನ ಬಾಯಿಂದ ಭೋಜರಾಜನನ್ನು ಕುರಿತು ಆ ಪ್ರಸಿದ್ಧ ಚರಮಶ್ಲೋಕ ಹೊರಟಿತು:

'ಅದ್ಯ ಧಾರಾ ನಿರಾಧಾರಾ ನಿರಾಲಂಬಾ ಸರಸ್ವತೀ...' (ಇಂದಿಗೆ ಧಾರೆಗೆ ಇದ್ದ ಆಧಾರ ಕಳಚಿಹೋಯಿತು, ಭೋಜರಾಜನಿಲ್ಲದ ಈ ಜಗತ್ತಿನಲ್ಲಿ ಸರಸ್ವತಿಯೂ ನಿರಾಶ್ರಿತಳಾದಳು!)

ತನ್ನ ಗೆಳೆಯ ತನಗಾಗಿ ಕಣ್ಣೀರು ಹಾಕುತ್ತಾ ಹಾಡಿದ ಆ ಶ್ಲೋಕವನ್ನು ಕೇಳಿ, ಭೋಜರಾಜನು ತಕ್ಷಣವೇ ವೇಷ ಮರೆಸಿಕೊಂಡಿದ್ದ ಜಾಗದಿಂದ ಹೊರಬಂದು ಕಾಳಿದಾಸನನ್ನು ಗಟ್ಟಿಯಾಗಿ ಅಪ್ಪಿಕೊಂಡನು. ತನ್ನ ಗೆಳೆಯ ಬದುಕಿ ಬಂದದ್ದನ್ನು ಕಂಡು ಆನಂದತುಂದಿಲನಾದ ಕಾಳಿದಾಸ, ತಕ್ಷಣವೇ ಆ ಶ್ಲೋಕದ ಸಾಲನ್ನು ಬದಲಾಯಿಸಿ ಹೀಗೆ ಪೂರ್ಣಗೊಳಿಸಿದನು:

'ಅದ್ಯಧಾರಾ ಸದಾಧಾರಾ ಸದಲಂಬಾ ಸರಸ್ವತೀ...' (ಅಂದರೆ, ಭೋಜರಾಜ ಮರಳಿ ಬಂದಿದ್ದಾನೆ! ಇನ್ನು ಧಾರೆಗೆ ಸದಾ ಆಧಾರವಿದೆ, ಸರಸ್ವತಿಯೂ ಸನಾಥಳಾದಳು!)

ಬಲ್ಲಾಳಸೇನನ 'ಭೋಜಪ್ರಬಂಧ'ದಲ್ಲಿ ಕಾವ್ಯ, ವಿಜ್ಞಾನ, ಚಮತ್ಕಾರ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಸಾಹಿತ್ಯ ಮತ್ತು ನಿಷ್ಕಲ್ಮಶವಾದ ಸ್ನೇಹದ ಮೇಲಿನ ಪ್ರೀತಿಯನ್ನು ಸಾರುವ ಒಂದು ಅಮರ ಕಾವ್ಯವಾಗಿ ಈ ವಿಷಯಗಳು ಇಂದಿಗೂ ಸಾಹಿತ್ಯಾಸಕ್ತರ ಮನಸ್ಸಿನಲ್ಲಿ ಉಳಿದಿದೆ. ಇಂತಹ ಅಪರೂಪದ ಸ್ನೇಹ, ಸಜ್ಜನರ ಸಹವಾಸ ನಿಜ ಜೀವನದಲ್ಲೂ ನಮ್ಮೆಲ್ಲರಿಗೂ ಸಿಗುವಂತಾಗಲಿ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಅನ್ಯರ ಮೇಲೆ ನಂಬಿಕೆ ಇಲ್ಲದಿರುವಿಕೆ (4)
6. ಅಸ್ತವ್ಯಸ್ತವಾಗಿ ಬಂದಿರುವ ಐಶ್ವರ್ಯ (3)
8. ಬಿಡುವಿದ್ದಾಗ ಬಂದಿರುವ ಅಗಸ (3)
9. ಕೊಂಡುಕೊಳ್ಳುವ ವಸ್ತುವಿನ ಮೇಲೆ ಸಿಕ್ಕಿದ ಸೋಡಿ (4)
11. ತೊಂದರೆ ಎನ್ನಲು ಎರಡಕ್ಷರ ಸಾಕು (2)
12. ಜ್ಞಾನ ಅಥವಾ ಅರಿವು (5)
15. ಬಿಳಿಯ ವಿರುದ್ಧ ಪದ (2)
17. ಹಕ್ಕಿಗಳ ಇಂಪಾದ ಧ್ವನಿ (4)
19. ಮಾಡುವ ರೀತಿ ಕೊನೆಗೆ ದೀರ್ಘವಾಗಿ ಬಂದಿದೆ (3)
21. ನಿರುತ್ಸಾಹ ಅಥವಾ ಬುದ್ಧಿಗೆ ಕವಿದಿರುವ ಮಂಕು (3)
22. ಕೈವಶ ಅಥವಾ ಅಧೀನ ಎಂದರ್ಥ (4)

ಮೇಲಿಂದ ಕೆಳಕ್ಕೆ

1. ಅಂಜಿಕೆಯಿಲ್ಲದೆ ಬಂದಿದ್ದಾಳೆ ಕಣಿ ಹೇಳುವವಳು (4)
3. ಅಂತಿಮವಾಗಿ ಹೇಳಿದ ಬೀಳ್ಕೊಡುಗೆ (3)
4. ಕೊರಳಿಗೆ ಹಾಕುವ ಹಾರ (2)
5. ಮನಸ್ಸಿನ ಒಳಗಿನ ಘರ್ಷಣೆ (4)
7. ಯಾವುದೇ ವಿಷಯದಲ್ಲಿನ ಪ್ರಾವೀಣ್ಯತೆ (4)
10. ಅಸ್ತವ್ಯಸ್ತವಾಗಿ ಬಂದಿರುವ ಜ್ಞಾನ (3)
13. ಆನಂತರ ಎನ್ನುವುದು ಇಲ್ಲಿ ಚೆಲ್ಲಾಪಿಲ್ಲಿಯಾಗಿದೆ (3)
14. ತಲೆಕೆಳಗಾಗಿ ಬಂದಿರುವ ತೆರೆ ಅಥವಾ ಪರದೆ (4)
15. ಲಲಿತಕಲೆಗಳನ್ನು ತಿಳಿದವನು (4)
16. ಸಿನೆಮಾ ರಂಗವು ಹಿರಿತೆರೆಯಾದರೆ, ದೂರದರ್ಶನವೇನು? (4)
18. ಸುವಾಸನೆಯುಳ್ಳ ಒಂದು ಸಂಬಾರ ಪದಾರ್ಥ (3)
20. ನಾಯಕನಲ್ಲಿದೆ ಸ್ವರ್ಗ! (3)

ಸರಿಯುತ್ತರಗಳು

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್

ಸಾಯಿ ಸುದರ್ಶನ್
ಗುಜರಾತ್

ಪರ್ಪಲ್ ಕ್ಯಾಪ್

ಭುವನೇಶ್ವರ್ ಕುಮಾರ್
ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
Q ಬೆಂಗಳೂರು	14	9	5	18
Q ಗುಜರಾತ್	14	9	5	18
Q ಹೈದರಾಬಾದ್	14	9	5	18
Q ರಾಜಸ್ಥಾನ್	13	7	6	14
ಪಂಜಾಬ್	13	6	6	13
ಕೋಲ್ಕತಾ	13	6	6	13
ಚೆನ್ನೈ	14	6	8	12
ಡೆಲ್ಲಿ	13	6	7	12
ಮುಂಬೈ	12	4	9	8
ಲಖನೌ	13	4	9	8

ಸಮಾಚಾರ ಸಣ್ಣದಲ್ಲ

ಮುಂಬೈ ತೊರೆದು ಚೆನ್ನೈ ಸೇರುತ್ತಾರಾ ಹಾರ್ದಿಕ್?

ಮುಂಬೈ: ಸತತ 2 ಆವೃತ್ತಿಗಳಲ್ಲಿ ಮುಂಬೈ ಇಂಡಿಯನ್ಸ್ ತಂಡ ಕಳಪೆ ಪ್ರದರ್ಶನ ತೋರಿ, ಲೀಗ್ ಹಂತದಲ್ಲೇ ಐಪಿಎಲ್‌ನಿಂದ ಹೊರಬಿದ್ದಿದೆ. ಇದರ ಬೆನ್ನಲ್ಲೇ ನಾಯಕ ಹಾರ್ದಿಕ್ ಪಾಂಡ್ಯ ಮುಂಬೈ ತಂಡದಲ್ಲಿ ಆಡುವ ಬಗ್ಗೆಯೇ ಅನುಮಾನವಿದೆ. ಅವರೀಗ ಮುಂಬೈಯನ್ನು ತೊರೆದು ನಾಯಕನಿಗಾಗಿ ಹುಡುಕಾಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ಸೇರಿಕೊಳ್ಳಲಿದ್ದಾರೆಂಬ ಗುಸುಗುಸು ಶುರುವಾಗಿದೆ. ಇದಕ್ಕೆ ಸರಿಯಾಗಿ ಹಾರ್ದಿಕ್ ಪಾಂಡ್ಯ ಅವರ ಇನ್ಸ್ಟಾಗ್ರಾಮ್ ಸ್ಟೋರಿಯೊಂದರಲ್ಲಿ, ಸಿನಿಮಾ ಪ್ಲೇ ಆಗುತ್ತಿರುವ ಲ್ಯಾಪ್‌ಟಾಪ್, ನೋಟ್ ಬುಕ್, ಪೆನ್ನು ಮತ್ತು ಅವರ ಮೊಬೈಲ್ ಫೋನ್ ಇತ್ತು. ಆದಾಗ್ಯೂ ಅಭಿಮಾನಿಗಳ ಗಮನ ಸೆಳೆದದ್ದು ಫೋನ್ ಪರದೆಯಲ್ಲಿ ಪ್ರದರ್ಶಿಸಲಾದ ಸಮಯ. ಸಮಯ '07:07' ಎಂದು ತೋರಿಸಿದೆ. ಧೋನಿ 7ನೇ ಸಂಖ್ಯೆಯ ಜೆರ್ಸಿಯಿಂದಲೇ ಗಮನ ಸೆಳೆದಿರುವುದರಿಂದ, ಅಭಿಮಾನಿಗಳು ಇದಕ್ಕೂ ಧೋನಿಗೂ ಸಂಪರ್ಕ ಕಲ್ಪಿಸಿದ್ದಾರೆ. ಈ ಸಂದೇಶವು ಹಾರ್ದಿಕ್ ಭವಿಷ್ಯದಲ್ಲಿ ಚೆನ್ನೈಗೆ ತೆರಳುವ ಸಾಧ್ಯತೆಯನ್ನು ಸೂಚಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

ಜೂ.4ರಿಂದ 8 ಯೋಗಾಸನ ವಿಶ್ವಚಾಂಪಿಯನ್‌ಶಿಪ್

ಬೆಂಗಳೂರು: ಯೋಗಾಸನವನ್ನು ಸ್ಪರ್ಧಾತ್ಮಕ ಕ್ರೀಡೆಯಾಗಿ ರೂಪಿಸುವ ಸಲುವಾಗಿ ಮೊದಲ ಜಾಗತಿಕ ಪಂದ್ಯಾವಳಿ ಜೂ.4ರಿಂದ 8ರವರೆಗೆ ಅಹ್ಮದಾಬಾದ್‌ನ ಏಕ ಅಂಕಣದಲ್ಲಿ ನಡೆಯಲಿದೆ. ಈ ಸಂಬಂಧ 'ವಿಶ್ವ ಯೋಗಾಸನ ಚಾಂಪಿಯನ್‌ಶಿಪ್-2026'ಕ್ಕೆ ಮಂಗಳವಾರ ದೆಹಲಿಯಲ್ಲಿ ಅಧಿಕೃತವಾಗಿ ಚಾಲನೆ ನೀಡಲಾಯಿತು. ಕೇಂದ್ರ ಕ್ರೀಡಾ ಸಚಿವರಾದ ಡಾ. ಮನ್ಸುಖ್ ಮಾಂಡವೀಯ ಅವರು ವಿವಿಧ ಯೋಗ ಒಕ್ಕೂಟಗಳ ಪ್ರಮುಖರ ಸಮ್ಮುಖದಲ್ಲಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜೂನ್ 4 ರಿಂದ 8, 2026ರವರೆಗೆ ನಡೆಯುವ ವಿಶ್ವಚಾಂಪಿ ಯನ್‌ಶಿಪ್‌ನಲ್ಲಿ ಉಗಾಂಡ, ಜಾಂಬಿಯಾ, ಶ್ರೀಲಂಕಾ, ನೇಪಾಳ, ಕೀನ್ಯಾ, ಜಪಾನ್, ಒಮಾನ್, ಮಾರಿಷಸ್ ಮತ್ತು ನೆದರ್ಲೆಂಡ್ ಸೇರಿದಂತೆ 60ಕ್ಕೂ ಹೆಚ್ಚು ದೇಶಗಳ ಪ್ರಮುಖ ಯೋಗಾಸನ ಪಟುಗಳು ಮತ್ತು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಈ ಉದ್ಘಾಟನಾ ಸಮಾರಂಭದಲ್ಲಿ ಪಂದ್ಯಾವಳಿಯ ಲಾಂಛನ, ವಿಜೇತರಿಗೆ ನೀಡುವ ಟ್ರೋಫಿ, ಆಟಗಾರರ ಜೆರ್ಸಿ ಮತ್ತು 'ವೀರ' ಎಂಬ ಸಿಂಹದ ಕ್ರೀಡಾಲಾಂಛನವನ್ನು ಬಿಡುಗಡೆ ಮಾಡಲಾಯಿತು. ಕೇಂದ್ರ ಕ್ರೀಡಾ ಸಚಿವಾಲಯ, ಆಯುಷ್ ಸಚಿವಾ ಲಯ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರಗಳ ಸಹಕಾರದೊಂದಿಗೆ ಗುಜರಾತ್ ಸರಕಾರ, ಗುಜರಾತ್ ಪ್ರವಾಸೋದ್ಯಮ ಇಲಾಖೆ ಮತ್ತು ಗುಜರಾತ್ ಯೋಗಾ ಸನ ಕ್ರೀಡಾ ಸಂಸ್ಥೆಗಳು ಸಹ ಕೈಜೋಡಿಸಿವೆ. ಕ್ರೀಡಾ ಸಚಿವರಾದ ಡಾ. ಮನ್ಸುಖ್ ಮಾಂಡವೀಯ ಅವರು ಮಾತನಾಡಿ, ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ಯೋಗವನ್ನು ಇಡೀ ಜಗತ್ತಿಗೆ ಉಡುಗೊರೆಯಾಗಿ ನೀಡಿದೆ ಎಂದರು.

ಆರ್‌ಸಿಬಿ ಫೈನಲ್‌ಗೆ

1ನೇ ಕ್ವಾಲಿಫೈಯರ್: ಗುಜರಾತ್ ವಿರುದ್ಧ 92 ರನ್ ಜಯ

ಆರ್‌ಸಿಬಿ ಸತತ 2ನೇ ಫೈನಲ್, 2ನೇ ಪ್ರಶಸ್ತಿ ಮೇಲೆ ಕಣ್ಣು

ಸ್ಫೋಟಿಸಿದ ರಜತ್ (93) | ಗುಜರಾತ್ 2ನೇ ಕ್ವಾಲಿಫೈಯರ್‌ಗೆ

ಧರ್ಮಶಾಲಾ: ಹಿಮಾಚಲಪ್ರದೇಶದ ಪುಟ್ಟ ಮೈದಾನವಾದ ಧರ್ಮಶಾಲಾದಲ್ಲಿ ಮಂಗಳವಾರ ನಡೆದ ಐಪಿಎಲ್ 1ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಆರ್‌ಸಿಬಿ 92 ರನ್‌ಗಳಿಂದ ಗೆಲುವು ಸಾಧಿಸಿದೆ. ಇಲ್ಲಿಗೆ ಸತತ 2ನೇ ವರ್ಷ ಐಪಿಎಲ್ ಫೈನಲ್‌ಗೇರಿದೆ. 2025ರಲ್ಲಿ ಫೈನಲ್‌ಗೇರಿದ್ದ ಅದು ಪ್ರಶಸ್ತಿ ಗೆದ್ದಿತ್ತು. ಈ ಬಾರಿಯೂ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ. ಸೋತ ಗುಜರಾತ್ ಮೇ 29ರಂದು 2ನೇ ಕ್ವಾಲಿಫೈಯರ್‌ನಲ್ಲಿ ಆಡಲಿದೆ. ಅಲ್ಲಿ ಗೆದ್ದರೆ ಆಗಲೂ ಫೈನಲ್‌ಗೇರಲು ಅವಕಾಶವಿದೆ.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 254 ರನ್ ಗಳಿಸಿತು. ಇದನ್ನು ಬೆನ್ನತ್ತಿದ ಗುಜರಾತ್ ಟೈಟಾನ್ಸ್ ಪಟಪಟನೇ ವಿಕೆಟ್ ಕಳೆದುಕೊಂಡು 19.3 ಓವರ್‌ಗಳಲ್ಲಿ 162 ರನ್‌ಗಳಿಗೆ ಆಟ ಮುಗಿಸಿತು. ಗುಜರಾತ್ ಮೊದಲನೇ ವಿಕೆಟ್ ಹಿಟ್ ವಿಕೆಟ್ ರೂಪದಲ್ಲಿ ಉರುಳಿತು. ಪ್ರಮುಖ ಬ್ಯಾಟರ್ ಸಾಯಿ ಸುದರ್ಶನ್ ಹೀಗೆ ಔಟಾಗಿದ್ದು, ತಂಡದ ಮುಂದಿನ ಸ್ಥಿತಿಯನ್ನು ಸೂಚಕವಾಗಿ ತಿಳಿಸಿದಂತಿತ್ತು. ಅನಂತರ ಅದು ಚೇತರಿಸಿಕೊಳ್ಳಲೇ ಇಲ್ಲ. 9ನೇ ವಿಕೆಟ್‌ಗೆ ರಾಹುಲ್ ತೆವಾತಿಯಾ, ಬೌಲರ್ ಮೊಹಮ್ಮದ್ ಸಿರಾಜ್ ಜೊತೆಗೂಡಿ 68 ರನ್ ಒಗ್ಗೂಡಿಸಿದರು. ಇದೊಂದೇ ತಂಡದಲ್ಲಿ ಕಂಡುಬಂದ ಹೋರಾಟಕಾರಿ ಆಟ. ತೆವಾತಿಯಾ ಅದ್ಭುತವಾಗಿ ಬ್ಯಾಟ್ ಬೀಸಿ 43 ಎಸೆತಗಳಲ್ಲಿ 68 ರನ್ ಚಚ್ಚಿದ್ದರು. ಇದರಲ್ಲಿ 8 ಬೌಂಡರಿ, 4 ಸಿಕ್ಸರ್‌ಗಳಿದ್ದವು.

ಸಿಡಿದ ರಜತ್: ಆರ್‌ಸಿಬಿ ಇನಿಂಗ್ಸ್ ಆರಂಭದಲ್ಲಿ ವಿರಾಟ್ ಕೊಹ್ಲಿ ಸಿಡಿದರು. ಮಧ್ಯಮಕ್ರಮಾಂಕದಲ್ಲಿ ನಾಯಕ ರಜತ್ ಪಾಟೀದಾರ್ ಅತ್ಯಮೋಘ ಇನಿಂಗ್ಸ್ ಒಂದನ್ನು ಕಟ್ಟಿದರು. ಕೃಣಾಲ್ ಪಾಂಡ್ಯ ಸ್ಫೋಟಿಸಿದ ಇನ್ನೊಬ್ಬ ಬ್ಯಾಟರ್. ತಂಡದ 2ನೇ ಓವರ್ ಅಂತ್ಯಕ್ಕೆ ವೆಂಕಟೇಶ್ ಅಯ್ಯರ್ ರೂಪದಲ್ಲಿ ಮೊದಲ ವಿಕೆಟ್ ಉರುಳಿತು. ಅಯ್ಯರ್ 7 ಎಸೆತಗಳಲ್ಲಿ 19 ರನ್ ಚಚ್ಚಿ ಔಟಾದರು.

ಮತ್ತೊಂದು ಕಡೆ ಕೊಹ್ಲಿ ಸಿಡಿಯುತ್ತಲೇ ಸಾಗಿದರು. ಅವರು 25 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್‌ಗಳೊಂದಿಗೆ 43 ರನ್ ಚಚ್ಚಿ ಬೌಲ್ಡ್ ಆದರು. ದೇವದತ್ತ ಪಡಿಕ್ಕಲ್ 30 ರನ್ ಗಳಿಸಿ ಹೊರನಡೆದರು. 4ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಾಯಕ ರಜತ್ ಇಡೀ ಪಂದ್ಯದ ದಿಕ್ಕನ್ನೇ ಬದಲಿಸಿದರು. ಗುಜರಾತ್ ಬೌಲರ್‌ಗಳಿಗೆ ಚಳಿಜ್ವರ ಬರಿಸಿದರು. ರಜತ್ ಎಲ್ಲ ಪರಿಸ್ಥಿತಿಯನ್ನೂ ನಿಭಾಯಿಸಬಲ್ಲ ಬ್ಯಾಟರ್, ಅಷ್ಟೇ ಶಾಂತಸ್ವಭಾವಿ. ಅದು ಮಂಗಳವಾರದ ಪಂದ್ಯದಲ್ಲೂ ವ್ಯಕ್ತವಾಯಿತು.

ಸಿಡಿಯುತ್ತಲೇ ಸಾಗಿದ ಅವರು 33 ಎಸೆತಗಳಲ್ಲಿ ಬಿರುಗಾಳಿಯಂತೆ 93 ರನ್ ಚಚ್ಚಿದರು. ಇದರಲ್ಲಿ 5 ಬೌಂಡರಿ, 9 ಸಿಕ್ಸರ್‌ಗಳು ಸೇರಿದ್ದವು. ಅವರು 4ನೇ ವಿಕೆಟ್‌ಗೆ ಕೃಣಾಲ್ ಪಾಂಡ್ಯ ಜೊತೆಗೂಡಿ 95 ರನ್ ಒಟ್ಟು ಮಾಡಿದರು. 6ನೇ ವಿಕೆಟ್‌ಗೆ ಜಿತೇಶ್ ಶರ್ಮಾರೊಂದಿಗೆ 40 ರನ್ ಸೇರಿಸಿದರು. ಕೊನೆಯ ಎಸೆತದವರೆಗೂ ಅವರನ್ನು ತಡೆಯಲು ಗುಜರಾತ್ ಬೌಲರ್‌ಗಳಿಗೆ ಆಗಲಿಲ್ಲ. ಕೊನೆಯ ಹಂತದಲ್ಲಿ ಗುಜರಾತ್ ರನ್ ನಿಯಂತ್ರಿಸಬಹುದೆನ್ನುವುದಕ್ಕೂ ರಜತ್ ಅವಕಾಶ ನೀಡಲಿಲ್ಲ.

ಕ್ರೀಸ್‌ಗಿಳಿದ ಎಲ್ಲ ಬ್ಯಾಟರ್‌ಗಳು ಚಚ್ಚಬೇಕು ಎಂಬ ಒಂದೇ ಉದ್ದೇಶದಲ್ಲಿ ಆಡಿದರು. ಜಿತೇಶ್ ಶರ್ಮಾ ಬರೀ 5 ಎಸೆತಗಳಲ್ಲಿ 15 ರನ್ ಸಿಡಿಸಿದರು. ಇದರಲ್ಲಿ 1 ಬೌಂಡರಿ, 1 ಸಿಕ್ಸರ್ ಸೇರಿತ್ತು. ಗುಜರಾತ್‌ನ ಯಾವುದೇ ಬೌಲರ್‌ಗಳು ನಿಯಂತ್ರಿತ ದಾಳಿ ನಡೆಸಲಿಲ್ಲ. ತಂಡದ ಪ್ರಮುಖ ವೇಗಿ ಕಗಿಸೋ ರಬಾಡ 2 ವಿಕೆಟ್ ಪಡೆದರೂ ಅದಕ್ಕಾಗಿ 54 ರನ್ ನೀಡಿದರು. ಪ್ರಸಿದ್ಧಕೃಷ್ಣ 53 ರನ್ ನೀಡಿ ಬರೀ 1 ವಿಕೆಟ್ ಪಡೆದರು. ಇದ್ದಿದ್ದರಲ್ಲಿ ಜೇಸನ್ ಹೋಲ್ಡರ್ ಪರ್ವಾಗಿಲ್ಲ ಎನ್ನುವಂತೆ ಬೌಲಿಂಗ್ ದಾಳಿ ಮಾಡಿದರು. ಅವರು 39 ರನ್ ನೀಡಿ 2 ವಿಕೆಟ್ ಪಡೆದರು.

282 ವಿರಾಟ್ ಕೊಹ್ಲಿ ಐಪಿಎಲ್ ಪಂದ್ಯಗಳ ಸಂಖ್ಯೆ. ಈ ಮೂಲಕ ಗರಿಷ್ಠ ಐಪಿಎಲ್ ಪಂದ್ಯಗಳನ್ನಾಡಿದ ದಾಖಲೆ ನಿರ್ಮಿಸಿದರು. 281 ಪಂದ್ಯವಾಡಿದ ರೋಹಿತ್ ಹೆಸರಲ್ಲಿ ದಾಖಲೆಯಿತ್ತು.

416 ಆರ್‌ಸಿಬಿ, ಗುಜರಾತ್ ಆಡಿದ ಪಂದ್ಯವೊಂದರಲ್ಲಿ ದಾಖಲಾದ ಗರಿಷ್ಠ ಅಗ್ರಿಗೇಟ್ ಇದು.

4 ಸತತ 2 ಬಾರಿ ಐಪಿಎಲ್ ಫೈನಲ್‌ಗೇರಿದ 4ನೇ ತಂಡ ಆರ್‌ಸಿಬಿ. ಚೆನ್ನೈ, ಗುಜರಾತ್, ಮುಂಬೈ ಈ ಸಾಧನೆ ಮಾಡಿದ ಹಿಂದಿನ 3 ತಂಡಗಳು.

5 ಫೈನಲ್, 1 ಪ್ರಶಸ್ತಿ

2009, 2011, 2016, 2025ರಂದು ಆರ್‌ಸಿಬಿ ಫೈನಲ್‌ಗೇರಿತ್ತು. 2025ರಲ್ಲಿ ಮಾತ್ರ ಪ್ರಶಸ್ತಿ ಗೆದ್ದಿತ್ತು. ಈ ಬಾರಿ ಮತ್ತೆ ಫೈನಲ್‌ಗೇರಿದೆ.

ಸ್ಥಿತ್ಯಂತರ

ಬೃಹತ್ ಮೊತ್ತ ಬೆನ್ನತ್ತಿ ಹೊರಟ ಗುಜರಾತ್ ಮೊದಲ ವಿಕೆಟ್ 17 ರನ್‌ಗೆ ಹಿಟ್ ವಿಕೆಟ್ (ಸಾಯಿ ಸುದರ್ಶನ್) ರೂಪದಲ್ಲಿ ಉರುಳಿತು. ತಂಡದ ಮೊತ್ತ 51 ರನ್‌ಗಳಾಗಿದ್ದಾಗ 3 ವಿಕೆಟ್‌ಗಳು ಉರುಳಿದವು. ಇದರ ಪರಿಣಾಮ 88 ರನ್‌ಗಳಾಗುವಾಗ 8 ವಿಕೆಟ್ ಉದುರಿಸಿಕೊಂಡಿತು. ಇದು ಗುಜರಾತ್ ಸೋಲಿನಲ್ಲಿ ನಿರ್ಣಾಯಕ

ಸ್ಕೋರ್ ಬೋರ್ಡ್

ಆರ್‌ಸಿಬಿ 254/5 20 ಓವರ್

ವೆಂಕಟೇಶ್ ಅಯ್ಯರ್ ಸಿ ಗಿಲ್ ಬಿ ರಬಾಡ	19
ವಿರಾಟ್ ಕೊಹ್ಲಿ ಬಿ ಹೋಲ್ಡರ್	43
ದೇವದತ್ತ ಪಡಿಕ್ಕಲ್ ಸಿ ಬಟ್ಲರ್ ಬಿ ಹೋಲ್ಡರ್	30
ರಜತ್ ಪಾಟೀದಾರ್ ಅಜೇಯ	93
ಕೃಣಾಲ್ ಸಿ ಸುದರ್ಶನ್ ಬಿ ರಬಾಡ	43
ಟಿಮ್ ಡೇವಿಡ್ ಬಿ ಪ್ರಸಿದ್ಧ್‌ಕೃಷ್ಣ	4
ಜಿತೇಶ್ ಶರ್ಮಾ ಅಜೇಯ	15
ಇತರೆ	7

ಗುಜರಾತ್ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಮೊಹಮ್ಮದ್ ಸಿರಾಜ್	3	0	46	0
ಕಗಿಸೋ ರಬಾಡ	4	0	54	2
ಜೇಸನ್ ಹೋಲ್ಡರ್	4	0	39	2
ರಶೀದ್ ಖಾನ್	3	0	29	0
ಪ್ರಸಿದ್ಧ್‌ಕೃಷ್ಣ	4	0	53	1
ಖೆಜ್ರೊಲಿಯಾ	2	0	31	0

ವಿಕೆಟ್ ಪತನ : 1-21, 2-93, 3-94, 4-189, 5-214

ಗುಜರಾತ್ 19.3 162/10 ಓವರ್

ಸುದರ್ಶನ್ ಹಿಟ್‌ವಿಕೆಟ್ ಬಿ ಡಫಿ	14
ಶುಭಮನ್ ಗಿಲ್ ಬಿ ಕುಮಾರ್	2
ಜೋಸ್ ಬಟ್ಲರ್ ಬಿ ಹೇಜಲ್‌ವುಡ್	29
ನಿಶಾಂತ್ ಸಿ ಮತ್ತು ಬಿ ರಸಿಖ್	5
ಸುಂದರ್ ಸಿ ಹೇಜಲ್‌ವುಡ್ ಬಿ ಡಫಿ	8
ಹೋಲ್ಡರ್ ಸಿ ಹೇಜಲ್‌ವುಡ್ ಬಿ ರಸಿಖ್	0
ತೆವಾತಿಯಾ ಸಿ ಪಾಟೀದಾರ್ ಬಿ ಕುಮಾರ್	68
ರಶೀದ್ ಸಿ ಶರ್ಮಾ ಬಿ ಡಫಿ	8
ರಬಾಡ ಸಿ ಕೊಹ್ಲಿ ಬಿ ಪಾಂಡ್ಯ	9
ಮೊಹಮ್ಮದ್ ಸಿರಾಜ್ ಸಿ ಡೇವಿಡ್ ಬಿ ಪಾಂಡ್ಯ	5
ಪ್ರಸಿದ್ಧ್‌ಕೃಷ್ಣ ಅಜೇಯ	6
ಇತರೆ	8

ಆರ್‌ಸಿಬಿ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಜೇಕಬ್ ಡಫಿ	4	0	39	3
ಭುವನೇಶ್ವರ್	4	0	28	2
ಹೇಜಲ್‌ವುಡ್	4	0	39	1
ರಸಿಖ್ ಸಲಾಮ್	3	1	24	2
ಕೃಣಾಲ್ ಪಾಂಡ್ಯ	3.3	0	16	2
ಶೆಫರ್ಡ್	1	0	15	0

ವಿಕೆಟ್ ಪತನ : 1-17, 2-27, 3-51, 4-51, 5-51, 6-65, 7-78, 8-88, 9-156, 10-162

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ರಜತ್ ಪಾಟೀದಾರ್ (ಆರ್‌ಸಿಬಿ)



ಜೇಕಬ್ ಡಫಿ

ಸೂರ್ಯ vs ಸನ್: ಇಂದು ಯಾರ ನಿರ್ಗಮನ?

ಬಲಿಷ್ಠ, ಘಾತಕ ತಂಡ ಸನ್ ಹೈದರಾಬಾದ್ ಮತ್ತೆ 'ವೈಭವ'ದ ನಿರೀಕ್ಷೆಯಲ್ಲಿರುವ ರಾಜಸ್ಥಾನ

ಮುಲ್ಲಾಂಪುರ: ನವ ಚಂಡೀಗಢದ ಮುಲ್ಲಾಂಪುರದಲ್ಲಿರುವ ಯಾದವೀಂದ್ರ ಸಿಂಗ್ ಕ್ರೀಡಾಂಗಣದಲ್ಲಿ ಬುಧವಾರ ಈ ಬಾರಿ ಐಪಿಎಲ್‌ನ ಎಲಿಮಿನೇಟರ್ ಪಂದ್ಯ ನಡೆಯಲಿದೆ. ರಾಜಸ್ಥಾನ ರಾಯಲ್ಸ್, ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ಮಾಡುಮಡಿ ಕದನಕ್ಕೆ ವೇದಿಕೆ ಸಿದ್ಧವಾಗಿದೆ. ಇಲ್ಲಿ ಗೆದ್ದ ತಂಡ 2ನೇ ಕ್ವಾಲಿಫೈಯರ್‌ಗೇರಲಿದೆ. ಸೋತ ತಂಡ ನಿರ್ಗಮಿಸಲಿದೆ.

ರಾಜಸ್ಥಾನ ತಂಡ ಲೀಗ್ ಹಂತದಲ್ಲಿ ಹೈದರಾಬಾದ್ ವಿರುದ್ಧ ಸತತ 2 ಪಂದ್ಯಗಳನ್ನೂ ಸೋತಿದೆ. ಹೀಗಾಗಿ ಅದಕ್ಕೆ ಇಲ್ಲಿ ಸೇಡು ತೀರಿಸಿಕೊಳ್ಳಲು ಅತ್ಯುತ್ತಮ ಅವಕಾಶವಿದೆ. ಲೀಗ್‌ನಲ್ಲಿ ತನ್ನ ಸ್ಫೋಟಕ, ಬಿಗಿಯಾದ ಬ್ಯಾಟಿಂಗ್ ಶಕ್ತಿಯಿಂದ ಹೈದರಾಬಾದ್ ಎಲಿಮಿನೇಟರ್ ಹಂತಕ್ಕೇರಿದೆ. ಆಡಿದ 14 ಪಂದ್ಯಗಳಲ್ಲಿ 9 ಪಂದ್ಯಗಳನ್ನು ಗೆಲ್ಲುವ ಮೂಲಕ ಆರ್‌ಸಿಬಿ, ಗುಜರಾತ್ ಜೊತೆಗೆ ಸಮಾನ ಅಂಕಗಳನ್ನೇ ಗಳಿಸಿದೆ. ಕೇವಲ ರನ್‌ರೇಟ್ ಕೊರತೆಯ ಕಾರಣದಿಂದ ಅದು 3ನೇ ಸ್ಥಾನಕ್ಕಿಳಿದಿದೆ. ಇದು ತಂಡದ ಶಕ್ತಿಯನ್ನು ತೋರುತ್ತದೆ.

ಅಭಿಷೇಕ್ ಶರ್ಮಾ, ಕಿಶನ್ ಅವರಿರುವ ಆರಂಭಿಕ ವಿಭಾಗ, ಕ್ಲಾಸೆನ್, ಟ್ರಾವಿಸ್ ಹೆಡ್ ಅವರಿರುವ ಮಧ್ಯಮ ಕ್ರಮಾಂಕ ಇಡೀ ಕೂಟದಲ್ಲಿ ಬಲಿಷ್ಠವಾಗಿದೆ. ಅಷ್ಟೇ ಆಕ್ರಮಣಕಾರಿಯಾಗಿದೆ. ನಿತೀಶ್ ರೆಡ್ಡಿ ಸಮರ್ಥವಾಗಿ ಆಲ್‌ರೌಂಡರ್ ಪಾತ್ರ ನಿರ್ವಹಿಸುವ ಮೂಲಕ ತಂಡದ ಸಂಯೋಜನೆಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಬೌಲಿಂಗ್‌ನಲ್ಲಿ ಪ್ಯಾಟ್ ಕಮಿನ್ಸ್ ಪ್ರಮುಖ ಪಾತ್ರವಹಿಸಲಿದ್ದಾರೆ.

ಇನ್ನು ರಾಜಸ್ಥಾನ ತಂಡ ತನ್ನ ಅಂತಿಮ ಎರಡು ಲೀಗ್ ಪಂದ್ಯಗಳನ್ನು ಗೆದ್ದು ಪ್ಲೇಆಫ್‌ಗೇರಿದೆ. ತಂಡದ 15 ವರ್ಷದ ಆಟಗಾರ ಸೂರ್ಯವಂಶಿ ಎಂತಹ ಬೌಲರ್‌ಗಳನ್ನೂ ಛಿಂದಿಯೆಬ್ಬಿಸಿ ರಾಜಸ್ಥಾನ ತಂಡದ ಆತ್ಮವಿಶ್ವಾಸಕ್ಕೆ ಕಾರಣವಾಗಿದ್ದಾರೆ. ಯಶಸ್ವಿ ಜೈಸ್ವಾಲ್, ರಿಯಾನ್ ಪರಾಗ್ ಮಹತ್ವದ ಅಸ್ತ್ರಗಳು. ಜೋಫ್ರಾ ಆರ್ಚರ್ ಇರುವ ತಂಡದ ಬೌಲಿಂಗ್ ಕೈಹಿಡಿದರೆ ರಾಜಸ್ಥಾನಕ್ಕೆ ಗೆಲುವು ಲಭ್ಯವಾಗಬಹುದು. ಆದರೆ ಸದ್ಯ ಈ ತಂಡದ ಬೌಲಿಂಗ್ ತುಸು ದುರ್ಬಲ ಎನ್ನದೇ ವಿಧಿಯಿಲ್ಲ. ಆರ್ಚರ್ 21 ವಿಕೆಟ್ ಪಡೆದು ಉತ್ತಮ ಲಯದಲ್ಲಿದ್ದಾರೆ. ಜಮ್ಮುಕಾಶ್ಮೀರದ ಬ್ರಿಜೇಶ್ ಶರ್ಮಾ ಇನ್ನೊಬ್ಬ ಪ್ರಮುಖ ವೇಗಿ.

ಸಂಭಾವ್ಯ ತಂಡಗಳು

ರಾಜಸ್ಥಾನ: ಜೈಸ್ವಾಲ್, ಸೂರ್ಯವಂಶಿ, ಜುರೆಲ್, ಪರಾಗ್ (ನಾಯಕ), ಫೆರೀರಾ, ಶುಭಂ, ಶಣಕ, ಆರ್ಚರ್, ಬರ್ಗರ್, ಬಿಷ್ಣೋಯಿ, ಬ್ರಿಜೇಶ್, ಸಂದೀಪ್.

ಹೈದರಾಬಾದ್: ಅಭಿಷೇಕ್, ಟ್ರಾವಿಸ್, ಕಿಶನ್, ಕ್ಲಾಸೆನ್, ಸಲೀಲ್, ಆರ್.ಸ್ಮರಣ್, ನಿತೀಶ್, ಕಮಿನ್ಸ್ (ನಾಯಕ), ಹರ್ಷಲ್, ಶಿವಾಂಗ್, ಎಶಾನ್, ಸಕಿಬ್, ಲಿವಿಂಗ್‌ಸ್ಟೋನ್.

ಅಂಕಣ ಹೇಗಿದೆ?

ಮುಲ್ಲಾಂಪುರದ ಯಾದವೀಂದ್ರ ಸಿಂಗ್ ಅಂಕಣ ಸಪಾಟಾಗಿದೆ, ಬ್ಯಾಟರ್ ಸ್ನೇಹಿಯಾಗಿದೆ. ಕೆಂಪು, ಕಪ್ಪು ಮಣ್ಣುಗಳ ಮಿಶ್ರಣ ಹೊಂದಿರುವ ಇಲ್ಲಿ ಚೆಂಡು ಬೌನ್ಸ್ ಆದರೂ, ಅದು ಅಸಮಾನವಾಗಿರುವ ಸಾಧ್ಯತೆಯಿದೆ. ಚೆಂಡು ನೇರವಾಗಿ ಬ್ಯಾಟ್‌ಗೆ ಬರಲಿದೆ. ಆರಂಭದಲ್ಲಿ ವೇಗಿಗಳು ತುಸು ಲಾಭ ಪಡೆಯಲಿದ್ದಾರೆ. ಚೆಂಡಿನ ಹೊಳಪು ಹೋದ ನಂತರ, ಬ್ಯಾಟರ್‌ಗಳು ಮೇಲುಗೈ ಸಾಧಿಸುತ್ತಾರೆ. ಆಗ ಸ್ಪಿನ್ನರ್‌ಗಳಿಗೆ ಮಹತ್ವ ಬರುತ್ತದೆ.

ಮುಖಾಮುಖಿ
ಒಟ್ಟು ಪಂದ್ಯ 23
ರಾಜಸ್ಥಾನ್ ಜಯ 9
ಹೈದರಾಬಾದ್ ಜಯ 14

ಪಂದ್ಯಾರಂಭ: ರಾ.7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋಹಾಟ್‌ಸ್ಟಾರ್

ಫ್ರೆಂಚ್ ಗ್ರ್ಯಾನ್‌ಸ್ಲಾಮ್: ಮೆಡ್ವೆಡೇವ್‌ಗೆ ಆಘಾತ

ಪ್ಯಾರಿಸ್: ಇಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಕೂಟದಲ್ಲಿ ಮಂಗಳವಾರ ಪುರುಷರ ವಿಭಾಗದಲ್ಲಿ ಸ್ಟೆಫಾನೊಸ್ ಸಿಸಿಪಸ್, ಡೆನಿಸ್ ಶಪೋವ್ಯಾಲೋವ್, ಆ್ಯಡಮ್ ವಾಲ್ಟನ್ ಗೆದ್ದು 2ನೇ ಸುತ್ತಿಗೇರಿದರು. ವಿಶ್ವವಿಖ್ಯಾತ ಆಟಗಾರ, ರಷ್ಯಾದ ಡ್ಯಾನಿಲ್ ಮೆಡ್ವೆಡೇವ್ ವಾಲ್ಟನ್ ವಿರುದ್ಧ ಸೋತು ಹೊರಬಿದ್ದಿದ್ದು ದಿನದ ಆಘಾತಕಾರಿ ಫಲಿತಾಂಶ. ಹ್ಯುಗೊ ಗ್ಯಾಸ್ಟನ್ ವಿರುದ್ಧ ಗಾಯೆಲ್ ಮಾಂಫಿಲ್ಸ್ ಕೂಡ ಸೋತಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಕೊಕೊ ಗಾಫ್ 6-4, 6-0ಯಿಂದ ಟೇಲರ್ ಟೌನ್ಸೆಂಡ್‌ರನ್ನು ಮಣಿಸಿದರು. ಜಪಾನಿನ ಹಿರಿಯ ಆಟಗಾರ್ತಿ ನವೋಮಿ ಒಸಾಕಾ 6-3, 7-6ರಿಂದ ಲಾರಾ ಸೀಗ್ಮಂಡ್‌ರನ್ನು ಸೋಲಿಸಿದರು. ಮರಿಯಾ ಸಕ್ಕರಿ 7-5, 7-6ರಿಂದ ಲಿಂಡಾ ನೊಸ್ಕೊವಾರನ್ನು ಹೊರಗಟ್ಟಿದರು. ಅರಿನಾ ಸಬಲೆಂಕಾ 6-4, 6-2ರಿಂದ ಜೆಸ್ಸಿಕಾ ಮನೀರೊರನ್ನು ಸೋಲಿಸಿದರು.

ಅಪ್ರತಿಮ ಕ್ರೀಡಾಪಟುಗಳಿಗೆ ಪ್ಯಾರಾ ಇಂಪ್ಯಾಕ್ಟ್ ಪ್ರಶಸ್ತಿ

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಭಾರತದ ಅಪ್ರತಿಮ ದಿವ್ಯಾಂಗ ಕ್ರೀಡಾಪಟುಗಳಿಗೆ ಪ್ಯಾರಾಲಿಂಪಿಕ್ ಲಿಮಿಟ್‌ಲೆಸ್ ಇಂಪ್ಯಾಕ್ಟ್ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಭಾರತೀಯ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಪ್ರಧಾನ ಮಾಡಿತು. ಮಹವೀರ್ ರಾವತ್, ದೀಪ್ತಿ ಬೋಪಯ್ಯ, ಅಭಿಲಾಷಾ ಚೌಧರಿ, ಚಂದ್ರಿಮಾ ಸರ್ಮಾ, ಪಾಯಲ್ ನಾಗು, ಪ್ರಮೋದ್ ಭಗತ್, ದೀಪ್ತಿ ಜೀವಂಜಿ, ಎಸ್.ಪಿ.ಸಾಂಗ್ವಾನ್ ಪ್ರಶಸ್ತಿ ಪಡೆದಿದ್ದಾರೆ.

ರಣವೀರ್‌ಗೆ ಡಾನ್ ಸಂಕಷ್ಟ

ಬಾಲಿವುಡ್ ನಟ ರಣವೀರ್ ಸಿಂಗ್ ಈಗ ಮುಟ್ಟಿದ್ದೆಲ್ಲಾ ಚಿನ್ನ ಎನ್ನುವಂತಾಗಿದೆ. ಧುರಂಧರ್ ಚಿತ್ರದ ಭರ್ಜರಿ ಯಶಸ್ಸು ಈ ಮಾತಿಗೆ ನಿದರ್ಶನವಾಗಿದೆ. ಆದರೆ ಈ ನಡುವೆಯೇ ರಣವೀರ್‌ಗೆ ಡಾನ್ ಸಂಕಷ್ಟ ತಂದಿಟ್ಟಿದೆ. ಡಾನ್ 3 ಸಿನಿಮಾದಿಂದ ರಣವೀರ್ ಸಿಂಗ್ ಹೊರ ನಡೆದಿದ್ದೇ ತಡ ಅವರಿಗೆ ಸಂಕಷ್ಟ ಶುರುವಾಗಿದೆ. ಪಶ್ಚಿಮ ಭಾರತ ಚಲನಚಿತ್ರ ನೌಕರರ ಒಕ್ಕೂಟ ರಣವೀರ್ ವಿರುದ್ಧ ಅಸಹಕಾರ ಅಸ್ತ್ರ ಪ್ರಯೋಗಿಸಿದೆ. ಹೀಗಾಗಿ ರಣವೀರ್ ಸಿಂಗ್ ಸಿನಿಮಾದಲ್ಲಿ ನಟಿಸುವುದಾಗಲಿ, ಸಿನಿಮಾ ನಿರ್ಮಾಣ ಮಾಡುವುದಾಗಲಿ ಎಲ್ಲವೂ ಕಷ್ಟ ಎನ್ನಲಾಗುತ್ತಿದೆ. ಈ ವಿವಾದ ಮುಗಿಯುವವರೆಗೂ ಇದು ಮುಂದುವರಿಯಲಿದೆ.

ನಿರ್ದೇಶಕ ಫರ್ಹಾನ್ ಅಖ್ತರ್ ಡಾನ್ 3 ಸಿನಿಮಾವನ್ನು ನಿರ್ದೇಶನ ಮಾಡಲು ಅದಾಗಲೇ ತಯಾರಿ ನಡೆಸಿದ್ದರು. ಜತೆಗೆ ರಿತೇಶ್ ಸಿಧ್ವಾನಿ ಅವರ ಎಕ್ಸೆಲ್ ಎಂಟರ್‌ಟೇನ್ ಮೆಂಟ್ ಬ್ಯಾನರ್‌ನಲ್ಲಿ ಡಾನ್ 3 ಸಿನಿಮಾ ಸೆಟ್ಟೇರಿತ್ತು. ಸಿನಿಮಾದ ಪ್ರೀ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿದ್ದವು. ಆದರೆ ಚಿತ್ರದ ಚಿತ್ರೀಕರಣ ಕೆಲವೇ ದಿನಗಳಲ್ಲಿ ಆರಂಭವಾಗಬೇಕು ಎನ್ನುವಾಗ ರಣವೀರ್ ಸಿಂಗ್ ಚಿತ್ರದಿಂದ ಹೊರನಡೆದರು. ಈ ದಿಢೀರ್ ನಿರ್ಧಾರದಿಂದಾಗಿ ನಿರ್ಮಾಣ ಸಂಸ್ಥೆಗೆ ನಷ್ಟವಾಗಿದೆ. ಹೀಗಾಗಿ ನಿರ್ಮಾಣ ಸಂಸ್ಥೆಯು ನಟನಿಂದ ಸುಮಾರು ನಲವತ್ತು ಕೋಟಿ ರು. ನಷ್ಟವಾಗಿದ್ದು, ಅದನ್ನು ತುಂಬಿಕೊಡುವಂತೆ ಕೇಳಿದೆ. ಆದರೆ ಇದಕ್ಕೆ ರಣವೀರ್ ಸಿಂಗ್ ಒಪ್ಪಿಲ್ಲ. ಈ ವಿವಾದ ಪಶ್ಚಿಮ ಭಾರತ ಚಲನಚಿತ್ರ ನೌಕರರ ಒಕ್ಕೂಟ ತಲುಪಿತು. ಒಕ್ಕೂಟದ ಪ್ರಮುಖರು ಸಭೆ ನಡೆಸಿ, ರಣವೀರ್ ಸಿಂಗ್ ವಿರುದ್ಧ ಈ ಕಠಿಣ ನಿರ್ಧಾರ ತೆಗೆದುಕೊಂಡಿದ್ದಾರೆ. ಧುರಂಧರ್ ಬಳಿಕ ಯಶಸ್ಸಿನ ಉತ್ತುಂಗದಲ್ಲಿದ್ದ ರಣವೀರ್ ಸಿಂಗ್‌ಗೆ ಈ ನಿರ್ಧಾರ ಹಿನ್ನಡೆಯುಂಟಾಗುವಂತೆ ಮಾಡಿದೆ. ಹಾಗಂತ ಇದೆ ಅಂತಿಮವಲ್ಲ, ರಣವೀರ್ ಸಿಂಗ್ ಡಾನ್ ಚಿತ್ರತಂಡಕ್ಕೆ ಆದ ನಷ್ಟವನ್ನು ತುಂಬಿಸಿಕೊಟ್ಟರೆ ಅಥವಾ ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದರೆ ವಿವಾದ ಬಗೆಹರಿಯಲಿದೆ.

ಇನ್ನು ವಿವಾದಕ್ಕೆ ಸಂಬಂಧಿಸಿದಂತೆ ರಣವೀರ್ ಸಿಂಗ್ ವಕ್ತಾರರು ಪ್ರತಿಕ್ರಿಯಿಸಿದ್ದಾರೆ. ರಣವೀರ್ ಸಿಂಗ್ ಅವರಿಗೆ ಚಿತ್ರರಂಗದ ಮತ್ತು ಡಾನ್ 3 ಚಿತ್ರತಂಡದ ಮೇಲೆ ಅಪಾರ ಗೌರವವಿದೆ. ಡಾನ್ 3 ಚಿತ್ರದ ಸುತ್ತ ಇತ್ತೀಚೆಗೆ ಆದ ಬೆಳವಣಿಗೆಗಳನ್ನು ಗಮನಿಸಿದ ಅವರು ಮೌನವಾಗಿರಲು ನಿರ್ಧರಿಸಿದ್ದರು. ಏಕೆಂದರೆ ವೃತ್ತಿಪರ ಚರ್ಚೆಗಳು ಮತ್ತು ವೈಯಕ್ತಿಕ ಸಂಬಂಧಗಳನ್ನು ಗೌರವ, ಪ್ರಬುದ್ಧತೆ ಮತ್ತು ಪರಸ್ಪರ ಗೌರವದಿಂದ ನಿಭಾಯಿಸುವುದು ಉತ್ತಮ ಎಂದು ರಣವೀರ್ ನಂಬಿದ್ದಾರೆ. ಈ ವಿವಾದದ ಕುರಿತಂತೆ ವದಂತಿಗಳು ಮತ್ತು ಊಹಾಪೋಹಗಳು ಹರಿದಾಡುತ್ತಿವೆ. ಆದರೆ ಸಾರ್ವಜನಿಕವಾಗಿ ಇವುಗಳಿಗೆ ಪ್ರತಿಕ್ರಿಯಿಸುವುದು ಅಥವಾ ಊಹೆಗಳಿಗೆ ಗಮನ ನೀಡುವುದು ರಣವೀರ್ ಅವರಿಗೆ ಎಂದಿಗೂ ಅಗತ್ಯ ಎನಿಸಿಲ್ಲ ಎಂದು ರಣವೀರ್ ಸಿಂಗ್ ವಕ್ತಾರರು ತಿಳಿಸಿದ್ದಾರೆ.

ಕಿಚ್ಚನ ಕಡೆಯಿಂದ ಸಿಕ್ಕಿತು ಸಿಹಿ ಸುದ್ದಿ

ಅನೂಪ್ ಭಂಡಾರಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬಿಲ್ಲ ರಂಗ ಭಾಷ ಚಿತ್ರ ನಿಂತೇ ಹೋಯ್ತು ಎಂಬ ಊಹಾಪೋಹಗಳು ಕೂಡ ಕೇಳಿಬಂದವು. ಅದೆಲ್ಲವೂ ಸುಳ್ಳು ಎಂದು ಚಿತ್ರತಂಡ ಸ್ಪಷ್ಟಪಡಿಸಿದೆ. ಈಗಾಗಲೇ ಒಂದು ಹಂತದ ಚಿತ್ರೀಕರಣ ಮುಗಿಸಿರುವ ಬಿಲ್ಲ ರಂಗ ಭಾಷ ಸಿನಿಮಾ, ಜೂನ್‌ನಲ್ಲಿ ಎರಡನೇ ಹಂತದ ಶೂಟಿಂಗ್ ಆರಂಭಿಸಲಿದೆ. ಈ ಚಿತ್ರದಲ್ಲಿ ಕಿಚ್ಚ ಹಲವು ಶೇಡ್‌ನಲ್ಲಿ ಅದ್ದೂರಿಯಾಗಿ ಮಿಂಚಲಿದ್ದಾರೆ. ಜತೆಗೆ ದಿಗ್ಗಜ ಕಲಾವಿದರೂ ಕೂಡ ಈ ಸಿನಿಮಾದಲ್ಲಿ ನಟಿಸಲಿದ್ದಾರೆ. ಈ ಚಿತ್ರಕ್ಕಾಗಿ ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಲಾಗುತ್ತಿದೆ. ಈ ಹಿಂದೆಯೇ ಈ ಸಿನಿಮಾದ ಪೋಸ್ಟರ್ ರಿಲೀಸ್ ಆಗಿ ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿತ್ತು.

ಮಾರ್ಕ್ ಸಿನಿಮಾದ ಬಳಿಕ ಸುದೀಪ್ ಯಾವುದೇ ಹೊಸ ಸಿನಿಮಾವನ್ನು ಘೋಷಿಸಿಲ್ಲ. ಸದ್ಯ ಕಿಚ್ಚ ಬಿಲ್ಲ ರಂಗ ಭಾಷಾ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಇದರ ಜತೆಗೆ ರಾಜಮೌಳಿ ನಿರ್ದೇಶನದ ವಾರಣಾಸಿ ಸಿನಿಮಾದಲ್ಲಿಯೂ ಅಭಿನಯಿಸುತ್ತಿದ್ದಾರೆ. ಮುಂದೆ ಸುದೀಪ್ ಅವರು ಯಾವ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಹೀಗಿರುವಾಗಲೇ ಕಿಚ್ಚನ ಕಡೆಯಿಂದ ಸಿಹಿ ಸುದ್ದಿ ಸಿಕ್ಕಿದೆ. ಸುದೀಪ್ ಶೀಘ್ರದಲ್ಲಿಯೇ ಹೊಸ ಸಿನಿಮಾ ಘೋಷಣೆ ಮಾಡಲಿದ್ದಾರೆ ಎಂಬ ಮಾಹಿತಿ ಇದೆ.

ನಿರ್ದೇಶನದತ್ತ ಒಲವು

ಕಿಚ್ಚ ಸುದೀಪ್ ಅದ್ಭುತ ನಟ, ಅದರ ಜತೆಗೆ ನಿರ್ದೇಶಕ, ನಿರ್ಮಾಪಕರೂ ಹೌದು. ಮೈ ಆಟೋಗ್ರಾಫ್, ಜಸ್ಟ್ ಮಾತ್ ಮಾತಲ್ಲಿ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ದೇಶನ ಮಾಡಿರುವ ಕಿಚ್ಚ, ಪ್ರೇಕ್ಷಕರಿಂದ ಮೆಚ್ಚುಗೆಯನ್ನೂ ಪಡೆದಿದ್ದಾರೆ. ಮಾಣಿಕ್ಯ ಚಿತ್ರದ ಬಳಿಕ ಸುದೀಪ್ ಯಾವುದೇ ಸಿನಿಮಾವನ್ನು ನಿರ್ದೇಶನ ಮಾಡಲಿಲ್ಲ. ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದರಿಂದ ಸಿನಿಮಾ ನಿರ್ದೇಶನದತ್ತ ಗಮನಹರಿಸಲು ಸಾಧ್ಯವಾಗಲಿಲ್ಲ. ಈಗ ಕಿಚ್ಚ ಮತ್ತೆ ನಿರ್ದೇಶನದ ಒಲವು ತಾಳಿದ್ದಾರೆ. ರೊಮ್ಯಾಂಟಿಕ್ ಕಾಮಿಡಿ ಕಥೆಯ ಚಿತ್ರಕ್ಕೆ ಕಿಚ್ಚ ಸುದೀಪ್ ಆ್ಯಕ್ಷನ್ ಕಟ್ ಹೇಳಲಿದ್ದು, ಸದ್ಯದಲ್ಲಿಯೇ ಈ ಸಿನಿಮಾ ಸೆಟ್ಟೇರಲಿದೆ ಎಂಬ ನಿರೀಕ್ಷೆಯೂ ಇದೆ.

ಪ್ರೇಮಕಥೆಯ ಚಿತ್ರ

ಕಿಚ್ಚ ಸುದೀಪ್ ಮ್ಯಾಕ್ಸ್ ಹಾಗೂ ಮಾರ್ಕ್ ಸಿನಿಮಾಗಳಲ್ಲಿ ಅಬ್ಬರಿಸಿದ್ದರು. ಆ್ಯಕ್ಷನ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾದಲ್ಲಿ ನಾಯಕಿ ಇರಲಿಲ್ಲ. ಹೀಗಾಗಿ ಮುಂದೆ ಸುದೀಪ್ ಅವರನ್ನು ಪ್ರೇಮ ಕಥೆಯ ಸಿನಿಮಾದಲ್ಲಿ ಕಣ್ತುಂಬಿಕೊಳ್ಳಬೇಕು ಎಂಬುದು ಅಭಿಮಾನಿಗಳ ಆಸೆಯಾಗಿತ್ತು. ಅದಕ್ಕೆ ತಕ್ಕಂತೆ ಈಗ ರೊಮ್ಯಾಂಟಿಕ್ ಕಾಮಿಡಿ ಚಿತ್ರ ಸೆಟ್ಟೇರಲಿದೆ. ಈ ಚಿತ್ರದಲ್ಲಿ ನಾಯಕಿಯೂ ಇರಲಿದ್ದಾರೆ. ಈ ಬಗ್ಗೆ ಕಿಚ್ಚ, ಮಾರ್ಕ್ ಸಿನಿಮಾದ ಸಂದರ್ಭದಲ್ಲಿಯೇ ತಿಳಿಸಿದ್ದರು. ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದರು. ಅಂತೂ ಈಗ ಸಿನಿಮಾ ಸೆಟ್ಟೇರಲು ಸಿದ್ಧತೆಗಳು ನಡೆದಿವೆ ಎಂಬ ಮಾಹಿತಿಯೂ ಇದೆ. ಇದರ ಜತೆಗೆ ಸುದೀಪ್ ಅವರು ನಟಿಸಲಿರುವ ನಾಲ್ಕು ಸಿನಿಮಾಗಳು ಸೆಟ್ಟೇರಲಿವೆ. ಆ ಸಿನಿಮಾಗಳು ಯಾವುದು ಎಂಬುದು ಶೀಘ್ರದಲ್ಲಿಯೇ ರಿವೀಲ್ ಆಗಲಿದೆ.

ಹೊಸ ಹೆಜ್ಜೆಯಿಟ್ಟ ಗುರುರಾಜ್ -ಯತಿರಾಜ್

ನವರಸ ನಾಯಕ ಜಗ್ಗೇಶ್ ಅವರ ಪುತ್ರರಾದ ಗುರುರಾಜ್ ಮತ್ತು ಯತಿರಾಜ್ ಹಲವು ಚಿತ್ರಗಳಲ್ಲಿ ನಟಿಸಿ ಮನಗೆದ್ದಿದ್ದಾರೆ. ಈಗ ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ತುಪ್ಪದ ಬೆಡಗಿ ರಾಗಿಣಿ ದ್ವಿವೇದಿ ಅಭಿನಯದ ರಾಗಿಣಿ ಐಪಿಎಸ್ 2 ಚಿತ್ರಕ್ಕೆ ಜಂಟಿಯಾಗಿ ನಿರ್ದೇಶನ ಮಾಡಲಿದ್ದಾರೆ. ನಟಿ ರಾಗಿಣಿ ದ್ವಿವೇದಿ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿಯೇ ಹೊಸ ಸಿನಿಮಾ ಘೋಷಣೆಯಾಗಿರುವುದು ವಿಶೇಷ. ಹನ್ನೆರಡು ವರ್ಷಗಳ ಹಿಂದೆ ರಾಗಿಣಿ ನಾಯಕಿಯಾಗಿ ನಟಿಸಿದ್ದ ರಾಗಿಣಿ ಐಪಿಎಸ್ ಚಿತ್ರ ಭರ್ಜರಿ ಯಶಸ್ಸು ಕಂಡಿತ್ತು. ಈಗ ಈ ಚಿತ್ರದ ಮುಂದುವರಿದ ಭಾಗವಾಗಿ ರಾಗಿಣಿ ಐಪಿಎಸ್ 2 ಚಿತ್ರ ಮೂಡಿಬರಲಿದೆ. ಕೆ. ಮಂಜು ಹಾಗೂ ರಾಗಿಣಿ ವೆಂಚರ್ಸ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ.

ರಾಗಿಣಿ ಐಪಿಎಸ್ ಜನಪ್ರಿಯ ಚಿತ್ರ, ರಾಗಿಣಿ ಅವರ ಅಭಿನಯಕ್ಕೆ ಅಭಿಮಾನಿಗಳು ಫಿದಾ ಆಗಿದ್ದರು. ಈಗ ಆ ಚಿತ್ರದ ಮುಂದುವರಿದ ಭಾಗ ರಾಗಿಣಿ ಐಪಿಎಸ್ 2 ಚಿತ್ರವನ್ನು ಆರಂಭಿಸುತ್ತಿದ್ದೇವೆ. ನಾವಿಬ್ಬರು ನಿರ್ದೇಶನಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದೇವೆ. ನಟನೆಯೇ ಬೇರೆ, ನಿರ್ದೇಶನವೇ ಬೇರೆ. ನಿರ್ದೇಶನಕ್ಕೆ ತಯಾರಿ ಅಗತ್ಯ. ರಾಗಿಣಿ ಅವರು ಜನಪ್ರಿಯ ನಟಿಯಾಗಿ ಗುರುತಿಸಿಕೊಂಡಿದ್ದು, ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಅವರ ಚಿತ್ರ ನಿರ್ದೇಶನ ಮಾಡುವುದು ಅಷ್ಟು ಸುಲಭವಲ್ಲ. ರಾಗಿಣಿ ಐಪಿಎಸ್ ಚಿತ್ರದ ಕಥೆ ಎಲ್ಲಿ ಕೊನೆಯಾಗಿತ್ತೊ, ಅಲ್ಲಿಂದಲೇ ಈ ಸಿನಿಮಾ ಮುಂದುವರಿಯುತ್ತದೆ ಎಂದು ಗುರುರಾಜ್ ಹಾಗೂ ಯತಿರಾಜ್ ತಿಳಿಸಿದರು.

ನನ್ನ ಹುಟ್ಟುಹಬ್ಬದ ಸಂದರ್ಭದಲ್ಲಿಯೇ ನಾನು ಅಭಿನಯಿಸಲಿರುವ ಹೊಸ ಚಿತ್ರದ ಘೋಷಣೆಯಾಗಿರುವುದು ಖುಷಿಕೊಟ್ಟಿದೆ. ಕೆ.ಮಂಜು ಅವರು ಈ ಚಿತ್ರ ನಿರ್ಮಾಣಕ್ಕೆ ಜತೆಯಾಗಿರುವುದು ಹಾಗೂ ಜಗ್ಗೇಶ್ ಪುತ್ರರಾದ ಗುರುರಾಜ್, ಯತಿರಾಜ್ ನಿರ್ದೇಶಿಸುತ್ತಿರುವುದು ಖುಷಿಯಾಗಿದೆ ಎಂದು ನಟಿ ರಾಗಿಣಿ ದ್ವಿವೇದಿ ಸಂತಸ ವ್ಯಕ್ತಪಡಿಸಿದ್ದಾರೆ.